ಶುಕ್ರವಾರ, ಡಿಸೆಂಬರ್ 20, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಬಾಲಿವುಡ್ ನಟಿ ವಾಮಿಕಾ ಗಬ್ಬಿ ಅವರು ಮುಂಬೈನಲ್ಲಿ 'ಬೇಬಿ ಜಾನ್' ಚಿತ್ರದ ಪ್ರಚಾರದಲ್ಲಿ ಪಾಲ್ಗೊಂಡರು

ಕರ್ನಾಟಕ ಸರ್ಕಾರ



೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

೨೦, ೨೧ ಮತ್ತು ೨೨ನೇ ಡಿಸೆಂಬರ್, ೨೦೨೪

ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ

ದಿನಾಂಕ: ೨೦.೧೨.೨೦೨೪, ಬೆಳಗ್ಗೆ: ೧೦.೩೦ ಗಂಟೆಗೆ,
ಸ್ಥಳ: ಸ್ಯಾಂಜೋ ಆಸ್ಪತ್ರೆ ಹಾಗೂ
ಹೋಟೆಲ್ ಅಮರಾವತಿ ಹಿಂಭಾಗ, ಮಂಡ್ಯ

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ,
ಶ್ರೀ ಆದಿಚುಂಚನಗಿರಿ ಕ್ಷೇತ್ರ

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಸಮ್ಮೇಳನಾಧ್ಯಕ್ಷರು
ನಾಡೋಜ
ಡಾ. ಗೊ.ರು. ಚನ್ನಬಸಪ್ಪ

ಘನ ಉಪಸ್ಥಿತಿ

ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಸನ್ಮಾನ್ಯ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರು, ಭಾರತ ಸರ್ಕಾರ

ಶ್ರೀ ಯು.ಟಿ. ಖಾದರ್ ಫರೀದ್
ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಶ್ರೀ ಎನ್. ಚಲುವರಾಯಸ್ವಾಮಿ
ಮಾನ್ಯ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ಡಾ. ಚಂದ್ರಶೇಖರ ಕಂಬಾರ
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

ಡಾ. ದೊಡ್ಡರಂಗೇಗೌಡ
ನಿಕಟಪೂರ್ವ ಸಮ್ಮೇಳನಾಧ್ಯಕ್ಷರು

ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗೌರವ ಕಾರ್ಯಾಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ಹಾಗೂ ವಿಧಾನಸಭೆಯ ಸನ್ಮಾನ್ಯ ಉಪಸಭಾಧ್ಯಕ್ಷರು, ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಗೂ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು, ವಿಧಾನಸಭೆಯ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಮಾನ್ಯ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರು, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರುಗಳು ಗೌರವ ಉಪಸ್ಥಿತರಾಗಿ ಮತ್ತು ವಿಧಾನಸಭಾ ಹಾಗೂ ವಿಧಾನ ಪರಿಷತ್‌ನ ಮಾನ್ಯ ಶಾಸಕರುಗಳು ಮತ್ತು ನಿಗಮ, ಮಂಡಳಿ, ಪ್ರಾಧಿಕಾರ, ಒಕ್ಕೂಟ ಹಾಗೂ ನಗರಸಭೆಯ ಮಾನ್ಯ ಅಧ್ಯಕ್ಷರುಗಳು ಮತ್ತು ಮಂಡ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಸಂಚಾಲಕರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಸಮಾರಂಭದ ಪ್ರಮುಖ ಆಕರ್ಷಣೆಗಳು

- ಧ್ವಜಾರೋಹಣ – ೨೦.೧೨.೨೦೨೪, ಬೆಳಿಗ್ಗೆ ೬.೦೦ ಗಂಟೆಗೆ
- ಸಮ್ಮೇಳನಾಧ್ಯಕ್ಷರ ಮೆರವಣಿಗೆ – ೨೦.೧೨.೨೦೨೪, ಬೆಳಿಗ್ಗೆ ೭.೦೦ ಗಂಟೆಗೆ. (ಮೆರವಣಿಗೆ ಮಾರ್ಗ – ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗದಿಂದ ಮೈಸೂರು–ಬೆಂಗಳೂರು ರಸ್ತೆ ಮಾರ್ಗವಾಗಿ ಸಮ್ಮೇಳನದ ವೇದಿಕೆಗೆ)
- ಸಮಾನಾಂತರ ವೇದಿಕೆ: ೧ ಮತ್ತು ವೇದಿಕೆ: ೨ – ಒಟ್ಟು ೨೦ ಗೋಷ್ಠಿಗಳಲ್ಲಿ ಚಿಂತನ ಮಂಥನ, ಸಂವಾದ ಕಾರ್ಯಕ್ರಮಗಳು
- ಪುಸ್ತಕಗಳ ಬಿಡುಗಡೆ, ಸ್ಮರಣ ಸಂಚಿಕೆ ಬಿಡುಗಡೆ, ವಿಶೇಷ ಅಂಚೆ ಲಕೋಟೆ ಬಿಡುಗಡೆ, ನುಡಿಜಾತ್ರೆ–ಸ್ವರಯಾತ್ರೆ–ಸಂಗೀತ ಕಾರ್ಯಕ್ರಮ

ಶ್ರೀ ಎನ್. ಚಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಿಗೆ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಮಂತ್ರಣ ನೀಡುತ್ತಿರುವ ಸಂದರ್ಭ

ಸರ್ವರಿಗೂ ಸ್ವಾಗತ

ಎನ್. ಚಲುವರಾಯಸ್ವಾಮಿ
ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗೌರವ ಕಾರ್ಯಾಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ಡಾ. ಕುಮಾರ, ಭಾ.ಆ.ಸೇ
ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಮಂಡ್ಯ ಜಿಲ್ಲೆಯಲ್ಲಿ ಡಿ.22ರವರೆಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ– ಇಂದು ವಿಧ್ಯುಕ್ತ ಚಾಲನೆ

ಸಕ್ಕರೆ ನಾಡಿನಲ್ಲಿ ಈಗ ಕನ್ನಡದ ರಸಪಾಕ

• ಸಿದ್ದು ಆರ್.ಜಿ.ಹಳ್ಳಿ

87ನೇ ನುಡಿಜಾತ್ರೆ ಅಂಗವಾಗಿ ಮಂಡ್ಯ ನಗರದಲ್ಲಿ ಗುರುವಾರ ಕರ್ನಾಟಕ ಭೂಪಟ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಚಿತ್ರಪಟಗಳು ದೀಪಾಲಂಕಾರದಿಂದ ಕಂಗೊಳಿಸಿದವು –ಪ್ರಜಾವಾಣಿ ಚಿತ್ರ

ಮಂಡ್ಯ: ಜಿಲ್ಲೆಯಲ್ಲಿ ಹರಿಯುವ ಕಾವೇರಿ ನದಿ ಹೊರಡಿಸುವ ಮಂಜುಳ ನಿನಾದದಲ್ಲೂ ಈಗ ಕನ್ನಡದ ಕಲರವವೇ ಕೇಳಿ ಬರುತ್ತಿದೆ. ಗದ್ದೆಗಳಲ್ಲಿ ಬೆಳೆದು ನಿಂತಿರುವ ಕಬ್ಬು ಕೂಡ ಕನ್ನಡದ ನುಡಿಗಳಿಗೆ ತನ್ನ ಸಿಹಿಯನ್ನೆಲ್ಲ ಧಾರೆ ಎರೆಯುತ್ತಿರುವಂತೆ ಭಾಸವಾಗುತ್ತಿದೆ. ಹೌದು, ಶುಕ್ರವಾರದಿಂದ ಇಲ್ಲಿ ಆರಂಭವಾಗಲಿರುವ ‘ನುಡಿಜಾತ್ರೆ’ಯ ತೇರಿಗಾಗಿ ಸಕ್ಕರೆ ನಾಡು ಸಂಭ್ರಮದಿಂದ ಸಜ್ಜಾಗಿದೆ.

30 ವರ್ಷಗಳ ನಂತರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯ ಮಂಡ್ಯ ಜಿಲ್ಲೆಗೆ ಸಿಕ್ಕಿದೆ. 1974 ಮತ್ತು 1994ರಲ್ಲಿ ಯಶಸ್ವಿಯಾಗಿ ಸಮ್ಮೇಳನವನ್ನು ನಡೆಸಿಕೊಟ್ಟ ‘ಸಕ್ಕರೆ ನಗರ’ ಈಗ ಮೂರನೇ ಬಾರಿಗೆ ಆತಿಥ್ಯ ವಹಿಸುತ್ತಿದೆ.

ಮೊದಲು ನಡೆದ 48ನೇ ನುಡಿಜಾತ್ರೆಯಲ್ಲಿ ಜಯದೇವಿ ತಾಯಿ ಲಿಗಾಡೆ ಸಮ್ಮೇಳನಾಧ್ಯಕ್ಷರಾಗಿದ್ದರು. ಮಹಿಳೆಯೊಬ್ಬರಿಗೆ ಮೊದಲ ಬಾರಿಗೆ ಸಮ್ಮೇಳನಾಧ್ಯಕ್ಷರ ಪಟ್ಟ ಕೊಟ್ಟ ಶ್ರೇಯ ಜಿಲ್ಲೆಗೆ ಸಂದಿದೆ. 2ನೇ ಬಾರಿಗೆ ನಡೆದ ಸಮ್ಮೇಳನದ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಾರಥ್ಯ ವಹಿಸಿದ್ದ ಗೊ.ರು. ಚನ್ನಬಸಪ್ಪ ಅವರೇ ಈ ಬಾರಿ ಸಮ್ಮೇಳನಾಧ್ಯಕ್ಷರಾಗಿರುವುದು ವಿಶೇಷ.

‘ರಾಜ್ಯದಲ್ಲೇ ಅತಿ ಹೆಚ್ಚು ಕನ್ನಡ ಮಾತನಾಡುವವರ ಜಿಲ್ಲೆ’ ಎಂಬ ಖ್ಯಾತಿಯುಳ್ಳ ಮಂಡ್ಯದಲ್ಲಿ ಡಿ.20ರಿಂದ 22ರವರೆಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಜಿಲ್ಲಾಡಳಿತ ಮತ್ತು ಕನ್ನಡ ಸಾಹಿತ್ಯ ಪರಿಷತ್ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಮನೆ–ಮನೆಗಳ ಮೇಲೆ ಕನ್ನಡ ಬಾವುಟಗಳು ರಾರಾಜಿಸುತ್ತಿವೆ. ಸ್ವಾಗತ ಕಮಾನುಗಳು ಸಾಹಿತ್ಯಾಸಕ್ತರಿಗೆ ಭವ್ಯ ಸ್ವಾಗತ ಕೋರುತ್ತಿವೆ. ಮಧುವಣಗಿತ್ತಿಯಂತೆ ನಗರ ಕಂಗೊಳಿಸುತ್ತಿದೆ.

ಸಿಎಂ ಉದ್ಘಾಟನೆ: ರಾಜಮಾತೆ ಕೆಂಪ ನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ 20ರಂದು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಆದಿಚುಂಚನಗಿರಿಮಠದ ನಿರ್ಮಲಾನಂದನಾಥಸ್ವಾಮೀಜಿ, ಸಮ್ಮೇಳನಾಧ್ಯಕ್ಷ ಗೊರುಚ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಪಾಲ್ಗೊಳ್ಳಲಿದ್ದಾರೆ.

3 ದಿನ– 30 ಗೋಷ್ಠಿ: ಸಮ್ಮೇಳನದ ಪ್ರಧಾನ ವೇದಿಕೆ ಮತ್ತು ಎರಡು ಸಮಾನಾಂತರ ವೇದಿಕೆಗಳಲ್ಲಿ ಮೂರು ದಿನ 30 ವೈವಿಧ್ಯಮಯ ಗೋಷ್ಠಿಗಳು ನಡೆಯಲಿವೆ. ಸಮ್ಮೇಳನದ ಇತಿಹಾಸದಲ್ಲಿ ಮೊದಲ ಬಾರಿಗೆ ‘ದೃಷ್ಟಿಚೇತನರ ಕವಿಗೋಷ್ಠಿ’ ಏರ್ಪಡಿಸಲಾಗಿದೆ. ಮಂಡ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ರಾಜ್ಯದಾದ್ಯಂತ ಸದ್ದು ಮಾಡಿದ್ದರಿಂದ ಭ್ರೂಣ ಹತ್ಯೆ, ವಿವಾಹ ಮತ್ತು ಮರ್ಯಾದೆಗೇಡು ಹತ್ಯೆಯಂಥ ವರ್ತಮಾನದ ತಲ್ಲಣಗಳಿಗೆ ಸ್ಪಂದಿಸುವ ಗೋಷ್ಠಿಗಳಿಗೆ ಆದ್ಯತೆ ನೀಡಲಾಗಿದೆ.

450 ಪುಸ್ತಕ ಮಳಿಗೆಗಳು: ಸಮ್ಮೇಳನದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕೆ 450 ಮಳಿಗೆಗಳನ್ನು ಅಣಿಗೊಳಿಸಲಾಗಿದೆ. ಹಲವು ಪ್ರಕಾಶನಗಳು ಆನ್‌ಲೈನ್ ನೋಂದಣಿ ಮಾಡಿಕೊಂಡಿವೆ. 350 ವಾಣಿಜ್ಯ ಮಳಿಗೆಗಳು, 55 ವಸ್ತು ಪ್ರದರ್ಶನ ಮಳಿಗೆಗಳು ಗಮನ ಸೆಳೆಯಲಿವೆ.

6 ಸಾವಿರ ಪ್ರತಿನಿಧಿಗಳ ನೋಂದಣಿ: ‘ವಿವಿಧ ಜಿಲ್ಲೆಗಳ 6 ಸಾವಿರ ‘ಸಮ್ಮೇಳನ ಪ್ರತಿನಿಧಿಗಳು’ ನೋಂದಣಿ ಮಾಡಿಕೊಂಡಿದ್ದು, ಅವರಿಗೆ ಸಮ್ಮೇಳನ ಕಿಟ್ ಮತ್ತು ವಸತಿ ಕಿಟ್ ನೀಡಿ ವಾಸ್ತವ್ಯಕ್ಕೆ ಸೌಲಭ್ಯ ಕಲ್ಪಿಸಲಾಗಿದೆ. ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ –ಈ ಮೂರು ಕಡೆ ಹೋಟೆಲ್, ಲಾಡ್ಜ್, ವಸತಿ ಶಾಲೆಗಳಲ್ಲಿ ಸುಮಾರು 15 ಸಾವಿರ ಆಹ್ವಾನಿತರಿಗೆ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗಿದೆ’ ಎಂದು ವಸತಿ ಸಮಿತಿ ಅಧ್ಯಕ್ಷ ಪಿ.ರವಿಕುಮಾರ್ ತಿಳಿಸಿದ್ದಾರೆ.

87 ಪುಸ್ತಕಗಳು: 87ನೇ ನುಡಿಜಾತ್ರೆಯಾಗಿರುವುದರಿಂದ, ಅಷ್ಟೇ ಸಂಖ್ಯೆಯ ಪುಸ್ತಕಗಳು ಮತ್ತು ‘ಬೆಲ್ಲದಾರತಿ’ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಗುತ್ತದೆ. ನಾಡು–ನುಡಿಗಾಗಿ ಸೇವೆ ಸಲ್ಲಿಸಿದ ಒಟ್ಟು 170 ಸಾಧಕರನ್ನು ಸನ್ಮಾನಿಸಲಾಗುತ್ತಿದೆ.

ಬಿಗಿ ಬಂದೋಬಸ್ತ್: ‘ಸಮ್ಮೇಳನಕ್ಕೆ 6 ಎಎಸ್‌ಪಿ, 21 ಡಿವೈಎಸ್‌ಪಿ, 63 ಸಿಪಿಐ, 170 ಪಿಎಸ್‌ಐ, 262 ಎಎಸ್‌ಐ, 1,500 ಕಾನ್‌ಸ್ಟೆಬಲ್, 1,000 ಹೋಂ ಗಾರ್ಡ್, 165 ಮಹಿಳಾ ಕಾನ್‌ಸ್ಟೆಬಲ್ ಒಳಗೊಂಡಂತೆ 14 ಜಿಲ್ಲೆಗಳಿಂದ 3,200ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ಆಗಮಿಸಲಿದ್ದಾರೆ. ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಪಾಳಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಲಿದ್ದಾರೆ. 33 ಎಕರೆಯಲ್ಲಿ ವಾಹನಗಳ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಮುಖ್ಯಾಂಶಗಳು

- 6 ಸಾವಿರ ಪ್ರತಿನಿಧಿಗಳ ನೋಂದಣಿ
- 15 ಸಾವಿರ ಆಹ್ವಾನಿತರಿಗೆ ವಸತಿ ವ್ಯವಸ್ಥೆ
- ಸಾಹಿತ್ಯಾಸಕ್ತರಿಗಾಗಿ 450 ಪುಸ್ತಕ ಮಳಿಗೆಗಳು

ಊಟ, ವಸತಿ, ಸಾರಿಗೆ ಸೇರಿ ಸಕಲ ಸಿದ್ಧತೆ ಕೈಗೊಂಡಿದ್ದೇವೆ. ವೈವಿಧ್ಯಮಯ ಗೋಷ್ಠಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜನರಿಗೆ ಮುದ ನೀಡಲಿವೆ

ಎನ್.ಚಲುವರಾಯಸ್ವಾಮಿ
ಜಿಲ್ಲಾ ಉಸ್ತುವಾರಿ ಸಚಿವ, ಮಂಡ್ಯ

ಸಮ್ಮೇಳನಾಧ್ಯಕ್ಷರ ಮೆರವಣಿಗೆ ಇಂದು

ಡಿ.20ರ ಬೆಳಿಗ್ಗೆ 6ಕ್ಕೆ ರಾಷ್ಟ್ರಧ್ವಜ, ಪರಿಷತ್ತಿನ ಧ್ವಜ ಮತ್ತು ನಾಡಧ್ವಜಾರೋಹಣದೊಂದಿಗೆ ಸಮ್ಮೇಳನದ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಬೆಳಿಗ್ಗೆ 7ಕ್ಕೆ ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗದಿಂದ ಸ್ಯಾಂಜೋ ಆಸ್ಪತ್ರೆ ಹಿಂಭಾಗದ ವೇದಿಕೆ ಸ್ಥಳದವರೆಗೆ ಅಂದರೆ 5 ಕಿ.ಮೀ. ವರೆಗೆ ‘ಸಮ್ಮೇಳನಾಧ್ಯಕ್ಷರ ಮೆರವಣಿಗೆ’ ನಡೆಯಲಿದೆ.

‘ಗೊರುಚ ಅವರಿಗಾಗಿ ‘ಅರಮನೆ ದರ್ಬಾರ್ ಸಿಂಹಾಸನ’ ಮಾದರಿಯ ವಿಶೇಷ ರಥ ಸಿದ್ಧಪಡಿಸಲಾಗಿದೆ. ಮೆರವಣಿಗೆಗೆ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ವಿವಿಧ ಜಿಲ್ಲೆ ಮತ್ತು ಹೊರ ರಾಜ್ಯಗಳ 50ಕ್ಕೂ ಹೆಚ್ಚು ಕಲಾತಂಡಗಳು, ಸ್ತಬ್ಧಚಿತ್ರಗಳು ಪ್ರದರ್ಶನ ನೀಡಲಿವೆ’ ಎಂದು ಮೆರವಣಿಗೆ ಸಮಿತಿ ಅಧ್ಯಕ್ಷ ಮಧು ಜಿ.ಮಾದೇಗೌಡ ತಿಳಿಸಿದರು.

ಭವ್ಯ ವೇದಿಕೆ, 40 ಸಾವಿರ ಆಸನ

‘ಸಮ್ಮೇಳನಕ್ಕಾಗಿ 70 ಎಕರೆಯಲ್ಲಿ ಭವ್ಯ ವೇದಿಕೆ ನಿರ್ಮಿಸಲಾಗಿದೆ. ಪ್ರಧಾನ ವೇದಿಕೆಯ ಮುಂಭಾಗ ಸಭಿಕರಿಗೆ 40ಸಾವಿರ ಆಸನಗಳನ್ನು ಹಾಕಲಾಗಿದೆ. ಪ್ರಧಾನ ವೇದಿಕೆ ಸೇರಿದಂತೆ ಎರಡು ಸಮಾನಾಂತರ ವೇದಿಕೆಗಳಲ್ಲಿ ಏಕಕಾಲದಲ್ಲಿ ವಿಚಾರಗೋಷ್ಠಿ, ಕವಿಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. 150ಕ್ಕೂ ಹೆಚ್ಚು ಶೌಚಾಲಯಗಳ ವ್ಯವಸ್ಥೆ ಮಾಡಿದ್ದು, 150 ಪೌರಕಾರ್ಮಿಕರನ್ನು ಮೂರು ಪಾಳಿಗಳಲ್ಲಿ ಕೆಲಸಕ್ಕೆ ನಿಯೋಜಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಕುಮಾರ ಮಾಹಿತಿ ನೀಡಿದ್ದಾರೆ.

ಉತ್ತರ, ದಕ್ಷಿಣ ಕರ್ನಾಟಕ ಶೈಲಿ ಊಟ

ಮಂಡ್ಯ ಮುದ್ದೆ ಮತ್ತು ಉತ್ತರ ಕರ್ನಾಟಕದ ಜೋಳದ ರೊಟ್ಟಿ ಸೇರಿದಂತೆ ಹೋಳಿಗೆ, ಬಾದೂಷ, ಮೈಸೂರು ಪಾಕ್, ಲಡ್ಡು ಮುಂತಾದ ಸಿಹಿ ತಿನಿಸುಗಳ ಊಟ ಸಿದ್ಧಪಡಿಸಲಾಗುತ್ತಿದೆ.

‘ನೋಂದಾಯಿತ ಪ್ರತಿನಿಧಿಗಳಿಗೆ 40 ಕೌಂಟರ್, ಸಾರ್ವಜನಿಕರಿಗೆ 100 ಕೌಂಟರ್ ಸೇರಿದಂತೆ ಒಟ್ಟು 140 ಆಹಾರ ಕೌಂಟರ್ ತೆರೆಯಲಾಗಿದೆ. ನಿತ್ಯ 70 ಸಾವಿರ ಜನರಿಗೆ ಊಟ ನೀಡಲಾಗುವುದು’ ಎಂದು ಸಮ್ಮೇಳನದ ಆಹಾರ ಸಮಿತಿ ಅಧ್ಯಕ್ಷ ರಮೇಶ ಬಂಡಿಸಿದ್ದೇಗೌಡ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪಂಚಮಸಾಲಿ ಹೋರಾಟ ತಾತ್ಕಾಲಿಕವಾಗಿ ವಾಪಸ್

ಬೆಳಗಾವಿ: ‘ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ ‘2ಎ’ ಮೀಸಲಾತಿ ನೀಡಬೇಕು ಮತ್ತು ಹೋರಾಟಗಾರರ ಮೇಲೆ ಲಾಠಿಚಾರ್ಜ್ ಮಾಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ಷಮೆ ಕೇಳಬೇಕು’ ಎಂದು ಆಗ್ರಹಿಸಿ ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಗರದಲ್ಲಿ ನಡೆಯುತ್ತಿದ್ದ ಧರಣಿಯನ್ನು ಗುರುವಾರ ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ.

‘ಮೀಸಲಾತಿ ವಿಷಯದಲ್ಲಿ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಸೆಂಬರ್ 21ರಂದು ಬೆಂಗಳೂರಿನಲ್ಲಿ ಸಭೆ ಕರೆದಿದ್ದಾರೆ. ಹೀಗಾಗಿ ನಮ್ಮ ಹೋರಾಟವನ್ನು ತಾತ್ಕಾಲಿಕವಾಗಿ ಹಿಂಪಡೆದಿದ್ದೇವೆ. ಸಭೆಯಲ್ಲಿ ಕೈಗೊಳ್ಳುವ ನಿರ್ಣಯ ಆಧರಿಸಿ ಮುಂದಿನ ಹೆಜ್ಜೆ ಇರಿಸುತ್ತೇವೆ’ ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೆಳಗಾವಿಯಲ್ಲಿ ನಡೆದ ಹೋರಾಟದಲ್ಲಿ ಪೊಲೀಸರು ಮಾಡಿದ ಲಾಠಿಚಾರ್ಜ್‌ನಿಂದ ಗಾಯಗೊಂಡಿರುವ ಸಮಾಜದ ಕಾರ್ಯಕರ್ತರ ಮನೆಗಳಿಗೂ ತೆರಳಿ, ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಲಾಗುವುದು’ ಎಂದರು.

ಮೈಸೂರಿಗೆ ತೆರಳಲು ದರ್ಶನ್‌ಗೆ ಅನುಮತಿ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿ ಸದ್ಯ ಜಾಮೀನು ಪಡೆದು ಜೈಲಿನಿಂದ ಹೊರಬಂದಿರುವ ನಟ ದರ್ಶನ್ ಅವರು, ಮೈಸೂರಿಗೆ ತೆರಳಲು ನಗರದ ಸೆಷನ್ಸ್ ನ್ಯಾಯಾಲಯ ಅನುಮತಿ ನೀಡಿದೆ.

ಈ ಕುರಿತಂತೆ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ಸಿಸಿಎಚ್ 57ನೇ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಜೈಶಂಕರ್ ಗುರುವಾರ ವಿಚಾರಣೆ ನಡೆಸಿ ಅನುಮತಿ ನೀಡಿ ಆದೇಶಿಸಿದರು.

ವಿಚಾರಣೆ ವೇಳೆ ದರ್ಶನ್ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಈ ಕುರಿತಂತೆ ಅರ್ಜಿ ಸಲ್ಲಿಸಿ, ‘ಅರ್ಜಿದಾರರ ತಾಯಿಯ ಆರೋಗ್ಯ ಸರಿಯಿಲ್ಲದ ಕಾರಣ ಅವರನ್ನು ಭೇಟಿಯಾಗಲು ಮೈಸೂರಿಗೆ ತೆರಳಲು ಅನುಮತಿ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರಾಸಿಕ್ಯೂಷನ್ ಮೌಖಿಕವಾಗಿ ಆಕ್ಷೇಪ ವ್ಯಕ್ತಪಡಿಸಿತಾದರೂ, ಅಂತಿಮವಾಗಿ ನ್ಯಾಯಾಧೀಶರು ದರ್ಶನ್ ಅರ್ಜಿ ಮನ್ನಿಸಿ, ಇದೇ 20ರಿಂದ 2025ರ ಜನವರಿ 5ರವರೆಗೆ ಮೈಸೂರಿಗೆ ತೆರಳಲು ಅನುಮತಿ ನೀಡಿ ಆದೇಶಿಸಿದರು.

ಸಂಕ್ಷಿಪ್ತ ಸುದ್ದಿ

ಆನೆ ತುಳಿದು ವ್ಯಕ್ತಿ ಸಾವು

ನರಸಿಂಹರಾಜಪುರ(ಚಿಕ್ಕಮಗಳೂರು): ತಾಲ್ಲೂಕಿನ ಮಡಬೂರು ಬಳಿ ಕಾಡಾನೆ ದಾಳಿಗೆ ಸಿಲುಕಿ ವ್ಯಕ್ತಿಯೊಬ್ಬರು ಗುರುವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ.



ಎಲಿಯಾಸ್

ಎಕ್ಕಡ ಬಯಲು ಗ್ರಾಮದ ಕೆ.ಕೆ. ಎಲಿಯಾಸ್(67) ಮೃತಪಟ್ಟವರು. ಕಳೆದು ಹೋಗಿದ್ದ ಎಮ್ಮೆ ಹುಡುಕಿಕೊಂಡು ಮಗ ವರ್ಗೀಸ್ ಜತೆಯಲ್ಲಿ ಮನೆಯಿಂದ ಸ್ವಲ್ಪ ದೂರಕ್ಕೆ ಎಲಿಯಾಸ್ ಹೋಗಿದ್ದರು.

ಎದುರಿಗೆ ಆನೆ ಕಂಡ ಕೂಡಲೇ ಮಗ ಬಂಡೆಯೊಂದನ್ನು ಏರಿ ತಪ್ಪಿಸಿಕೊಂಡಿದ್ದಾರೆ. ಬಂಡೆ ಏರಲು ಸಾಧ್ಯವಾಗದೆ ಎಲಿಯಾಸ್ ಅವರು ಆನೆ ದಾಳಿಗೆ ಸಿಲುಕಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು, ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನ. 30ರಂದು ಇಲ್ಲಿಗೆ ಸಮೀಪದ ಸೀತೂರಿನಲ್ಲಿ ಉಮೇಶ್ ಎಂಬುವರು ಆನೆ ತುಳಿದು ಮೃತಪಟ್ಟಿದ್ದರು. 20 ದಿನಗಳ ಅಂತರದಲ್ಲೇ ಆನೆ ದಾಳಿಗೆ ಇಬ್ಬರು ಮೃತಪಟ್ಟಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಯುವಕ ಸಾವು ಇಲಿ ಜ್ವರದ ಶಂಕೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ತೀವ್ರ ಜ್ವರದಿಂದ ಬಳಲುತ್ತಿದ್ದ ತಾಲ್ಲೂಕಿನ ಮಣ್ಕುಳಿಯ ನಾಗರಾಜ ನಾಯ್ಕ (38) ಮಂಗಳೂರಿನ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದು, ಇಲಿಜ್ವರ ಕಾರಣ ಎಂಬ ಶಂಕೆ ವ್ಯಕ್ತವಾಗಿದೆ.

‘ಚಿಕಿತ್ಸೆಗೆಂದು ಕೆಲ ದಿನಗಳ ಹಿಂದೆ ತಾಲ್ಲೂಕು ಆಸ್ಪತ್ರೆಗೆ ಬಂದಿದ್ದ ನಾಗರಾಜ ನಾಯ್ಕ ಅವರಿಗೆ ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿಗೆ ತೆರಳಲು ಸೂಚಿಸಲಾಗಿತ್ತು. ಬಿಳಿ ರಕ್ತಕಣಗಳ ಕೊರತೆಯಿಂದ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ ಎಂಬುದಾಗಿ ಅಲ್ಲಿನ ವೈದ್ಯರು ತಿಳಿಸಿದ್ದಾರೆ. ಇಲಿಜ್ವರದ ಶಂಕೆಯಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಮೃತರ ಮನೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ತಪಾಸಣೆ ನಡೆಸಲಾಗಿದೆ’ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ಸವಿತಾ ಕಾಮತ್ ತಿಳಿಸಿದ್ದಾರೆ.

ವಾಹನ ಡಿಕ್ಕಿ ಚಿರತೆ ಸಾವು

ಕಾನಹೊಸಹಳ್ಳಿ (ವಿಜಯನಗರ ಜಿಲ್ಲೆ): ಇಲ್ಲಿಗೆ ಸಮೀಪದ ಅಮಲಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ವಾಹನ ಡಿಕ್ಕಿ ಹೊಡೆದು, ಎರಡು ವರ್ಷದ ಹೆಣ್ಣು ಚಿರತೆ ಮೃತಪಟ್ಟಿದೆ.

‘ಬಣವಿಕಲ್ಲು ಮತ್ತು ಅಮಲಾಪುರ ಗ್ರಾಮಗಳ ಮಧ್ಯೆ ಇರುವ 101 ಪತ್ರೆವನದ ಸಮೀಪದ ಹೆದ್ದಾರಿಯಲ್ಲಿ ಬುಧವಾರ ರಾತ್ರಿ ಜರ್ಮಲಿ ಕಾಯ್ದಿಟ್ಟ ಅರಣ್ಯದ ಕಡೆಗೆ ಹೋಗಲು ಯತ್ನಿಸಿದ ಚಿರತೆ ಹೆದ್ದಾರಿ ದಾಟುವಾಗ ವಾಹನ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಚಿರತೆಯ ದೇಹದ ಭಾಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು’ ಎಂದು ಕೂಡ್ಲಿಗಿ ವಲಯ ಅರಣ್ಯಾಧಿಕಾರಿ ಸಂದೀಪ ನಾಯಕ ತಿಳಿಸಿದರು.

ಕೋಳಿ, ಮೊಟ್ಟೆ ಸಂಗ್ರಹಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಇಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟಕ್ಕಾಗಿ ಕೋಳಿ ಮತ್ತು ಮೊಟ್ಟೆ ಸಂಗ್ರಹಕ್ಕೆ ತಾಲ್ಲೂಕಿನ ಬೂದನೂರು ಗ್ರಾಮದಲ್ಲಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಗುರುವಾರ ಚಾಲನೆ ನೀಡಿದರು.

ಕನ್ನಡ ಸಂಘಟನೆಗಳು, ಸ್ವಂತಮನೆ ನಮ್ಮ ಹಕ್ಕು ಸಮಿತಿ, ಉದ್ಯೋಗ ಖಾತರಿ ಕಾರ್ಮಿಕರು ಸಮ್ಮೇಳನದ ವಿರುದ್ಧ ಘೋಷಣೆ ಕೂಗಿದರು.

‘ಸಮ್ಮೇಳನದಲ್ಲಿ ಮಾಂಸಾಹಾರವನ್ನು ಸಂಪೂರ್ಣವಾಗಿ ನಿಷೇಧಿಸಿರುವುದರಿಂದ ಕಾರ್ಮಿಕರು ಮತ್ತು ಪ್ರಗತಿಪರ ಸಂಘಟನೆಯ ಮುಖಂಡರು ಮನೆಗೊಂದು ಕೋಳಿ ಮತ್ತು ಮೊಟ್ಟೆಯನ್ನು ಸಂಗ್ರಹಿಸುತ್ತಿದ್ದೇವೆ. ಜೊತೆಗೆ ಕುರಿ, ಮೇಕೆಯನ್ನು ಸಂಗ್ರಹಿಸುವ ಗುರಿಯೊಂದಿಗೆ ಚಾಲನೆ ನೀಡಿದ್ದೇವೆ. ನಮ್ಮ ಆಹಾರದ ಹಕ್ಕನ್ನು ಕಿತ್ತುಕೊಳ್ಳುತ್ತಿರುವ ಸಮ್ಮೇಳನ ಆಯೋಜಕರಿಗೆ ಧಿಕ್ಕಾರವಿರಲಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ, ವಿವಿಧ ಸಂಘಟನೆಯ ಮುಖಂಡರಾದ ಎಂ.ಬಿ. ನಾಗಣ್ಣಗೌಡ, ಜಗದೀಶ, ಪ್ರೇಮಾ, ರವಿ, ರೇಣುಕಾ, ಮನು, ಬಿ.ಕೆ. ಸತೀಶ್, ಚೀರನಹಳ್ಳಿ ಲಕ್ಷ್ಮಣ್ ಭಾಗವಹಿಸಿದ್ದರು.

ಮಂಡ್ಯ ತಾಲ್ಲೂಕಿನ ಬೂದನೂರು ಗ್ರಾಮದಲ್ಲಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಸಾಹಿತ್ಯ ಸಮ್ಮೇಳನದ ಬಾಡೂಟಕ್ಕಾಗಿ ಕೋಳಿ, ಮೊಟ್ಟೆ ಸಂಗ್ರಹಿಸಿದರು

‘ಸಮ್ಮೇಳನದ ಕೊನೆಯ ದಿನ ಮೊಟ್ಟೆ’

ಮಂಡ್ಯ: ‘ಸಮ್ಮೇಳನದ ಕೊನೆ ದಿನವಾದ ಭಾನುವಾರ (ಡಿ.22) ಬೆಳಿಗ್ಗೆ ಮತ್ತು ಮಧ್ಯಾಹ್ನ ಮೊಟ್ಟೆ ಕೊಡುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹಾಗೂ ಜಿಲ್ಲಾಧಿಕಾರಿ ಕುಮಾರ ಭರವಸೆ ನೀಡಿದ್ದಾರೆ. ಇದರೊಂದಿಗೆ, ನಮ್ಮ ಹೋರಾಟಕ್ಕೆ ಮೊದಲ ಹಂತದ ಜಯ ಸಿಕ್ಕಿದೆ’ ಎಂದು ಪ್ರಗತಿಪರ ಸಂಘಟನೆಗಳವರು ತಿಳಿಸಿದ್ದಾರೆ.

‘ಆದರೆ, ನಾವು ನಮ್ಮ ಸಿದ್ಧತೆಗಳನ್ನು ಇಲ್ಲಿಗೇ ನಿಲ್ಲಿಸುವುದಿಲ್ಲ. ಅವರು ಮೊಟ್ಟೆ ಕೊಡದಿದ್ದರೆ ನಾವು ಬಿರಿಯಾನಿ ಹಂಚುವುದು ನಿಶ್ಚಿತ’ ಎಂದೂ ಹೇಳಿದ್ದಾರೆ.

‘ಮಾಂಸಾಹಾರ ಬಡಿಸುವೆವು’

ಮಂಡ್ಯ: ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಭರವಸೆ ನೀಡಿದಂತೆ ನಡೆದುಕೊಳ್ಳದಿದ್ದರೆ, ಸಮ್ಮೇಳನದಲ್ಲಿಯೇ ಮಾಂಸಾಹಾರ ಊಟ ಬಡಿಸಿ ಮುಜುಗರಕ್ಕೆ ಒಳಗಾಗಿಸುತ್ತೇವೆ’ ಎಂದು ಬಿ.ಆರ್.ಅಂಬೇಡ್ಕರ್ ವಾರಿಯರ್ಸ್‌ನ ರಾಜ್ಯ ಘಟಕದ ಅಧ್ಯಕ್ಷ ಎಚ್.ಜಿ.ಗಂಗರಾಜು ಎಚ್ಚರಿಕೆ ನೀಡಿದರು.

ಭೋವಿ ನಿಗಮದ ಅಕ್ರಮ ಸಿಬಿಐಗೆ ಏಕೆ ವಹಿಸಬಾರದು?

ತನಿಖೆಯ ವೈಖರಿಗೆ ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿನ ಕೋಟ್ಯಂತರ ರೂಪಾಯಿಗಳ ಅವ್ಯವಹಾರ ಆರೋಪಕ್ಕೆ ಸಂಬಂಧಿಸಿದ ಹಗರಣದಲ್ಲಿ ಪ್ರಮುಖ ಆರೋಪಿಗಳನ್ನು ಬಂಧಿಸಿಲ್ಲ’ ಎಂಬ ಅರ್ಜಿದಾರರ ಆಕ್ಷೇಪಣೆಯನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್, ‘ಈ ಹಗರಣದ ತನಿಖೆಯನ್ನು ಸಿಬಿಐಗೆ ಏಕೆ ವಹಿಸಬಾರದು’ ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ.

ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ತಮ್ಮ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ 4ನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯದಲ್ಲಿನ ವಿಚಾರಣೆ ರದ್ದುಪಡಿಸುವಂತೆ ಕೋರಿ ‘ನ್ಯೂ ಡ್ರೀಮ್ಸ್ ಎಂಟರ್‌ಪ್ರೈಸಸ್’ ಮಾಲೀಕರಾದ ಎಂ.ಯಶಸ್ವಿನಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜೀವನ್, ‘ರಾಜ್ಯ ಸರ್ಕಾರ ನಡೆಸುತ್ತಿರುವ ತನಿಖೆಯು ಪೂರ್ವಗ್ರಹ ಪೀಡಿತ ಭಾವನೆಯಿಂದ ಕೂಡಿದೆ. ಕಾರಣ ಎಫ್‌ಐಆರ್ ದಾಖಲಾಗಿ 20 ತಿಂಗಳು ಕಳೆದರೂ ಈತನಕ 1, 2, 3 ಮತ್ತು 5ನೇ ಅರೋಪಿಗಳನ್ನು ವಿಚಾರಣೆಗೆ ಕರೆದಿಲ್ಲ. ಆರೋಪಿಗಳು ಜಾಮೀನನ್ನೂ ಪಡೆದಿಲ್ಲ. ಹೀಗಿದ್ದರೂ ಪೊಲೀಸರು ಅವರನ್ನು ಬಂಧಿಸಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ತನಿಖಾಧಿಕಾರಿಗಳು ಒಬ್ಬ ಆರೋಪಿಯನ್ನು ಬಂಧಿಸಿದ್ದರು. ಆದರೆ, ಅವರಿಗೆ ವಿಚಾರಣಾ ನ್ಯಾಯಾಲಯ ಜಾಮೀನು ನೀಡಿದ ಕಾರಣ ಬಿಡುಗಡೆ ಮಾಡಲಾಗಿದೆ’ ಎಂದು ತಿಳಿಸಿದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ಉಳಿದ ಆರೋಪಿಗಳನ್ನು ಏಕೆ ಬಿಟ್ಟಿದ್ದೀರಾ? ಜಾಮೀನು ಪಡೆಯದಿದ್ದರೂ ಅವರನ್ನು ಏಕೆ ಬಂಧಿಸಿಲ್ಲ. ಇಷ್ಟು ದೊಡ್ಡ ಮೊತ್ತದ ಹಗರಣ ನಡೆದಿದೆ ಎಂಬ ಆರೋಪ ಇರುವಾಗ ತನಿಖೆ ಯಾಕೆ ಬಸವನ ಹುಳದಂತೆ ತೆವಳುತ್ತಿದೆ’ ಎಂದು ಪ್ರಶ್ನಿಸಿದರು.

‘ಇದು ₹100 ಕೋಟಿಗೂ ಹೆಚ್ಚಿನ ಮೊತ್ತದ ಹಗರಣವಾಗಿದೆ. ತಪ್ಪಿತಸ್ಥರು ಒಂದೂವರೆ ವರ್ಷದಿಂದ ಹೊರಗಿದ್ದಾರೆ. ಸರ್ಕಾರ ಆರೋಪಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿರುವಂತೆ ಕಾಣುತ್ತಿದೆ. ವಕೀಲೆ ಜೀವಾ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಎದುರಿಸುತ್ತಿರುವ ಪೊಲೀಸ್ ಅಧಿಕಾರಿಯನ್ನು ಈತನಕ ಬಂಧಿಸಿಲ್ಲ. ಇದೇನಾ ರಾಜ್ಯ ಸರ್ಕಾರ ನಡೆಸುವ ತನಿಖೆ’ ಎಂದು ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರಲ್ಲದೆ, ‘ಸಿಬಿಐ ತನಿಖೆಗೆ ವಹಿಸಲು ಇದು ಅರ್ಹ ಪ್ರಕರಣ’ ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆ ಮುಂದೂಡಿದರು.

ಸೈಲ್ ಶಿಕ್ಷೆ ಅಮಾನತಿಗೆ ಷರತ್ತು ವಿಧಿಸಿ: ಸಿಬಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟ ಮಾಡಿದ ಪ್ರಕರಣದಲ್ಲಿನ ಪ್ರಮುಖ ಅಪರಾಧಿಯಾದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್‌ಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಕಠಿಣ ಜೈಲು ಶಿಕ್ಷೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದೇ ಆದಲ್ಲಿ, ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರದ ಷರತ್ತುಗಳನ್ನು ವಿಧಿಸಬೇಕು’ ಎಂದು ಹೈಕೋರ್ಟ್‌ನಲ್ಲಿ ಸಿಬಿಐ ಪ್ರತಿಪಾದಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ವಿಶೇಷ ನ್ಯಾಯಾಲಯ ವಿಧಿಸಿರುವ ಶಿಕ್ಷೆಯನ್ನು ತಡೆಹಿಡಿಯಬೇಕು ಎಂದು ಕೋರಿ ಕಾರವಾರ ವಿಧಾನಸಭಾ ಕ್ಷೇತ್ರದ ಶಾಸಕ ಸತೀಶ್ ಕೃಷ್ಣ ಸೈಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ಶಿಕ್ಷೆಯನ್ನು ಸಂಪೂರ್ಣ ತಡೆಹಿಡಿಯುವುದು ಸಲ್ಲದು. ಈ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಅನುಸಾರ ಅಪರಾಧಿಗೆ ಷರತ್ತುಗಳನ್ನು ವಿಧಿಸಿ ಶಿಕ್ಷೆ ತಡೆಹಿಡಿಯುವ ಕುರಿತು ಪರಿಶೀಲಿಸಬಹುದು’ ಎಂದು ಮನವಿ ಮಾಡಿದರು. ಇದನ್ನು ಆಲಿಸಿದ ನ್ಯಾಯಪೀಠ, ಇದೇ 23ರೊಳಗೆ ಈ ಕುರಿತಂತೆ ಆದೇಶಿಸುವುದಾಗಿ ತಿಳಿಸಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದರು.

₹70.31 ಲಕ್ಷ ವಿದ್ಯುತ್ ಬಿಲ್ ಪಾವತಿಗೆ ಸೂಚನೆ • ಸಾಧ್ಯವಿಲ್ಲ – ಸ್ವಾಮೀಜಿ

ಸಿದ್ಧಗಂಗಾ ಮಠಕ್ಕೆ ಕೆಐಎಡಿಬಿ ನೋಟಿಸ್

ಪ್ರಜಾವಾಣಿ ವಾರ್ತೆ

ತುಮಕೂರು: ಮಠಕ್ಕೆ ನೀರು ಸರಬರಾಜು ಮಾಡಿದ ವಿದ್ಯುತ್ ಬಿಲ್ ₹70.31 ಲಕ್ಷ ಪಾವತಿಸುವಂತೆ ಕೋರಿ ಕೆಐಎಡಿ ಬಿಯು ಸಿದ್ಧಗಂಗಾ ಮಠಕ್ಕೆ ನೋಟಿಸ್ ಜಾರಿ ಮಾಡಿದ್ದು, ‘ನೀರು ಕೊಡುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ಬಿಲ್ ಪಾವತಿ ಸಾಧ್ಯವಿಲ್ಲ’ ಎಂದು ಸಿದ್ಧಲಿಂಗ ಸ್ವಾಮೀಜಿ ಹೇಳಿದ್ದಾರೆ.

ಸಿದ್ಧಲಿಂಗ ಸ್ವಾಮೀಜಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವತಿಯಿಂದ ತುಮಕೂರು ತಾಲ್ಲೂಕು ಹೊನ್ನೇನಹಳ್ಳಿ ಕೆರೆಯಿಂದ ದೇವರಾಯಪಟ್ಟಣ ಕೆರೆವರೆಗೆ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸಲಾಗಿದೆ. 2023–2024ನೇ ಸಾಲಿನಲ್ಲಿ ಪೂರ್ಣ ಪ್ರಮಾಣದಲ್ಲಿ ನೀರು ಹರಿಸಲಾಗಿದೆ. ಈ ನೀರನ್ನು ಸಿದ್ಧಗಂಗಾ ಮಠದ ದೈನಂದಿನ ಚಟುವಟಿಕೆಗಳಿಗೆ ಬಳಕೆ ಮಾಡಲಾಗಿದೆ ಎಂದು ಕೆಐಎಡಿಬಿ ಕಾರ್ಯಪಾಲಕ ಎಂಜಿನಿಯರ್ ಟಿ.ಎಸ್.ಲಕ್ಷ್ಮೀಶ್ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

‘ನೀರು ಸರಬರಾಜು ಮಾಡಿದ ವಿದ್ಯುತ್ ಬಿಲ್ ಮೊತ್ತ ₹70,31,438 ಹಣವನ್ನು ಬೆಸ್ಕಾಂಗೆ ಪಾವತಿಸಬೇಕಿದ್ದು, ಹಣ ಪಾವತಿಗೆ ಕೋರಿ ಕೇಂದ್ರ ಕಚೇರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಕೆರೆ ನೀರನ್ನು ಸಿದ್ಧಗಂಗಾ ಮಠದ ದೈನಂದಿನ ಚಟುವಟಿಕೆಗಳಿಗೆ ಉಪಯೋಗಿಸಿಕೊಂಡಿದ್ದು, ಮಂಡಳಿಯ ಆರ್ಥಿಕ ಪರಿಸ್ಥಿತಿ ಸುಸ್ಥಿತಿಯಲ್ಲಿ ಇಲ್ಲದಿರುವ ಕಾರಣ ನೀರು ಸರಬರಾಜಿನ ವಿದ್ಯುತ್ ಬಳಕೆ ವೆಚ್ಚವನ್ನು ಮಠದ ವತಿಯಿಂದಲೇ ಭರಿಸುವಂತೆ ತಿಳಿಸಲು ಕೇಂದ್ರ ಕಚೇರಿಯಿಂದ ನಿರ್ದೇಶಿಸಲ್ಪಟ್ಟಿರುತ್ತೇನೆ’ ಎಂದು ನೋಟಿಸ್‌ನಲ್ಲಿ ನಮೂದಿಸಿದ್ದಾರೆ.

ಸ್ವಾಮೀಜಿ ಪತ್ರ: ಈ ನೋಟಿಸ್‌ಗೆ ಪತ್ರ ಬರೆದಿರುವ ಮಠಾಧೀಶರಾದ ಸಿದ್ಧಲಿಂಗ ಸ್ವಾಮೀಜಿ, ‘ದೇವರಾಯಪಟ್ಟಣ ಕೆರೆ ನೀರನ್ನು ಮಠದ ದೈನಂದಿನ ಕೆಲಸ ಕಾರ್ಯಗಳಿಗೆ ಬಳಕೆ ಮಾಡುತ್ತಿರುವುದಾಗಿ ನೀಡಿರುವ ವರದಿಯನ್ನು ಪುನರ್ ಪರಿಶೀಲಿಸಬೇಕು. ಕುಡಿಯುವ ನೀರು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದ್ದು, ಹಣ ಪಾವತಿ ಸಾಧ್ಯವಿಲ್ಲ’ ಎಂದು ತಿಳಿಸಿದ್ದಾರೆ.

ಮಠ, ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವುದು ಸರ್ಕಾರದ ಕರ್ತವ್ಯ. ಇದಕ್ಕೆ ತಗುಲುವ ವಿದ್ಯುತ್ ಬಿಲ್ ಅನ್ನು ಸರ್ಕಾರ ಪಾವತಿ ಮಾಡಬೇಕೇ ಹೊರತು ಸಂಘ, ಸಂಸ್ಥೆಗಳು ಪಾವತಿ ಮಾಡಲು ಬರುವುದಿಲ್ಲ ಎಂದು ಹೇಳಿದ್ದಾರೆ.

ಮಠಕ್ಕೆ ನೀಡಿದ್ದ ನೋಟಿಸ್ ವಾಪಸ್: ಎಂ.ಬಿ. ಪಾಟೀಲ

ಸುವರ್ಣ ವಿಧಾನಸೌಧ (ಬೆಳಗಾವಿ): ಕಾಲುವೆಗೆ ಹರಿಸಿದ ನೀರನ್ನು ಬಳಸಿಕೊಂಡಿರುವುದಕ್ಕಾಗಿ ₹70.31 ಲಕ್ಷ ವಿದ್ಯುತ್ ಶುಲ್ಕ ಪಾವತಿಸುವಂತೆ ತುಮಕೂರಿನ ಸಿದ್ಧಗಂಗಾ ಮಠಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ನೀಡಿರುವ ನೋಟಿಸ್ ಅನ್ನು ಹಿಂಪಡೆಯಲಾಗುವುದು ಎಂದು ಕೈಗಾರಿಕಾ ಸಚಿವ ಎಂಬಿ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಸಿದ್ಧಗಂಗಾ ಮಠವು ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದೆ. ಮಠವು ನೀರು ಬಳಸಿಕೊಂಡಿದೆ ಎಂಬ ಕಾರಣಕ್ಕೆ ಶುಲ್ಕ ಪಾವತಿಗೆ ಸೂಚಿಸಿರುವುದು ಸರಿಯಲ್ಲ. ನೋಟಿಸ್ ಹಿಂಪಡೆಯುವಂತೆ ಕೆಐಎಡಿಬಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ನಿರ್ದೇಶನ ನೀಡಿದ್ದೇನೆ’ ಎಂದರು.

‘ಕೆಐಎಡಿಬಿಯಿಂದ ನಿರ್ಮಿಸಿದ ಕಾಲುವೆಗೆ ಹರಿಸಿದ ನೀರನ್ನು ಬಳಸಿಕೊಳ್ಳಲಾಗಿತ್ತು ಎಂಬ ಕಾರಣಕ್ಕಾಗಿ ಏಪ್ರಿಲ್ ತಿಂಗಳಲ್ಲೇ ಸಿದ್ಧಗಂಗಾ ಮಠಕ್ಕೆ ನೋಟಿಸ್ ನೀಡಲಾಗಿತ್ತು. ಮಠವು ನೀರು ಬಳಸಿಕೊಳ್ಳದಿದ್ದರೂ ನೋಟಿಸ್ ನೀಡಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.

‘ಸಿದ್ಧಗಂಗಾ ಮಠದ ಸ್ವಾಮೀಜಿಯವರ ಜೊತೆ ಕೆಐಎಡಿಬಿಯ ಮುಖ್ಯ ಎಂಜಿನಿಯರ್ ಅವರು ಈಗಾಗಲೇ ಮಾತನಾಡಿದ್ದಾರೆ. ನಾನು ಕೂಡ ಚರ್ಚಿಸುವೆ’ ಎಂದು ತಿಳಿಸಿದರು.

ಸ್ನೇಹಮಯಿ ಕೃಷ್ಣ ಆರೋಪ ಸುಳ್ಳು: ಹರ್ಷ ಸ್ಪಷ್ಟನೆ

ಮೈಸೂರು: ‘ಸ್ಥಳೀಯ ಸಂಸ್ಥೆಗಳ ಚುನಾವಣೆ ತಡವಾಗುತ್ತಿರುವ ಕುರಿತು ಹೋರಾಟ ಸಂಘಟಿಸುವ ಬಗ್ಗೆ ಮಾತನಾಡಲು ಸ್ನೇಹಮಯಿ ಕೃಷ್ಣ ಮನೆಗೆ ತೆರಳಿದ್ದೆ. ಆದರೆ, ಅವರ ಆರೋಪದಿಂದ ನೋವಾಗಿದೆ’ ಎಂದು ಬಿಜೆಪಿ ನಗರ ರೈತ ಮೋರ್ಚಾ ಉಪಾಧ್ಯಕ್ಷ ಹರ್ಷ ತಿಳಿಸಿದರು.

ಇಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಮುಡಾ ಪ್ರಕರಣದಿಂದ ಹಿಂದೆ ಸರಿಯುವಂತೆ ಕೃಷ್ಣ ಅವರಿಗೆ ಹಣದ ಆಮಿಷವೊಡ್ಡಿದ್ದೇನೆ ಎನ್ನುವುದು ಸತ್ಯಕ್ಕೆ ದೂರವಾದುದು. ಮುಡಾ ಮುಂದೆ ಸ್ನೇಹಿತ ಶ್ರೀನಿಧಿ ಜೊತೆ ಡಿ.13ರಂದು ತೆರಳುತ್ತಿದ್ದಾಗ ಕೃಷ್ಣ ಅಲ್ಲೇ ಇದ್ದರು. ಅವರಿಗೆ ನನ್ನನ್ನು ಶ್ರೀನಿಧಿ ಪರಿಚಯಿಸಿದ್ದರು’ ಎಂದರು.

‘ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಚಾರದ ಬಗ್ಗೆ ಚರ್ಚಿಸಲು ನಾನು ಹಾಗೂ ಶ್ರೀನಿಧಿ ಭಾನುವಾರ ಕೃಷ್ಣ ಅವರ ಮನೆಗೆ ತೆರಳಿದ್ದೆವು. ಅವರು ಅಲ್ಲಿರಲಿಲ್ಲ. ಹೀಗಾಗಿ ಅವರ ಮಗನೊಂದಿಗೆ ಕಾರಿನಲ್ಲಿ ಕುಳಿತು ಮಾತನಾಡಿದ್ದೆವು. ಹೋರಾಟದ ವಿಚಾರ ಪ್ರಸ್ತಾಪಿಸಿ, ಆತನ ಮೊಬೈಲ್ ಫೋನ್ ಪಡೆದುಕೊಂಡು ಬಂದಿದ್ದೆವು’ ಎಂದು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಜನಪರ ಕಾರ್ಯಕ್ರಮಗಳ ಪರಿಚಯ

10 ಕಿರುಹೊತ್ತಗೆ ಬಿಡುಗಡೆ ಮಾಡಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಜನಪರ ಕಾರ್ಯಕ್ರಮ ಪರಿಚಯಿಸುವ ಸಲುವಾಗಿ ‘ಪ್ರಜಾವಾಣಿ’ ಹೊರತಂದ 10 ಕಿರು ಹೊತ್ತಗೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುವರ್ಣ ವಿಧಾನ ಸೌಧದಲ್ಲಿ ಗುರುವಾರ ಬಿಡುಗಡೆ ಮಾಡಿದರು.

ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಹೊರತಂದ ಈ ಕಿರು ಹೊತ್ತಗೆಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕಾರ್ಯಕ್ರಮಗಳು, ಯೋಜನೆಗಳು ಮತ್ತು ಪ್ರಯೋಜನಗಳ ಕುರಿತ ಸಮಗ್ರ ಮಾಹಿತಿ ಇದೆ. ಉಪಯುಕ್ತ ಮಾಹಿತಿಯನ್ನು ಜನರಿಗೆ ತಲುಪಿಸುವ ಪ್ರಯತ್ನ ‘ಪ್ರಜಾವಾಣಿ’ ಮಾಡಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಭಾಧ್ಯಕ್ಷ ಯು.ಟಿ. ಖಾದರ್, ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ ಖರ್ಗೆ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ರಾಜ್ಯ ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅಧ್ಯಕ್ಷ ಡಾ. ಅಜಯ ಸಿಂಗ್, ಶಾಸಕ ವಿಜಯಾನಂದ ಕಾಶಪ್ಪನವರ ಸಾಕ್ಷಿಯಾದರು.

ಮುಖ್ಯಮಂತ್ರಿ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಟಿಪಿಎಂಎಲ್ ಜಾಹೀರಾತು ವಿಭಾಗದ ಡೆಪ್ಯುಟಿ ಜನರಲ್ ಮ್ಯಾನೇಜರ್ ಮಂಜುಳಾ ಮೆನನ್, ಸಹಾಯಕ ಪ್ರಧಾನ ವ್ಯವಸ್ಥಾಪಕ ದಿವಾಕರ ಭಟ್ ಮತ್ತು ಮುಖ್ಯ ವರದಿಗಾರ ವೈ.ಗ. ಜಗದೀಶ್ ಜೊತೆಯಾದರು.

ಬೆಳಗಾವಿಯಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಜನಪರ ಕಾರ್ಯಕ್ರಮಗಳನ್ನು ಪರಿಚಯಿಸುವ 10 ಕಿರು ಹೊತ್ತಗೆಗಳನ್ನು ಗುರುವಾರ ಬಿಡುಗಡೆ ಮಾಡಿದರು. ದಿವಾಕರ ಭಟ್, ಮಂಜುಳಾ ಮೆನನ್, ನಜೀರ್ ಅಹ್ಮದ್, ರುದ್ರಪ್ಪ ಲಮಾಣಿ, ರವೀಂದ್ರ ಭಟ್ಟ, ಯು.ಟಿ. ಖಾದರ್, ಅಶೋಕ ಪಟ್ಟಣ, ವಿಜಯಾನಂದ ಕಾಶಪ್ಪನವರ, ಡಿ.ಕೆ.ಶಿವಕುಮಾರ್, ಪ್ರಿಯಾಂಕ ಖರ್ಗೆ, ಭೈರತಿ ಸುರೇಶ್, ವೈ.ಗ.ಜಗದೀಶ್, ಕೆ.ವಿ. ಪ್ರಭಾಕರ ಮತ್ತು ಡಾ.ಅಜಯ ಸಿಂಗ್ ಜೊತೆಯಾದರು

ಪ್ರಕಟವಾದ ಕಿರು ಹೊತ್ತಗೆಗಳು

1.ಗ್ರಾಮ ಪಂಚಾಯಿತಿ ಒಂದು ಪ್ರಜಾಸತ್ತಾತ್ಮಕ ಸಂಸ್ಥೆ,
2.ಹೊಸತನದ ಹಾದಿಯಲ್ಲಿ– ಕಲಬುರಗಿ ಜಿಲ್ಲೆ (ಸಚಿವ ಪ್ರಿಯಾಂಕ್‌ಖರ್ಗೆ)
3.ಗ್ರಾಮಸ್ಥರ ಜೀವನ ಮತ್ತು ಜೀವನೋಪಾಯಕ್ಕೆ ಅಡಿಪಾಯ– ಕೆಆರ್‌ಐಡಿಎಲ್, **4.**ಉದ್ಯೋಗ ಬದುಕು ಖಾತ್ರಿ–ನರೇಗಾ, **5.**ಕುಡಿಯುವ ನೀರು ಮತ್ತು ನೈರ್ಮಲ್ಯ ಕ್ಷೇತ್ರದಲ್ಲಿ–ದಶಕದ ಸಾಧನೆ ಮೈಲಿಗಲ್ಲು (ಆರ್‌ಡಬ್ಲ್ಯುಎಸ್), **6.**ಆಸ್ತಿ ತೆರಿಗೆ– ಡಿಜಿಟಲ್ ಪಾವತಿಗೆ ಉತ್ತೇಜನ, **7.**ಸಾಮಾಜಿಕ ಪರಿಶೋಧನೆ– ಉದ್ಯೋಗ ಖಾತ್ರಿಯ ಪರಿಣಾಮಕಾರಿ ಅನುಷ್ಠಾನದ ಸಾಧನ, **8.**ಗ್ರಾಮೀಣ ರಸ್ತೆಗಳು ದೇಶದ ಬೆನ್ನೆಲುಬು–ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, **9.**ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ– ಕರ್ನಾಟಕ ಸರ್ಕಾರದಿಂದ ನಿರ್ಮಲ ಗ್ರಾಮ ಯೋಜನೆ ಮತ್ತು
10.ಗ್ರಾಮೀಣ ಶಿಕ್ಷಣದಲ್ಲಿ ಗ್ರಂಥಾಲಯಗಳ ಪಾತ್ರ– ಓದುವ ಬೆಳಕು.

ಶುಕ್ರವಾರ, ಡಿಸೆಂಬರ್ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 351 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ರಂಜನೆ ಜೊತೆಗೆ ಸಂದೇಶ ಸುದೀಪ್ ಫಿಲಾಸಫಿ

'ಮ್ಯಾಕ್ಸ್' ಚಿತ್ರದ ಕುರಿತು ನಟ ಸುದೀಪ್ ಮಾತುಕತೆ

ಆಳ-ಅಗಲ ದಿಢೀರ್ ತೀರ್ಮಾನ ಅಚ್ಚರಿಯ ನಿರ್ಗಮನ

ನನ್ನಿಂದ ದುಪ್ಪಟ್ಟು ಸಾಲ ವಸೂಲಿ: ಮಲ್ಯ 10

'ಗಾಂಧಿ' ಪೀಠದಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,218	23,951	₹79,510 (ಬೆಂಗಳೂರು)	₹91,800 (ಬೆಂಗಳೂರು)	85.13

'ಬಾಣಂತಿಯರ ಸಾವು ಪ್ರಕರಣ ನ್ಯಾಯಾಂಗ ತನಿಖೆ'

ಬೆಳಗಾವಿ: 'ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಭವಿಸಿರುವ ಬಾಣಂತಿಯರ ಸಾವಿನ ಪ್ರಕರಣಗಳ ಕುರಿತು ನ್ಯಾಯಾಂಗ ತನಿಖೆಗೆ ಆದೇಶ ಹೊರಡಿಸಲಾಗುವುದು' ಎಂದು ಸಚಿವ ದಿನೇಶ್ ಪ್ರಕಟಿಸಿದರು. 8

ಸಲಿಂಗಿ ಮಹಿಳಾ ಜೋಡಿಯ ಸಹಜೀವನಕ್ಕೆ ಅಸ್ತು

ಅಮರಾವತಿ (ಪಿಟಿಐ): ಸಲಿಂಗಿ ಮಹಿಳಾ ಜೋಡಿಯೊಂದರ ಒಟ್ಟಿಗೆ ಬಾಳುವ ಹಕ್ಕನ್ನು ಎತ್ತಿ ಹಿಡಿದಿರುವ ಆಂಧ್ರಪ್ರದೇಶ ಹೈಕೋರ್ಟ್, ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಈ ಜೋಡಿ ಹೊಂದಿದೆ ಎಂದು ಹೇಳಿದೆ. 11

ಅವಿಶ್ವಾಸ ನಿಲುವಳಿ ನೋಟಿಸ್ ತಿರಸ್ಕೃತ

ನವದೆಹಲಿ: ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ವಿರುದ್ಧ ಅವಿಶ್ವಾಸ ನಿಲುವಳಿ ಮಂಡಿಸುವ ನೋಟಿಸ್ ಅನ್ನು ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ತಿರಸ್ಕರಿಸಿದ್ದಾರೆ. 7

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪರಸ್ಪರ ತಳ್ಳಾಟದ ಆರೋಪ • ಆಸ್ಪತ್ರೆಗೆ ದಾಖಲಾದ ಇಬ್ಬರು ಸಂಸದರು

ಸದನದ ಮುಂದೆ 'ಕದನ'

ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅವಮಾನಿಸಲಾಗಿದೆ ಎಂದು ಆರೋಪಿಸಿ ಆಡಳಿತಾರೂಢ ಎನ್‌ಡಿಎ ಹಾಗೂ ವಿಪಕ್ಷ 'ಇಂಡಿಯಾ' ಮೈತ್ರಿಕೂಟ ಸಂಸತ್ ಆವರಣದಲ್ಲಿ ಗುರುವಾರ ನಡೆಸಿದ ಪ್ರತ್ಯೇಕ ಪ್ರತಿಭಟನೆಗಳು ಹಲವು ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾದವು. ತಮ್ಮ ಸಂಸದರ ಮೇಲೆ ಹಲ್ಲೆಗಳನ್ನು ನಡೆಸಲಾಗಿದೆ ಎಂದು ಉಭಯ ಬಣಗಳ ನಾಯಕರು ಆರೋಪ–ಪ್ರತ್ಯಾರೋಪ ಮಾಡಿದರು. ಎರಡೂ ಪಕ್ಷಗಳ ನಾಯಕರು ಪರಸ್ಪರರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರುಗಳನ್ನೂ ದಾಖಲಿಸಿದರು. 'ಗಾಂಧಿ ಕುಟುಂಬದವರು ಕ್ಷಮೆಯಾಚಿಸಬೇಕು' ಎಂದು ಬಿಜೆಪಿ ಸಂಸದರು ಆಗ್ರಹಿಸಿದರೆ, ಪ್ರಿಯಾಂಕಾ ಗಾಂಧಿ ನೇತೃತ್ವದಲ್ಲಿ 'ಕೈ' ಸಂಸದರು 'ಜೈ ಭೀಮ್' ಎಂಬ ಘೋಷಣೆ ಮೊಳಗಿಸಿದರು.

'ಇಬ್ಬರು ಸಂಸದರನ್ನು ತಳ್ಳಿದ ರಾಹುಲ್'

ನವದೆಹಲಿ: 'ಸಂಸತ್ ಭವನದಲ್ಲಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ನಮ್ಮ ಪಕ್ಷದ ಸಂಸದರನ್ನು ತಳ್ಳಿದ್ದಾರೆ. ಹೀಗಾಗಿ, ಇಬ್ಬರು ಸಂಸದರ ತಲೆಗೆ ಗಾಯಗಳಾಗಿವೆ' ಎಂದು ಬಿಜೆಪಿ ಆರೋಪಿಸಿದೆ. 'ಕಾಂಗ್ರೆಸ್‌ನ ಈ ನಾಯಕ ತುಂಬಾ ಹತ್ತಿರಕ್ಕೆ ಬಂದು ಜೋರಾಗಿ ಕಿರುಚಿದ್ದಾರೆ' ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯೆ ಎಸ್.ಫಾಂಗ್ನಾನ್ ಕೊನ್ಯಾಕ್ ಆರೋಪಿಸಿದರು.

ಗಾಯಗೊಂಡಿರುವ ಸಂಸದರಾದ ಪ್ರತಾಪ್ ಸಾರಂಗಿ ಹಾಗೂ ಮುಕೇಶ್ ರಜಪೂತ್ ಅವರನ್ನು ರಾಮ ಮನೋಹರ ಲೋಹಿಯಾ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿದೆ. ಇದರ ಬೆನ್ನಲ್ಲೇ, ರಾಹುಲ್ ವಿರುದ್ಧ ಮಾಜಿ ಸಚಿವ ಅನುರಾಗ್ ಠಾಕೂರ್ ಸೇರಿದಂತೆ ಬಿಜೆಪಿಯ ಸಂಸದರು ಪಾರ್ಲಿಮೆಂಟ್ ಸ್ಟ್ರೀಟ್ ಠಾಣೆಯಲ್ಲಿ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿದೆ.

ಸಂಸತ್‌ನ ಮಕರ ದ್ವಾರದ ಮುಂಭಾಗದಲ್ಲಿ ಪ್ರತಿಭಟನೆನಿರತ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಮುಖಾಮುಖಿಯಾದರು. ಆಗ ಬಿಜೆಪಿ ಸಂಸದ ನಿಶಿಕಾಂತ್ ದುಬೆ, 'ರಾಹುಲ್, ನಿಮಗೆ ನಾಚಿಕೆಯಾಗುವುದಿಲ್ಲವೇ? ನೀವು ರೌಡಿ ವರ್ತನೆ ತೋರಿದ್ದೀರಿ? ವೃದ್ಧ ಸಂಸದನನ್ನು ತಳ್ಳಿದ್ದೀರಿ' ಎಂದು ಪ್ರಶ್ನಿಸಿದರು. ರಾಹುಲ್ ಪ್ರತಿಕ್ರಿಯಿಸಿ, 'ಅವರು ನನ್ನನ್ನು ತಳ್ಳಿದರು' ಎಂದರು. ಸಾರಂಗಿ ಅವರನ್ನು ನೋಡಿದ ನಂತರ ವಿಪಕ್ಷ ನಾಯಕ ಅಲ್ಲಿಂದ ತೆರಳಿದರು. 'ಸಂಸದರೊಬ್ಬರನ್ನು ರಾಹುಲ್ ತಳ್ಳಿದರು. ಅವರು ನನ್ನ ಮೇಲೆ ಬಿದ್ದ ಪರಿಣಾಮ ಗಾಯಗೊಂಡೆ' ಎಂದು ಸಾರಂಗಿ ಸುದ್ದಿಗಾರರಿಗೆ ತಿಳಿಸಿದರು.

> ಸಂಸತ್ತಿನ ಒಳಗೆ ರಾಹುಲ್ ದೈಹಿಕ ಶಕ್ತಿಯನ್ನು ಬಳಸುತ್ತಿದ್ದಾರೆ. ನೀವು ಸಂಸತ್ತಿನಲ್ಲಿ ದೈಹಿಕ ಸಾಮರ್ಥ್ಯ ಪರೀಕ್ಷೆ ಮಾಡಲಿದ್ದೀರಾ? ಆಗ ಕುಸ್ತಿಪಟುಗಳು, ಗೂಂಡಾಗಳು ಸೇರುತ್ತಾರೆ. ಸಂಸತ್ತನ್ನು ಕಾಂಗ್ರೆಸ್ ಎಲ್ಲಿಗೆ ಕೊಂಡೊಯ್ಯುತ್ತಿದೆ? ಘಟನೆ ಬಗ್ಗೆ ವಿಪಕ್ಷ ನಾಯಕ ಕ್ಷಮೆಯಾಚಿಸುವ ವಿಶ್ವಾಸ ಇದೆ.
>
> **ಶಿವರಾಜ ಸಿಂಗ್ ಚೌಹಾಣ್**, ಕೇಂದ್ರ ಕೃಷಿ ಸಚಿವ

11ನೇ ಪುಟ ನೋಡಿ

'ಖರ್ಗೆ ತಳ್ಳಿದ ಬಿಜೆಪಿ ಸಂಸದರು'

ರಾಜ್ಯಸಭೆಯ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬಿಜೆಪಿ ಸಂಸದರು ತಳ್ಳಿದ್ದಾರೆ ಹಾಗೂ ರಾಹುಲ್ ಗಾಂಧಿ ಜತೆಗೆ ಅಮಾನುಷವಾಗಿ ನಡೆದುಕೊಂಡಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್ ಪಕ್ಷವು, ಈ ಬಗ್ಗೆ ಸ್ಪೀಕರ್ ಓಂ ಬಿರ್ಲಾ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಖರ್ಗೆ ಅವರೊಂದಿಗೆ ಬಿಜೆಪಿ ಸಂಸದರು ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಓಂ ಬಿರ್ಲಾ ಅವರಿಗೆ ಖರ್ಗೆ ಹಾಗೂ ಕಾಂಗ್ರೆಸ್ ಸಂಸದರು ಪ್ರತ್ಯೇಕ ಪತ್ರಗಳನ್ನೂ ಬರೆದಿದ್ದಾರೆ. ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ರಾಹುಲ್ ವಿರುದ್ಧದ ಆರೋಪವನ್ನು, 'ಗೃಹ ಸಚಿವ ಅಮಿತ್ ಶಾ ಉಳಿಸಲು ಮಾಡಿರುವ ಪಿತೂರಿ' ಎಂದು ಬಣ್ಣಿಸಿದ್ದಾರೆ.

ಸ್ಪೀಕರ್‌ಗೆ ಬರೆದ ಪತ್ರದಲ್ಲಿ ಖರ್ಗೆ, 'ನಾನು ಮಕರ ದ್ವಾರ ತಲುಪಿದಾಗ, ಬಿಜೆಪಿ ಸಂಸದರು ನನ್ನನ್ನು ತಳ್ಳಿದರು. ನಾನು ಸಮತೋಲನ ಕಳೆದುಕೊಂಡು ನೆಲದ ಮೇಲೆ ಕುಳಿತುಕೊಳ್ಳಬೇಕಾಯಿತು' ಎಂದಿದ್ದಾರೆ.

'ಇದರಿಂದಾಗಿ, ಈಗಾಗಲೇ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ನನ್ನ ಮೊಣಕಾಲುಗಳಿಗೆ ಗಾಯವಾಗಿದೆ. ತರುವಾಯ ಕಾಂಗ್ರೆಸ್ ಸಂಸದರು ಕುರ್ಚಿ ತಂದು ಅದರ ಮೇಲೆ ನನ್ನನ್ನು ಕೂರಿಸಿದರು. ಬಹಳ ಕಷ್ಟದಿಂದ, ಸಹೋದ್ಯೋಗಿಗಳ ಸಹಾಯದಿಂದ ನಾನು 11 ಗಂಟೆಗೆ ಸದನಕ್ಕೆ ಕುಂಟುತ್ತಾ ಬಂದೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

> 'ಉದ್ಯಮಿ ಗೌತಮ್ ಅದಾನಿ ಲಂಚ ಪ್ರಕರಣದ ವಿರುದ್ಧ ಅಧಿವೇಶನದ ಮೊದಲ ದಿನದಿಂದಲೂ ನಾವು ಪ್ರತಿಭಟನೆ ನಡೆಸುತ್ತಿದ್ದೆವು. ಇಂದಿನ ಬೆಳವಣಿಗೆ ಅದಾನಿ ವಿಷಯದ ಚರ್ಚೆಯನ್ನು ದಿಕ್ಕು ತಪ್ಪಿಸುವ ಪ್ರಯತ್ನ. ಪ್ರಧಾನಿ ಮೋದಿ ಅವರ ಸ್ನೇಹಿತನ ವಿರುದ್ಧದ ಪ್ರಕರಣದಿಂದ ಗಮನವನ್ನು ಬೇರೆಡೆಗೆ ಸೆಳೆಯಲು ಬಿಜೆಪಿ ಹೊಸ ಗೊಂದಲ ಸೃಷ್ಟಿಸುತ್ತಿದೆ.
>
> **ರಾಹುಲ್ ಗಾಂಧಿ**, ಲೋಕಸಭೆಯ ವಿಪಕ್ಷ ನಾಯಕ

11ನೇ ಪುಟ ನೋಡಿ

ಬೆಳಗಾವಿಯ ಸುವರ್ಣ ವಿಧಾನಸೌಧದ ಮೆಟ್ಟಿಲ ಮೇಲೆ ಪ್ರತಿಭಟನೆ ನಡೆಸುತ್ತಿದ್ದ ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರನ್ನು ಸಚಿವೆ ಲಕ್ಷ್ಮೀ ಹೆಬ್ಬಾಳಕರ ವಿರುದ್ಧದ ನಿಂದನೆ ಪ್ರಕರಣದಲ್ಲಿ ಪೊಲೀಸರು ಗುರುವಾರ ವಶಕ್ಕೆ ಪಡೆದು ಹೊತ್ತೊಯ್ದರು – ಚಿತ್ರ: ಎಂ.ಎಸ್. ಮಂಜುನಾಥ್

ಸಚಿವೆ ಲಕ್ಷ್ಮೀಗೆ ಅವಾಚ್ಯ ಪದ ಬಳಕೆ ಬಿಜೆಪಿಯ ಸಿ.ಟಿ.ರವಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅವಾಚ್ಯ ಪದ ಬಳಸಿ, ನಿಂದಿಸಿದ ಪ್ರಕರಣದಲ್ಲಿ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರನ್ನು ಹಿರೇಬಾಗೇವಾಡಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕಲಾಪ ಮುಂದೂಡಿದ ವೇಳೆ ರವಿ ಅವರು ಅವಾಚ್ಯ ಪದ ಬಳಸಿದರು ಎನ್ನಲಾಗಿದೆ.

ಪರಿಷತ್ತಿನಲ್ಲಿ ಮಾತಿನ ಚಕಮಕಿ ವೇಳೆ ರವಿ ಆಡಿದ ಮಾತು ತೀವ್ರ ಕೋಲಾಹಲಕ್ಕೆ ಕಾರಣವಾಗಿತ್ತು. ವಿಧಾನಸೌಧದಿಂದ ಹೊರಗೆ ಹೊರಟು ಪ್ರವೇಶ ದ್ವಾರದ ಕಾರಿಡಾರ್‌ನಲ್ಲಿ ಹೋಗುತ್ತಿದ್ದ ರವಿ ಅವರ ಮೇಲೆ ಕೆಲವರು ನುಗ್ಗಿ ಹಲ್ಲೆಗೆ ಯತ್ನ ನಡೆಸಿದ ಘಟನೆಯೂ ನಡೆಯಿತು.

ಈ ಬೆಳವಣಿಗೆಯ ಮಧ್ಯೆಯೇ, ಹಿರೇಬಾಗೇವಾಡಿ ಠಾಣೆಗೆ ಲಕ್ಷ್ಮೀ ಹೆಬ್ಬಾಳಕರ ದೂರು ನೀಡಿದರು. ರವಿ ಬಳಸಿದ ಆಕ್ಷೇಪಾರ್ಹ ಪದವನ್ನು ಕನ್ನಡದಲ್ಲಿ ಉಲ್ಲೇಖಿಸಿರುವ ಅವರು, 'ಸಿ.ಟಿ. ರವಿ ಅವರು ತಮ್ಮ ಕಡೆಗೆ ನುಗ್ಗಿ ಬಂದು ಸುಮಾರು 10 ಬಾರಿ ಆ 'ಆಕ್ಷೇಪಾರ್ಹ' ಪದ ಬಳಸಿದ್ದಾರೆ. ಅಶ್ಲೀಲವಾಗಿ ಸನ್ನೆ ಕೂಡ ಮಾಡಿ, ಮಾನಹಾನಿ ಮಾಡಿದ್ದಾರೆ' ಎಂದೂ ದೂರಿದ್ದರು.

ಯಾವ ಕಲಂ ಅಡಿ ಪ್ರಕರಣ ದಾಖಲು?

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಕಲಂ 75ರಡಿ (ಲೈಂಗಿಕ ಕಿರುಕುಳ) ಹಾಗೂ ಬಿಎನ್‌ಎಸ್ ಕಲಂ 79ರಡಿ (ಮಹಿಳೆಯ ಮಾನಕ್ಕೆ ಕುಂದು ಉಂಟು ಮಾಡುವ ಉದ್ದೇಶವಿರುವ ಪದ ಬಳಕೆ ಸನ್ನೆ ಅಥವಾ ಕೃತ್ಯ) ಪ್ರಕರಣ ದಾಖಲಾಗಿದೆ. ಈ ಕಲಂಗಳಡಿ ದಾಖಲಾಗುವ ಪ್ರಕರಣಗಳು ಸಾಬೀತಾದರೆ ಮೂರು ವರ್ಷಗಳ ವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಬಹುದು.

> **ರವಿ ಅವರು ಲಕ್ಷ್ಮೀ ಹೆಬ್ಬಾಳಕರ ವಿರುದ್ಧ 'ಪ್ರಾಸ್ಟಿಟ್ಯೂಟ್' ಪದ ಬಳಸಿದರು. ಇದು ದೇಶದ ಮಹಿಳೆಯರಿಗೆ ಮಾಡಿದ ಅಪಮಾನ. ಅಂಥವರನ್ನು ಸದನದಿಂದ ಹೊರಹಾಕಬೇಕು**
>
> **ಉಮಾಶ್ರೀ,** ಕಾಂಗ್ರೆಸ್ ಸದಸ್ಯೆ

> **ಇಂಥ ಮಾತು ಕೇಳಿಸಿಕೊಳ್ಳಲೂ ಅಸಹ್ಯವಾಗುತ್ತದೆ. ರಾಹುಲ್ ಗಾಂಧಿ ಅವರನ್ನು ರವಿ ಡ್ರಗ್ಗಿಸ್ಟ್ ಅಂದಿದ್ದರಿಂದ ಲಕ್ಷ್ಮೀ ಅವರು, ರವಿ ಅವರನ್ನು ಕೊಲೆಗಡುಕ ಎಂದರು. ಅದಕ್ಕೆ ಕೀಳು ಪದ ಬಳಸಿದರು**
>
> **ಬಲ್ಕೀಸ್ ಬಾನು,** ಕಾಂಗ್ರೆಸ್ ಸದಸ್ಯೆ

8ನೇ ಪುಟ ನೋಡಿ

ಇನ್ನೊಂದು ಸುದ್ದಿ 3B

ದಕ್ಷಿಣ ಭಾರತದ ಬಂಜಾರ ಸಮುದಾಯದ ಸ್ವಾಮೀಜಿಗಳು, ಮುಖಂಡರ ಸಭೆ

‘ತಳ ಸಮುದಾಯಗಳಿಗೆ ಸಿಗದ ನ್ಯಾಯ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತಾರತಮ್ಯದ ಕಾರಣದಿಂದಾಗಿ ಮತಾಂತರ ಹೆಚ್ಚಳ
- ನೊಂದವರಿಗೆ ಸಾಮಾಜಿಕ ನ್ಯಾಯ ಸಿಗಬೇಕು: ಸೇವಾಲಾಲ್ ಸ್ವಾಮೀಜಿ

ರಾಜರಾಜೇಶ್ವರಿನಗರ: ‘ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕವಾಗಿ ಬಂಜಾರ ಸಮುದಾಯ, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ತಳ ಸಮುದಾಯಗಳಿಗೆ ನ್ಯಾಯ ಸಿಕ್ಕಿಲ್ಲ’ ಎಂದು ಅಖಿಲ ಭಾರತ ಬಂಜಾರ ಯುವ ವೇದಿಕೆ ಅಧ್ಯಕ್ಷ ಜಿ.ಅಶ್ವತ್ ನಾಯಕ್ ವಿಷಾದ ವ್ಯಕ್ತಪಡಿಸಿದರು.

ಲಕ್ಷೀಪುರ ಬಳಿಯ ಸಾಲುದೊಡ್ಡಿ ಬಳಿ ನಡೆದ ದಕ್ಷಿಣ ಭಾರತದ ಬಂಜಾರ ಸಮುದಾಯದ ಸ್ವಾಮೀಜಿಗಳು, ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ ಸಮುದಾಯ ₹10 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿದೆ. ಇವರಿಗೆ ಸಿಗಬೇಕಾದ ಸವಲತ್ತು, ಶಿಕ್ಷಣ, ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ. ಎಲ್ಲ ರಂಗಗಳಲ್ಲಿಯೂ ತಾರತಮ್ಯ, ಕೀಳುಭಾವನೆಯಿಂದ ನೋಡುವ ಪ್ರವೃತ್ತಿಯಿಂದ ಮತಾಂತರ ಹೆಚ್ಚಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಚಿತ್ರದುರ್ಗ ಬಂಜಾರ ಪೀಠಾಧ್ಯಕ್ಷ ಶ್ರೀಧರ್ ಸೇವಾಲಾಲ ಸ್ವಾಮೀಜಿ ಅವರು, ‘ಜಾತಿ, ಜಾತಿ ನಡುವೆ ಸಂಘರ್ಷ ನಿಲ್ಲಬೇಕು. ನೊಂದವರಿಗೂ ಸಾಮಾಜಿಕ ನ್ಯಾಯ ಸಿಗುವ ವಾತಾವರಣ ರಾಷ್ಟ್ರದಲ್ಲಿ ನಿರ್ಮಾಣವಾಗಬೇಕು’ ಎಂದು ಹೇಳಿದರು.

ತೆಲಂಗಾಣ ಮತ್ತು ಆಂಧ್ರಪ್ರದೇಶ ಬಂಜಾರ ಮಠದ ರಮೇಶ್ ಮಹಾರಾಜ್, ರಮೇಶಗಿರಿ ಮಹಾರಾಜ್, ತಿರುಪತಿ ಭಾರತ ಬಂಜಾರ ಸೇವಾಲಾಲ ಸೇನೆ ಅಧ್ಯಕ್ಷ ಭುಕ್ಯಾ ಹರಿಕೃಷ್ಣ ನಾಯಕ, ಭಾರತ ಬಂಜಾರ ಸೇವಾಲಾಲ ಸೇನೆ ವಿಜಯಪುರ ಜಿಲ್ಲಾಧ್ಯಕ್ಷ ಅಶೋಕ ರಾಠೋಡ, ಬೆಳಗಾವಿ ಜಿಲ್ಲೆ ಅಧ್ಯಕ್ಷ ಆನಂದ ನಾಯಕ, ಬಾಗಲಕೋಟೆ ಜಿಲ್ಲಾ ಅಧ್ಯಕ್ಷ ದೀಪಕ್ ರಾಠೋಡ, ಅನಂತಪುರ ಜಿಲ್ಲಾ ಅಧ್ಯಕ್ಷ ಎಸ್.ಎನ್. ಕೃಷ್ಣ ನಾಯಕ್, ವೆಲ್ಲೂರು ಜಿಲ್ಲಾ ಅಧ್ಯಕ್ಷ ಬಾಣಾವತ್ ವೇಣುಗೋಪಾಲ್ ನಾಯಕ್ ಮಾತನಾಡಿದರು.

ಲಕ್ಷೀಪುರ ಬಳಿಯ ಸಾಲುದೊಡ್ಡಿ ಬಳಿ ನಡೆದ ದಕ್ಷಿಣ ಭಾರತದ ಬಂಜಾರ ಸಮುದಾಯದ ಸ್ವಾಮೀಜಿಗಳು, ಮುಖಂಡರ ಸಭೆಯನ್ನು ಗಣ್ಯರು ಉದ್ಘಾಟಿಸಿದರು

‘ಕನ್ನಡ ಗೊತ್ತು’ ಪ್ರಮಾಣಪತ್ರ ವಿತರಣೆ

ಮಕರಂದ ಸಂಸ್ಥೆಯಿಂದ 800 ಅನ್ಯಭಾಷಿಕರಿಗೆ ಕನ್ನಡ ಕಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕರಂದ ಸಂಸ್ಥೆಯು ಎರಡು ವರ್ಷಗಳಲ್ಲಿ 800 ಮಂದಿ ಅನ್ಯಭಾಷಿಕರಿಗೆ ಕನ್ನಡ ಭಾಷೆ ಕಲಿಸಿದ್ದು, ಸಂಸ್ಥೆ ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 200 ಮಂದಿಗೆ ‘ನನಗೆ ಕನ್ನಡ ಗೊತ್ತು’ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

‘ಮನೆ-ಮನಗಳಲ್ಲಿ ಕನ್ನಡ ರಂಗವಲ್ಲಿಯ ದರ್ಪಣ’ ಮಕರಂದ ಸಂಸ್ಥೆಯ ವಿಸ್ತೃತ ರೂಪವಾಗಿದೆ. ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಶನ್ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅನ್ಯಭಾಷಿಕರು ಕನ್ನಡದ ಗೀತೆಗಳನ್ನು ಹಾಡಿ ರಂಜಿಸಿದರು.

ಈ ವೇಳೆ ಮಾತನಾಡಿದ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, ‘ಭಾಷೆ ಮತ್ತು ಸಂಸ್ಕೃತಿ ನಡುವೆ ಸಂಬಂಧದ ಆತ್ಮ, ಶರೀರದ ಸಂಬಂಧದಂತೆ. ‘ನೀರು, ಮಣ್ಣಿನ ಋಣ ತೀರಿಸ ಬೇಕು’ ಎಂಬ ಮಾತು ಜನಪ್ರಿಯವಾಗಿದೆ. ಅನ್ಯಭಾಷಿಕರು ಕನ್ನಡ ಕಲಿಯಬೇಕು. ನಾನು ರಾಜ್‌ಕುಮಾರ್ ಅವರ ಚಲನ ಚಿತ್ರಗಳನ್ನು ವೀಕ್ಷಿಸಿ ಸುಲಭವಾಗಿ ಕನ್ನಡ ಕಲಿತೆ’ ಎಂದರು.

ಸಾಹಿತಿ ಕುಮಾರ ಕಿಣ್ಣಣ್ಣ ರೈ ಅವರ ಪುತ್ರ ಕೆ. ಪ್ರಸನ್ನ ರೈ, ‘ಅನ್ಯಭಾಷಿಕರಿಗೆ ಕನ್ನಡ ಕಲಿಸುವ ಕಾಯಕಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧನಸಹಾಯ ಮಾಡಬೇಕು’ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ‘ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡಿಗರಿಗೆ ಉನ್ನತ ಹುದ್ದೆ ಅಲಂಕರಿಸುವಂತಾಗಬೇಕು. ಇಲ್ಲಿ ಉದ್ಯೋಗ ಸೇರಿ ವಿವಿಧ ಕಾರಣಗಳಿಂದ ನೆಲಸಿರುವ ಅನ್ಯಭಾಷಿಕರು ಕನ್ನಡ ಕಲಿಯಬೇಕು’ ಎಂದರು. ನಟಿ ಪೂಜಾ ಗಾಂಧಿ ಅವರು ಕುವೆಂಪು ಅವರ ಕವಿತೆಯ ಸಾಲುಗಳನ್ನು ವಾಚಿಸಿ, ತಾವು ಕನ್ನಡ ಕಲಿತ ಬಗೆಯನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಕಲಿತ ಅನ್ಯಭಾಷಿಕರಿಗೆ ‘ನನಗೆ ಕನ್ನಡ ಗೊತ್ತು’ ಪ್ರಮಾಣಪತ್ರ ವಿತರಿಸಲಾಯಿತು. ಚಿರಂಜೀವಿ ಸಿಂಘ್, ಕೆ.ಪ್ರಸನ್ನ ರೈ, ಸಂತೋಷ ಹಾನಗಲ್ಲ, ಪೂಜಾ ಗಾಂಧಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ನೈಋತ್ಯ ರೈಲ್ವೆ

ಅರ್ಜಿ ಪ್ರಕಟಣೆ ಸಂ. 210/ಹಾಲ್ಟ್/ಬಿಎಫ್‌ಡಬ್ಲ್ಯು/2024/ಬೆಂಗಳೂರು ಡಿವಿಜನ್

ದಿನಾಂಕ : 13–12–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ನೀಡುವುದಕ್ಕಾಗಿ ಕಮಿಷನ್ ಆಧಾರದ ಮೇಲೆ ಐದು (05) ವರ್ಷಗಳ ಅವಧಿಗೆ ಅಥವಾ ನಿಲ್ದಾಣದ ಉನ್ನತೀಕರಣದವರೆಗೆ ಯಾವುದು ಮುಂಚಿತವೋ ಅದರಂತೆ ಹಾಲ್ಟ್ ಏಜೆಂಟ್‌ನ ನೇಮಕಾತಿಗಾಗಿ ಬ್ಯಾಟರಾಯನಹಳ್ಳಿ ರೈಲು ಹಾಲ್ಟ್ ನಿಲ್ದಾಣದ ಸುತ್ತಲು ವಾಸವಾಗಿರುವ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿಗಳಿಂದ ಮೊಹರಾದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ನಿಲ್ದಾಣದ ಹೆಸರು	ಸೆಕ್ಷನ್	ಕಾರ್ಯಾರಂಭಗೊಳಿಸುವುದು
1	ಬ್ಯಾಟರಾಯನಹಳ್ಳಿ	ಜೆಟಿಜೆ	ದಿನಾಂಕವನ್ನು ಆಡಳಿತ ವಿಭಾಗವು ಸೂಚಿಸುತ್ತದೆ

ಅರ್ಜಿಯನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ : 08–01–2025 ರಂದು 10.00 ಗಂಟೆಯಿಂದ 16.00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.swr.indianrailways.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/630/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | sw_railways | SWRRLY | southwesternrailway | SWRRLY

ಸುಧಾ ಓದಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಬಿ–ಎಸ್‌ಜಿ–ಪಿಆರ್‌ಓಜೆ–ಡಿಡಿ–ಬಿಎಡಬ್ಲ್ಯು–ಹೆಚ್‌ಎಎಸ್

ದಿನಾಂಕ : 14-12-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ಚಿಕ್ಕಬಾಣಾವರ – ನೆಲಮಂಗಲ – ಹಾಸನ ಸೆಕ್ಷನ್‌ನಲ್ಲಿ ವೇಗವನ್ನು ಗಂಟೆಗೆ 130 ಕಿಮೀ.ಗೆ ಹೆಚ್ಚಿಸಲು ಡಬಲ್ ಡಿಸ್ಟೆಂಟ್ ಸಿಗ್ನಲ್‌ನ್ನು ಒದಗಿಸುವುದು.	ರೂ. 4,78,80,333.54

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08–01–2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಯೋಜನೆ, ಬೆಂಗಳೂರು

ಪಿಯುಬಿ/634/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

‘2050ರಲ್ಲಿ ನಗರಗಳಲ್ಲೇ ಶೇ 68ರಷ್ಟು ಜನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವದ ಶೇ 68ರಷ್ಟು ಜನರು 2050ರ ವೇಳೆಗೆ ನಗರಗಳಲ್ಲೇ ವಾಸ ಮಾಡುತ್ತಾರೆ’ ಎಂದು ಐಎಫ್‌ಎಸ್ ಅಧಿಕಾರಿ ಬಿ.ಪಿ.ರವಿ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಭೂಗೋಳ ವಿಭಾಗ ಆಯೋಜಿಸಿದ್ದ ‘ಭವಿಷ್ಯದ ನಗರಗಳ ಸುಸ್ಥಿರ ಅಭಿವೃದ್ಧಿಗಾಗಿ ಬಹು ಶಿಸ್ತಿನ ವಿಧಾನ-ನವೀನ ಉದಯೋನ್ಮುಖ ತಂತ್ರಜ್ಞಾನ’ ಅಂತರಾಷ್ಟ್ರೀಯ ವಿಚಾರ ಸಮ್ಮೇಳನದಲ್ಲಿ ಅವರು ಮಾತನಾಡಿದರು.

‘ನಗರಗಳ ಅಭಿವೃದ್ಧಿಯಲ್ಲಿ ಸರ್ಕಾರಗಳ ನಿರ್ಲಕ್ಷ್ಯ ತೋರುತ್ತಿವೆ. ಯೋಜನೆ, ನಿರ್ವಹಣೆ ಸುಸ್ಥಿರವಾಗಿರದಿದ್ದರೆ ಸಮಸ್ಯೆಗಳು ಹೆಚ್ಚಾಗುತ್ತವೆ. ಜನರು ಗ್ರಾಮೀಣ ಭಾಗಗಳಿಗಿಂತ ನಗರ ಪ್ರದೇಶಗಳ ಮೇಲೆ ಅವಲಂಬಿತರಾಗುತ್ತಿದ್ದಾರೆ’ ಎಂದರು.

‘ಬೆಂಗಳೂರು ನಗರದಲ್ಲಿ ತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿಲ್ಲ’ ಎಂದು ಹೇಳಿದರು.

148 ಸ್ಟಾರ್ ಇವಿ ಬಸ್‌ಗೆ ಬಿಎಂಟಿಸಿ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಟಾರ್ ಎಲೆಕ್ಟ್ರಿಕ್ 148 ಬಸ್‌ಗಳನ್ನು ಪೂರೈಸಲು ಟಾಟಾ ಮೋಟರ್ಸ್‌ಗೆ ಬಿಎಂಟಿಸಿ ಬೇಡಿಕೆ ಸಲ್ಲಿಸಿದೆ. ಟಾಟಾ ಮೋಟರ್ಸ್ 12 ವರ್ಷಗಳ ಅವಧಿಗೆ 12 ಮೀಟರ್ ಎಲೆಕ್ಟ್ರಿಕ್ ಬಸ್‌ಗಳಾದ ‘ಟಾಟಾ ಸ್ಟಾರ್’ ಪೂರೈಕೆ ಮತ್ತು ಕಾರ್ಯನಿರ್ವಹಣೆ ಹೊಣೆ ಹೊಂದಿದೆ. ಹಿಂದೆ 921 ಸ್ಟಾರ್ ಎಲೆಕ್ಟ್ರಿಕ್ ಬಸ್ ಪೂರೈಸಿದ್ದು, ಹೆಚ್ಚುವರಿ 148 ಬಸ್ ಒದಗಿಸಲು ತಿಳಿಸಲಾಗಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಮಾತನಾಡಿ, ‘ನಗರದಲ್ಲಿ ಸಾರಿಗೆ ವ್ಯವಸ್ಥೆ ಅತ್ಯಾಧುನಿಕಗೊಳಿಸಲು ಹೆಚ್ಚುವರಿ 148 ಬಸ್ ಪಡೆಯಲಾಗುತ್ತಿದೆ. ಈ ಬಸ್‌ಗಳು ಪರಿಸರ ಸ್ನೇಹಿ, ಸೇವೆ ಒದಗಿಸಲಿದೆ’ ಎಂದು ಹೇಳಿದರು.

PM SHRI JAWAHAR NAVODAYA VIDYALAYA

DODDABALLAPUR, BANGALORE RURAL

Date: 19.12.2024

SHORT TENDER NOTICE

Sealed Tenders are invited from the reputed firms/suppliers/distributors for supply of **VEGETABLE & FRUITS** to this Vidyalaya for the year 2024-25.

The Tender documents/details may be obtained from the Office between **9.00 am to 4.00 pm** on all working days by paying an amount of Rs.100/- (one hundred only) by cash which is non-refundable or the tender schedule can be downloaded from the Vidyalaya website https://www.navodaya.gov.in/nvs/nvs-school/ **BANGALORERURAL/ en/home.** The last date for sale of tender forms is 30.12.2024 by 1.00 PM and the sealed tenders should be submitted **BY HAND, COURIER, SPEED/ REGISTERED POST** by 05**.00 pm of 30.12.2024.** The tenders will be opened on **31.12.2024 at 11.00 am.** Contact numbers 8116438494 (Principal) /7981061072 (SSA)

Sd/-PRINCIPAL

PUBLIC NOTICE

Notice is hereby given that documents bearing Original Release Deed Doc No.**834/1970-71**, dated **15/06/1970**, original Sale Deed Doc No. **ANK-1-13688/2003-04**, dated **17/02/2004**, original Sale Deed Doc No.1**435/1994-95**, dated **19/07/1994**, pertaining to survey No.**32/1**, situated at Attibele Hobli, Manchanahalli Village & original Sale Deed Doc No.**139/1943-44**, dated **26/07/1943** pertaining to survey No.**35/4**, situated at Attibele Hobli, Manchanahalli Village, has been misplaced and not traceable yet. The report of the same has lodged at the Sarjapura Police station on 18/12/2024 vide petition No.1384/1334/2024.

If found kindly inform to Mr L.B Sathish Kumar, Advocate at PSI Plaza, Opp to ICICI Bank, Sarjapura, Mobile No.**9606909763**

Description of lost/Misplaced original documents is as provide in the below table:

Sl.No	Survey Number	Documents	Document Number
1.	32/1	Release Deed dated 15/6/1970	Doc.No.834/1970-71,Book No.I, vol No.1137, page No. 115-116
2.	32/1	Sale Deed dated 11/2/2004	ANK-1-13688/2003-04, C.D.ANKD3
3.	32/1	Sale Deed dated 19/7/1994	Doc.No.1435/1994-95, Book No.I, vol-1790, page No.235-237
4.	35/2	Sale Deed dated 28/7/1943	Doc.No.139,Book No.I, vol No.572, page No.2-4, office of sub-register Anekal
5.	35/2	Release Deed dated 20/12/2021	ANK-1-07153/2021-22, C.D. No. ANKD1181

ಕಿರು ಪ್ರಕಟಣೆ

ಸಿಬ್ಬಂದಿ ಆಯ್ಕೆ ಆಯೋಗ (ಕರ್ನಾಟಕ–ಕೇರಳ ಪ್ರದೇಶ), ಬೆಂಗಳೂರು, ಇವರು 1 ವರ್ಷ ಅವಧಿಗೆ ತಮ್ಮ ಕಾನೂನು ವಿಷಯಗಳ ನಿರ್ವಹಣೆಗಾಗಿ, ಸಂಪೂರ್ಣ ಅಲ್ಪಾವಧಿ ಗುತ್ತಿಗೆ ಆಧಾರದಲ್ಲಿ, 01 (ಒಂದು) ಯಂಗ್ ಪ್ರೊಫೆಷನಲ್ (ಲೀಗಲ್ ಕನ್ಸಲ್ಟಂಟ್) ತೊಡಗಿಸಿಕೊಳ್ಳಲು, ಅರ್ಹ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಅರ್ಹ ಅಭ್ಯರ್ಥಿಗಳು, **15.01.2025** ರೊಳಗೆ ತಮ್ಮ ಅರ್ಜಿಯನ್ನು ಸಂಬಂಧಿತ ದಾಖಲಾತಿಗಳ ಸಮೇತ ಸಲ್ಲಿಸಬಹುದು. ವಿವರವಾದ ಅಧಿಸೂಚನೆಯು ಇಲ್ಲಿ ಲಭ್ಯವಿರುತ್ತದೆ (https://www.ssckkr.nic.in)

CBC 32203/11/0004/2425 **ಸಹಾಯಕ ನಿರ್ದೇಶಕರು**

SELECTION CENTRE SOUTH, BANGALORE

ALLOTMENT OF REGIMENTAL SHOP

NOTICE INVITING TENDER

1. Sealed tenders are invited from interested War Widow/ Widows of defence personnel killed while on duty/ Disabled Soldiers/ Ex-servicemen & Spouses/ Widows of Ex-servicemen subject to license period of five years with a three years cooling off/ break period for running Regimental Shop at Selection Centre South, Bangalore-560042.

S. No.	Name of Shop	No of Shops	EMD Money
(a)	Regimental Shop i.e Cafeteria, Photo studio cum Rail & Flight Reservation Centre & Xeroxing facilities	One	2,000/-

2. Application forms and instructions for applicants can be collected by interested persons/ parties/ firms from Q Br Office, Selection Centre South, Bangalore-560042 within 15 days from the date of publication of Tender Notice in Newspaper, Queries be clarified on **Mob No 9812762496** and Email **cubbang@nic.in**. Last Date for receipt of Tender/ appl is **1200 Hr** on **10 Jan 2025.** For details contact:-

Published by
Quarter Master Officer
Selection Centre South, Bangalore-560042
Cubbon Road, 'Q' Clk Mob No - 8950717969,
Email- cubbang@nic.in

ನಂ. 15–02/2024–ರೆಸ್ಟಜಿ.

ಭಾರತ ಸರ್ಕಾರ

ದೂರಸಂಪರ್ಕಗಳ ಸಚಿವಾಲಯ, ದೂರಸಂಪರ್ಕಗಳ ಇಲಾಖೆ

ನವದೆಹಲಿ

ಖಾಲಿಹುದ್ದೆ ಸುತ್ತೋಲೆ

ಟೆಲಿಕಾಂ ಡಿಸ್ಪ್ಯೂಟ್ಸ್ ಸೆಟ್ಲ್‌ಮೆಂಟ್ ಅಂಡ್ ಅಪೆಲ್ಲೇಟ್ ಟ್ರಿಬ್ಯೂನಲ್ (ಟಿಡಿಎಸ್‌ಎಟಿ) ಇಲ್ಲಿನ ಒಂದು ಸದಸ್ಯ ಹುದ್ದೆಗಾಗಿ ಅರ್ಹ ಮತ್ತು ಆಸಕ್ತಿಯುಳ್ಳ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಟಿಡಿಎಸ್‌ಎಟಿ ಎಂಬುದು ಒಂದು ಅಪ್ಪೆಲ್ಲೇಟ್ ಟ್ರಿಬ್ಯೂನಲ್ ಆಗಿರುತ್ತದೆ ಮತ್ತು ಇದು ಭಾರತದ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಕಾಯ್ದೆ, 1997ರ ಅಡಿಯಲ್ಲಿ ಸ್ಥಾಪನೆಗೊಂಡಿದ್ದು, ಸದರಿ ಕಾಯ್ದೆಯ ಅಡಿಯಲ್ಲಿ ವಿವಿಧ ಮೇಲ್ಮನವಿಗಳ ವಿಚಾರಣೆಗಳನ್ನು ಇಲ್ಲಿ ನಡೆಸಲಾಗುತ್ತದೆ. ಸದರಿ ಟ್ರಿಬ್ಯೂನಲ್, ಸಂಬಂಧಿತ ಕಾಯ್ದೆಗಳ ಅಡಿಯಲ್ಲಿ ದೂರಸಂಪರ್ಕ, ಪ್ರಸಾರ, ಮಾಹಿತಿ ತಂತ್ರಜ್ಞಾನ, ವಿಮಾನ ನಿಲ್ದಾಣ ದರಪಟ್ಟಿ ಮತ್ತು ಆಧಾರ್ ವಿಷಯಗಳಲ್ಲಿ ತನ್ನ ಕಾರ್ಯವ್ಯಾಪ್ತಿ ಹಕ್ಕು ಚಲಾಯಿಸುತ್ತವೆ. ಸದರಿ ಟಿಡಿಎಸ್‌ಟಿ ಪ್ರಧಾನ ಕಚೇರಿಯು ನವದೆಹಲಿಯಲ್ಲಿ ಸ್ಥಿತಗೊಂಡಿದೆ.

ಈ ಹುದ್ದೆಗೆ ಸಂಬಂಧಿತ ವಿದ್ಯಾರ್ಹತೆ, ಇನ್ನಿತರ ಅರ್ಹತಾ ಷರತ್ತುಗಳು ಮತ್ತು ಅರ್ಜಿ ನಮೂನೆಯು, ದೂರಸಂಪರ್ಕಗಳ ಇಲಾಖೆಯ http://dopt.gov.in, ವೈಯಕ್ತಿ, ಸಾರ್ವಜನಿಕ ಕುಂದು ಕೊರತೆ ಮತ್ತು ಪಿಂಚಣಿಗಳ ಸಚಿವಾಲಯದ http://www.persmin.nic.in ಮತ್ತು ಟಿಡಿಎಸ್‌ಎಟಿ'ರವರ http//tdsat.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ನಿರ್ದಿಷ್ಟ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 31ನೇ ಜನವರಿ, 2025 ರಂದು ಸಂಜೆ 05:30 ಗಂಟೆ.

CBC 06201/11/0013/2425 **ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ**

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475

ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022

ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಅಂಚೆ ಮತಪತ್ರದ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ಸೆಕ್ಷನ್ 108 ಮತ್ತು 110ರ ಅನುಗುಣವಾಗಿ ಮತ್ತು ಅನ್ವಯವಾಗುವ ಇತರೆ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದಲ್ಲಿ, ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು")ರ ಕಂಪನಿಗಳ ನಿಯಮ 20 ಮತ್ತು 22ನ್ನು ಓದಿಕೊಂಡಂತೆ, (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನುಬದ್ಧ ಮಾರ್ಪಾಡು ಅಥವಾ ಮರು–ಅನುಷ್ಠಾನ ಸೇರಿದಂತೆ) ಮತ್ತು ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೇರ್ಸ್‌ನಿಂದ ("ಎಂಸಿಎ") ಹೊರಡಿಸಲಾದ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 8, 2020, ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 (ಇನ್ನು ಮುಂದೆ ಒಟ್ಟಾರೆಯಾಗಿ "ಎಂಸಿಎ" ಸುತ್ತೋಲೆಗಳು ಎಂದು ಉಲ್ಲೇಖಿಸಲಾಗಿದೆ), ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾರವರು ಹೊರಡಿಸಿದ ಸಾಮಾನ್ಯ ಸಭೆಗಳ ಮೇಲೆ ಸೆಕ್ರೆಟರಿ ಸ್ಟ್ಯಾಂಡರ್ಡ್ಸ್‌ನ ನಿಯಮಗಳಿಗೆ ಅನುಗುಣವಾಗಿ, ಸೆಕ್ಯೂರಿಟೀಸ್ ಆಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ದ ("ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್ ನಿಬಂಧನೆಗಳು") ನಿಯಂತ್ರಣಗಳು, 2015ರ ("ಎಲ್‌ಒಆರ್‌ಡಿ ರೆಗ್ಯುಲೇಷನ್ಸ್") ನಿಯಂತ್ರಣ 44ಅನ್ನು ಓದಿಕೊಂಡಂತೆ ಮತ್ತು ಕಾಯ್ದೆಯ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳಡಿಯ ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳಂತೆ (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರುರೂಪಿಸುವಿಕೆ(ಗಳು) ಸೇರಿದಂತೆ) ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ("ಕಂಪನಿ") ವಿದ್ಯುನ್ಮಾನ ಮೂಲಕ ಮತದಾನ (ಸದೂರ ಇ–ಮತದಾನ) ಪ್ರಕ್ರಿಯೆಯ ಮೂಲಕ ದಿನಾಂಕ ನವೆಂಬರ್ 29, 2024ರ ಅಂಚೆ ಮತಪತ್ರ ನೋಟೀಸ್‌ನ ಮೂಲಕ ಈ ಕೆಳಗೆ ತಿಳಿಸಲಾದ ವಿಶೇಷ ನಿರ್ಣಯದ ಮೇಲೆ ತನ್ನ ಸದಸ್ಯರಿಂದ ಅನುಮೋದನೆ ಅಪೇಕ್ಷಿಸುತ್ತದೆ.

ವಿಶೇಷ ನಿರ್ಣಯದ ವಿವರ
'ಜಿಇಎಲ್ ಎಂಪ್ಲಾಯಿ ಸ್ಟಾಕ್ ಆಪ್ಷನ್ ಪ್ಲಾನ್ 2024' ("ಇಎಸ್‌ಒಪಿ 2024"/"ಪ್ಲಾನ್") ಇದರ ಅನುಮೋದನೆ
'ಜಿಇಎಲ್ ಎಂಪ್ಲಾಯಿ ಸ್ಟಾಕ್ ಆಪ್ಷನ್ ಪ್ಲಾನ್ 2024' ("ಇಎಸ್‌ಒಪಿ 2024"/"ಪ್ಲಾನ್") ಅಡಿಯಲ್ಲಿ ಕಂಪನಿಯ ಅಂಗಸಂಸ್ಥೆ ಕಂಪನಿ(ಗಳ) ಯ ಅರ್ಹ ಉದ್ಯೋಗಿಗಳಿಗೆ ಎಂಪ್ಲಾಯಿ ಸ್ಟಾಕ್ ಆಪ್ಷನ್ಸ್ ಒದಗಿಸಲು ಅನುಮೋದನೆ
ಗುರುತಿಸಲಾದ ಉದ್ಯೋಗಿಗಳಿಗೆ 'ಜಿಇಎಲ್ ಎಂಪ್ಲಾಯಿ ಸ್ಟಾಕ್ ಆಪ್ಷನ್ ಪ್ಲಾನ್ 2024' ("ಇಎಸ್‌ಒಪಿ 2024"/"ಪ್ಲಾನ್") ಅಡಿಯಲ್ಲಿ ಸಮನಾಗಿ ಅಥವಾ ವಿತರಿಸಲಾದ ಬಂಡವಾಳದ 1% ಕ್ಕಿಂತ ಹೆಚ್ಚು ಎಂಪ್ಲಾಯಿ ಸ್ಟಾಕ್ ಆಪ್ಷನ್ಸ್ ಒದಗಿಸಲು ಅನುಮೋದನೆ
ಕಂಪನಿ ಕಾಯಿದೆ, 2013ರ ಸೆಕ್ಷನ್ 186ರ ಅಡಿಯಲ್ಲಿ ಸಾಲಗಳನ್ನು ನೀಡಲು, ಹೂಡಿಕೆ ಮಾಡಲು ಮತ್ತು ಗ್ಯಾರಂಟಿಗಳು ಅಥವಾ ಭದ್ರತೆಯನ್ನು ಒದಗಿಸಲು ಮಿತಿಗಳನ್ನು ಹೆಚ್ಚಿಸುವುದು

ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ಡಿಸೆಂಬರ್ 13, 2024ರಂತೆ ("ಕಟ್–ಆಫ್ ದಿನಾಂಕ") ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ಡಿಪಾಸಿಟರೀಸ್ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ರವರೊಂದಿಗೆ ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟ್, ಅಂದರೆ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್ ಟೆಕ್) ನೊಂದಿಗೆ ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಕಂಪನಿಯು ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಗುರುವಾರ, ಡಿಸೆಂಬರ್ 19, 2024ರಂದು ಪೂರ್ಣಗೊಳಿಸಿದೆ. ಅಂಚೆ ಮತಪತ್ರದ ನೋಟೀಸನ್ನು ಕಂಪನಿಯ ವೆಬ್‌ಸೈಟ್ www.gokaldasexports.com ನಿಂದ ಅಥವಾ ಕೆಫಿನ್ ಟೆಕ್ ವೆಬ್‌ಸೈಟ್‌ನಿಂದ https://evoting.kfintech.com/ ಡೌನ್‌ಲೋಡ್ ಮಾಡಬಹುದು. ನೋಟೀಸನ್ನು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾಗಿರುವಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಇ ಲಿಮಿಟೆಡ್ (www.bseindia.com)ನ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗಿರುತ್ತದೆ.

ಕಟ್–ಆಫ್ ದಿನಾಂಕದಂದು ಸದಸ್ಯರು / ಫಲಾನುಭವಿ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ನೋಟೀಸನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು. ಸದಸ್ಯರ ಸಮ್ಮತಿ ಅಥವಾ ಅಸಮ್ಮತಿ ಅಭಿಪ್ರಾಯದ ಸಂವಹನವು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಗಳ ಮೂಲಕ ಮಾತ್ರ ನಡೆಯುತ್ತದೆ.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನದ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್‌ನ ಸೇವೆಗಳನ್ನು ಬಳಸಿಕೊಂಡಿದೆ. ಇ–ಮತದಾನದ ಅವಧಿಯು ಶುಕ್ರವಾರ, ಡಿಸೆಂಬರ್ 20, 2024ರಂದು ಬೆಳಿಗ್ಗೆ 9.00 ಗಂಟೆ ಐಎಸ್‌ಟಿಗೆ ಪ್ರಾರಂಭವಾಗುತ್ತದೆ ಮತ್ತು ಶನಿವಾರ, ಜನವರಿ 18, 2025ರ ಸಂಜೆ 5.00 ಗಂಟೆ ಐಎಸ್‌ಟಿಗೆ ಮುಕ್ತಾಯಗೊಳ್ಳುತ್ತದೆ. ತದನಂತರ ಇ–ಮತದಾನವನ್ನು ಕೆಫಿನ್ ಟೆಕ್‌ನಿಂದ ನಿಷ್ಕ್ರಿಯಗೊಳಿಸಲಾಗುವುದು.

ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸದ ಸದಸ್ಯರು, ಕೆಫಿನ್ ಟೆಕ್‌ನೊಂದಿಗೆ ಅದರ ವೆಬ್‌ಸೈಟ್‌ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಲು/ ನವೀಕರಿಸಲು ವಿನಂತಿಸಲಾಗಿದೆ.

ಇ–ಮೇಲ್ ವಿಳಾಸದ ಶಾಶ್ವತ ನೋಂದಣಿಗಾಗಿ, ಸದಸ್ಯರು ತಮ್ಮ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟ್‌ರವರೊಂದಿಗೆ ಹೊಂದಿರುವ ಎಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳು ಮತ್ತು ಕೆಫಿನ್ ಟೆಕ್‌ನೊಂದಿಗೆ ಹೊಂದಿರುವ ಭೌತಿಕ ಹೋಲ್ಡಿಂಗ್‌ಗಳಿಗೆ ಅನುಗುಣವಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು ವಿನಂತಿಸಲಾಗಿದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿರುವ ಯಾವುದೇ ಸದಸ್ಯರು, ಅಂಚೆ ಮತಪತ್ರದ ನೋಟೀಸ್, ರಿಮೋಟ್ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಸ್ವೀಕರಿಸದಿದ್ದರೆ, ಅಂತಹ ಸದಸ್ಯರು ಅದನ್ನು ಸ್ವೀಕರಿಸಲು ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ einward.ris@kfintech.com ಗೆ ಬರೆಯುವುದರ ಮೂಲಕ ಪಡೆಯಬಹುದು.

ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನದ ಮೂಲಕ ನಡೆಯುವ ಪೋಸ್ಟಲ್ ಬ್ಯಾಲೆಟ್ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯ ನಿರ್ದೇಶಕರ ಮಂಡಳಿಯು, ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 5553) ಶ್ರೀ ನಾಗೇಂದ್ರ ಡಿ ರಾವ್ ಅವರನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ.

ಇ–ಮತದಾನದ ಫಲಿತಾಂಶಗಳನ್ನು ಮಂಗಳವಾರ, ಜನವರಿ 21, 2025ರಂದು ಅಥವಾ ಮೊದಲು ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.gokaldasexports.com ಮತ್ತು ಕೆಫಿನ್‌ಟೆಕ್ ನ ವೆಬ್‌ಸೈಟ್ https://evoting.kfintech.com/ ನಲ್ಲಿ ಪ್ರಕಟಣೆ ಮಾಡಲಾಗುವುದು ಜೊತೆಗೆ ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳೊಂದಿಗೆ ಸಂವಹನ ಮಾಡಲಾಗುತ್ತದೆ.

ಇ–ಮತದಾನಕ್ಕೆ ಸಂಬಂಧಿಸಿದಂತೆ ಸದಸ್ಯರು ಯಾವುದೇ ಪ್ರಶ್ನೆಗಳು/ ಕುಂದುಕೊರತೆಗಳಿಗಾಗಿ https://evoting.kfintech.com (ಕೆಫಿನ್ ಟೆಕ್ ವೆಬ್‌ಸೈಟ್) ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸಹಾಯ ಮತ್ತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ವೀಕ್ಷಿಸಬಹುದು ಅಥವಾ ಶ್ರೀ ಶಿವಕುಮಾರ್ ರವರನ್ನು evoting@kfintech.com ನಲ್ಲಿ ಅಥವಾ ಕೆಫಿನ್ ಟೆಕ್‌ನ ಟೋಲ್ ಫ್ರೀ ಸಂಖ್ಯೆ 1–800–309–4001 ಗೆ ಕರೆ ಮಾಡಿ ಸಂಪರ್ಕಿಸಬಹುದು ಅಥವಾ ಕಂಪನಿ ಕಾರ್ಯದರ್ಶಿ ಶ್ರೀ ಗೌರೀಶ್ ಹೆಗಡೆ ಅವರನ್ನು cs@gokaldasexports.com ನ ಮೂಲಕ ಸಂಪರ್ಕಿಸಬಹುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಡಿಸೆಂಬರ್ 19, 2024

ಕೃಷಿಕ ಸಮಾಜಕ್ಕೆ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ಕೃಷಿಕ ಸಮಾಜದ ಕಾರ್ಯಕಾರಿ ಮಂಡಳಿ ಸಮಿತಿಗೆ 15 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೆಲಮಂಗಲದ ರೈತ ಸಂಪರ್ಕ ಕೇಂದ್ರದ ಸಭಾಂಗಣದಲ್ಲಿ ಸಮಿತಿ ಸದಸ್ಯರ ಆಯ್ಕೆ ನಂತರ ಪ್ರಮಾಣ ಪತ್ರ ನೀಡಲಾಯಿತು.

ಎನ್.ಆರ್ ಹೊನ್ನಸಿದ್ದಯ್ಯ, ಕೆ.ಆರ್.ಚನ್ನೇಗೌಡ, ಬಿ.ಎಚ್. ಗುರುರಾಜ್, ಜಿ. ಪುರುಷೋತ್ತಮ್, ಅರುಣಕುಮಾರ್ ಸಿ., ಎಂ.ಜಿ. ಗಿರೀಶ್, ಟಿ.ಆರ್. ರಂಗರಾಜು, ಕೆ.ಪಿ. ನಾರಾಯಣಸ್ವಾಮಿ, ಜಿ. ಮೂರ್ತಿ, ರಾಮಚಂದ್ರಯ್ಯ, ಸರೋಜಮ್ಮ, ನಾಗರಾಜು ಕೆ.ಎಸ್, ಟಿ. ವೆಂಕಟೇಶಯ್ಯ, ಬಿ.ವಿ. ಶ್ರೀನಿವಾಸ್, ಸಿ. ಸೋಮಶೇಖರ್ ಆಯ್ಕೆಯಾದರು.

ತಾಲ್ಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ವಿನೋದಮ್ಮ ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಕೃಷಿ ಅಧಿಕಾರಿ ನವೀನಾ, ಶಬಾನ, ರವಿಕುಮಾರ್, ಅಂಜನಾ, ಸಹಾಯಕ ಕೃಷಿ ಅಧಿಕಾರಿ ಪ್ರಭು, ಯಲ್ಲಪ್ಪ ಭಾಗ ವಹಿಸಿದ್ದರು.

ನಿಧನ ವಾರ್ತೆ

ಸಿ. ಸುಮನಾ

ಬೆಂಗಳೂರು: ಮಲ್ಲತ್ತಹಳ್ಳಿ ನಿವಾಸಿ ಸಿ. ಸುಮನಾ (60) ಗುರುವಾರ ನಿಧನರಾದರು. ಅವರಿಗೆ ಪತಿ, ಇಬ್ಬರು ಪುತ್ರಿಯರಿದ್ದಾರೆ. ಬಂಡೆಮಠ ಸ್ಮಶಾನದಲ್ಲಿ ಗುರುವಾರವೇ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸೂಚನೆ ಸಂ.: RESBCEL-Transp-UBL ದಿನಾಂಕ: 11.12.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದಲ್ಲಿ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ / ಯೋಜನೆ / ನೈಋತ್ಯ ರೈಲ್ವೆ ಘಟಕದ ವಿವಿಧ ಆರ್‌ಇ ಡಿಪೋಗಳಿಂದ, ಇತರ ವಿವಿಧ ಡಿಪೋಗಳಿಗೆ ತಾಮ್ರದ ಡ್ರಮ್ ಗಳು / ಓಹೆಚ್‌ಇ ಉಪಕರಣಗಳನ್ನು ಲೋಡಿಂಗ್ / ಅನ್‌ಲೋಡಿಂಗ್ ಮಾಡುವುದು ಮತ್ತು ಸಾಗಿಸುವುದು ಹಾಗೂ ಶಿಥಿಲಗೊಂಡ ಡ್ರಮ್‌ಗಳನ್ನು ಒಳ್ಳೆಯ ಸ್ಥಿತಿಯಲ್ಲಿರುವ ರಿಲೀಸ್ಡ್ ಡ್ರಮ್‌ಗಳಿಂದ ಕಾಂಟ್ಯಾಕ್ಟ್ & ಕ್ಯಾಟೆನರಿ ವೈರ್‌ಗಳನ್ನು ರೀ–ರೋಲಿಂಗ್ ಮಾಡುವುದು.	ರೂ. 40,44,380.63

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.01.2025, 15:00 ಗಂಟೆಯವರೆಗೆ

ಟೆಂಡರು ಸೂಚನೆ ಸಂ.: ELRESBC-Gr296-OT-HT-03 ದಿನಾಂಕ: 12.12.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
1) ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿರುವ ಚಿಂತಾಮಣಿ ರೈಲ್ವೆ ನಿಲ್ದಾಣ ಆವರಣ ಮತ್ತು ಕುಣಿಗಲ್ ರೈಲ್ವೆ ನಿಲ್ದಾಣ ಆವರಣಗಳಲ್ಲಿ ಬರುವ ಟವರ್ ವ್ಯಾಗನ್ ಶೆಡ್, ಓಹೆಚ್‌ಇ/ಪಿಎಸ್‌ಐ ಡಿಪೋ, ಸಿಬ್ಬಂದಿ ವಸತಿ ಗೃಹಗಳಿಗೆ ಬೇಕಾದ ವಿದ್ಯುತ್ ಮಂಡಳಿಯಿಂದ ವಿದ್ಯುತ್ ವ್ಯವಸ್ಥೆ. 2) ಕುಣಿಗಲ್ ರೈಲ್ವೆ ನಿಲ್ದಾಣ ಆವರಣದಲ್ಲಿ ಈಗಿರುವ 11 ಕೆವಿ ಎಲ್‌ಟಿ ಲೈನ್ ಅನ್ನು ಸ್ಥಳಾಂತರ ಮಾಡುವುದು / ಮಾರ್ಪಾಡು ಕೆಲಸಗಳು. 3) ಚನ್ನರಾಯಪಟ್ಟಣ ರೈಲ್ವೆ ನಿಲ್ದಾಣ ಆವರಣದಲ್ಲಿ ಓಹೆಚ್‌ಇ ಡಿಪೋ, ಸಿಬ್ಬಂದಿ ವಸತಿ ಗೃಹಗಳಲ್ಲಿ ಎಲ್‌ಟಿ ವಿನಿಯೋಗ ಮತ್ತು ಮೀಟರಿಂಗ್ ಪ್ಯಾನೆಲ್‌ಗಳ ಪೂರೈಕೆ, ಕಾರ್ಯಾರಂಭ.	ರೂ. 60,62,315.42

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.01.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಆರ್‌ಇ/ ಬೆಂಗಳೂರು (ಪಿ&ಪಿ)

PUB/637/AAMO/PRB/SWR/2024-25

South Western Railway - SWR | SWRRLY | SWRRLY

ನಗರಸಭೆ ಕಾರ್ಯಾಲಯ, ಚಿಕ್ಕಬಳ್ಳಾಪುರ

ಇ–ಮೇಲ್: itstaff_ulb_chickballapur@yahoo.co.in,
ದೂರವಾಣಿ: 08156–275557, ವೆಬ್‌ಸೈಟ್: www.chikkaballapurcity.gov.in

ಸಂಖ್ಯೆ: ನ.ಸ.ಚಿ/ತಾ.ಶಾ/ಸಿ.ಆರ್/ಟೆಂ–15/2024–25 ದಿನಾಂಕ: 12.12.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರಂತೆ 2020–21 ರಿಂದ 2023–24 ನೇ ಸಾಲಿನ 15ನೇ ಹಣಕಾಸು ಯೋಜನೆ ಉಳಿತಾಯ ಮೊತ್ತ ಹಾಗೂ 2024–25ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರು ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳ ಕೆಲಸವನ್ನು ನಿರ್ವಹಿಸಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ನ್ನು (ಇ–ಪ್ರೊಕ್ಯೂರ್‌ಮೆಂಟ್–2.0) ಆಹ್ವಾನಿಸಲಾಗಿದೆ. ವೆಬ್ ಸೈಟ್ **https://kppp.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ.

(1) ಟೆಂಡರ್ ಕುರಿತು ಹೆಚ್ಚಿನ ವಿವರಗಳು/ ಆಕ್ಷೇಪಣೆ ಸಲ್ಲಿಸಲು ಕಡೆಯ **ದಿನಾಂಕ: 27.12.2024 ರಂದು ಬೆಳಿಗ್ಗೆ 11.00 ಗಂಟೆಯವರೆಗೆ.**

(2) ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ಸಲ್ಲಿಸುವ ಕಡೆಯ **ದಿನಾಂಕ: 27.12.2024 ರಂದು ಸಂಜೆ 5.30 ಗಂಟೆಯವರೆಗೆ.**

(3) ಟೆಂಡರ್ ತೆರೆಯುವ **ದಿನಾಂಕ: 30.12.2024 ರಂದು ಬೆಳಿಗ್ಗೆ 11.00 ಗಂಟೆಗೆ.**

ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಅರ್ಹರಿರುವ ಗುತ್ತಿಗೆದಾರರ ದರ್ಜೆ	ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ
1	ಪ್ಯಾಕೇಜ್ ನಂ.1 (ಎಸ್.ಟಿ.ಮೀಸಲಾತಿ) DMA/2024-25/WS/WORK_INDENT33472	8,38,000.00	7,09,932.12	8,875.00	ನೋಂದಾಯಿತ ಅರ್ಹ ಗುತ್ತಿಗೆದಾರರು	3 ತಿಂಗಳು
2	ಪ್ಯಾಕೇಜ್ ನಂ.2 DMA/2024-25/OW/WORK_INDENT33483	12,36,000.00	10,47.152.69	26,180.00		3 ತಿಂಗಳು
3	ಪ್ಯಾಕೇಜ್ ನಂ.3 DMA/2024-25/WS/WORK_INDENT33485	13,70,000.00	11,57,225.60	28,930.00		3 ತಿಂಗಳು
4	ಪ್ಯಾಕೇಜ್ ನಂ.4 (ಎಸ್.ಸಿ.ಮೀಸಲಾತಿ) DMA/2024-25/OW/WORK_INDENT33490	26,01,000.00	21,98,062.07	27,480.00		3 ತಿಂಗಳು
5	DMA/2024-25/WS/WORK_INDENT33497	97,000.00	81,806.72	2,045.00		3 ತಿಂಗಳು
6	(ಎಸ್.ಸಿ.ಮೀಸಲಾತಿ) DMA/2024-25/WS/WORK_INDENT33413	3,18,000.00	2,69,290.41	3,367.00		3 ತಿಂಗಳು

ಸಹಿ/–
ಅಧ್ಯಕ್ಷರು
ನಗರಸಭೆ, ಚಿಕ್ಕಬಳ್ಳಾಪುರ

ಸಹಿ/–
ಪೌರಾಯುಕ್ತರು
ನಗರಸಭೆ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:314/ಕೆಎಸ್‌ಎಂಸಿಎ/2024–25

ಕಾವೇರಿ: 9 ಸಾವಿರ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಲ್ಲಿ ಮೂರು ವಾರಗಳಿಂದ ನಡೆಸಿದ 'ಮನೆ ಮನೆಗೂ ಕಾವೇರಿ - ಸಂಪರ್ಕ ಅಭಿಯಾನ'ದಲ್ಲಿ 9 ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ನಿಯಮಾನುಸಾರ ಪರಿಶೀಲಿಸಿ ಸ್ಥಳದಲ್ಲೇ ಆದ್ಯತೆ ಮೇರೆಗೆ ಸಂಪರ್ಕ ನೀಡಲು ಕ್ರಮವಹಿಸಲಾಗಿದೆ. ಕಾವೇರಿ ನೀರಿನ ಸಂಪರ್ಕ ಪಡೆಯಲು ಸಮಸ್ಯೆ ಎದುರಿಸುತ್ತಿದ್ದರೆ ಮಂಡಳಿಯ ವಿಜಿಲೆನ್ಸ್‌ಗೆ ದೂರು ನೀಡಬಹುದು. ತಪ್ಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆರ್. ಅಶ್ವಿನ್ ಅದ್ಭುತ ವೃತ್ತಿಜೀವನದ ನಂತರ ನಿವೃತ್ತಿ ಘೋಷಿಸಿದ್ದಾರೆ!

ಕಾರ್ಯಾಗಾರದಲ್ಲಿ ಸೆನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಶ್ರುತಿಲತಾ ಸಿಂಗ್

ಶ್ರವಣದೋಷ, ಅಂಧತ್ವ: ಕಾಳಜಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರವಣದೋಷ, ಅಂಧತ್ವ ಸೇರಿದಂತೆ ಬಹು ಅಂಗವೈಕಲ್ಯದವರನ್ನು ಗುರುತಿಸಬೇಕು. ಅವರಿಗೆ ಶಿಕ್ಷಣ ನೀಡಬೇಕು. ಹೆಚ್ಚುವರಿ ಆರೋಗ್ಯದ ಬೆಂಬಲ ನೀಡಬೇಕು' ಎಂದು ಸೆನ್ಸ್ ಇಂಟರ್‌ನ್ಯಾಷನಲ್– ಇಂಡಿಯಾ ಸಂಸ್ಥೆಯ ಶ್ರುತಿಲತಾ ಸಿಂಗ್ ಆಗ್ರಹಿಸಿದರು.

ಬಹು ಅಂಗವೈಕಲ್ಯ ಮಕ್ಕಳ ಸಮಸ್ಯೆ ಕುರಿತು ಸೆನ್ಸ್ ಇಂಟರ್‌ನ್ಯಾಷನಲ್– ಇಂಡಿಯಾ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಶ್ರವಣ ದೋಷ ಇದ್ದರೆ ಕಣ್ಣು ಕಾಣಿಸುತ್ತದೆ. ಸಂಜ್ಞೆ ಮೂಲಕ, ಬ್ರೈಲ್‌ಲಿಪಿ ಮೂಲಕ ತಿಳಿಸಬಹುದು. ಕಣ್ಣುಕಾಣದವರಿಗೆ ಕಿವಿ ಕೇಳಿಸುವುದರಿಂದ ಹೇಳಿ ಅರ್ಥ ಮಾಡಿಸಬಹುದು. ಆದರೆ, ಕಿವಿ ಕೇಳದೇ ಕಣ್ಣೂ ಕಾಣದಿದ್ದರೆ ಅಂಥ ಮಕ್ಕಳನ್ನು ಬೆಳೆಸುವುದು ಬಹಳ ಕಷ್ಟ. ಅಂಥವರು ದೇಶದಲ್ಲಿ 5 ಲಕ್ಷ ಇದ್ದಾರೆ ಎಂಬ ಅಂದಾಜಿದೆ. ಈ ಬಗ್ಗೆ ಅಧಿಕೃತ ಅಂಕಿಅಂಶ ಇಲ್ಲ' ಎಂದು ಸ್ವತಃ ಬಹು ಅಂಗವೈಕಲ್ಯ ಸಮಸ್ಯೆ ಇರುವ ಶ್ರುತಿಲತಾ ತಿಳಿಸಿದರು.

'ಶ್ರವಣ ಅಂಧ ಮಕ್ಕಳಿಗೆ ಶಿಕ್ಷಣ ಸೇರಿ, ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಪ್ರಾಥಮಿಕ ಹಂತ, ಪ್ರೌಢ ಹಂತದಲ್ಲಿ ಮಾತ್ರವಲ್ಲ, ಉನ್ನತ ವಿದ್ಯಾಭ್ಯಾಸ ದೊರೆಯುವಂತೆ ಮಾಡಬೇಕು. ಇವರಿಗೆ ಆರೋಗ್ಯ ಸೌಲಭ್ಯದ ಅಗತ್ಯ ಹೆಚ್ಚಿರುತ್ತದೆ'' ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ರಜನಿ ಅವರು, 'ಸಹಜ ಮಕ್ಕಳನ್ನೇ ಮನೆಯಲ್ಲಿ ನೋಡಿಕೊಳ್ಳಲು ಕಷ್ಟ. ಅದು ಅನುಭವಿಸಿದವರಿಗೆ ಗೊತ್ತು. ಅಂಥದ್ದರಲ್ಲಿ ಎರಡೆರಡು ಸಮಸ್ಯೆ ಇದ್ದರೆ ಹೆತ್ತವರಿಗೆ ಇನ್ನಷ್ಟು ಕಷ್ಟವಾಗುತ್ತದೆ. ಯುಡಿಐಡಿ ಮೂಲಕ ಎಲ್ಲ ತರಹದ ಅಂಗವಿಕಲ ಮಕ್ಕಳಿಗೆ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ-ಮಟ್ಟದಲ್ಲಿ ಚಿಕಿತ್ಸೆ ಪಡೆಯಬಹುದು' ಎಂದು ಮಾಹಿತಿ ನೀಡಿದರು.

ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ್ ಅವರು, 'ಅಂಗವಿಕಲರು ಮತದಾನದಿಂದ ವಂಚಿತರಾಗಬಾರದು ಎಂದು ಅನೇಕ ಕ್ರಮಗಳನ್ನು ವಹಿಸಲಾಗಿದೆ' ಎಂದು ವಿವರಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್, ಜನಗಣತಿ ಇಲಾಖೆಯ ಉಪನಿರ್ದೇಶಕ ಅಶ್ವಿನ್ ಕುಮಾರ್ ಎಂ.ಆರ್., ಸಹಾಯಕ ನಿರ್ದೇಶಕಿ ಧನ್ಯಾ ಟಿ.ವಿ., ಸರ್ವಶಿಕ್ಷ ಅಭಿಯಾನದ ರಾಜ್ಯ ಕಾರ್ಯಕ್ರಮ ಸಂಯೋಜಕಿ ತಾಹಿರಾಬಾನು, ಅಂಗವಿಕಲರ ಇಲಾಖೆಯ ಶಾಖಾಧಿಕಾರಿ ರಮೇಶ್, ಸೆನ್ಸ್ ಇಂಟರ್‌ನ್ಯಾಷನಲ್–ಇಂಡಿಯಾ ಕಾರ್ಯನಿರ್ವಾಹಕ ನಿರ್ದೇಶಕ ಅಖಿಲ್ ಪಾಲ್ ಭಾಗವಹಿಸಿದ್ದರು.

ಕಾರ್ಯಾಗಾರದಲ್ಲಿ ಸೆನ್ಸ್ ಇಂಟರ್‌ನ್ಯಾಷನಲ್ ಇಂಡಿಯಾ ಸಂಸ್ಥೆಯ ಶ್ರುತಿಲತಾ ಸಿಂಗ್ ಅವರನ್ನು ಸ್ವೀಪ್ ರಾಜ್ಯ ನೋಡಲ್ ಅಧಿಕಾರಿ ಪಿ.ವಿ. ವಸ್ತ್ರದ್ ಅಭಿನಂದಿಸಿದರು. ಡಾ. ರಂಜನಿ ಹಾಗೂ ಅಶ್ವಿನಿ ಕುಮಾರ್ ಉಪಸ್ಥಿತರಿದ್ದರು

ಮುಖ್ಯಾಂಶಗಳು

- ಶ್ರವಣ ಅಂಧತ್ವ ಸಮಸ್ಯೆಯುಳ್ಳ ಮಕ್ಕಳ ಆರೈಕೆ ಕಷ್ಟ
- ಯಾವುದೇ ಕೊರತೆ ಆಗದಂತೆ ಕಾಳಜಿ ಅಗತ್ಯ
- ಅಂಗವಿಕಲ ಮಕ್ಕಳಿಗೆ ಯುಡಿಐಡಿ ಮೂಲಕ ಚಿಕಿತ್ಸೆ

ನಗರದಲ್ಲಿ ಇಂದು

'ಆದ್ಯತೆ ಇಲ್ಲದ ಯೋಜನೆಗಳಿಗೆ ಬಿಬಿಎಂಪಿ ಪ್ರಾಮುಖ್ಯ' ಸಂವಾದ: ಅಧ್ಯಕ್ಷತೆ: ಎ. ರವೀಂದ್ರ, ಭಾಗವಹಿಸುವವರು: ಅಶಿಶ್ ವರ್ಮಾ, ಡಿ.ಟಿ.ದೇವರೆ, ರಾಜಕುಮಾರ್ ದುಗಾರ್, ಸಂದೀಪ್ ಅನಿರುದ್ಧನ್, ಕ್ಯಾತಾಯಿನಿ ಚಾಮರಾಜ್, ಆಯೋಜನೆ: ಸಿವಿಕ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 9.30

ಪದ್ಮನಾದೋತ್ಸವ 'ಗುರು ನಮನ': ಅಧ್ಯಕ್ಷತೆ: ಯತಿರಾಜ್ ಜೀಯರ್ ಸ್ವಾಮೀಜಿ, 'ಆರ್‌ಕೆಪಿ ಗಾನ ಸೈನ್ಯದಿಂದ ಪಂಚರತ್ನ ಕೃತಿಗಳ ಗಾಯನ, ಅಂತರ್ನುಡಿ, 'ಪದ್ಮನಾಭದಾಸಾಂಕಿತ ಕೃತಿಗಳ ಗಾಯನ: ಪ್ರಶಿಷ್ಯ ಗಾನ ಲಹರಿ, ತಜ್ಞರ ನುಡಿ: ಪಾವಗಡ ಪ್ರಕಾಶ್ ರಾವ್, ಹಿರೇಮಗಳೂರು ಕಣ್ಣನ್, ಅರಳುಮಲ್ಲಿಗೆ ಪಾರ್ಥಸಾರಥಿ, ಮಲ್ಲೇಪುರಂ ಜಿ. ವೆಂಕಟೇಶ್, ತಿರುವಾರೂರ್ ಭಕ್ತವತ್ಸಲಂ, ಶಾಸ್ತ್ರೀಯ ಸಂಗೀತ ಗಾಯನ ಕಛೇರಿ: ಗಾಯನ: ಜಿ. ರವಿಕಿರಣ್, ಪಿಟೀಲು: ಎಚ್‌.ಕೆ. ವೆಂಕಟರಾಮ್, ಮೃದಂಗ: ತಿರುವಾರೂರ್ ಭಕ್ತವತ್ಸಲಂ, ಘಟ: ವೈಕೋಮ್ ಆರ್. ಗೋಪಾಲಕೃಷ್ಣನ್, ಆಯೋಜನೆ: ಡಾ. ಆರ್‌ಕೆಪಿ ಸನ್ಮಾನ ಸಮಿತಿ, ಸ್ಥಳ: ವಾದಿರಾಜ ಕಲಾಭವನ, ಬೆಳಿಗ್ಗೆ 9.30ರಿಂದ

'ಕರ್ನಾಟಕ ಕೃಷಿ, ಆಹಾರ ಭದ್ರತೆ ಮತ್ತು ಹವಾಮಾನ ಬದಲಾವಣೆ' ಪರಿಸರ ಅರಿವು ಸಮಾವೇಶ: ಆಶಯ ಭಾಷಣ: ಮದುರಾ ಸ್ವಾಮಿನಾಥನ್, 'ಕರ್ನಾಟಕ ಕೃಷಿಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳ ಉಪಶಮನ ಮಾಡಲು ತಾಳಿಕೊಳ್ಳಲು ಕಾರ್ಯ ಯೋಜನೆ' ಪ್ರಬಂಧ ಮಂಡನೆ: ಟಿ. ಮಹೇಶ, ಸರಿತಾ, 'ಕರ್ನಾಟಕ ಕೃಷಿ ಮತ್ತು ಆಹಾರ್ ಭದ್ರತೆ ಮೇಲೆ ಹವಾಮಾನ ಬದಲಾವಣೆ ಪರಿಣಾಮ ಎದುರಿಸುವುದು ಹೇಗೆ? ಸರ್ಕಾರದ ಕಾರ್ಯ ಯೋಜನೆ–ವಿಮರ್ಶೆ, ಕಾರ್ಯಸಾಧ್ಯತೆ, ಸೂಚನೆಗಳು' ಸಂವಾದ: ಜಿ.ಎನ್. ನಾಗರಾಜ್, ಸಿ. ಯತಿರಾಜು, ಮಹಾದೇವ ಮೂರ್ತಿ, ಟಿ. ಯಶವಂತ, ಸಿದ್ಧನಗೌಡ ಪಾಟೀಲ, ಎಸ್. ಎಂ. ವೀರಸಂಗಯ್ಯ, ಅಬಣಿ ಶಿವಪ್ಪ, ಚಂದ್ರಪ್ಪ ಹೊಸ್ಕೇರ, ಸಂದೀಪನ್ ಬಕ್ಸಿ, ಕೆ.ಎಲ್. ಪ್ರಕಾಶ, ಕಮಲ್ ಲೊದಯ, ರಂಜಿತ್, ಎಸ್. ಚಟರ್ಜಿ, ಕೆ.ಎಸ್. ರವಿ ಕುಮಾರ್, ಅಯೋಜನೆ: ಜನಶಿಕ್ಷಣ ಟ್ರಸ್ಟ್, ಸ್ಥಳ: ಸೌಹಾರ್ದ ಸಭಾಂಗಣ, ಸಿಎಸ್‌ಐ ಕಾಂಪೌಂಡ್, miಷನ್ ರಸ್ತೆ, ಮಧ್ಯಾಹ್ನ 3

'ಅನಾವರಣ 2.0' ವಾರ್ಷಿಕ ನೃತ್ಯ ಪ್ರದರ್ಶನ: ಅತಿಥಿಗಳು: ಮಾಲೂರು ಶ್ರೀನಿವಾಸ್, ರಾಗಿಣಿ ಪ್ರಜ್ವಲ್ ದೇವರಾಜ್, ಚಂದನ್ ಕುಮಾರ್, ಬೀರಗನಹಳ್ಳಿ ಲಕ್ಷ್ಮೀನಾರಾಯಣ್, ದ್ವಾರಿತಾ ವಿಶ್ವನಾಥ್, ಸ್ಮಿತಾ ಶ್ರೀಪತಿ, ಸುಚಿತ್ರಾ ಶ್ರೀನಿವಾಸ್, ಆಯೋಜನೆ: ಔರಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

'ಭಾರತೀಯ ಸಂವಿಧಾನದ ಅಡಿಯಲ್ಲಿ 75 ವರ್ಷಗಳ ಆಡಳಿತ–ಅಭ್ಯಾಸಗಳು ಮತ್ತು ಅನುಭವಗಳು' ಅಂತರರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಕೃಷ್ಣ ಎಸ್. ದೀಕ್ಷಿತ್, ಅತಿಥಿಗಳು: ಎಸ್.ಎಂ. ಜಯಕರ, ವಿ. ಸುದೇಶ್, ಸತೀಶ್‌ಗೌಡ, ಎನ್. ದಶರಥ್, ಪಿಎಂ. ಉಷಾ, ಹನುಮಂತಪ್ಪ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗ, ಸ್ಥಳ: ಪ್ರೊ. ವಿ.ಬಿ. ಕುಟೀನೊ ಸಭಾಂಗಣ, ಜ್ಞಾನಭಾರತಿ ಆವರಣ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನಿಯಮ ಉಲ್ಲಂಘನೆ: ಎಫ್‌ಐಆರ್‌ಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯ (ಕೆಪಿಎಂಇ) ನಿಯಮಗಳನ್ನು ಉಲ್ಲಂಘಿಸಿರುವ 12 ಆಸ್ಪತ್ರೆಗಳಿಗೆ ದಂಡ ಹಾಗೂ ಮೂರು ಆಸ್ಪತ್ರೆಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ಪ್ರಾಧಿಕಾರದ ಸಭೆಯಲ್ಲಿ ಆದೇಶಿಸಲಾಗಿದೆ. ಗುರುವಾರ ನಡೆದ ಸಭೆಯಲ್ಲಿ ಕೆಪಿಎಂಇ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಆರೋಗ್ಯಾಧಿಕಾರಿಗಳು 33 ಪ್ರಕರಣಗಳ ಬಗ್ಗೆ ವಿವರ ಸಲ್ಲಿಸಿದ್ದರು. ಇವುಗಳಲ್ಲಿ 12 ಆಸ್ಪತ್ರೆಗಳಿಂದ ಒಟ್ಟು ₹ 6.78 ಲಕ್ಷ ದಂಡ ವಿಧಿಸುವಂತೆ ಆದೇಶಿಸಲಾಗಿದೆ.

ಕೆಪಿಎಂಇ ನೋಂದಣಿ ಪಡೆಯದೇ ಅಲೋಪತಿ ಚಿಕಿತ್ಸೆ ನೀಡುತ್ತಿದ್ದ ತಿಗಳರಪಾಳ್ಯದ ಗರುಡಪ್ಪ ವೃತ್ತದಲ್ಲಿರುವ ವಿನಾಯಕ ಕ್ಲಿನಿಕ್, ಕೆಪಿಎಂಇ ನಿಯಮ ಉಲ್ಲಂಘಿಸಿರುವ ಎಸ್.ಸಿ. ರಸ್ತೆಯ ಕಪಾಲಿ ಚಿತ್ರಮಂದಿರದ ಬಳಿಯಿರುವ ಮದ್ಯಪಾನ ವಿಮುಕ್ತಿ ಕೇಂದ್ರ ಹಾಗೂ ಅಗತ್ಯ ವಿದ್ಯಾರ್ಹತೆ ಹೊಂದದೆ ಮತ್ತು ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳದೆ ಕ್ಲಿನಿಕ್ ನಡೆಸುತ್ತಿದ್ದ ಬಾಲಾಜಿ ಲೇಔಟ್‌ನ ಚೇತನ್ ಕ್ಲಿನಿಕ್ ವಿರುದ್ಧ ಎಫ್‌ಐಆರ್ ದಾಖಲಿಸಲು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿಯ 45 ಕಚೇರಿಗಳ ಮೇಲೆ ದಾಳಿ, ಕಡತಗಳ ಪರಿಶೀಲನೆ

ಕಚೇರಿಗೆ ಗೈರು: ಸಿಬ್ಬಂದಿಗೆ ಲೋಕಾಯುಕ್ತ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್, ನೀರಿನ ಸಂಪರ್ಕ ವಿಳಂಬ, ಭ್ರಷ್ಟಾಚಾರ ಆರೋಪ ಕುರಿತ ಸಾರ್ವಜನಿಕರ ದೂರುಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಹಾಗೂ ಅಧಿಕಾರಿಗಳ ತಂಡ ನಗರದಾದ್ಯಂತ ಬೆಸ್ಕಾಂ, ಜಲಮಂಡಳಿ ಕಚೇರಿಗಳ ಮೇಲೆ ಗುರುವಾರ ದಾಳಿ ನಡೆಸಿ, ದಾಖಲೆಗಳ ಪರಿಶೀಲನೆ ನಡೆಸಿತು.

ದಾಳಿ ವೇಳೆ ನೌಕರರು ಹಾಜರಾತಿ ಪುಸ್ತಕಕ್ಕೆ ಸಹಿ ಹಾಕದಿರುವುದು, ಅರ್ಜಿಗಳನ್ನು ವಿಲೇವಾರಿ ಮಾಡದಿರುವುದು ಹಾಗೂ ಅಧಿಕಾರಿಗಳು ಕಚೇರಿಯಲ್ಲಿ ಇಲ್ಲದಿರುವುದನ್ನು ಕಂಡು ನ್ಯಾಯಮೂರ್ತಿ ಅಸಮಾಧಾನ ವ್ಯಕ್ತಪಡಿಸಿದರು.

ಯಲಹಂಕ ಉಪನಗರದಲ್ಲಿರುವ ಬೆಸ್ಕಾಂ ಕಚೇರಿಯಲ್ಲಿ ನವೆಂಬರ್ ಅಂತ್ಯಕ್ಕೆ ₹1,18,57,736 ಬಿಲ್ ಪಾವತಿ ಬಾಕಿ ಇರುವುದನ್ನು ಪತ್ತೆ ಹಚ್ಚಿತ್ತು. ಮೂರು ತಿಂಗಳಿನಿಂದ ಸ್ವೀಕೃತವಾಗಿರುವ ಅರ್ಜಿಗಳು, ಇತ್ಯರ್ಥಗೊಂಡಿರುವ ಹಾಗೂ ಬಾಕಿ ಇರುವ ಅರ್ಜಿಗಳು, ಇತ್ಯರ್ಥಪಡಿಸದ ಕಾರಣಗಳ ವರದಿಯನ್ನು ಸಲ್ಲಿಸುವಂತೆ ಪಾಟೀಲ ಅವರು ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ಸೂಚಿಸಿದರು.

ಸಹಕಾರನಗರದ ರಸ್ತೆಯಲ್ಲಿ ಪೈಪ್ ಅಳವಡಿಸುವ ಕಾಮಗಾರಿ ಕೈಗೊಂಡಿರುವ ಜಲಮಂಡಳಿ, ಒಂದೂವರೆ ತಿಂಗಳಿನಿಂದ ರಸ್ತೆ ಅಗೆದಿದ್ದು, ಸಾರ್ವಜನಿಕರಿಗೆ ತೊಂದರೆ ಆಗಿದೆ. ಅಲ್ಲಲ್ಲಿ ಪೈಪ್‌ಗಳು ಬಿಸಾಡಿರುವುದು ಹಾಗೂ ಸ್ಥಳದಲ್ಲಿ ಎಂಜಿನಿಯರ್ ಇಲ್ಲದಿರುವುದನ್ನು ಕಂಡು ಮುಖ್ಯ ನ್ಯಾಯಮೂರ್ತಿ ಬೇಸರ ವ್ಯಕ್ತಪಡಿಸಿದರು.

ಸಹಕಾರ ನಗರದಲ್ಲಿ ಜಲಮಂಡಳಿಯ ಕಾಮಗಾರಿಯನ್ನು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಪರಿಶೀಲನೆ ನಡೆಸಿದರು

ಸಹಕಾರ ನಗರದಲ್ಲಿನ ಬೆಸ್ಕಾಂ ಕಚೇರಿಯಲ್ಲಿ ಕಡತಗಳನ್ನು ನಿರ್ವಹಣೆ ಮಾಡದಿರುವುದಕ್ಕೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಮೂರು ಕಚೇರಿಗಳಲ್ಲಿ ಹಲವು ಲೋಪದೋಷಗಳನ್ನು ಸರಿಪಡಿಸಿ, ಕಚೇರಿಗೆ ವಿವರವಾದ ವರದಿ ಸಲ್ಲಿಸುವಂತೆ ಸ್ಥಳದಲ್ಲಿದ್ದ ಬೆಸ್ಕಾಂ ಹಾಗೂ ಜಲ ಮಂಡಳಿಯ ಕಾರ್ಯಪಾಲಕ ಎಂಜಿನಿಯರ್‌ಗೆ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಲೋಕಾಯುಕ್ತ ನ್ಯಾಯಮೂರ್ತಿಗಳು, 'ವಿದ್ಯುತ್, ನೀರಿನ ಸಂಪರ್ಕ ಹಾಗೂ ವಿವಿಧ ಸೇವೆ ಪಡೆಯಲು ಜನರು ತೊಂದರೆ ಅನುಭವಿಸುತ್ತಿದ್ದರು. ಅಧಿಕಾರಿಗಳ ಮೂಲಕ ಗೋಪ್ಯ ತನಿಖೆ ನಡೆಸಿ, ಮಾಹಿತಿ ಸಂಗ್ರಹಿಸಲಾಗಿತ್ತು. ಅಕ್ರಮಗಳ ಬಗ್ಗೆ ಖಾತರಿಪಡಿಸಿಕೊಂಡು, ಸ್ವಯಂಪ್ರೇರಿತವಾಗಿ ಬೆಸ್ಕಾಂ ವಿರುದ್ಧ 73 ಹಾಗೂ ಬಿಡಬ್ಲ್ಯುಎಸ್‌ಎಸ್‌ಬಿ ವಿರುದ್ಧ 63 ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ನಗರಾದ್ಯದಂತ 45 ಕಚೇರಿಗಳ ಮೇಲೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸಲಾಯಿತು' ಎಂದರು.

'ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ನಗರದಲ್ಲಿ ಬೆಸ್ಕಾಂ ವಿರುದ್ಧ ಅತಿ ಹೆಚ್ಚು ಪ್ರಕರಣ ದಾಖಲಿಸಿದ್ದೇವೆ. ತಪ್ಪಿತಸ್ಥರಿಗೆ ನೋಟಿಸ್ ನೀಡಿ, ತಿದ್ದಿಕೊಳ್ಳಲು ಅವಕಾಶ ನೀಡಲಾಗುವುದು. ಬಳಿಕ ಅಗತ್ಯವಿದ್ದರೆ ಸೂಕ್ತ ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು. ಸಾರ್ವಜನಿಕರಿಗೆ ತೊಂದರೆ ಆಗಬಾರದು. ಭ್ರಷ್ಟಾಚಾರ ತೊಲಗಬೇಕು. ನಾಗರಿಕರು ತಮ್ಮ ಸಮಸ್ಯೆಗಳ ಬಗ್ಗೆ ದೂರು ನೀಡಬಹುದು' ಎಂದು ಹೇಳಿದರು.

'ಕಚೇರಿಯಲ್ಲಿ ಹಾಜರಾತಿ ಪುಸ್ತಕ ಸರಿಯಾಗಿ ನಿರ್ವಹಿಸಿಲ್ಲ. ಅಧಿಕಾರಿಗಳು ಗೈರು ಹಾಜರಾಗಿದ್ದರು. ಸಹಿ ಮಾಡಿ ಎಲ್ಲೋ ಹೋಗಿದ್ದರು. ಅಧಿಕಾರಿಗಳಿಗೆ ಫೋನ್ ಮಾಡಿದರೆ ತೆಗೆಯುವುದಿಲ್ಲ. ಸರಿಯಾಗಿ ಕೆಲಸ ಮಾಡಿದ್ದರೆ ಅರ್ಜಿಗಳು ಏಕೆ ಬಾಕಿ ಇರುತ್ತಿದ್ದವು. ಜನರು ಕಚೇರಿಗಳಿಗೆ ಅಲೆದಾಡುವುದು ತಪ್ಪುತ್ತದೆ' ಎಂದರು.

45 ಕಡೆ ದಾಳಿ: ನಗರದಲ್ಲಿ 25 ಬೆಸ್ಕಾಂ ಮತ್ತು 20 ಬಿಡಬ್ಲ್ಯುಎಸ್‌ಎಸ್‌ಬಿ ಕಚೇರಿ ಮೇಲೆ ಲೋಕಾಯುಕ್ತ ತಂಡ ದಾಳಿ ನಡೆಸಿದೆ.

ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು, ಎಸ್.ಪಿ.ವಂಶಿ ಕೃಷ್ಣ ನೇತೃತ್ವದ ತಂಡದೊಂದಿಗೆ ದಾಳಿ ನಡೆಸಿದರು. ಆನಂದ ರಾವ್ ವೃತ್ತ ಹಾಗೂ ಮಲ್ಲೇಶ್ವರದಲ್ಲಿರುವ ಬೆಸ್ಕಾಂ ಕಚೇರಿ, ಕ್ರಸೆಂಟ್ ರಸ್ತೆ ಹಾಗೂ ಮಲ್ಲೇಶ್ವರಂನಲ್ಲಿರುವ ಜಲ ಮಂಡಳಿ ಕಚೇರಿಯಲ್ಲಿ ತಪಾಸಣೆ ನಡೆಸಿದರು.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಎಂ.ಜಿ. ರಸ್ತೆಯಲ್ಲಿರುವ ಬೆಸ್ಕಾಂ ಕಚೇರಿ, ವಿವೇಕಾನಂದ ರಸ್ತೆ ಹಾಗೂ ಇಂದಿರಾನಗರದಲ್ಲಿನ ಜಲ ಮಂಡಳಿ ಕಚೇರಿಗಳಲ್ಲಿ ದಾಖಲೆಗಳ ಪರಿಶೀಲನೆ ನಡೆಸಿದರು.

ಒಂದೂವರೆ ತಾಸು ಕಾದ ಲೋಕಾಯುಕ್ತರು!

ಯಲಹಂಕ ಉಪನಗರದ ಜಲ ಮಂಡಳಿಗೆ ಕಚೇರಿಗೆ ತೆರಳಿದ ಸಂದರ್ಭದಲ್ಲಿ 20 ಉದ್ಯೋಗಿಗಳ ಪೈಕಿ ಏಳು ಮಂದಿ ಗೈರು ಹಾಜರಾಗಿದ್ದರು. ಗೈರು ಹಾಜರಿಗೆ ಕಚೇರಿ ವ್ಯವಸ್ಥಾಪಕರು ಹಾಗೂ ಕಾರ್ಯಪಾಲಕ ಎಂಜಿನಿಯರ್ ಸಮರ್ಪಕ ಉತ್ತರ ನೀಡಲಿಲ್ಲ. ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಬಿ.ಎಸ್. ಪಾಟೀಲ ಅವರು ಕರೆ ಮಾಡಿ ದಾಗ, 20 ನಿಮಿಷದಲ್ಲಿ ಬರುವುದಾಗಿ ಹೇಳಿ ಒಂದೂವರೆ ಗಂಟೆಯಾದರೂ ಬರಲಿಲ್ಲ. ಅಧಿಕಾರಿ ಗಾಗಿ ನ್ಯಾಯಮೂರ್ತಿ ಒಂದೂವರೆ ತಾಸು ಕಾಯುವಂತಾಯಿತು.

ವಿದ್ಯಾರ್ಥಿನಿಯರ ಪ್ರತಿಭಟನೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಮೇಲುಕಾಮನಹಳ್ಳಿಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯದಲ್ಲಿ ಗುರುವಾರ 'ವಸತಿ ಶಾಲೆಯ ಡಿ–ದರ್ಜೆ ನೌಕರ ಲೈಂಗಿಕ ಕಿರುಕುಳ ನೀಡುತ್ತಿದ್ದು, ಕಾನೂನು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿ 30ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಶಾಲೆಯ ಪರೀಕ್ಷೆ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಸಾರ್ವಜನಿಕ ಸೂಚನೆ

ಮೆ॥ ಜಿ ಕಾರ್ಪ್ ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೆ ನಂ. 47/1(P), 47/2(P), 48/1(P), 48/2(P), 48/4, 48/5, 48/6(P), 48/7, 48/8(P), 48/9, 49/2(P), 50/2(P), 51(P), 52/1, 52/2, 52/7, 52/8, 53, 54/1, 54/2, 54/3, 54/4, 55/1, 55/2, 55/3, 55/4, 55/5(P), 55/6(P), 55/7(P), 55/8, 55/9(P), 56/1, 56/2(P), 56/3(P), 56/4(P), 58/2, 59/2, 60/1 ಥಣಿಸಂದ್ರ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು, ಉದ್ದೇಶಿತ ವಸತಿ ಸಾಲು ಮನೆಗಳ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದೆ. EC Identification No.EC24B03813KA5614321N, ಫೈಲ್ ನಂ. SEIAA 57 CON 2024 ದಿನಾಂಕ: 16/11/2024. ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್ https://parivesh.nic.in/ ನಲ್ಲಿ ಕಾಣಬಹುದು.

ಮೆ॥ ಜಿ ಕಾರ್ಪ್ ಹೋಮ್ಸ್ ಪ್ರೈವೇಟ್ ಲಿಮಿಟೆಡ್
ವಿಳಾಸ: 7ನೇ ಮಹಡಿ, SKAV 909 ಲ್ಯಾವೆಲ್ಲೆ,
ಲ್ಯಾವೆಲ್ಲೆ ರಸ್ತೆ, ರಿಚ್‌ಮಂಡ್ ಸರ್ಕಲ್
ಬೆಂಗಳೂರು–560001.

ಚಂದಾಪುರ, ಬೊಮ್ಮನಹಳ್ಳಿ ಮಾರ್ಗದಲ್ಲಿ ಸಂಚಾರ ದಟ್ಟಣೆ • ಚಾಲಕನ ವಿರುದ್ಧ ಎಫ್‌ಐಆರ್

ರಸ್ತೆಗೆ ಅಡ್ಡಲಾಗಿ ಕಂಟೇನರ್: ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನೈಸ್ ರಸ್ತೆಯ ಹೊಸೂರು ಜಂಕ್ಷನ್ ಬಳಿ ರಸ್ತೆಗೆ ಕಂಟೇನರ್ ನಿಲುಗಡೆ ಮಾಡಿ, ಸಂಚಾರ ನಿಯಮವನ್ನು ಉಲ್ಲಂಘಿಸಿದ್ದ ಆರೋಪದಡಿ ನಾಗಲ್ಯಾಂಡ್ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ರಸ್ತೆಯಲ್ಲೇ ಲಾರಿ ನಿಲ್ಲಿಸಿ ಚಾಲಕ ಪರಾರಿ ಆಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಸಂಜೆ 4.30ರಿಂದ ರಾತ್ರಿ 8 ಗಂಟೆವರೆಗೆ ಭಾರಿ ಹಾಗೂ ಸರಕು ಸಾಗಣೆ ವಾಹನಗಳಿಗೆ ನಗರದ ಒಳಕ್ಕೆ ಪ್ರವೇಶಿಸದಂತೆ ನಿರ್ಬಂಧವಿದೆ. ಆದರೆ, ಬುಧವಾರ ರಾತ್ರಿ 8 ಗಂಟೆ ಸುಮಾರಿಗೆ ಚಾಲಕ ಕಂಟೇನರ್ ಅನ್ನು ಹೊಸೂರು ಮುಖ್ಯರಸ್ತೆಯ ಮೂಲಕ ನಗರದ ಕಡೆಗೆ ಸಂಚರಿಸಲು ಪ್ರಯತ್ನಿಸಿದ್ದ. ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸರು, ಕಂಟೇನರ್ ತಡೆದು ವಾಹನವನ್ನು ಸರ್ವೀಸ್ ರಸ್ತೆಗೆ ತೆಗೆದುಕೊಂಡು ಹೋಗುವಂತೆ ಸೂಚಿಸಿದ್ದರು. ಆದರೂ, ಚಾಲಕ ವಾಹನವನ್ನು ರಸ್ತೆಯಲ್ಲೇ ನಿಲ್ಲಿಸಿಕೊಂಡು ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟು ಮಾಡಿದ್ದ ಎಂದು ಪೊಲೀಸರು ಹೇಳಿದರು.

ನಿರ್ಬಂಧಿತ ಅವಧಿಯಲ್ಲಿ ಭಾರಿ ಸರಕು ಸಾಗಣೆ ವಾಹನ ಚಾಲನೆ, ರಸ್ತೆ ಮಧ್ಯದಲ್ಲೇ ವಾಹನ ನಿಲುಗಡೆ, ವಾಹನ ಸಂಚಾರಕ್ಕೆ ಅಡಚಣೆ ಮಾಡಿದ್ದ ಆರೋಪದ ಅಡಿ ಚಾಲಕನ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಈ ಘಟನೆಯ ಸಂಪೂರ್ಣ ವಿಡಿಯೊ ದೃಶ್ಯಾವಳಿಗಳು ಅಧಿಕಾರಿಗಳು ಹಾಗೂ ಸಿಬ್ಬಂದಿ ಬಾಡಿವೋರ್ನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಸಂಚಾರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಲಂಚದ ಆರೋಪ

'ಸಂಚಾರ ಪೊಲೀಸರು ಲಂಚ ಕೇಳಿ ಹಲ್ಲೆ ನಡೆಸಿದ್ದಾರೆ' ಎಂದು ಚಾಲಕ ಆರೋಪಿಸಿದ್ದಾನೆ.

'ಹಣ ಕೊಟ್ಟಿದ್ದೇನೆ. ನಗರ ಪ್ರವೇಶಿಸಲು ಯಾವ ಕಾರಣಕ್ಕೆ ಬಿಡುವುದಿಲ್ಲ ಎಂದು ಪ್ರಶ್ನಿಸಿದ್ದಾನೆ. ಅಲ್ಲದೆ, ನೆರೆ ರಾಜ್ಯಗಳ ಕಂಟೇನರ್ ಚಾಲಕರನ್ನು ಕರೆಸಿಕೊಂಡು ಗದ್ದಲ ಮಾಡಿದ್ದಾನೆ. ಪರಿಸ್ಥಿತಿ ತೀವ್ರಗೊಳ್ಳುತ್ತಿದ್ದಂತೆ ಹೆಚ್ಚಿನ ಸಂಚಾರ ಪೊಲೀಸರು ಸ್ಥಳಕ್ಕೆ ದೌಡಾಯಿಸಿದ್ದರು. ಆಗ ಆರೋಪಿ ಲಾರಿ ಬಿಟ್ಟು ಸ್ಥಳದಿಂದ ಪರಾರಿ ಆಗಿದ್ದಾನೆ' ಎಂದು ಚಾಲಕನ ಕಡೆಯವರು ಹೇಳಿದ್ದಾರೆ.

ಈ ಘಟನೆಯಿಂದ ಎಲೆಕ್ಟ್ರಾನಿಕ್ ಸಿಟಿ ಬಳಿಯ ವೈಟ್ ಫೆದರ್‌ನಿಂದ ಚಂದಾಪುರ, ಬೊಮ್ಮನಹಳ್ಳಿ ಮಾರ್ಗದವರೆಗೆ ಸಂಚಾರ ದಟ್ಟಣೆ ಉಂಟಾಗಿತ್ತು. ನೂರಾರು ವಾಹನ ಚಾಲಕರು ಪರದಾಡಿದರು.

ಭೋಗ್ಯಕ್ಕೆ ಮನೆ ಕೊಡುವುದಾಗಿ ಹೇಳಿ ವಂಚನೆ

ಬೆಂಗಳೂರು: ಮನೆಯನ್ನು ಬಾಡಿಗೆ ಅಥವಾ ಭೋಗ್ಯಕ್ಕೆ ಕೊಡುವುದಾಗಿ 'ನೋಬ್ರೋಕರ್ ಆ್ಯಪ್' ಮೂಲಕ ಜಾಹೀರಾತು ನೀಡಿ, ಹಲವರಿಂದ ಮುಂಗಡವಾಗಿ ಹಣ ಪಡೆದು ದೊಡ್ಡ ಮೊತ್ತದ ವಂಚನೆ ನಡೆಸಿದ್ದ ಆರೋಪಿಯನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚೋಳನಗರ ನಿವಾಸಿ ಗಿರೀಶ್(40) ಬಂಧಿತ. ಈತ ಹೆಬ್ಬಾಳ, ಆರ್.ಟಿ.ನಗರ ಸೇರಿದಂತೆ ವಿವಿಧೆಡೆಯ 22 ಮಂದಿಗೆ ₹2 ಕೋಟಿಗೂ ಅಧಿಕ ವಂಚನೆ ಮಾಡಿದ್ದಾನೆ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಆರೋಪಿ ಪತ್ನಿ ದೀಪಾ, ನಾದಿನಿ ಸರಿತಾ, ಸಂಬಂಧಿ ಮನೋಹರ್‌ಗೆ ನೋಟಿಸ್ ನೀಡಲಾಗಿದೆ. ವಂಚನೆ ಸಂಬಂಧ ತನಿಖೆಗೆ ಒಳಪಡಿಸಲಾಗುವುದು ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಯ ಪತ್ನಿ ಹೆಸರಿನಲ್ಲಿ ಮೂರು ಅಂತಸ್ತಿನ ಕಟ್ಟಡವಿದೆ. 2ನೇ ಮಹಡಿಯ ಮನೆಯನ್ನು ಭೋಗ್ಯ ಅಥವಾ ಬಾಡಿಗೆಗೆ ನೀಡುವುದಾಗಿ ಜಾಹೀರಾತು ನೀಡಿದ್ದ. ಹಲವರು ಮನೆಗೆ ಭೋಗ್ಯಕ್ಕೆ ಪಡೆಯಲು ಬರುತ್ತಿದ್ದರು. ಇದನ್ನೇ ಬಂಡವಾಳ ಮಾಡಿಕೊಂಡು, ಮನೆಗೆ ಬರಲು ಒಪ್ಪುವ ಬಾಡಿಗೆದಾರನಿಂದ ₹6 ಲಕ್ಷದಿಂದ, 13 ಲಕ್ಷವರೆಗೆ ಮುಂಗಡವಾಗಿ ಪಡೆದು ಹಲವರಿಗೆ ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

ಹಣ ವಾಪಸ್ ಕೊಡುವಂತೆ ಬಾಡಿಗೆದಾರರು ಒತ್ತಾಯಿಸಿದಾಗ, ಪತ್ನಿ ದೀಪಾ, ನಾದಿನಿ ರೂಪಾ, ಸರಿತಾ ಹೆಸರಿನಲ್ಲಿ ಆರೋಪಿ ಚೆಕ್ ನೀಡುತ್ತಿದ್ದ. ಪ್ರತಿ ಚೆಕ್‌ನಲ್ಲಿ ಹೆಸರನ್ನು ತಪ್ಪಾಗಿ ಬರೆಯುತ್ತಿದ್ದ.ಎಂದು ಮೂಲಗಳು ಹೇಳಿವೆ. 'ಯಾರಿಗೂ ಕರಾರು ಮಾಡಿಕೊಡುತ್ತಿರಲಿಲ್ಲ. ಮನೆಗೆ ಪ್ರವೇಶಿಸಿದಾಗ ಕೊಡುವುದಾಗಿ ಹೇಳುತ್ತಿದ್ದ. ಮುಂಗಡ ಕೊಟ್ಟವರಿಗೆ ಮನೆಯಲ್ಲಿ ಕಾಮಗಾರಿ ನಡೆದಿದೆ. ಈಗಿರುವ ಬಾಡಿಗೆದಾರರ ಜತೆ ಸಮಸ್ಯೆಯಾಗಿದೆ ಎಂದು ನೆಪ ಹೇಳುತ್ತಿದ್ದ' ಎಂದು ತಿಳಿಸಿದರು.

'ಆರೋಪಿ ವಿಚಾರಣೆ ವೇಳೆ ₹55 ಲಕ್ಷ ಕೊಟ್ಟಿದ್ದೇನೆ. ಬಾಕಿ ₹54 ಲಕ್ಷ ವಾಪಸ್ ಕೊಡಬೇಕಿದೆ ಎಂದು ತಪ್ಪೊಪ್ಪಿಕೊಂಡಿದ್ದಾನೆ' ಎಂದು ಮೂಲಗಳು ಹೇಳಿವೆ.

ಪಿ.ಜಿಗೆ ನುಗ್ಗಿ ಮೊಬೈಲ್ ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ಪೇಯಿಂಗ್ ಗೆಸ್ಟ್‌ಗಳಿಗೆ (ಪಿ.ಜಿ) ನುಗ್ಗಿ ಮೊಬೈಲ್, ಬೆಲೆ ಬಾಳುವ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದ ಅಡಿ ಮೂಲತಃ ಅಸ್ಸಾಂನ ಕಬೀರ್ ಹುಸೇನ್ ಎಂಬಾತನನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ ಸುಮಾರು ₹4 ಲಕ್ಷ ಮೌಲ್ಯದ 12 ಮೊಬೈಲ್ ಫೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. 'ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ಆರೋಪಿ ಕೆಲವು ದಿನದ ಹಿಂದೆ ಕೆಲಸ ಬಿಟ್ಟು, ಕಳ್ಳತನಕ್ಕೆ ಇಳಿದಿದ್ದ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಅಡ್ವಾನ್ಸ್ ಫಾರ್ಮರ್ ಇಂಡಿಯ ಪ್ರೈ.ಲಿ.
DVANCE FARMER INDIA PVT LTD
ಕರ್ನಾಟಕ ರಾಜ್ಯ ರೈತರಿಗೆ ಸಿಹಿ ಸುದ್ದಿ
ಅಡ್ವಾನ್ಸ್ ಫಾರ್ಮರ್ ಇಂಡಿಯ ಪ್ರೈ.ಲಿ ಕಂಪನಿಯ ನೀರಿನಲ್ಲಿ ಕರಗುವ ರಸಗೊಬ್ಬರಗಳು ಮತ್ತು ಲಘು ಪೋಷಕಾಂಶ ಗೊಬ್ಬರಗಳು 1kg ಮತ್ತು 25kg ಮಾದರಿಯಲ್ಲಿ ಲಭ್ಯವಿದೆ. ಮಾರುಕಟ್ಟೆಯಲ್ಲಿ ಈ ರಸಗೊಬ್ಬರಗಳನ್ನು ರೈತರಿಗಾಗಿ ಪರಿಚಯಿಸುತ್ತಿದ್ದೇವೆ.
PRODUCTS
1) N.P.K 19-19-19, 2) N.P.K 20-20-20+TE, 3)N.P.K 13-40-13 4)N.P.K 28-28-0, 5)N.P.K 15-08-35, 6)N.P.K 12-61-0 7) N.P.K 13-0-45, 8) N.P.K 8-24-24+4Mgo+6S, 9) N-15.5 Ca-18.5 10) N.P.K 0-52-34, 11) N.P.K 0-0-50, 12) N.P.K 17-44-0 13) N.P.K 11-8-8+Te, 14) N-10.0 Ca-15.0 Mgo-2.0, 15) K-22% Mg-18% 16) K2O-25% 17) K2O-50% 18) K2O-23%
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಸತೀಶ್ ಕುಮಾರ್ ಮೊ: 9845056530
Head Office: ಸಿನಿ ಪ್ಲ್ಯಾನೆಂಟ್ ಹತ್ತಿರ ಕೊಂಪಲ್ಲಿ ಹೈದರಬಾದ್–500014
Branch Office: ಬಾಳೆಗಾರರ ರಸ್ತೆ, ಹಾಸನ ಜಿಲ್ಲೆ, ಕರ್ನಾಟಕ–573 201

PROPERTY CORNER

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

JOB OPPORTUNITIES

General

WANTED OFFICE Assistant Graduated with 5 years experience having a two wheeler need to have knowledge of computer language kannada, hindi, english and location Sanjay nagar Bengaluru Contact: 8861379814

Hotel

REQUIRED GENERAL_MANAGER / MANAGER with Experience. For Veg Restaurant & Lodging/ Boarding at Peenya. 9512799918

WANTED RESTAURANT MANAGER, COOKS, ASSISTANT COOKS, WAITERS, CASHIERS. Good Salary + Accommodation. UNCLE'S KITCHEN, Bannerghatta Road. 99000-54468

REAL ESTATE SELLING

Sites

Electronic City

SALE KIADB 28,000sft Industrial/ Commercial Land at Electronic City Phase-2, Facing North & South with 150KV, VERNA DEVELOPERS, MG.Road, Bangalore. 9916310226/ 9620253180

Mysore

SALE, SITE, 85x116, 9280 sqft, No 3838 M-36, North-East Corner, Opp. Eidgah Maidan, Tilaknagar, Mysore. MOHANRAJ: 9886325259

REAL ESTATE BUYING

Sites

M G Road And Around

LOOKING AT residential Site or old House 40x60 or 60x50 surrounding M.G Road and Trinity metro station. preference to corner site corner side. WhatsApp only 99800-20666.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

I, CHRISTOPHER KINI Residing at No.11,Ground Floor, Vivekananda Street, Ranganath Swamy Temple Road, R.S.Palya, Kammanahalli Main Road,Bengaluru-560033.Have Changed my Name as DEEPAK KINI vide affidavit Dated:18.12.2024 before Notary K.VENKATESHAN,Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

PUBLIC NOTICE
Public are hereby informed that my client has negotiated to purchase the schedule property bearing site No. 263, BBMP Katha No. old PID No.68-1-263, situated at Koramangala 1st Block, New Municipal No. 263, measuring East to West 40 ft and North to South 60 ft and totally measuring 2400 sq. ft, and bounded as
East: No. 264, West: Site No. 262, North: Road, South: Site No. 248.
Persons having any right or objection over the said properties may lodge their objections/claims with documentary evidence within 7 days from the date of this publication to the undersigned.
Salamma Francis
Advocate
No. 311/55, 6th A cross,
Venkatapura
Koramangala 1st Block,
Bangalore - 560034
Ph. 98451 65006
Bangalore
20-12-2024

DH DECCAN HERALD Classifieds More value, more impact
ಪ್ರಜಾವಾಣಿ
PUBLIC NOTICE
BOOK YOUR PUBLIC NOTICE
ADS IN DH ALL + PRAJAVANI BENGALURU CITY, ON ALL DAYS
@ 550/-* PER SQCM
www.dhclassifieds.com
BOOK NOW
For more details contact:
+91 9886213331 | +91 9731810277
+91 9901641752 | 9845114560
*Conditions apply

ಕಾಡು ಕೋತಿ ಸಾಗಣೆ: ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಲಗೇಜ್ ಬ್ಯಾಗ್‌ನಲ್ಲಿ ನಾಲ್ಕು ಕಾಡು ಕೋತಿಗಳನ್ನು (ಅಗೈಲ್ ಗಿಬ್ಬನ್) ಅಡಗಿಸಿಕೊಂಡು ಕಳ್ಳಸಾಗಣೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ ಅಧಿಕಾರಿಗಳು ಬಂಧಿಸಿದ್ದಾರೆ.

ಮಹಮ್ಮದ್ ಅನ್ಸಾರ್ (62), ಸೈಯದ್ ಜಬ್ಬರ್ ನವಾಜ್ ಪಾಷಾ (43) ಬಂಧಿತರು.

ಡಿ.17ರಂದು ಮಲೇಷಿಯಾದಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಇಬ್ಬರು ಪ್ರಯಾಣಿಕರು ಲಗೇಜ್ ಬ್ಯಾಗ್‌ನಲ್ಲಿ ಬಿಸ್ಕತ್, ಚಾಕೋಲೆಟ್ ತುಂಬಿಸಿಕೊಂಡು ಅದರಲ್ಲಿ ಸಣ್ಣ ಕಾಡು ಕೋತಿಗಳನ್ನು ಅಡಗಿಸಿಟ್ಟಿದ್ದರು. ಹಿಂದೆ ಆರೋಪಿಗಳ ವಿರುದ್ಧ ಪ್ರಾಣಿಗಳ ಕಳ್ಳಸಾಗಣೆ ಪ್ರಕರಣ ದಾಖಲಾಗಿದ್ದ ಕಾರಣ ಅನುಮಾನಗೊಂಡು ಅವರನ್ನು ತಪಾಸಣೆಗೆ ಒಳಪಡಿಸಿದಾಗ ಪ್ರಕರಣ ಬಯಲಾಗಿದೆ. ವನ್ಯಜೀವಿಗಳ ಕಳ್ಳ ಸಾಗಣೆ ಆರೋಪದ ಮೇರೆಗೆ ಪ್ರಕರಣ ದಾಖಲಾಗಿದೆ.

ವಿಮಾನ ನಿಲ್ದಾಣದ ಹೊರಗೆ ಕೋತಿಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದ ಇವರ ಸಹಚರರ ತಪ್ಪಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳ್ಳ ಸಾಗಣೆ ಮಾಡುತ್ತಿದ್ದ ಕಾಡು ಕೋತಿಗಳು

ರೇಣುಕಸ್ವಾಮಿ ಕೊಲೆ: ಅನುಕುಮಾರ್ ಬಿಡುಗಡೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಏಳನೇ ಆರೋಪಿ ಅನುಕುಮಾರ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಗುರುವಾರ ಬೆಳಿಗ್ಗೆ ಬಿಡುಗಡೆಯಾದರು.

ಡಿ.15ರಂದು ಅನುಕುಮಾರ್ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಜೈಲಿನಿಂದ ಹೊರಬಂದರು. ಇವರು ಚಿತ್ರದುರ್ಗ ಹೊಳಲ್ಕೆರೆ ರಸ್ತೆಯ ಸಿಹಿನೀರು ಹೊಂಡದ ಬಳಿಯ ನಿವಾಸಿ.

ಕೊಲೆಯಾದ ರೇಣುಕಸ್ವಾಮಿ ಅವರನ್ನು ಚಿತ್ರದುರ್ಗದಿಂದ ಬೆಂಗಳೂರಿಗೆ ಕರೆತಂದ ಆರೋಪದ ಅಡಿ ಪೊಲೀಸರು ಬಂಧಿಸಿದ್ದರು.

ಮಹಾಕುಂಭ: ಜನದಟ್ಟಣೆ ನಿರ್ವಹಣೆಗೆ ಆ್ಯಪ್

ಮಹಾಕುಂಭ ನಗರ (ಉತ್ತರ ಪ್ರದೇಶ) (ಪಿಟಿಐ): ಪ್ರಯಾಗ್‌ರಾಜ್‌ನಲ್ಲಿ ಮಹಾ ಕುಂಭ ಮೇಳ–ಸಂದರ್ಭದಲ್ಲಿ ಜನದಟ್ಟಣೆ ನಿರ್ವಹಣೆ, ತುರ್ತು ಸಂದರ್ಭದಲ್ಲಿ ತ್ವರಿತ ಸ್ಪಂದನೆಗೆ ನೆರವಾಗಲು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜನವರಿ 13ರಿಂದ ಆರಂಭ ವಾಗುವ ಮಹಾಕುಂಭ ಮೇಳವು ಫೆ. 26ರವರೆಗೆ ನಡೆಯಲಿದ್ದು, ಲಕ್ಷಾಂತರ ಜನರು ಭೇಟಿ ನೀಡಲಿದ್ದಾರೆ.

ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಶಿವಾಜಿನಗರದ ಸೇಂಟ್ ಬೆಸಿಲಿಕಾ ಚರ್ಚ್ ಮುಂಭಾಗದ ಮಾರುಕಟ್ಟೆಯಲ್ಲಿ ಸಾರ್ವಜನಿಕರು ಆಲಂಕಾರಿಕ ವಸ್ತುಗಳನ್ನು ಖರೀದಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಅಂತಿಮ ವರದಿ ಸಲ್ಲಿಕೆಗೆ ಜ.28ರವರೆಗೆ ಗಡುವು

'ಲೋಕಾ' ವರದಿ ಸಲ್ಲಿಕೆ ಅವಧಿ ವಿಸ್ತರಣೆ

ಮುಡಾ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿ ತನಿಖೆಯ ಅಂತಿಮ ವರದಿ ಸಲ್ಲಿಕೆಗೆ ನೀಡಿದ್ದ ಕಾಲಾವಕಾಶವನ್ನು ಹೈಕೋರ್ಟ್, 2025ರ ಜನವರಿ 28ರವರೆಗೆ ವಿಸ್ತರಿಸಿ ಆದೇಶಿಸಿದೆ.

ತನಿಖೆಯನ್ನು ಸಿಬಿಐಗೆ ವಹಿಸಲು ಕೋರಿ ದೂರುದಾರರೂ ಆದ ಮೈಸೂರಿನ ಸಾಮಾಜಿಕ ಕಾರ್ಯಕರ್ತೆ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದರು.

ಮೊದಲು ಹೈಕೋರ್ಟ್ ನೀಡಿದ್ದ ಆದೇಶದಂತೆ ಲೋಕಾಯುಕ್ತ ಪೊಲೀಸರು ಇದೇ 24ರೊಳಗೆ ತನಿಖಾ ವರದಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಬೇಕಿತ್ತು. '35 ದಿನಗಳಾದರೂ ಪ್ರತಿವಾದಿಗಳಿಗೆ ನೋಟಿಸ್ ಜಾರಿಯಾಗಿಲ್ಲ' ಎಂಬ ಕಾರಣಕ್ಕೆ ನ್ಯಾಯಪೀಠ ಈ ಹಿಂದಿನ ವಿಚಾರಣೆ ವೇಳೆ ಹ್ಯಾಂಡ್ ಸಮನ್ಸ್ ಜಾರಿಗೆ ಆದೇಶಿಸಿತ್ತು.

ಏತನ್ಮಧ್ಯೆ, ಗುರುವಾರ ನಡೆದ ವಿಚಾರಣೆ ವೇಳೆ ನ್ಯಾಯಮೂರ್ತಿ ನಾಗಪ್ರಸನ್ನ ಅವರು ಲೋಕಾಯುಕ್ತ ತನಿಖೆಯ ಅಂತಿಮ ವರದಿಯನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸದಂತೆ ಮಧ್ಯಂತರ ತಡೆ ನೀಡಲು ಮುಂದಾದಾಗ ಪ್ರಕರಣದ ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ತೀವ್ರವಾಗಿ ಆಕ್ಷೇಪಿಸಿದರು.

'ಪ್ರತಿವಾದಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ತಲುಪಿಲ್ಲ. ಆಕ್ಷೇಪಣೆ ಸಲ್ಲಿಸಿಲ್ಲ, ವಾದ ಮಂಡಿಸಿಲ್ಲ. ಹೀಗಿರುವಾಗ ತಾವು ಮಧ್ಯಂತರ ತಡೆ ಆದೇಶ ನೀಡುವುದು ಸಲ್ಲದು' ಎಂದು ಪ್ರತಿಪಾದಿಸಿದರು.

ಇದಕ್ಕೆ ನ್ಯಾಯಮೂರ್ತಿಗಳು, 'ಹೈಕೋರ್ಟ್ ಎದುರಿನ ಕಟ್ಟಡದಲ್ಲಿರುವವರಿಗೆ ನೋಟಿಸ್ ಜಾರಿಯಾಗಲು 35 ದಿನ ಸಮಯ ತಗುಲಿರುವುದು ಆಘಾತಕಾರಿ ವಿಚಾರ' ಎಂದರಲ್ಲದೆ, ಸಿದ್ದರಾಮಯ್ಯ ಪರ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಮತ್ತು ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಕಪಿಲ್ ಸಿಬಲ್ ಅವರ ಕೋರಿಕೆಯ ಮೇರೆಗೆ ವಿಚಾರಣೆಯನ್ನು 2025ರ ಜನವರಿ 15ಕ್ಕೆ ಮುಂದೂಡಿದರು. ಅಂತೆಯೇ, ಜನವರಿ 28ರ ವರೆಗೆ ಲೋಕಾಯುಕ್ತ ತನ್ನ ಅಂತಿಮ ವರದಿಯನ್ನು ವಿಚಾರಣಾ ನ್ಯಾಯಾಲ ಯಕ್ಕೆ ಸಲ್ಲಿಸದಂತೆ ನಿರ್ದೇಶಿಸಿದರು. ಸ್ನೇಹಮಯಿ ಕೃಷ್ಣ ಪರ ಪದಾಂಕಿತ ಹಿರಿಯ ವಕೀಲ ಕೆ.ಜಿ.ರಾಘವನ್ ಹಾಜರಿದ್ದರು.

ರಾಜಾಜಿನಗರದ ಮಾದರಿ ಇಎಸ್‌ಐ ಆಸ್ಪತ್ರೆಯಲ್ಲೂ ಹಾಸಿಗೆ ಕೊರತೆ

ಇಎಸ್‌ಐ ಆಸ್ಪತ್ರೆ ಡಿಸ್ಪೆನ್ಸರಿಗಳಿಗೆ ಬೇಕಿದೆ 'ಚಿಕಿತ್ಸೆ'

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಗರದಲ್ಲಿ ಇಎಸ್‌ಐ ಆಸ್ಪತ್ರೆಯ 50ಕ್ಕೂ ಅಧಿಕ ಡಿಸ್ಪೆನ್ಸರಿಗಳು ವೈದ್ಯರು, ಸಿಬ್ಬಂದಿ ಕೊರತೆ ಸೇರಿದಂತೆ ವಿವಿಧ ಸೌಲಭ್ಯಗಳ ಕೊರತೆಗಳಿಂದ ಬಳಲುತ್ತಿವೆ. ಮೂಲ ಸೌಕರ್ಯಗಳನ್ನು ಒದಗಿಸುವ ಮೂಲಕ ಅವುಗಳಿಗೆ 'ಚಿಕಿತ್ಸೆ' ನೀಡಬೇಕಿದೆ.

'ಬಹುತೇಕ ಡಿಸ್ಪೆನ್ಸರಿಗಳಲ್ಲಿ ಒಬ್ಬರೇ ವೈದ್ಯರಿದ್ದಾರೆ. ಶುಶ್ರೂಷಕರ ಸಂಖ್ಯೆಯೂ ಕಡಿಮೆ. ಡಿಸ್ಪೆನ್ಸರಿಗಳು ಬೆಳಿಗ್ಗೆ 9ಕ್ಕೆ ತೆರೆದು, ಸಂಜೆ 5.30 ಅಥವಾ 7 ಗಂಟೆಗೆ ಹೊತ್ತಿಗೆ ಬಂದ್ ಆಗುತ್ತವೆ. ಆ ವೇಳೆಗೆ ಕಾರ್ಮಿಕರು ಕೆಲಸಕ್ಕೆ ತೆರಳಿರುತ್ತಾರೆ. ಕೆಲಸದ ದಿನಗಳಲ್ಲಿ ಆಸ್ಪತ್ರೆಗೆ ತೆರಳುವುದು ಕಷ್ಟವಾಗುತ್ತಿದೆ. ಭಾನುವಾರ ತೆರೆಳಿದರೆ ಬಾಗಿಲು ತೆರೆಯುವುದೇ ಕಡಿಮೆ' ಎಂದು ಗಾರ್ಮೆಂಟ್ಸ್ ಲೇಬರ್ ಯೂನಿಯನ್ ಅಧ್ಯಕ್ಷೆ ರುಕ್ಮಿಣಿ ಸಮಸ್ಯೆ ಬಿಡಿಸಿಟ್ಟರು.

'ಶೀತ, ಕೆಮ್ಮು, ಜ್ವರ ಮುಂತಾದ ಸಣ್ಣಪುಟ್ಟ ಅನಾರೋಗ್ಯಗಳಿಗೆ ಇಎಸ್‌ಐ ಆಸ್ಪತ್ರೆಗಳಿಗೆ ಬರುವಂತಿಲ್ಲ. ಡಿಸ್ಪೆನ್ಸರಿಗಳಿಗೇ ಹೋಗಬೇಕು. ಅಲ್ಲಿ ಪರೀಕ್ಷೆ, ಆಸ್ಪತ್ರೆಗೆ ಶಿಫಾರಸು ಮಾಡಿದರಷ್ಟೆ ದೊಡ್ಡ ಆಸ್ಪತ್ರೆಗಳಿಗೆ ಹೋಗಬಹುದು. ಡಿಸ್ಪೆನ್ಸರಿಗಳಲ್ಲಿ ಕಾರ್ಡ್ ಹಿಡಿದು ಸರದಿಯಲ್ಲಿ ನಿಂತು ಕಾರ್ಮಿಕರು ಕಾಯುತ್ತಿರುತ್ತಾರೆ' ಎಂದು ದೂರಿದರು.

ಮಾದರಿ ಆಸ್ಪತ್ರೆಗೂ ಬೇಕಿದೆ ಹಾಸಿಗೆ: ರಾಜಾಜಿನಗರದ ಮಾದರಿ ಇಎಸ್‌ಐ ಆಸ್ಪತ್ರೆಗೆ 750 ಬೆಡ್‌ಗಳು ಮಂಜೂರಾಗಿವೆ. ಆದರೆ, ಅಲ್ಲಿರುವುದು 580 ಬೆಡ್‌ಗಳು ಮಾತ್ರ. ಇನ್ನೂ 170 ಬೆಡ್ ಅಳವಡಿಸಲು ಅನುಮತಿ ಇದ್ದರೂ ಜಾಗವೇ ಇಲ್ಲ. ಅದಕ್ಕಾಗಿ ಹೊಸ ಕಟ್ಟಡ ನಿರ್ಮಾಣಗೊಳ್ಳಬೇಕಿದೆ.

'ಕ್ಯಾನ್ಸರ್, ನವಜಾತ ಶಿಶುಗಳಿಗೆ ಬರುವ ಸೂಕ್ಷ್ಮ ಕಾಯಿಲೆಗಳಿಂದ ಹಿಡಿದು ಎಲ್ಲ ತರಹದ ಚಿಕಿತ್ಸೆಗಳು ಕಾರ್ಮಿಕರಿಗೆ, ಅವರ ಅವಲಂಬಿತರಿಗೆ ಉಚಿತವಾಗಿ ನೀಡಲಾಗುತ್ತಿದೆ. ₹1 ಕೋಟಿ ವೆಚ್ಚವಾಗುವ ಚಿಕಿತ್ಸೆಗಳೂ ನೀಡುತ್ತೇವೆ. 66 ಐಸಿಯು ಬೆಡ್‌ಗಳಿದ್ದರೂ ರೋಗಿಗಳ ಸಂಖ್ಯೆ ಹೆಚ್ಚಿದಾಗ ಬೇರೆ ಆಸ್ಪತ್ರೆಗಳಿಗೆ ಶಿಫಾರಸು ಮಾಡಬೇಕಾಗುತ್ತದೆ' ಎಂದು ಮಾದರಿ ಇಎಸ್‌ಐ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ಡೀನ್ ಡಾ. ಸಂಧ್ಯಾ ತಿಳಿಸಿದರು.

ಪ್ರತಿ ಪರೀಕ್ಷೆಗೆ ಕಾಯಬೇಕು: 'ರಾಜಾಜಿನಗರ ಮಾದರಿ ಆಸ್ಪತ್ರೆ, ಪೀಣ್ಯ ಮಾದರಿ ಆಸ್ಪತ್ರೆಗಳು ಬಹಳ ಚೆನ್ನಾಗಿವೆ. ಸರ್ಕಾರಿ ಆಸ್ಪತ್ರೆಗಳಿಗಿಂತಲೂ ಉತ್ತಮವಾಗಿವೆ. ಇಲ್ಲಿ ಪ್ರತಿ ಪರೀಕ್ಷೆಗೂ ಪ್ರತ್ಯೇಕವಾಗಿ ಸಾಲಿನಲ್ಲಿ ನಿಂತು ಚೀಟಿ ಬರೆಸಬೇಕಿದೆ' ಎಂದು ಆಸ್ಪತ್ರೆಯಲ್ಲಿದ್ದ ರೋಗಿಯ ಸಂಬಂಧಿ ಸುಬ್ರಹ್ಮಣ್ಯನಗರದ ವೆಂಕಟೇಶ್ ತಿಳಿಸಿದರು.

ರಾಜಾಜಿನಗರದ ಇಎಸ್‌ಐ ಆಸ್ಪತ್ರೆ (ಎಡಚಿತ್ರ) ಇಎಸ್‌ಐ ಆಸ್ಪತ್ರೆಯಲ್ಲಿ ವೀಲ್‌ಚೇರ್‌ನಲ್ಲಿ ರೋಗಿ ಕರೆದೊಯ್ಯುತ್ತಿರುವುದು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಅಂಕಿ ಅಂಶ

20 ಲಕ್ಷ ರಾಜಾಜಿನಗರ ಮಾದರಿ ಇಎಸ್‌ಐ ಆಸ್ಪತ್ರೆ ವ್ಯಾಪ್ತಿ ಫಲಾನುಭವಿಗಳು

2 ಸಾವಿರ ನಿತ್ಯ ಬರುವ ಸರಾಸರಿ ರೋಗಿಗಳು

60 ಸಾವಿರ ಚಿಕಿತ್ಸೆ, ಔಷಧ ಪಡೆಯುವ ರೋಗಿಗಳ ಸರಾಸರಿ ಸಂಖ್ಯೆ

ಡಿಸ್ಪೆನ್ಸರಿಗಳು ಎಲ್ಲೆಲ್ಲಿವೆ?

ಮಾರತ್‌ಹಳ್ಳಿ, ಪೀಣ್ಯ 14ನೇ ಅಡ್ಡರಸ್ತೆ, ಆರ್‌ಟಿ ನಗರ, ಮಾದನಾಯಕನಹಳ್ಳಿ, ಬೈಯಪ್ಪನಹಳ್ಳಿ, ಯಲಹಂಕ, ದೊಡ್ಡನೆಕುಂದಿ, ಕ್ವೀನ್ಸ್ ರಸ್ತೆ, ಯಶವಂತಪುರ, ಹಲಸೂರು, ಜಾಲಹಳ್ಳಿ, ಲಗ್ಗೆರೆ, ದಾಸರಹಳ್ಳಿ, ಸುಭಾಸ್ ನಗರ, ಫ್ರೇಜರ್ ಟೌನ್, ಬಸವನಗುಡಿ, ಬನಶಂಕರಿ, ಹನುಮಂತನಗರ, ಬಿನ್ನಿಪೇಟೆ, ಕಾಟನ್‌ಪೇಟೆ, ಕರಿತಿಮ್ಮನಹಳ್ಳಿ, ಕೋಣನಕುಂಟೆ, ಶೇಷಾದ್ರಿಪುರ, ಕೆಂಗೇರಿ, ಅತ್ತಿಬೆಲೆ, ಬೊಮ್ಮನಹಳ್ಳಿ, ಬೊಮ್ಮಸಂದ್ರ, ಚಾಮರಾಜಪೇಟೆ, ಚಿಕ್ಕಜಾಲ, ದ್ಯಾವಸಂದ್ರ, ಜಯನಗರ, ಕೆ.ಆರ್. ಪುರ, ಮಾಗಡಿ ರಸ್ತೆ, ಅರಮನೆ ಗುಟ್ಟಹಳ್ಳಿ, ರಾಜಾಜಿನಗರ, ರಸೆಲ್ ಮಾರ್ಕೆಟ್, ಆಸ್ಟಿನ್ ಟೌನ್, ಚಿಕ್ಕಬಾಣಾವರ, ಶ್ರೀರಾಂಪುರ, ಸುಬ್ರಹ್ಮಣ್ಯಪುರ, ಸಿಂಗಸಂದ್ರ, ವಿವೇಕನಗರ, ವಿಜಯನಗರ, ಕಾಮಾಕ್ಷಿಪಾಳ್ಯ, ವಿಲ್ಸನ್‌ಗಾರ್ಡನ್, ವಿಲಿಯಮ್ಸ್ ಟೌನ್.

'ಸಿಬ್ಬಂದಿ ಕೊರತೆ ಇಲ್ಲ'

ಡಾ. ಸಂಧ್ಯಾ

'ಸಿಬ್ಬಂದಿ ಕೊರತೆ ಇಲ್ಲ. ವೈದ್ಯರು, ಶುಶ್ರೂಷಕರು, ಸಿಬ್ಬಂದಿ ಸೇರಿದಂತೆ ಶೇ 90ರಷ್ಟು ಹುದ್ದೆಗಳಿಗೆ ಕಾಯಂ ನೇಮಕವಾಗಿದೆ. ಉಳಿದ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕವಾಗಿದೆ. ವೈದ್ಯಕೀಯ ಕಾಲೇಜು ಇದ್ದು, ಎಂಡಿ, ಎಂಎಸ್ ವಿದ್ಯಾರ್ಥಿಗಳೂ ಬರುತ್ತಾರೆ' ಎಂದು ರಾಜಾಜಿನಗರ ಮಾದರಿ ಇಎಸ್‌ಐ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ಡೀನ್ ಡಾ.ಸಂಧ್ಯಾ ತಿಳಿಸಿದರು.

'ಹಾಸಿಗೆಗಳ ಕೊರತೆ ಇದೆ. ಹೊಸ ಕಟ್ಟಡ ನಿರ್ಮಾಣವಾದರೆ ಸಮಸ್ಯೆ ಬಗೆಹರಿಯಬಹುದು. ಆಸ್ಪತ್ರೆಗೆ ಬರಲಾಗದವರ ರಕ್ತ ಮಾದರಿಯನ್ನು ಮನೆಯಿಂದಲೇ ಸಂಗ್ರಹಿಸುವ ವ್ಯವಸ್ಥೆ ಇದೆ. ರೋಗಿಗಳಿಗೆ ಅನುಕೂಲ ಆಗುವಂತೆ ಔಷಧದ ಕೌಂಟರ್ ವಿಸ್ತರಿಸಲಾಗಿದೆ' ಎಂದು ವಿವರಿಸಿದರು.

ಕ್ರಿಸ್‌ಮಸ್, ಹೊಸ ವರ್ಷ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚಾರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆ ನಿಯಂತ್ರಿಸಲು ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರಕ್ಕೆ ನೈರುತ್ಯ ರೈಲ್ವೆ ನಿರ್ಧರಿಸಿದೆ.

ಡಿಸೆಂಬರ್ 20ರಂದು ಹುಬ್ಬಳ್ಳಿಯ ಎಸ್‌ಎಸ್‌ಎಸ್ ರೈಲು ನಿಲ್ದಾಣದಿಂದ ಬೆಳಿಗ್ಗೆ 8ಗಂಟೆಗೆ ಹೊರಡುವ ಒನ್ ವೇ ಎಕ್ಸ್‌ಪ್ರೆಸ್ ವಿಶೇಷ ರೈಲು (07305), ಸಂಜೆ 4.15ಕ್ಕೆ ಬೆಂಗಳೂರಿನ ಎಸ್‌ಎಂವಿಟಿ ರೈಲು ನಿಲ್ದಾಣ ತಲುಪಲಿದೆ. ಈ ರೈಲು ದಾವಣಗೆರೆ, ಬೀರೂರು, ಅರಸೀಕೆರೆ ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಡಿ.20 ಮತ್ತು 22ರಂದು ಬೆಂಗಳೂರಿನ ಎಸ್‌ಎಂವಿಟಿ ನಿಲ್ದಾಣದಿಂದ ಸಂಜೆ 6.15ಕ್ಕೆ ಹೊರಡುವ ರೈಲು (07306) ಮರುದಿನ ಬೆಳಿಗ್ಗೆ 8.45ಕ್ಕೆ ವಾಸ್ಕೋ ಡ ಗಾಮಾ ನಿಲ್ದಾಣ ತಲುಪಲಿದೆ. ಇದೇ ರೈಲು (07307) ಡಿ.21 ಮತ್ತು 23ರಂದು ವಾಸ್ಕೋ ಡ ಗಾಮಾ ನಿಲ್ದಾಣದಿಂದ ಬೆಳಿಗ್ಗೆ 10 ಗಂಟೆಗೆ ಹೊರಟು, ರಾತ್ರಿ 11.55ಕ್ಕೆ ಬೆಂಗಳೂರು ತಲುಪಲಿದೆ.

ಡಿ.24ರಂದು ಬೆಂಗಳೂರಿನಿಂದ ರಾತ್ರಿ 8.30ಕ್ಕೆ ಹೊರಡುವ ರೈಲು (07308) ಮರುದಿನ ಮಧ್ಯಾಹ್ನ 12 ಗಂಟೆಗೆ ವಾಸ್ಕೋ ಡ ಗಾಮಾ ನಿಲ್ದಾಣ ತಲುಪಲಿದೆ. ಇದೇ ರೈಲು (07309) ಡಿ.29ರಂದು ವಾಸ್ಕೋ ಡ ಗಾಮಾದಿಂದ ಮಧ್ಯಾಹ್ನ 2.30ಕ್ಕೆ ಹೊರಟು, ಮರುದಿನ ಬೆಳಿಗ್ಗೆ 5.15ಕ್ಕೆ ಬೆಂಗಳೂರು ತಲುಪಲಿದೆ.

ಡಿ.30ರಂದು ಬೆಂಗಳೂರಿನಿಂದ ರಾತ್ರಿ 8.30ಕ್ಕೆ ಹೊರಡುವ ಎಕ್ಸ್‌ಪ್ರೆಸ್ (07310) ರೈಲು, ಮರುದಿನ ಮಧ್ಯಾಹ್ನ 12ಕ್ಕೆ ವಾಸ್ಕೋ ಡ ಗಾಮಾ ನಿಲ್ದಾಣ ತಲುಪಲಿದೆ. ಇದೇ ರೈಲು (07311) 2025ರ ಜನವರಿ 1 ರಂದು ವಾಸ್ಕೋ ಡ ಗಾಮಾ ನಿಲ್ದಾಣದಿಂದ ರಾತ್ರಿ 10ಗಂಟೆಗೆ ಹೊರಟು, ಮರುದಿನ ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ತಲುಪಲಿದೆ.

ಈ ರೈಲುಗಳು ತುಮಕೂರು, ತಿಪಟೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ರಾಣೆಬೆನ್ನೂರು, ಹಾವೇರಿ, ಹುಬ್ಬಳ್ಳಿ, ಧಾರವಾಡ, ಲೋಂಡಾ ಮಾರ್ಗದ ಪ್ರಮುಖ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿವೆ.

www.enquiry.indianrail.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಅಥವಾ 139 ಸಂಖ್ಯೆಗೆ ಕರೆ ಮಾಡಿ, ಮಾಹಿತಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಖಾನಾಪುರ ಠಾಣೆ ಬಳಿ ಬಿಗುವಿನ ಸ್ಥಿತಿ, ಮುಖಂಡರ ಧರಣಿ

ಸಿ.ಟಿ. ರವಿ ತಡರಾತ್ರಿ ಬೆಂಗಳೂರಿಗೆ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ): ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರನ್ನು ಅವಾಚ್ಯ ಪದವನ್ನು ಬಳಸಿ ನಿಂದಿಸಿದ ಆರೋಪದಡಿ ಪೊಲೀಸರು ವಶಕ್ಕೆ ಪಡೆದಿರುವ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರನ್ನು ಗುರುವಾರ ತಡರಾತ್ರಿಯೇ ಬೆಂಗಳೂರಿಗೆ ಕರೆದೊಯ್ಯಲಾಯಿತು.

ತಡರಾತ್ರಿ ಠಾಣೆಯಿಂದ ಪೊಲೀಸರು ರವಿ ಅವರನ್ನು ಹೊತ್ತು ತಂದರು. ಆಗ ಅವರ ತಲೆಗೆ ಪೆಟ್ಟು ಬಿದ್ದಿದ್ದು, ರಕ್ತ ಸೋರಿದ್ದ ಗುರುತು ಕಂಡುಬಂದಿತು. ಆದರೆ, ಅವರಿಗೆ ಯಾವ ರೀತಿ ಪೆಟ್ಟುಬಿದ್ದಿತು ಎಂಬುದು ಸ್ಪಷ್ಟವಾಗಿಲ್ಲ.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರು ಖಾನಾಪುರ ಠಾಣೆಯ ಬಳಿ ಪ್ರತಿಭಟನೆ ನಡೆಸಿದ್ದು, ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ರವಿ ಅವರನ್ನು ಹೊತ್ತ ವಾಹನ ಬೆಂಗಳೂರಿನತ್ತ ಸಾಗಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದ ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು 'ರವಿ ಅವರ ಕೊಲೆಗೆ ಯತ್ನಿಸಲಾಗಿದೆ' ಎಂದು ಆರೋಪಿಸಿದರು.

'ಈ ಕುರಿತು ದೂರು ನೀಡಿದರೂ ಪೊಲೀಸರು ಎಫ್‌ಐಆರ್ ದಾಖಲಿಸಿಲ್ಲ. ಬದಲಾಗಿ, ಠಾಣೆಯಲ್ಲೇ ಅವರನ್ನು ಹೊಡೆದು ತಲೆ ಒಡೆದಿದ್ದಾರೆ' ಎಂದು ಕಿಡಿ ಕಾರಿದರು.

ಬಂದ್‌ಗೆ ಕರೆ: 'ಈ ಕೃತ್ಯವನ್ನು ಖಂಡಿಸಿ ಶುಕ್ರವಾರ ಚಿಕ್ಕಮಗಳೂರು ಬಂದ್‌ಗೆ ಕರೆ ನೀಡಲಾಗಿದೆ. ಡಿ.26ರಂದು ಬೆಳಗಾವಿ ಬಂದ್ ಮಾಡಲಾಗುವುದು. ರಾಜ್ಯದಾದ್ಯಂತ ದೊಡ್ಡ ಹೋರಾಟ ನಡೆಯಲಿದೆ' ಎಂದೂ ಹೇಳಿದರು.

ಪೊಲೀಸರ ವಶದಲ್ಲಿದ್ದ ರವಿ ಅವರು ಒಂದು ಹಂತದಲ್ಲಿ ಬೆಂಗಳೂರಿಗೆ ಹೊರಡಲು ಪ್ರತಿರೋಧ ತೋರಿದರು. ಆಗ ಪೊಲೀಸರು ಹೆಗಲ ಮೇಲೆ ಹೊತ್ತುಕೊಂಡು ಬಂದರು. ಪೊಲೀಸ್ ಜೀಪಿನ ಕಿಟಕಿಯಿಂದಲೇ ಅವರನ್ನು ವಾಹನದೊಳಗೆ ತೂರಿಸಿದರು.

ಠಾಣೆಯಲ್ಲೇ ಗಲಾಟೆ: ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಸದನದಲ್ಲೇ ನನಗೆ 'ಕೊಲೆಗಡುಕ' ಎಂದು ನಿಂದನೆ ಮಾಡಿದ್ದಾರೆ. ಅವರ ಬೆಂಬಲಿಗರನ್ನು ಸುವರ್ಣ ಸೌಧಕ್ಕೆ ನುಗ್ಗಿಸಿ ಕೊಲೆ ಮಾಡಲು ಯತ್ನಿಸಿದ್ದಾರೆ' ಎಂದು ಆರೋಪಿಸಿದ ರವಿ ಪ್ರತಿ ದೂರು ನೀಡಿದರು.

ಆದರೆ ಎಫ್‌ಐಆರ್‌ಗೆ ಮೊದಲೇ ರವಿ ಅವರನ್ನು ಬೆಂಗಳೂರಿಗೆ ಸಾಗಿಸಲು ಪೊಲೀಸರು ಮುಂದಾದರು.

ಆ ವೇಳೆಗೆ ಠಾಣೆಗೆ ಬಂದ ಆರ್. ಅಶೋಕ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಸುನೀಲಕುಮಾರ ಮುಂತಾದವರು ಪೊಲೀಸರ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿದರು.

ಲಕ್ಷ್ಮಿ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳದ ಹೊರತು ರವಿ ಅವರನ್ನು ಬೆಂಗಳೂರಿಗೆ ಕರೆದೊಯ್ಯಲು ಬಿಡುವುದಿಲ್ಲ ಎಂದು ಈ ಮುಖಂಡರು ಪಟ್ಟು ಹಿಡಿದರು. ಈ ವೇಳೆ ಕೆಲ ಕಾಲ ಕೆಲಹೊತ್ತು ಗೊಂದಲದ ವಾತಾವರಣ ನಿರ್ಮಾಣವಾಯಿತು.

ರಾತ್ರಿ 12.20ರ ವೇಳೆಗೆ ರವಿ ಅವರನ್ನು ಬೆಂಗಳೂರಿಗೆ ಪೊಲೀಸ್ ಜೀಪಿನಲ್ಲೇ ಕರೆದೊಯ್ಯಲಾಯಿತು.

ಬೆಳಗಾವಿ ಜಿಲ್ಲೆಯ ಖಾನಾಪುರ ಠಾಣೆಯ ಎದುರು ಗುರುವಾರ ತಡರಾತ್ರಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಧರಣಿ ನಡೆಸಿದರು ಪ್ರಜಾವಾಣಿ ಚಿತ್ರ

ಅಮಿತ್ ಶಾ ಹೇಳಿಕೆ ಖಂಡಿಸಿ ಗುರುವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು (ಎಡಚಿತ್ರ) ಬೆಂಗಳೂರು ವಿ.ವಿ ಮುಖ್ಯ ಕಚೇರಿ ಎದುರು ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರು ಪ್ರತಿಭಟಿಸಿದರು

ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಆರೋಪ • ಕ್ಷಮೆ ಕೇಳಲು ಆಗ್ರಹ

ಅಮಿತ್ ಶಾ ಹೇಳಿಕೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದಾರೆ' ಎಂದು ಆರೋಪಿಸಿ ನಗರದಲ್ಲಿ ಗುರುವಾರ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯಲ್ಲಿ, 'ಅಮಿತ್ ಶಾ ಅವರನ್ನು ಗಡಿಪಾರು ಮಾಡಬೇಕು. ಅವರು ದೇಶದ ಜನರ ಕ್ಷಮೆ ಕೇಳಬೇಕು' ಎಂದು ಆಗ್ರಹಿಸಲಾಯಿತು.

'ಸಂಸತ್‌ನಲ್ಲಿ ಮಾತನಾಡುವ ವೇಳೆ ಅಂಬೇಡ್ಕರ್ ಹೆಸರನ್ನು ಪ್ರಸ್ತಾಪಿಸಿ ಅಪಮಾನ ಮಾಡಿರುವುದು ನಿಜವಾದ ದೇಶದ್ರೋಹ. ಇಂತಹ ಕೀಳುಮಟ್ಟದ ಅಭಿರುಚಿವುಳ್ಳ ವ್ಯಕ್ತಿ ದೇಶದ ಗೃಹ ಸಚಿವ ಆಗಿರುವುದು ದುರಂತ' ಎಂದು ಪ್ರತಿಭಟನಕಾರರು ಹೇಳಿದರು.

'ದೇಶದ ಆಡಳಿತ ನಡೆಸುತ್ತಿರುವ ಕೋಮುವಾದಿಗಳು ಅಂಬೇಡ್ಕರ್ ಅವರನ್ನೇ ಅಪಮಾನ ಮಾಡುತ್ತಿದ್ದಾರೆ' ಎಂದು ಹೇಳಿದರು.

ನಂತರ, ಮೆರವಣಿಗೆಗೆ ಮುಂದಾದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್, ಮುಖಂಡರಾದ ಎ.ಆನಂದ್, ಹೇಮರಾಜ್, ರವಿಶೇಖರ್, ಜಿ.ಪ್ರಕಾಶ್, ಉಮೇಶ್, ಮಹೇಶ್, ರಂಜಿತ್, ನವೀನ್, ಸಾಯಿ, ಓಬಳೇಶ್, ಕೆ.ಟಿ. ನವೀನ್, ಕುಶಲ ಅರೇಗೌಡ, ಮಾಧವ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಹಿಂದ ಖಂಡನೆ: 'ಅಂಬೇಡ್ಕರ್ ಬಗೆಗಿನ ಹೇಳಿಕೆ ಬಿಜೆಪಿಯ ಅಂತರಂಗ ಪ್ರತಿಬಿಂಬವಾಗಿದೆ. ಅಮಿತ್ ಶಾ ಕೂಡಲೇ ರಾಜೀನಾಮೆ ನೀಡಬೇಕು' ಎಂದು ಅಹಿಂದ ಚಳವಳಿ ಸಂಘಟನೆ ಒತ್ತಾಯಿಸಿದೆ.

'ಒಂದು ದಶಕದಿಂದ ವಿವಿಧ ಸ್ವಾಮೀಜಿಗಳು, ಜನಪ್ರತಿನಿಧಿಗಳು ಸಂವಿಧಾನದ ವಿರುದ್ಧ ಮಾತನಾಡುತ್ತಿದ್ದಾರೆ. ಇದರ ಮೂಲವೇ ಆರ್‌ಎಸ್‌ಎಸ್ ಆಗಿದ್ದು, ರಾಜ್ಯದಲ್ಲಿ ಆರ್‌ಎಸ್‌ಎಸ್ ನಿಷೇಧಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಅಹಿಂದ ಕೇಂದ್ರ ಕಚೇರಿ ಕಾರ್ಯದರ್ಶಿ ಆರ್. ಸುರೇಂದ್ರ ತಿಳಿಸಿದ್ದಾರೆ.

ಭೀಮ್ ಆರ್ಮಿ ವಿರೋಧ: ಕೇಂದ್ರ ಗೃಹ ಸಚಿವರ ಹೇಳಿಕೆಗೆ ಭೀಮ್ ಆರ್ಮಿ ವಿರೋಧ ವ್ಯಕ್ತಪಡಿಸಿದೆ. 'ಈ ಹೇಳಿಕೆ ಅಂಬೇಡ್ಕರ್‌ಗೆ ಮಾತ್ರವಲ್ಲ, ಅಂಬೇಡ್ಕರ್ ಬಂಧುಗಳಿಗೆ ಮಾಡಿದ ಅಪಮಾನ' ಎಂದು ಸಂಘಟನೆ ಅಧ್ಯಕ್ಷ ರಾಜಗೋಪಾಲ್ ಡಿ.ಎಸ್. ಟೀಕಿಸಿದರು.

'ಸಮಾನತೆ, ನ್ಯಾಯ, ಮತ್ತು ಸಂವಿಧಾನದ ಮೇಲೆ ನಂಬಿಕೆ ಹೊಂದಿರುವ ಪ್ರತಿಯೊಬ್ಬರೂ ಅಮಿತ್ ಶಾ ಅವರ ರಾಜೀನಾಮೆಗೆ ಒತ್ತಾಯಿಸಬೇಕು' ಎಂದು ಮನವಿ ಮಾಡಿದ್ದಾರೆ.

ಅಮಿತ್ ಶಾ ರಾಜೀನಾಮೆಗೆ ಆಗ್ರಹ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆಯನ್ನು ಖಂಡಿಸಿ ತಮಟೆ ಮೀಡಿಯಾ, ದಲಿತ ವಿದ್ಯಾರ್ಥಿ ಪರಿಷತ್, ಜಿಕೆವಿಕೆ ಅಂಬೇಡ್ಕರ್ ಸ್ಟೂಡೆಂಟ್ಸ್ ಅಸೋಸಿಯೇಷನ್, ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್‌ನ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ವಿದ್ಯಾರ್ಥಿಗಳಿಂದ ಪ್ರತಿಭಟನೆ: ಕೇಂದ್ರ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆಯನ್ನು ಖಂಡಿಸಿ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರು ಬೆಂಗಳೂರು ವಿಶ್ವವಿದ್ಯಾಲಯದ ಮುಖ್ಯಕಚೇರಿ ಮುಂಭಾಗದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಪಾಶ್ ಸಮಿತಿ: ಡಿ. 27ಕ್ಕೆ ನಿರ್ಧಾರ

ಬೆಂಗಳೂರು: ಚಿತ್ರರಂಗದಲ್ಲಿ ಮಹಿಳೆಯರ ಹಿತರಕ್ಷಣೆಗಾಗಿ ಲೈಂಗಿಕ ದೌರ್ಜನ್ಯ ತಡೆ ಸಮಿತಿ (ಪಾಶ್) ರಚನೆ ಕುರಿತು ಡಿ.27ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗು ವುದು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಎಂ.ನರಸಿಂಹಲು ಹೇಳಿದರು.

ಹಿಂದೆ ಚಲನಚಿತ್ರ ನಿರ್ದೇಶಕಿ, ನಿರ್ಮಾಪಕಿ ಕವಿತಾ ಲಂಕೇಶ್ ಅಧ್ಯಕ್ಷತೆಯಲ್ಲಿ ಪಾಶ್ ರಚನೆಗೆ ಮುಂದಾಗಿದ್ದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು (ಕೆಎಫ್‌ಸಿಸಿ) ಚುನಾವಣೆಯ ಕಾರಣವನ್ನು ನೀಡಿ ಸಮಿತಿ ರಚನೆಯನ್ನು ತಡೆ ಹಿಡಿದಿತ್ತು.

'ಕರ್ನಾಟಕದಲ್ಲಿ ಮಹಿಳಾ ಆಯೋಗ ಇದೆ. ತೊಂದರೆಗೀಡಾದವರು ಮಹಿಳಾ ಆಯೋಗಕ್ಕೆ ದೂರು ನೀಡಿದರೆ ಅವರೆ ನೇರ ಕ್ರಮಕೈಗೊಳ್ಳಬಹುದು. ಅವರಿಗೆ ನಾವು ಪೂರಕ ಮಾಹಿತಿ ನೀಡುತ್ತೇವೆ. ಈ ವಿಷಯದಲ್ಲಿ ವೈಯಕ್ತಿಕ ನಿರ್ಧಾರ ಕೈಗೊಳ್ಳಲಾಗದು. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಪ್ರಕಟಿಸುತ್ತೇವೆ' ಎಂದು ಅವರು ತಿಳಿಸಿದರು.

'ಸರ್ಕಾರ ಕನ್ನಡ ಚಿತ್ರಗಳಿಗೆ ನೀಡುವ ಸಬ್ಸಿಡಿ ವಿತರಣೆಯಲ್ಲಿ ಅವ್ಯವಹಾರ ನಡೆದಿರುವ ಶಂಕೆ ಇದೆ. ಇದು ಸಾಬೀತಾದರೆ ಅವರ ವಿರುದ್ಧ ಕ್ರಮ ಜರುಗಿಸಲು ಸರ್ಕಾರಕ್ಕೆ ಒತ್ತಾಯಿಸುತ್ತೇವೆ. ಪರಭಾಷಾ ಚಿತ್ರಗಳಿಂದ ಕನ್ನಡ ಚಿತ್ರಗಳಿಗಾಗುತ್ತಿರುವ ತೊಂದರೆ, ಏಕರೂಪದ ಟಿಕೆಟ್ ದರ ನಿಗದಿ ಸೇರಿ ಹತ್ತಾರು ಸಮಸ್ಯೆಗಳ ಪರಿಹಾರಕ್ಕೆ ಕಾರ್ಯಸೂಚಿ ಸಿದ್ಧಪಡಿಸಲಾಗಿದೆ' ಎಂದು ಎಂ.ನರಸಿಂಹಲು ಹೇಳಿದರು.

ಕಾರ್ಯದರ್ಶಿ ಪ್ರವೀಣ್ ಕುಮಾರ್, ಹಿರಿಯ ನಿರ್ಮಾಪಕ ಸಾ.ರಾ. ಗೋವಿಂದು ಹಾಗೂ ನೂತನ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಹರಿದ್ವಾರ: ಧರ್ಮ ಸಂಸದ್ ರದ್ದು

ಹರಿದ್ವಾರ (ಪಿಟಿಐ): 'ಪೊಲೀಸರು ಮಧ್ಯ ಪ್ರವೇಶಿಸಿದ್ದರಿಂದ ಗುರುವಾರದಿಂದ ಆರಂಭವಾಗಬೇಕಿದ್ದ ಮೂರು ದಿನಗಳ 'ವಿಶ್ವ ಧರ್ಮ ಸಂಸದ್' ಕಾರ್ಯ ಕ್ರಮ ರದ್ದು ಮಾಡಲಾಗಿದೆ' ಎಂದು ಯತಿ ನರಸಿಂಹಾನಂದ್ ಅವರು ತಿಳಿಸಿದರು.

'ಶ್ರೀಪಂಚಮ ದಶನಾಮ್ ಜೂನಾ ಅಖಾಡ'ವು ಈ ಕಾರ್ಯಕ್ರಮವನ್ನು ಆಯೋಜಿಸಿತ್ತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ನಿರ್ಮಿಸಲಾಗಿದ್ದ ಟೆಂಟ್‌ಗಳನ್ನು ಪೊಲೀಸರು ಕಿತ್ತೊಗೆದರು' ಎಂದು ದೂರಿದರು.

'ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ಖಂಡಿಸಿ 'ಶ್ರೀಪಂಚಮ ದಶನಾಮ್ ಜೂನಾ ಅಖಾಡ'ದ ಕೇಂದ್ರ ಕಚೇರಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ಅಖಾಡ ಈ ಮೊದಲು ತಿಳಿಸಿತ್ತು.

ಪಾಳುಬಿದ್ದಿದ್ದ ಶಿವಾಲಯ ಶುದ್ಧೀಕರಣ

ಅಲಿಗಢ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಮುಸ್ಲಿಂ ಬಹುಸಂಖ್ಯಾತ ಪ್ರದೇಶದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿ ಪಾಳುಬಿದ್ದಿದ್ದ ಶಿವ ದೇವಾಲಯವನ್ನು ಬಲಪಂಥೀಯ ಸಂಘಟನೆಗಳ ಮುಖಂಡರು, ಕೆಲ ಸ್ಥಳೀಯ ಬಿಜೆಪಿ ನಾಯಕರು ಪುನಃ ತೆರೆದು, ಶುದ್ಧೀಕರಣ ಕಾರ್ಯಗಳನ್ನು ನೆರವೇರಿಸಿ ಹನುಮಾನ್ ಚಾಲೀಸ ಪಠಿಸಿದರು.

ಬಜರಂಗದಳ ಮತ್ತು ಅಖಿಲ ಭಾರತ ಕರ್ಣಿ ಸೇನಾ ಗುಂಪುಗಳು ಈ ಕಾರ್ಯಕ್ರಮ ಆಯೋಜಿಸಿದ್ದವು. ಕೆಲ ಸ್ಥಳೀಯರೂ ಇದರಲ್ಲಿ ಭಾಗಿಯಾಗಿದ್ದರು. ಸ್ಥಳದಲ್ಲಿ ಬಿಗಿ ಭದ್ರತೆ ಒದಗಿಸಲಾಗಿತ್ತು.

'ಪೂಜಾ ಸ್ಥಳಗಳನ್ನು ಶೋಧಿಸುವ ವೇಳೆ ನಮ್ಮ ಸಂಘಟನೆಯ ಸದಸ್ಯರು ಈ ಶಿವ ಮಂದಿರವನ್ನು ಬುಧವಾರ ಗುರುತಿಸಿದರು' ಎಂದು ಅಖಿಲ ಭಾರತ ಕರ್ಣಿ ಸೇನಾದ ರಾಜ್ಯ ಕಾರ್ಯದರ್ಶಿ ಜ್ಞಾನೇಂದ್ರ ಸಿಂಗ್ ಚೌಹಾಣ್ ತಿಳಿಸಿದರು.

ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ 318 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

318 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಕೆಂಗೇರಿ: ಆರ್.ವಿ ಎಂಜಿನಿಯರಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ 209 ಸ್ನಾತಕೋತ್ತರ ಎಂಜಿನಿಯರಿಂಗ್ ಮತ್ತು ಸ್ನಾತಕೋತ್ತರ ಕಂಪ್ಯೂಟರ್ ಅಪ್ಲಿಕೇಷನ್ಸ್ ಕೋರ್ಸ್‌ನ 109 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ಆರ್.ಪರಶುರಾಮನ್, 'ತಂತ್ರಜ್ಞಾನ ಕ್ಷೇತ್ರದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಭಾರತವು ಪರ್ವ ಕಾಲದಲ್ಲಿದೆ. ದೇಶೀಯ ಕೈಗಾರಿಕೆಗಳಿಗೆ ಉತ್ತೇಜನ ನೀಡುತ್ತಿರುವ 'ಮೇಕ್ ಇನ್ ಇಂಡಿಯಾ'ದಂತಹ ಯೋಜನೆಗಳು ನವ ಉದ್ಯಮ ಹಾಗೂ ಉದ್ಯಮಿಗಳಿಗೆ ಪ್ರೋತ್ಸಾಹದಾಯಕವಾಗಿದೆ' ಎಂದರು.

'ಸಂಶೋಧನೆ ಮೂಲಕ ತಾಂತ್ರಿಕ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗೆ ಇದು ಅಮೃತ ಕಾಲ. ವಿದ್ಯಾರ್ಥಿಗಳು ಪರಿಶ್ರಮ ಹಾಗೂ ನಿರ್ದಿಷ್ಟ ಗುರಿಯೊಂದಿಗೆ ಸಂಶೋಧನೆಗೆ ಮುಂದಾಗಬೇಕು' ಎಂದು ಸಲಹೆ ಮಾಡಿದರು.

ಎಂಜಿನಿಯರಿಂಗ್ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಚಿನ್ನ, ಬೆಳ್ಳಿ ಪದಕ ನೀಡಿ ಗೌರವಿಸಲಾಯಿತು. ಶ್ರೇಷ್ಠ ಶೈಕ್ಷಣಿಕ ಸಾಧನೆಗಾಗಿ 'ಹೈವೇ ತಂತ್ರಜ್ಞಾನ' ವಿಭಾಗದ ವಿದ್ಯಾರ್ಥಿನಿ ಟಿ.ವೈ.ಪಾರ್ನಿಕಾ ಅವರಿಗೆ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಆರ್‌ಎಸ್‌ಎಸ್‌ಟಿ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಸಹಾಯಕ ಕಾರ್ಯದರ್ಶಿ ನಿಖಿಲ್ ಮೂರ್ತಿ, ಪ್ರಾಂಶುಪಾಲ ಎನ್. ಸುಬ್ರಮಣ್ಯ, ಉಪ ಪ್ರಾಂಶುಪಾಲರಾದ ಗೀತಾ ಉಪಸ್ಥಿತರಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಚೂರಿಯಿಂದ ಮಾಡಿದ ಗಾಯ ಮಾಯಬಹುದು, ಆದರೆ ನಾಲಿಗೆಯಿಂದ ಮಾಡಿದ ಗಾಯ ಮಾಯುವುದು ಕಷ್ಟ.

– ಅರಿಸ್ಟಾಟಲ್

ದೆಹಲಿ ವಿಧಾನಸಭಾ ಚುನಾವಣೆ ತ್ರಿಕೋನ ಸ್ಪರ್ಧೆಗೆ ಕಣ ಅಣಿ

2025ರ ಆರಂಭದಲ್ಲಿ ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಯು ಎಎಪಿ, ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗಲಿದೆ ಎಂಬುದು ಈಗ ಸ್ಪಷ್ಟವಾಗಿದೆ. ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಕಾಂಗ್ರೆಸ್ ಜೊತೆ ಚುನಾವಣಾ ಹೊಂದಾಣಿಕೆ ಇಲ್ಲ ಎಂಬುದನ್ನು ಖಚಿತ ಪಡಿಸಿದ್ದಾರೆ. ಕೇಜ್ರಿವಾಲ್ ನಿಲುವಿಗೆ ಎಎಪಿಯ ಇತರ ಮುಖಂಡರೂ ಸಹಮತ ವ್ಯಕ್ತಪಡಿಸಿದ್ದಾರೆ. ಹಿಂದಿನ ವಿಧಾನಸಭಾ ಚುನಾವಣೆಗಳಲ್ಲಿ ತಾನು ಏಕಾಂಗಿಯಾಗಿ ಸ್ಪರ್ಧಿಸಿ ಜಯ ಗಳಿಸಿರುವ ಕಾರಣಕ್ಕೆ ಈ ಬಾರಿಯ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಅಗತ್ಯ ತನಗೆ ಇಲ್ಲ ಎಂದು ಎಎಪಿ ಹೇಳಿದೆ. ಎಎಪಿ ತನ್ನ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಕೂಡ ಬಿಡುಗಡೆ ಮಾಡಿದೆ. ಇತ್ತ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳೂ ತಮ್ಮ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡತೊಡಗಿವೆ. ಸಂಸದರಾಗಿದ್ದ ಸಂದೀಪ್ ದೀಕ್ಷಿತ್ ಅವರು ನವದೆಹಲಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಹುರಿಯಾಳಾಗಿ, ಎಎಪಿಯ ಕೇಜ್ರಿವಾಲ್ ವಿರುದ್ಧ ಕಣಕ್ಕೆ ಇಳಿಯಲಿದ್ದಾರೆ ಎಂಬುದು ಕಾಂಗ್ರೆಸ್ ಬಿಡುಗಡೆ ಮಾಡಿರುವ ಅಭ್ಯರ್ಥಿಗಳ ಪಟ್ಟಿಯಿಂದ ಗೊತ್ತಾಗುತ್ತದೆ. ದೆಹಲಿಯ ಉಪಮುಖ್ಯಮಂತ್ರಿ ಆಗಿದ್ದ ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರು ಕ್ಷೇತ್ರ ಬದಲಾವಣೆ ಮಾಡಿದ್ದು, ಸುರಕ್ಷಿತ ಕ್ಷೇತ್ರವೊಂದನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅವರ ಈ ನಡೆಯು ಟೀಕೆಗಳಿಗೂ ಆಹಾರವಾಗಿದೆ. ದೆಹಲಿಯ ಇತರ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಯಾವ ಪಕ್ಷದಿಂದ ಯಾರು ಕಣದಲ್ಲಿ ಇರಲಿದ್ದಾರೆ ಎಂಬುದು ಶೀಘ್ರವೇ ಸ್ಪಷ್ಟವಾಗಲಿದೆ.

ಅಸ್ತಿತ್ವ ಸ್ಥಾಪನೆಗೆ ಕಾಂಗ್ರೆಸ್ ಯತ್ನಿಸಲಿದ್ದು, ಮಹತ್ವಾಕಾಂಕ್ಷಿಯಾಗಿರುವ ಬಿಜೆಪಿಯು ಎಎಪಿಗೆ ಪ್ರಬಲ ಪೈಪೋಟಿ ನೀಡಲು ಎಲ್ಲ ಪ್ರಯತ್ನ ನಡೆಸಲಿದೆ

ವಿಧಾನಸಭಾ ಚುನಾವಣೆಯು ಫೆಬ್ರುವರಿಯಲ್ಲಿ ನಡೆಯುವ ನಿರೀಕ್ಷೆ ಇದೆ. ಆದರೆ ಚುನಾವಣಾ ಪ್ರಚಾರ ಈಗಾಗಲೇ ಶುರುವಾಗಿದೆ. ಲೋಕಸಭಾ ಚುನಾವಣೆಯಲ್ಲಿ ಮಿತ್ರಪಕ್ಷಗಳಾಗಿ ಕಣಕ್ಕೆ ಇಳಿದಿದ್ದ ಕಾಂಗ್ರೆಸ್ ಮತ್ತು ಎಎಪಿ ಈಗ ಎದುರಾಳಿಗಳಾಗಿ ಕಣದಲ್ಲಿ ಇರಲಿವೆ. ಬಹುಶಃ, ಮೈತ್ರಿಯು ಎರಡೂ ಪಕ್ಷಗಳಿಗೆ ಹೆಚ್ಚಿನ ಲಾಭ ತಂದುಕೊಡದ ಕಾರಣಕ್ಕೆ ಅವು ಈ ತೀರ್ಮಾನಕ್ಕೆ ಬಂದಿರಬಹುದು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ದೆಹಲಿಯ ಎಲ್ಲ ಏಳು ಸ್ಥಾನಗಳಲ್ಲಿ ಗೆದ್ದಿದೆ, ಅಂದಾಜು ಶೇಕಡ 55ರಷ್ಟು ಮತಗಳನ್ನು ಪಡೆದಿದೆ. ಕಾಂಗ್ರೆಸ್ ಮತ್ತು ಎಎಪಿ 'ಇಂಡಿಯಾ' ಮೈತ್ರಿಕೂಟದಲ್ಲಿ ಇವೆಯಾದರೂ ಅವುಗಳ ನಡುವೆ ಪರಸ್ಪರ ಸಹಕಾರಕ್ಕಿಂತ ಸ್ಪರ್ಧೆಯೇ ಹೆಚ್ಚಿತ್ತು. ಕಾಂಗ್ರೆಸ್ ಜೊತೆಗಿನ ಹೊಂದಾಣಿಕೆಯಿಂದ ತನಗೆ ನಿರ್ದಿಷ್ಟವಾಗಿ ಸಿಗಬಹುದಾದ ಪ್ರಯೋಜನ ಏನು ಎಂಬುದು ಎಎಪಿಗೆ ಸ್ಪಷ್ಟವಾಗಿಲ್ಲ. ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಂಡರೆ ತನ್ನ ಕೆಲವು ಮತದಾರರು ದೂರ ಸರಿಯಬಹುದು ಎಂದು ಎಎಪಿಗೆ ಅನ್ನಿಸಿರಬಹುದು. ಕೆಲವು ವಿಷಯಗಳಲ್ಲಿ ನಿರ್ದಿಷ್ಟವಾದ ನಿಲುವು ತಳೆಯುವ ಮೂಲಕ ಹಿಂದೂ ಮತಬ್ಯಾಂಕ್ ಸೆಳೆಯುವ ಯತ್ನವನ್ನು ಎಎಪಿ ನಡೆಸಿದೆ. ಆ ಮತಗಳನ್ನು ಎಎಪಿ ಕಳೆದುಕೊಂಡರೆ ಅದರ ಲಾಭ ಬಿಜೆಪಿಗೆ ಸಿಗಬಹುದು. ತನ್ನ ನೇತೃತ್ವದ ಸರ್ಕಾರದ ಸಾಧನೆಗಳು, ತನ್ನ ಮುಖಂಡರನ್ನು ಕೇಂದ್ರದ ತನಿಖಾ ಸಂಸ್ಥೆಗಳು ಕಿರುಕುಳಕ್ಕೆ ಗುರಿಪಡಿಸಿದ್ದುದು, ಕೇಂದ್ರ ಸರ್ಕಾರದ ಜೊತೆಗಿನ ಸಂಘರ್ಷವನ್ನು ಚುನಾವಣಾ ಪ್ರಚಾರದಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲು ಎಎಪಿ ತೀರ್ಮಾನಿಸಿರುವಂತೆ ಕಾಣುತ್ತಿದೆ. ಅಧಿಕಾರಕ್ಕೆ ಮರಳಿದರೆ ಮಹಿಳೆಯರಿಗೆ ಕೆಲವು ಸೌಲಭ್ಯಗಳನ್ನು ಕಲ್ಪಿಸುವುದು ಸೇರಿದಂತೆ ಕೆಲವು ಯೋಜನೆಗಳನ್ನು ಜಾರಿಗೆ ತರುವುದಾಗಿ ಎಎಪಿ ಘೋಷಿಸಿದೆ. ಹಾಲಿ ಶಾಸಕರ ಪೈಕಿ ಮೂರನೆಯ ಒಂದರಷ್ಟು ಮಂದಿಯನ್ನು ಕೈಬಿಟ್ಟಿರುವ ಎಎಪಿಯು ಬಿಜೆಪಿ ಹಾಗೂ ಕಾಂಗ್ರೆಸ್ಸಿನಿಂದ ಬಂದಿರುವ ಕೆಲವರಿಗೆ ಟಿಕೆಟ್ ನೀಡಿದೆ. ತತ್ವ ಆಧಾರಿತ ರಾಜಕಾರಣ ತನ್ನದು ಎಂದು ಎಎಪಿ ಹೇಳಿಕೊಳ್ಳುತ್ತದೆ ಯಾದರೂ ಇಂತಹ ಕೆಲವು ಹೊಂದಾಣಿಕೆಗಳನ್ನು ಆ ಪಕ್ಷವು ಮಾಡಿಕೊಂಡಿದೆ.

ಆಡಳಿತವಿರೋಧಿ ಅಲೆ, ಎಎಪಿ ನೇತೃತ್ವದ ಸರ್ಕಾರದ ವಿರುದ್ಧವಾಗಿ ಬಂದಿರುವ ಭ್ರಷ್ಟಾಚಾರದ ಆರೋಪಗಳ ಪ್ರಯೋಜನವನ್ನು ಪಡೆದುಕೊಳ್ಳಲು ಕಾಂಗ್ರೆಸ್ ಹಾಗೂ ಬಿಜೆಪಿ ಯತ್ನ ನಡೆಸಿವೆ. ದೆಹಲಿ ವಿಧಾನಸಭೆಯಲ್ಲಿ ಕಾಂಗ್ರೆಸ್ಸಿಗೆ ಅಸ್ತಿತ್ವವೇ ಇಲ್ಲ. ಹೀಗಾಗಿ ಅಲ್ಲಿ ಅಸ್ತಿತ್ವ ಸ್ಥಾಪನೆಗೆ ಕಾಂಗ್ರೆಸ್ ಯತ್ನ ನಡೆಸಲಿದೆ. ಆದರೆ ಬಿಜೆಪಿ ಹೆಚ್ಚು ಮಹತ್ವಾಕಾಂಕ್ಷೆ ಹೊಂದಿದೆ. ಅದು ಎಎಪಿಗೆ ಪ್ರಬಲ ಪೈಪೋಟಿ ನೀಡಲು ಎಲ್ಲ ಬಗೆಯ ಪ್ರಯತ್ನ ನಡೆಸಲಿದೆ.

ಬೆಳಗಾವಿ ಅಧಿವೇಶನದಲ್ಲಿ ಗಾಂಧೀಜಿ ನೀಡಿದ ಸಂದೇಶ ಇಂದಿಗಷ್ಟೇ ಅಲ್ಲ ನಾಳೆಗೂ ಪ್ರಸ್ತುತ

ಮರೆಯಬಾರದ ಆ ಐದು ಸಂದೇಶ

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಕರ್ನಾಟಕವಷ್ಟೇ ಅಲ್ಲ ಇಡೀ ಭಾರತ ಇಂದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರನ್ನು ಮರೆಯುತ್ತಾ ಬಂದಿದೆ. ಅವರೊಬ್ಬ ದಲಿತ ವಿರೋಧಿ, ಹಿಂದೂ ವಿರೋಧಿ ಹಾಗೂ 1947ರಲ್ಲಿ ದೇಶ ವಿಭಜನೆಗೆ ಕಾರಣರಾದ ಪ್ರಮುಖ ದೋಷಿ ಎಂಬಂಥ ಸುಳ್ಳುಪ್ರಚಾರವನ್ನು ಸಹ ಕೆಲವು ಶಕ್ತಿಗಳು ಬಹಿರಂಗವಾಗಿ ಮಾಡುತ್ತಾ ಯುವಜನರಲ್ಲಿ ಅವರ ಬಗ್ಗೆ ದ್ವೇಷ ಹುಟ್ಟಿಸುವ ಪ್ರಯತ್ನ ಮಾಡುತ್ತಿವೆ. ಇಂತಹ ಅಕೃತ್ಯವನ್ನು ವೈಚಾರಿಕ ಮಾರ್ಗದ ಮೂಲಕ ನಿಲ್ಲಿಸುವ ಕಾರ್ಯವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿಲ್ಲ. ಬಿಜೆಪಿಯವರಿಗಂತೂ ಹಾಗೆ ಮಾಡುವುದು ಲಾಭದಾಯಕವಲ್ಲ. ನಮ್ಮ ದೇಶದ ಸ್ವಾತಂತ್ರ್ಯ ಸಮರಕ್ಕೆ ನಾಯಕತ್ವ ಕೊಟ್ಟು, ಅದಕ್ಕಾಗಿ ಅಪಾರ ತ್ಯಾಗ ಮಾಡಿ, ಸಂಕಷ್ಟಗಳ ಸುಳಿಯಲ್ಲಿಯೇ ಬದುಕಿದ ಇಂಥ ಮಹಾಪುರುಷರನ್ನು ದೂಷಿಸುವುದು ನಮ್ಮ ಕೃತಘ್ನ ಮನಃಸ್ಥಿತಿಗೆ ಕನ್ನಡಿ ಹಿಡಿಯುತ್ತದೆ.

ಸತ್ಯ, ಅಹಿಂಸೆ, ಸರ್ವರಿಗೂ ನ್ಯಾಯ ಎಂಬ ಆದರ್ಶಗಳನ್ನೇ ದಾರಿದೀಪವನ್ನಾಗಿಸಿಕೊಂಡು, ಬ್ರಿಟಿಷರ ಗುಲಾಮಗಿರಿಯಿಂದ ಭಾರತವನ್ನು ಮುಕ್ತಗೊಳಿಸಲು ಗಾಂಧೀಜಿ ನಡೆಸಿದ ಹೋರಾಟದ ಮಾದರಿಯು ಜಗತ್ತಿನ ಇತಿಹಾಸದಲ್ಲಿಯೇ ವಿನೂತನವಾಗಿತ್ತು. ನಮ್ಮ ಜಗತ್ತು ಯುದ್ಧ, ಯಾದವೀ ಕಲಹ, ಹತ್ಯಾಕಾಂಡಗಳನ್ನು ನೋಡುತ್ತಲೇ ಬಂದಿದೆ. ಇದಕ್ಕೆ ತದ್ವಿರುದ್ಧವಾದ ಮಾದರಿಯೊಂದನ್ನು ಜಗತ್ತಿನ ಮುಂದಿಡಲು ಗಾಂಧೀಜಿ ಹೆಣಗಿದರು. ಅವರ ನೇತೃತ್ವದ ಸ್ವಾತಂತ್ರ್ಯ ಸಂಗ್ರಾಮ ಬರೀ ರಾಜಕಾರಣದಿಂದ ಪ್ರೇರಿತವಾಗಿರಲಿಲ್ಲ. ಹಿಂದೂ– ಮುಸ್ಲಿಂ ಏಕತೆಯ ಅಡಿಪಾಯದ ಮೇಲೆ ನಿಂತ ಅಖಂಡ ಭಾರತದ ಕನಸು, ಅಸ್ಪೃಶ್ಯತಾ ನಿವಾರಣೆ ಹಾಗೂ ದಲಿತೋದ್ಧಾರದ ಆಶಯವನ್ನು ಅದು ಹೊಂದಿತ್ತು. ಹಿಂದೂ ಧರ್ಮದ ಸುಧಾರಣೆ, ಸ್ತ್ರೀಯರ ಸಬಲೀಕರಣ, ಸಮಾನತೆ, ಸಹಕಾರ, ಸಂಸ್ಕೃತಿಯನ್ನು ಬೆಳೆಸುವ ಪರಿಸರಸ್ನೇಹಿ ಅರ್ಥವ್ಯವಸ್ಥೆ, ಆರೋಗ್ಯಕರ ಜೀವನಶೈಲಿ, ಮನುಷ್ಯನ ಸರ್ವಾಂಗೀಣ ಉನ್ನತಿಗಾಗಿ ಶ್ರಮಿಸುವ 'ನಯೀ ತಾಲೀಂ' ಎಂಬ ನೂತನ ಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆ, ಸ್ವಸ್ಥ ರಾಷ್ಟ್ರೀಯತೆ, ನೈತಿಕತೆಯನ್ನು ಕೇಂದ್ರಬಿಂದುವಾಗುಳ್ಳ ಸ್ವಸುಧಾರಣೆಯೇ ಸಮಾಜ ಪರಿವರ್ತನೆಯ ಮೂಲ ಎಂಬ ಆಚಾರತತ್ವವನ್ನು ಅದು ಒಳಗೊಂಡಿತ್ತು.

ಇಷ್ಟೆಲ್ಲ ಸಾಮಾಜಿಕ, ಆಧ್ಯಾತ್ಮಿಕ ಆಯಾಮಗಳನ್ನು ಆಧಾರವಾಗಿಟ್ಟು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮತ್ತೊಬ್ಬ ನಾಯಕ ಇಡೀ ಜಗತ್ತಿನ ಆಧುನಿಕ ಇತಿಹಾಸದಲ್ಲಿ ಸಿಗುವುದಿಲ್ಲ. ಸಂತನಂತೆ ಬದುಕಿದ ಈ ಹಿರಿಯ ಜೀವ ತನಗಾಗಿ ಅಥವಾ ತನ್ನ ಕುಟುಂಬದವರಿಗಾಗಿ ಅಧಿಕಾರ ಪಡೆಯಲು ರಾಜಕಾರಣ ನಡೆಸಲಿಲ್ಲ. ಕೊನೆಗೆ ತನ್ನ ಆದರ್ಶಗಳನ್ನು ದ್ವೇಷಿಸುವ ಕುತಂತ್ರಿಗಳ ಗುಂಡಿಗೆ ಬಲಿಯಾಗಿ ಅವರು ಹುತಾತ್ಮರಾಗಬೇಕಾಯಿತು.

ಕರ್ನಾಟಕಕ್ಕೂ ಗಾಂಧೀಜಿಗೂ ಅನ್ಯೋನ್ಯವಾದ ಸಂಬಂಧ. 1915– 37ರ ಅವಧಿಯಲ್ಲಿ ಅವರು 19 ಬಾರಿ ನಮ್ಮ ನಾಡಿಗೆ ಭೇಟಿ ಕೊಟ್ಟಿದ್ದರು. ತಮ್ಮ ಇಡೀ ಜೀವನದಲ್ಲಿ ಅವರು ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದು ಒಂದೇ ಬಾರಿ. ಅದೂ 1924ರಲ್ಲಿ ನಮ್ಮ ಬೆಳಗಾವಿಯಲ್ಲಿ ಜರುಗಿದ ಅಧಿವೇಶನದಲ್ಲಿ ಎಂಬುದು ಕರ್ನಾಟಕದ ಸೌಭಾಗ್ಯ. ಆಗ ಸ್ವಾತಂತ್ರ್ಯ ಚಳವಳಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಸಿಲುಕಿತ್ತು. ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ನಂತರ ಬ್ರಿಟಿಷ್ ಆಡಳಿತದ ವಿರುದ್ಧ ದೇಶದಲ್ಲಿ ಆಕ್ರೋಶ ಮನೆಮಾಡಿತ್ತು. ಅಸಹಕಾರ ಆಂದೋಲನವು ಹಿಂಸಾತ್ಮಕ ತಿರುವು ಪಡೆದದ್ದರಿಂದ ಜನರಲ್ಲಿ ನಿರಾಸೆಯ ಕಾರ್ಮೋಡ ಕವಿದಿತ್ತು ಹಾಗೂ ಭವಿಷ್ಯದ ದಿಕ್ಕು ತಿಳಿಯದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲಲ್ಲಿ ಹಿಂದೂ– ಮುಸ್ಲಿಂ ಕಲಹದ ಕಿಡಿಗಳು ಎದ್ದಿದ್ದವು. ಕಾಂಗ್ರೆಸ್ ಪಕ್ಷದಲ್ಲಿಯೇ ಒಡಕು ಹುಟ್ಟಿಕೊಂಡಿತ್ತು.

ಇಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿ, 39ನೇ ವಾರ್ಷಿಕ ಕಾಂಗ್ರೆಸ್ ಅಧಿವೇಶನ ಕರ್ನಾಟಕದಲ್ಲಿ ನಡೆಯಬೇಕು, ಅದರಲ್ಲೂ ಬೆಳಗಾವಿಯಲ್ಲಿ ಜರುಗಬೇಕು, ಗಾಂಧೀಜಿಯೇ ಅದರ ಅಧ್ಯಕ್ಷತೆ ವಹಿಸಬೇಕು ಎಂದು ಗಂಗಾಧರರಾವ್ ದೇಶಪಾಂಡೆ ಅವರಂತಹ ಧುರೀಣರು ಪ್ರಯತ್ನ ನಡೆಸಿದರು. 1924ರ ಡಿಸೆಂಬರ್ 26, 27ರಂದು ಜರುಗಿದ ಈ ಅಧಿವೇಶನದ ಇತಿಹಾಸವನ್ನು ಹುಬ್ಬಳ್ಳಿ-ಧಾರವಾಡದ ಹಿರಿಯ ಪತ್ರಕರ್ತ ಮನೋಜ ಪಾಟೀಲ ತಮ್ಮ ಪುಸ್ತಕದಲ್ಲಿ ದಾಖಲೆಸಮೇತ ಅತ್ಯಂತ ರೋಚಕವಾಗಿ ಬರೆದಿದ್ದಾರೆ. ಸಮಾಜ ಸುಧಾರಕ ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ ಸಂಪಾದಕತ್ವದಲ್ಲಿ ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ ಹೊರತಂದ 'ಗಾಂಧಿ ಮತ್ತು ಕರ್ನಾಟಕ' ಗ್ರಂಥದಲ್ಲಿಯೂ ಈ ಅಧಿವೇಶನದ ವಿಸ್ತೃತ ವರ್ಣನೆ ಇದೆ. ನೂರು ವರ್ಷ ಕಳೆದರೂ ಅಧಿವೇಶನದ ಐದು ಸಂದೇಶಗಳು ಇಂದಿಗೂ ನಾಳೆಗೂ ಪ್ರಸ್ತುತವಾಗಿವೆ.

ಒಂದು: ಇಂದು ಕಾಂಗ್ರೆಸ್, ಬಿಜೆಪಿ ಸೇರಿದಂತೆ ಯಾವುದೇ ಪಕ್ಷ ತನ್ನ ಸಭೆ, ಕಾರ್ಯಕ್ರಮಗಳಿಗೆ ಲೆಕ್ಕವಿಲ್ಲದಂತೆ ಹಣ ಖರ್ಚು ಮಾಡುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಗಾಂಧೀಜಿಯ ಒತ್ತಾಯದಿಂದಾಗಿ ಬೆಳಗಾವಿ ಅಧಿವೇಶನವು ನಂಬಲಾರದಷ್ಟು ಸರಳವಾಗಿ ಜರುಗಿತು. ಅಂತಹ ಸರಳತೆ ಈಗಿನ ರಾಜಕಾರಣದಲ್ಲಿ ಏಕೆ ಕಣ್ಮರೆಯಾಗಿದೆ?

ಎರಡು: ಗಾಂಧೀಜಿಯ ಅಧ್ಯಕ್ಷೀಯ ಭಾಷಣವನ್ನು ಓದಿದರೆ ಅದರಲ್ಲಿನ ಪ್ರಾಮಾಣಿಕತೆ, ಆತ್ಮಪರೀಕ್ಷೆ, ಸತ್ಯನಿಷ್ಠೆ, ತಮ್ಮ ವಿರೋಧಿಗಳನ್ನೂ ಗೌರವಿಸಿ ಪಕ್ಷ ಹಾಗೂ ದೇಶದಲ್ಲಿ ಒಗ್ಗಟ್ಟು ಬೆಳೆಸುವ ಅವರ ಪ್ರಯತ್ನಗಳು ಅಚ್ಚರಿ ಮೂಡಿಸುತ್ತವೆ. 'ನನ್ನ ವಿರೋಧಿಗಳು ರಾಷ್ಟ್ರದ್ರೋಹಿಗಳಲ್ಲ. ನನ್ನನ್ನು ಟೀಕಿಸುವವರಿಗೂ ಬೆಂಬಲಿಸುವವರಿಗೂ ಕಾಂಗ್ರೆಸ್‌ನಲ್ಲಿ ಸಮಾನ ಸ್ಥಾನವಿದೆ. ಪರಸ್ಪರ ಸಹಿಷ್ಣುತೆ ಹಾಗೂ ಸಹಕಾರವು ರಾಜಕಾರಣದಲ್ಲಿ ಅಹಿಂಸೆಯ ಲಕ್ಷಣಗಳು' ಎಂದು ಅವರು ಹೇಳಿದ್ದರು. ಹೀಗೆ ವಿಚಾರ ಮಾಡುವ ನಾಯಕರು ಇಂದು ಇದ್ದಾರೆಯೇ?

ಮೂರು: ಬ್ರಿಟಿಷರ ಆರ್ಥಿಕ ಶೋಷಣೆಯ ವಿರುದ್ಧ ಭಾರತೀಯರನ್ನು ಒಂದುಗೂಡಿಸಲು, ಬಡವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಖಾದಿ, ಚರಕ ಮತ್ತು ಗ್ರಾಮೋದ್ಯೋಗ ಒಂದು ಪ್ರಬಲ ಅಸ್ತ್ರ ಎಂಬ ತಮ್ಮ ಸಿದ್ಧಾಂತವನ್ನು ಗಾಂಧೀಜಿ ಬೆಳಗಾವಿಯಲ್ಲಿಯೂ ವಿವರಿಸಿದರು. ಆಧುನಿಕ ತಂತ್ರಜ್ಞಾನದಿಂದ ಇಂದಿನ ಭಾರತ ಆಮೂಲಾಗ್ರವಾಗಿ ಬದಲಾಗಿದ್ದರೂ ಆರ್ಥಿಕ ವ್ಯವಸ್ಥೆ ಯಾವಾಗಲೂ ಅಹಿಂಸಾತ್ಮಕವಾಗಿ ಇರಬೇಕು, ಸಮಾನತೆಯನ್ನು ಬೆಳೆಸುವಂಥದ್ದಾಗಿರಬೇಕು ಎಂಬ ಖಾದಿಯ ಮೂಲ ಸಂದೇಶ ಈಗಲೂ ಅರ್ಥಪೂರ್ಣವಾಗಿಯೇ ಇದೆ ಅಲ್ಲವೇ?

ನಾಲ್ಕು: ಹಿಂದೂ– ಮುಸ್ಲಿಂ ಏಕತೆಗಾಗಿ ಗಾಂಧೀಜಿ ಕೊಟ್ಟ ಮಹಾಮಂತ್ರವೆಂದರೆ 'ಪ್ರತಿ ಹಿಂದೂ ವ್ಯಕ್ತಿಯು ಮುಸಲ್ಮಾನರ ಪಕ್ಷಪಾತಿಯಾಗಬೇಕು ಹಾಗೂ ಪ್ರತಿ ಮುಸಲ್ಮಾನ ವ್ಯಕ್ತಿಯು ಹಿಂದೂಗಳ ಪಕ್ಷಪಾತಿಯಾಗಬೇಕು'. ಈ ರೀತಿ ವಿವಿಧ ಧಾರ್ಮಿಕ ಸಮುದಾಯದವರು ಪರಸ್ಪರರನ್ನು ತಿಳಿದುಕೊಂಡು, ಗೌರವಿಸುತ್ತಾ ಸಹಬಾಳ್ವೆ ನಡೆಸಿದರೆ ಮಾತ್ರ ರಾಷ್ಟ್ರೀಯ ಏಕತೆ, ಸಾಮಾಜಿಕ ಭಾವೈಕ್ಯ ಸಾಧ್ಯ ಎಂಬ ಅವರ ವಿಚಾರ ಇಂದು ಇಡೀ ಜಗತ್ತಿಗೆ ಮಾದರಿ ಎನಿಸುವುದಿಲ್ಲವೇ?

ಐದು: ಅಂಬೇಡ್ಕರ್ ಅವರು ರಾಷ್ಟ್ರಮಟ್ಟದಲ್ಲಿ ಸಾರ್ವಜನಿಕ ಜೀವನಕ್ಕೆ ಪದಾರ್ಪಣೆ ಮಾಡುವುದಕ್ಕಿಂತ ಅನೇಕ ವರ್ಷಗಳ ಹಿಂದೆಯೇ ಗಾಂಧೀಜಿ ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಟ ನಡೆಸಿದ್ದರು. ಇದಕ್ಕೆ ಬೆಳಗಾವಿ ಅಧಿವೇಶನವೇ ನಿದರ್ಶನ. ಅವರು ಪ್ರಖರವಾಗಿ ಹೇಳಿದ್ದ ಮಾತುಗಳು ಹೀಗಿದ್ದವು: 'ಅಸ್ಪೃಶ್ಯತೆ ಒಂದು ವಿಷ. ಅದನ್ನು ಕಿತ್ತುಹಾಕದೇ ಹೋದರೆ ಅದು ಸ್ವರಾಜ್ಯಕ್ಕೆ ಒಂದು ಆತಂಕ ಹಾಗೂ ಹಿಂದೂ ಸಮಾಜಕ್ಕೆ ಘಾತಕ. ಕಾಂಗ್ರೆಸ್ಸಿಗರಾದ ಹಿಂದೂಗಳು ಈ ಆತಂಕವನ್ನು ತೆಗೆದುಹಾಕಬೇಕು. ರಾಜಕೀಯ ಗುರಿಗಳನ್ನು ಸಾಧಿಸಲು ದಲಿತವರ್ಗವನ್ನು ಉಪಯೋಗಿಸಿಕೊಳ್ಳುತ್ತಿರುವ ಮಾತು ಕೇಳಿಬರುತ್ತಿದೆ. ಈ ಬಗ್ಗೆ ಹಿಂದೂಗಳಿಗೆ ನಾನು ಎಚ್ಚರಿಕೆ ಕೊಡಬಯಸುತ್ತೇನೆ. ಅಸ್ಪೃಶ್ಯತಾ ನಿವಾರಣೆಯ ಮೂಲಕ ದಲಿತ ವರ್ಗಗಳಿಗೆ ಮತ್ತೆ ಸ್ವಾತಂತ್ರ್ಯವನ್ನು ತಂದುಕೊಡುವ ವರೆಗೆ ಹಿಂದೂಗಳಿಗೆ ಸ್ವರಾಜ್ಯವನ್ನು ಕೇಳುವ ಹಕ್ಕಿಲ್ಲ'.

ಅಸ್ಪೃಶ್ಯತಾ ನಿವಾರಣೆಯು ಕೃತಿಯಿಂದ ಸಾಧ್ಯವೇ ವಿನಾ ಭಾಷಣದಿಂದಲ್ಲ ಎಂಬುದು ಗಾಂಧೀಜಿಯ ನಂಬಿಕೆಯಾಗಿತ್ತು. ಅದಕ್ಕಾಗಿ ಅಧಿವೇಶನ ಸ್ಥಳದಲ್ಲಿ ಸಫಾಯಿ ಕೆಲಸ ಮಾಡುವ ಕಾಂಗ್ರೆಸ್ ಸೇವಾದಳದ ಸ್ವಯಂಸೇವಕರಲ್ಲಿ ಮೇಲ್ವರ್ಗದವರೇ ದೊಡ್ಡ ಸಂಖ್ಯೆಯಲ್ಲಿ ಇರಬೇಕು ಎಂದು ಕಡ್ಡಾಯ ಮಾಡಿದರು. ಹೀಗಾಗಿ, ಎನ್.ಎಸ್.ಹರ್ಡೀಕರ್ ಅವರ ನೇತೃತ್ವದಲ್ಲಿ ಕಾಕಾ ಕಾರಖಾನೀಸ, ಮನೋಜ ಪಾಟೀಲ ಅವರ ಅಜ್ಜ ವಾಮನರಾವ್ ದೇಸಾಯಿ ಅವರಂತಹ ಅನೇಕ ಸವರ್ಣೀಯರು ಸಂತೋಷದಿಂದ ಪಾಯಖಾನೆ ಸ್ವಚ್ಛ ಮಾಡಿದರಷ್ಟೇ ಅಲ್ಲ ಜೀವನದುದ್ದಕ್ಕೂ ದಲಿತೋದ್ಧಾರದ ಕಾರ್ಯ ನಡೆಸಿದರು. ಈ ರೀತಿ ಸಮಾಜದಲ್ಲಿ ಹೊಸ ಜಾಗೃತಿ ತಂದ ಬೆಳಗಾವಿ ಅಧಿವೇಶನವನ್ನು, ಅದರ ಆದರ್ಶಗಳನ್ನು ನಾವು ಮರೆಯಬಾರದು.

ಚುರುಮುರಿ

ಬ್ಯಾಗು ಪುರಾಣ!

• ಬಿ.ಎನ್. ಮಲ್ಲೇಶ್

'**ಬ್ಯಾಗ್** ಬೇಕೇ ಬ್ಯಾಗೂ... ಬೆಳಗಾವಿ ಬ್ಯಾಗು, ಬೆಂಗಳೂರು ಬ್ಯಾಗು, ಮಂಡ್ಯ ಬ್ಯಾಗೂ...' ಎಂದ ತೆಪರೇಸಿ. 'ಬೆಳಗಾವಿ ಬ್ಯಾಗಲ್ಲಿ ಏನೈತಲೆ ತೆಪರ?' ದುಬ್ಬೀರ ಕೇಳಿದ.

'ಅದ್ರಲ್ಲಿ ಜಮೀರಣ್ಣ, ಯತ್ನಾಳು ಗುಸಗುಸ, ಪಿಸಪಿಸ ಮಾತಾಡೋದೈತಿ'.

'ಹಂಗಾದ್ರೆ ಪ್ರಿಯಾಂಕಾ ಗಾಂಧಿ ಪ್ಯಾಲೆಸ್ಟೀನ್ ಬ್ಯಾಗ್ ಹಾಕ್ಕಂಡಿದ್ರಲ್ಲ, ಅದ್ರಾಗೇನಿತ್ತು?'

'ಅದ್ರಲ್ಲಿ ಇಡೀ ಜಗತ್ತೇ ಇತ್ತು'.

'ಸರಿ, ಈಗ ಮಂಡ್ಯ ಬ್ಯಾಗಲ್ಲಿ ಏನೈತಿ?'.

'ಅದ್ರಲ್ಲಿ ಭರ್ಜರಿ ಅ್ಯಂಡ್ ಸರ್ಜರಿ! ಸಮ್ಮೇಳನದ ಊಟ ಭರ್ಜರಿ, ಕವಿಗಳಿಗೆ ಸರ್ಜರಿ!'

'ಸರ್ಜರಿನಾ? ಏನು ಹಂಗಂದ್ರೆ?'

'ಅಂದ್ರೇ... ಕವಿಗಳು ಕವನ ಓದಾಕೆ ಬರೀ ಮೂರೇ ನಿಮಿಷ ಟೈಂ ಕೊಟ್ಟಾರಂತೆ. ಅವರು ಕೆಮ್ಮಾಕೆ, ಕ್ಯಾಕರಿಸಾಕೇ ಮೂರು ನಿಮಿಷ ಬೇಕು, ಇನ್ನು ಕವನ ಓದೋದೆಲ್ಲಿ?'

'ಅವರು ಕೆಮ್ಮಿ, ಕ್ಯಾಕರಿಸಿದ್ದನ್ನೇ ಕವನ ಅಂದ್ಕಂಡ್ರಾತು' ಗುಡ್ಡೆ ನಕ್ಕ.

'ಅದಿರ್‍ಲಿ, ಬರೀ ಊರಿನ ಹೆಸರಿನ ಬ್ಯಾಗಷ್ಟೇ ಅದಾವೋ ಮಂದಿ ಹೆಸರಿನವೂ ಅದಾವೋ?' ದುಬ್ಬೀರ ಕೇಳಿದ.

'ಅದಾವು, ನಮೋ-ಶಾ ಬ್ಯಾಗು, ರಾಹುಲ್ ಬ್ಯಾಗು, ಬಂಡೆ ಬ್ಯಾಗು, ಬ್ರದರ್ ಬ್ಯಾಗು ಎಲ್ಲ ಅದಾವು' ಎಂದ ತೆಪರೇಸಿ.

'ಈ ಜಿ.ಟಿ.ದೇವೇಗೌಡ, ಸೋಮಶೇಖರ್ ಬ್ಯಾಗ್‌ಗಳಿಲ್ವಾ?'

'ಅವೆಲ್ಲ ಸಿದ್ರಾಮಣ್ಣ ಅವರತ್ರ ಅದಾವು'.

'ಸಿದ್ರಾಮಣ್ಣರ ಬ್ಯಾಗಲ್ಲಿ?'

'ಬರೀ ಮುಡಾ ಫೈಲದಾವು'.

'ನಮೋ-ಶಾ ಬ್ಯಾಗಲ್ಲಿ?'

'ಒಂದು ದೇಶ, ಒಬ್ಬನೇ ನಾಯಕ!'

'ಹಂಗಾರೆ ಬಂಡೆ ಬ್ಯಾಗಲ್ಲಿ ಸಿಎಂ ಕುರ್ಚಿ ಇರಬೋದಾ?' ಕೊಟ್ರೇಶಿ ಕೊಕ್ಕೆ.

'ಇರಬೋದು, ಹಂಗೇ ಬ್ರದರ್ ಬ್ಯಾಗಲ್ಲಿ ಆ ಕುರ್ಚಿ ತಪ್ಪಿಸೋದೆಂಗೆ ಅನ್ನೋದೂ ಇರಬೋದು'.

'ಎಲ್ಲ ಸರಿ, ನಿನ್ ಬ್ಯಾಗಿನಾಗೇನೈತೋ ತೆಪರಾ?' ದುಬ್ಬೀರ ಕೇಳಿದ.

'ಅವನಿಗೆ ಬ್ಯಾಗೇ ಇಲ್ಲ, ಅವ್ನು ಯಾವಾಗ್ಲೂ ಅವನೆಂಡ್ತಿ ವ್ಯಾನಿಟಿ ಬ್ಯಾಗು ಹಿಡ್ಕಂಡಿರ್ತಾನೆ' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ಅವಧಿಗಿಂತ ಗುಣಮಟ್ಟ ಮುಖ್ಯ

ನಾವು ಮನುಷ್ಯರು, ಮನುಷ್ಯರಂತೆಯೇ ವರ್ತಿಸಬೇಕು. ದೀರ್ಘಾವಧಿ ಕೆಲಸ ಮಾಡಿದ ಮಾತ್ರಕ್ಕೆ ಅದು ಉತ್ಪಾದಕ ಅಥವಾ ಗುಣಮಟ್ಟದ ಕೆಲಸವಾಗಿರುತ್ತದೆ ಮತ್ತು ಅದು ದೇಶ ಅಥವಾ ಜಗತ್ತನ್ನು ಬದಲಿಸುವ ಸಾಮರ್ಥ್ಯ ಹೊಂದಿರುತ್ತದೆ ಎಂದರ್ಥವಲ್ಲ... ಗುಣಮಟ್ಟದ ಕೆಲಸವನ್ನು ಯಾವಾಗಲೂ ನೆಮ್ಮದಿಯಿಂದ ಮತ್ತು ಶಾಂತ ಸ್ಥಿತಿಯಲ್ಲಿ ಮಾಡಬೇಕು. ಆ ಬಗೆಯ ಕೆಲಸವಷ್ಟೇ ಪರಿವರ್ತನೆ ತರಬಲ್ಲದು.

ಬಿ.ಎಸ್.ಗುಪ್ತ, ಲೇಖಕ

ಕಿಡಿನುಡಿ

ಎಂತಹ ಕೆಟ್ಟ ವ್ಯವಸ್ಥೆಯಿದು?... ಸದ್ಯಕ್ಕೆ ಶಾಲೆಯ ವಿರುದ್ಧ ಕ್ರಮ ತೆಗೆದುಕೊಳ್ಳಿ ಅಂತ ಒತ್ತಾಯಿಸಬಹುದು. ಆದರೆ ಸರ್ಕಾರಿ ಶಾಲೆಗಳನ್ನು ಸರಿಯಾಗಿ ನಡೆಸದೆ, ಶಿಕ್ಷಣವನ್ನು ಖಾಸಗಿ ಶಾಲೆಗಳ ಮೂಲಕ ಉದ್ಯಮದಂತೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ ಸರ್ಕಾರ ಮತ್ತು ಜನಪ್ರತಿನಿಧಿಗಳನ್ನು ಪ್ರಶ್ನಿಸುವುದು ಯಾವಾಗ?

(ಬೆಂಗಳೂರಿನ ಶಾಲೆಯೊಂದರಲ್ಲಿ, ಶುಲ್ಕ ಕಟ್ಟದ ಕಾರಣಕ್ಕಾಗಿ ಮಗುವನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕಲಾಗಿತ್ತು ಎಂಬ ವರದಿಗೆ ಪ್ರತಿಕ್ರಿಯೆ)

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಸೋಮವಾರ, 20-12-1999

• **ನಕ್ಸಲೀಯರ ನಿಗ್ರಹಕ್ಕೆ ರಾಜ್ಯಗಳ ಸಭೆ ವಿಶೇಷ ಪಡೆ ರಚನೆಗೆ ನಿರ್ಧಾರ**

ನವದೆಹಲಿ, ಡಿ. 19 (ಪಿಟಿಐ)– ದೇಶದ ಹಲವು ರಾಜ್ಯಗಳಲ್ಲಿ ಇರುವ ನಕ್ಸಲೀಯರ ಪಿಡುಗನ್ನು ನಿಯಂತ್ರಿಸಲು ಜಂಟಿ ಯೋಜನೆ ಹಾಗೂ ಕಾರ್ಯಾಚರಣೆ ರೂಪಿಸಲು ಸಂಬಂಧಿಸಿದ ರಾಜ್ಯಗಳ ಸಭೆ ಕರೆಯುವುದಾಗಿ ಕೇಂದ್ರ ಗೃಹ ಸಚಿವ ಎಲ್.ಕೆ ಅಡ್ವಾಣಿ ಅವರು ಇಂದು ಹೇಳಿದರು.

ಈ ಮಧ್ಯೆ, ನಕ್ಸಲೀಯರ ಉಪಟಳವನ್ನು ಮಟ್ಟಹಾಕಲು ಕೇಂದ್ರ ಸರ್ಕಾರ ಸಾಕಷ್ಟು ಹಣ ನೀಡುತ್ತಿಲ್ಲ ಎಂದು ಮಧ್ಯಪ್ರದೇಶದ ಗೃಹ ಸಚಿವ ನಂದಕುಮಾರ್ ಪಟೇಲ್ ಆಪಾದಿಸಿದ್ದಾರೆ. ಈಚೆಗೆ ನಕ್ಸಲೀಯರು ಒಬ್ಬ ಸಚಿವನನ್ನು ಅಲ್ಲಿ ಕೊಂದಿದ್ದರು.

ನಕ್ಸಲೀಯರ ಉಪಟಳವಿರುವ ರಾಜ್ಯಗಳ ಪ್ರತಿನಿಧಿಗಳ ಸಭೆಯನ್ನು ದೆಹಲಿಯಲ್ಲಿ ಕರೆಯಲಾಗುವುದು, ಈ ಸಭೆ ಬಿಹಾರ ಚುನಾವಣೆಯ ನಂತರ ನಡೆಯುವುದು ಎಂದು ಅಡ್ವಾಣಿ ಅವರು ಗಾಂಧಿನಗರದಲ್ಲಿ ಪತ್ರಕರ್ತರಿಗೆ ತಿಳಿಸಿದರು.

• **ರೈತಸಂಘ ಬಣಗಳ ಬಲಾಬಲ ಪ್ರದರ್ಶನಕ್ಕೆ ಸಜ್ಜು**

ಶಿವಮೊಗ್ಗ, ಡಿ.19– ಕರ್ನಾಟಕ ರಾಜ್ಯ ರೈತಸಂಘದ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಮತ್ತು ಕೆ.ಎಸ್. ಪುಟ್ಟಣ್ಣಯ್ಯ ನೇತೃತ್ವದ ಎದುರಾಳಿ ಬಣಗಳು ಬಲಾಬಲ ಪ್ರದರ್ಶನಕ್ಕೆ ಸಜ್ಜಾಗಿವೆ.

ಪೂರ್ಣ ರಾಜ್ಯ ಸಮಿತಿ ಸಭೆಯನ್ನು ಇವು ಅನುಕ್ರಮವಾಗಿ ನಾಳೆ ಮತ್ತು ನಾಡಿದ್ದು ಇಲ್ಲಿ ಪ್ರತ್ಯೇಕವಾಗಿ ಕರೆದಿವೆ.

ಇದರಿಂದಾಗಿ, ರೈತಸಂಘವು ಜನ್ಮತಾಳಿದ ಶಿವಮೊಗ್ಗ ಜಿಲ್ಲೆಯಲ್ಲೇ ಹೋಳಾಗುವುದು ನಿಚ್ಚಳವಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 20-12-1974

• **ಮಿಶ್ರಾ ಮೇಲೆ ಮತ್ತೆ ಅಕ್ರಮದ ಆರೋಪ**

ನವದೆಹಲಿ, ಡಿ.19– ರೈಲ್ವೆ ಮಂತ್ರಿ ಎಲ್.ಎನ್. ಮಿಶ್ರಾ ಅವರು ರಾಜೀನಾಮೆ ಕೊಡಬೇಕೆಂದು ಸಂಸತ್ತಿನ ಉಭಯ ಸದನಗಳ ವಿರೋಧ ಪಕ್ಷದ ಸದಸ್ಯರು ಇಂದು ಒತ್ತಾಯಿಸಿದರು.

ಪುದುಚೇರಿ ಲೈಸೆನ್ಸ್ ಹಗರಣ ಮತ್ತು ಭಾರತ ಸೇವಿಕ ಸಮಾಜದ ನಿಧಿ ದುರುಪಯೋಗದ ಆಪಾದನೆಗಳಿಂದ ಮಿಶ್ರಾ ಅವರನ್ನು ಲೋಕಸಭೆ ಈ ಮುನ್ನ ವಿಮುಕ್ತ ಮಾಡಿತ್ತು.

ಕಪ್ಪುಪಟ್ಟಿಗೆ ಸೇರಿದ ಸಂಸ್ಥೆಯೊಂದಕ್ಕೆ ಪಾಲಿಯಸ್ಟರ್ ಫೈಬರ್ ಆಮದಿಗಾಗಿ ಮಿಶ್ರಾ ಅವರು 1970ರಲ್ಲಿ ಲೈಸೆನ್ಸ್ ನೀಡಿದ್ದರೆಂದು ಇಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಆಪಾದಿಸಿದರು.

• **ಚುನಾವಣಾ ವೆಚ್ಚಕ್ಕೆ ಸರ್ಕಾರವೂ ಸ್ವಲ್ಪ ಹಣ ನೀಡುವ ಸಂಭವ**

ನವದೆಹಲಿ, ಡಿ.19– ಅಭ್ಯರ್ಥಿಯ ಚುನಾವಣಾ ವೆಚ್ಚದ ಒಂದು ಭಾಗವನ್ನು ಸರ್ಕಾರವೇ ವಹಿಸಿಕೊಳ್ಳುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಕಾನೂನು ಸಚಿವ ಎಚ್.ಆರ್. ಗೋಖಲೆ ಅವರು ಇಂದು ರಾಜ್ಯಸಭೆಗೆ ತಿಳಿಸಿದರು.

ಅಭ್ಯರ್ಥಿಯ ಚುನಾವಣಾ ವೆಚ್ಚದಲ್ಲಿ ಎಷ್ಟು ಭಾಗ ಹಾಗೂ ಯಾವ ಬಾಬುಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂಬುದನ್ನು ಸರ್ಕಾರ ಪರಿಶೀಲಿಸುತ್ತಿದೆಯೆಂದೂ ಸಚಿವ ಗೋಖಲೆ ಅವರು ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಮಸೂದೆ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುತ್ತಾ ಹೇಳಿದರು.

ಸಂಗತ

ಪ್ರಚಾರದ ಭರಾಟೆ: ಗುಣಮಟ್ಟಕ್ಕಿರಲಿ ಆದ್ಯತೆ

ಅಬ್ಬರದ ಪ್ರಚಾರದಲ್ಲಿ ಸಾಹಿತ್ಯದ ಗುಣಮಟ್ಟ ಕುಸಿಯಬಾರದು

• ರಾಜಕುಮಾರ ಕುಲಕರ್ಣಿ

'**ಪ್ರತಿವರ್ಷ** ಪ್ರಕಟವಾಗುವ ಸಾಹಿತ್ಯ ಕೃತಿಗಳಲ್ಲಿ ವಿಮರ್ಶೆಗೆ ಒಳಗಾಗುವ ಪುಸ್ತಕಗಳ ಸಂಖ್ಯೆ ಬಹಳಷ್ಟು ಕಡಿಮೆ. ಹೀಗಾಗಿ ಎಷ್ಟೋ ಪುಸ್ತಕಗಳು ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳದೇ ಹೋಗುತ್ತವೆ. ಹಾಗೆಂದು ಅಂತಹ ಪುಸ್ತಕಗಳನ್ನು ಟೊಳ್ಳು ಸಾಹಿತ್ಯ ಕೃತಿಗಳೆಂದು ಪರಿಗಣಿಸಬೇಕೆ?' ಎಂದು ಕೆ.ವಿ.ತಿರುಮಲೇಶ್ ಆತಂಕದಿಂದ ಪ್ರಶ್ನಿಸಿದ್ದರು. ಸದ್ಯದ ಸಾಹಿತ್ಯದ ವಾತಾವರಣವನ್ನು ಗಮನಿಸಿದರೆ, ಆತಂಕಪಡುವ ಅಗತ್ಯವಿಲ್ಲ. ಸಾಮಾಜಿಕ ಮಾಧ್ಯಮವನ್ನು ಅತ್ಯಂತ ಸಶಕ್ತವಾಗಿ ಬಳಸಿಕೊಳ್ಳುತ್ತಿರುವ ಬರಹಗಾರರು, ಮುಖ್ಯವಾಹಿನಿಯಲ್ಲಿ ಸ್ಪರ್ಧೆಗೆ ಬಿದ್ದವರಂತೆ ತಮ್ಮ ಪುಸ್ತಕಗಳ ಪ್ರಚಾರದಲ್ಲಿ ತೊಡಗಿಕೊಳ್ಳುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪುಸ್ತಕ ಬಿಡುಗಡೆಗಿಂತ ಮೊದಲು ಪುಸ್ತಕದ ಮುಖಪುಟ ಹಾಗೂ ಹಿರಿಯ ಸಾಹಿತಿಗಳ ಒಂದೆರಡು ಸಾಲಿನ ಅಭಿಪ್ರಾಯವುಳ್ಳ ಹಿಂಪುಟವನ್ನು ಸಾಮಾಜಿಕ ಮಾಧ್ಯಮದಲ್ಲಿ ಬಿಡುಗಡೆಗೊಳಿಸುವ ಹೊಸ ಸಂಪ್ರದಾಯ ಶುರುವಾಗಿದೆ. ಮನಸೆಳೆಯುವ ಸುಂದರ ಮುಖಪುಟವನ್ನು ನೋಡಿದ ತಕ್ಷಣ ಓದುಗರಲ್ಲಿ ಪುಸ್ತಕವನ್ನು ಖರೀದಿಸುವ ಕಾತರ ಮತ್ತು ಉಮೇದು ಹೆಚ್ಚುತ್ತದೆ. ಜೊತೆಗೆ 'ವಿಶೇಷ ರಿಯಾಯಿತಿ' ಎಂಬ ಗಿಮಿಕ್ ಬಹಳಷ್ಟು ಸಂದರ್ಭಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.

ಪುಸ್ತಕಗಳನ್ನು ಅದ್ದೂರಿ ಸಮಾರಂಭದಲ್ಲಿ ಬಿಡುಗಡೆ ಮಾಡುವುದು ಸಹಜ ಎನ್ನುವಂತಾಗಿದೆ. ಅತಿಥಿಗಳ ಆಯ್ಕೆಯಿಂದ ಹಿಡಿದು ಸಭಾಂಗಣ, ಊಟ ಮತ್ತು ಉಪಾಹಾರದ ಉಸ್ತುವಾರಿ ಎಲ್ಲವನ್ನೂ ಹೊರಗುತ್ತಿಗೆ ನೀಡಲಾಗುತ್ತಿದೆ. ಪುಸ್ತಕ ಬಿಡುಗಡೆಗೆ ಸೆಲೆಬ್ರಿಟಿಗಳನ್ನು ಆಹ್ವಾನಿಸಲಾಗುತ್ತಿದೆ. ಆ ದಿನ ಖರೀದಿಸಿದ ಪುಸ್ತಕಗಳಿಗೆ ವಿಶೇಷ ರಿಯಾಯಿತಿ ಎನ್ನುವ ಆಕರ್ಷಣೆ ಬೇರೆ. ಹೀಗೆ ಪುಸ್ತಕದ ಪ್ರಚಾರಕ್ಕಾಗಿ ಪ್ರಕಾಶಕರು ಮತ್ತು ಲೇಖಕರು ಹಲವು ಗಿಮಿಕ್‌ಗಳ ಮೊರೆ ಹೋಗುತ್ತಿದ್ದಾರೆ.

ಪುಸ್ತಕಗಳ ಕುರಿತು ಬರೆದದ್ದೆಲ್ಲ ಸಾಮಾಜಿಕ ಮಾಧ್ಯಮಗಳಲ್ಲಿ ವಿಮರ್ಶೆಯ ಹೆಸರಿನಲ್ಲಿ ಪ್ರಕಟವಾಗುತ್ತಿದೆ. ಲೇಖಕರ ನಡುವಣ ಕೊಡು-ಕೊಳ್ಳುವಿಕೆ ಗುಣದಿಂದಾಗಿ ವಿಮರ್ಶಾ ಲೇಖನಗಳಲ್ಲಿ ಪಾರದರ್ಶಕತೆ ಇಲ್ಲವಾಗಿದೆ. ವಿಮರ್ಶೆಯು ಪುಸ್ತಕದ ಶಕ್ತಿ ಮತ್ತು ದೌರ್ಬಲ್ಯ ಎರಡನ್ನೂ ಧ್ವನಿಸಬೇಕು. ಆತಂಕದ ಸಂಗತಿ ಎಂದರೆ, ಕೆಲವೊಮ್ಮೆ ಹಿರಿಯ ಬರಹಗಾರರು ಕೂಡ ಕಳಪೆ ಬರವಣಿಗೆಯನ್ನು ಓದಿ ಪ್ರೋತ್ಸಾಹಿಸುತ್ತಿರುವುದು. ಇನ್ನು ಕೆಲವರು ನಿಷ್ಠುರ ಏಕೆಂದು ಮೌನದ ಮೊರೆ ಹೋಗುತ್ತಾರೆ. ಹಿರಿಯ ಬರಹಗಾರರ ಈ ನಡೆ ಸಾಹಿತ್ಯದ ಗುಣಮಟ್ಟದ ಕುಸಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಹಿರಿಯ ಸಾಹಿತಿಗಳು ಎದುರಾದರೆ ಬಗಲ ಚೀಲದಿಂದ ಪುಸ್ತಕ ಕೊಟ್ಟು ಫೋಟೊ ಕ್ಲಿಕ್ಕಿಸಿಕೊಳ್ಳುವ ಖಯಾಲಿ ಕಿರಿಯ ಲೇಖಕರಲ್ಲಿ ಹೆಚ್ಚುತ್ತಿದೆ. ಕ್ಲಿಕ್ಕಿಸಿಕೊಂಡ ಫೋಟೊ ಕೆಲವೇ ಕ್ಷಣಗಳಲ್ಲಿ ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್‌ನಲ್ಲಿ ಹಂಚಿಕೆಯಾಗುತ್ತದೆ. ಇದು ಕೂಡ ಪ್ರಚಾರತಂತ್ರದ ಕಾರ್ಯವೈಖರಿ. ಯೋಚಿಸಬೇಕಾದ ವಿಷಯವೆಂದರೆ, ಅದೆಷ್ಟು ಹಿರಿಯ ಲೇಖಕರು ಗೌರವಪ್ರತಿಯ ರೂಪದಲ್ಲಿ ತಮಗೆ ತಲುಪಿದ ಪುಸ್ತಕಗಳನ್ನು ಓದುತ್ತಾರೆ ಮತ್ತು ಪ್ರತಿಕ್ರಿಯಿಸುತ್ತಾರೆ? ಪರಿಚಯದ ಹಿರಿಯ ಸಾಹಿತಿಯೊಬ್ಬರು ತಮಗೆ ತಲುಪಿದ ಗೌರವಪ್ರತಿಗಳನ್ನು ಪ್ರತಿತಿಂಗಳು ತ್ಯಾಜ್ಯವಸ್ತುವಿನಂತೆ ವಿಲೇವಾರಿ ಮಾಡುತ್ತಾರೆ ಎಂದು ಗೆಳೆಯರೊಬ್ಬರು ಮಾತಿನ ನಡುವೆ ಹೇಳಿದರು. ಆದರೆ ಕಿರಿಯ ಬರಹಗಾರರು ಮಾತ್ರ ತಮ್ಮ ಪುಸ್ತಕಗಳು ಹಿರಿಯ ಸಾಹಿತಿಗಳ ಮನೆಯ ಪುಸ್ತಕಗೂಡನ್ನು ಅಲಂಕರಿಸಿವೆ ಎಂದು ಸಂಭ್ರಮಿಸುತ್ತಾರೆ.

ತನ್ನ ಪುಸ್ತಕದ ಹಲವು ಪ್ರತಿಗಳನ್ನು ಖರೀದಿಸುವ ಇಲ್ಲವೇ ಮಾರಾಟ ಮಾಡಿಸುವ ಜವಾಬ್ದಾರಿ ಲೇಖಕನ ಹೆಗಲಿಗೇರಿದೆ. ಪ್ರಕಾಶಕರು ಕೂಡ ಹೊಸ ಲೇಖಕರ ಪುಸ್ತಕಗಳನ್ನು ಪ್ರಕಟಿಸುವಾಗ 'ಎಷ್ಟು ಪ್ರತಿಗಳನ್ನು ಮಾರಾಟ ಮಾಡುವ ಸಾಮರ್ಥ್ಯ ನಿಮಗಿದೆ?' ಎಂದು ನೇರವಾಗಿ ಪ್ರಶ್ನಿಸುತ್ತಿದ್ದಾರೆ. ಪುಸ್ತಕದ ವಿಷಯವಸ್ತು ಮತ್ತು ಗುಣಮಟ್ಟಕ್ಕಿಂತ ಲೇಖಕನ ಪುಸ್ತಕ ಮಾರಾಟದ ಸಾಮರ್ಥ್ಯ ಹಾಗೂ ಕೌಶಲ ಮುನ್ನೆಲೆಗೆ ಬಂದಿವೆ. ಲೇಖಕನಿಗಿರುವ ಜನಸಂಪರ್ಕ, ಮಿತ್ರಕೂಟ, ಪ್ರಚಾರತಂತ್ರದ ಅರಿವಿನಂತಹ ಸಂಗತಿಗಳು ಪುಸ್ತಕ ಪ್ರಕಟಣೆಯ ಬಹುಮುಖ್ಯವಾದ ಮಾನದಂಡಗಳಾಗಿವೆ. ಪರಿಣಾಮವಾಗಿ, ಲೇಖಕರು ಪುಸ್ತಕದ ಗುಣಮಟ್ಟಕ್ಕಿಂತ ಪುಸ್ತಕಗಳ ಪ್ರಚಾರ, ಮಾರಾಟ ಮತ್ತು ಪ್ರಶಸ್ತಿಗೆ ಆದ್ಯತೆ ನೀಡುತ್ತಿದ್ದಾರೆ.

ಇಂದು ಪ್ರಕಟವಾಗುತ್ತಿರುವ ಹಲವು ಪುಸ್ತಕಗಳು ಒಂದಲ್ಲ ಒಂದು ಪ್ರಶಸ್ತಿಗೆ ಭಾಜನವಾಗುತ್ತಿವೆ. ಜಿಲ್ಲಾ ಮತ್ತು ತಾಲ್ಲೂಕು ಪ್ರದೇಶಗಳು ಮಾತ್ರವಲ್ಲದೆ ಗ್ರಾಮೀಣ ಭಾಗಗಳಲ್ಲೂ ಪ್ರಶಸ್ತಿ ಕೊಡಮಾಡುವ ಪ್ರತಿಷ್ಠಾನಗಳು ತಲೆ ಎತ್ತಿವೆ. ಪ್ರಶಸ್ತಿಗಳ ಸಂಖ್ಯೆ ಹೆಚ್ಚಿದಂತೆ ಅವುಗಳ ಮೌಲ್ಯ ಕೂಡ ಕುಸಿಯುತ್ತಿದೆ. ಕೆಲವು ಪ್ರತಿಷ್ಠಾನಗಳು ಇಡೀ ಪ್ರಶಸ್ತಿಯ ಪ್ರಕ್ರಿಯೆಯನ್ನು ರಿಯಾಲಿಟಿ ಷೋ ಮಾದರಿಯಲ್ಲಿ ಆಯೋಜಿಸುತ್ತಿವೆ. ಇಲ್ಲಿ ಮೊದಲ ಸುತ್ತು, ಕೊನೆಯ ಸುತ್ತು ಎಂದು ಹಲವು ಸುತ್ತುಗಳಿರುತ್ತವೆ. ವೇದಿಕೆಯ ಮೇಲೆ ಪ್ರಶಸ್ತಿ ವಿಜೇತ ಲೇಖಕನ ಹೆಸರನ್ನು ಘೋಷಿಸಲಾಗುತ್ತದೆ. ಪುಸ್ತಕಕ್ಕೆ ಪ್ರಚಾರ ದೊರೆಯುವುದೆಂಬ ಕಾರಣದಿಂದ ಜಾತಿ, ಹಣ, ಅಧಿಕಾರದ ಪ್ರಭಾವ ಬಳಸಿ ಪ್ರಶಸ್ತಿ ಪಡೆಯುತ್ತಿರುವ ಲೇಖಕರ ಸಂಖ್ಯೆ ಹೇರಳವಾಗಿದೆ.

ಇಷ್ಟಾಗಿಯೂ ಓದುಗ ವಲಯದಲ್ಲಿ ಉಳಿಯುವುದು ಗಟ್ಟಿ ಸಾಹಿತ್ಯವೇ ವಿನಾ ಲೇಖಕರು ಮತ್ತು ಪ್ರಕಾಶಕರ ಗಿಮಿಕ್‌ಗಳಲ್ಲ. ಅಬ್ಬರದ ಪ್ರಚಾರದ ನಡುವೆ ಸಾಹಿತ್ಯದ ಗುಣಮಟ್ಟ ಕುಸಿಯಬಾರದು. ಅಬ್ಬರ, ಆಡಂಬರ, ಸದ್ದು, ತುತ್ತೂರಿ, ಜಾಗಟೆಯಿಂದ ದೂರ ಉಳಿದು ಬರಹಗಾರರು ಬರವಣಿಗೆಯ ಗುಣಮಟ್ಟಕ್ಕೆ ಆದ್ಯತೆ ಕೊಡಬೇಕಿದೆ.

ವಾಚಕರ ವಾಣಿ

ಸಮ್ಮೇಳನ ನಿರ್ಣಯ: ಮೌಲಿಕವಾಗಿರಲಿ

ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವ ಈ ಸಂದರ್ಭದಲ್ಲಿ, ಹಿಂದಿನ ವರ್ಷ ಹಾವೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು ಏನಾದವು ಎಂಬ ಕುತೂಹಲ ನಮ್ಮಲ್ಲಿ ಮೂಡಬೇಕಾಗಿದೆ. ಇದರ ಬಗ್ಗೆ ಪರಿಶೀಲಿಸಿದರೆ ಬಹುತೇಕ ನಿರಾಸೆಯೇ ಕಾದಿದೆ. ಏಕೆಂದರೆ ಬಹುತೇಕ ನಿರ್ಣಯಗಳು ಜಾರಿಗೆ ಬಂದಿಲ್ಲ. ಪ್ರತಿವರ್ಷವೂ ಸಾಹಿತ್ಯ ಸಮ್ಮೇಳನದ ಕೊನೆಯಲ್ಲಿ ಕೈಗೊಳ್ಳುವ ನಿರ್ಣಯಗಳಲ್ಲಿ ಒಳ್ಳೆಯ ಗುರಿ ಮತ್ತು ಉದ್ದೇಶಗಳೇನೋ ಇರುತ್ತವೆ. ಆದರೆ ಅವು ಜಾರಿಯಾದಾಗ ಮಾತ್ರವಲ್ಲವೇ ನಾಡು, ನುಡಿ ಮತ್ತು ಕನ್ನಡಿಗರಿಗೆ ಅನುಕೂಲ?

ಹೀಗಾಗಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಣಯಗಳನ್ನು ಕೈಗೊಳ್ಳಬೇಕು ಹಾಗೂ ಕೈಗೊಂಡ ನಿರ್ಣಯಗಳು ಜಾರಿಯಾಗುವಂತೆ ನೋಡಿಕೊಳ್ಳಬೇಕು ಅಥವಾ ಜಾರಿಗೊಳಿಸಲು ಸಾಧ್ಯವಿರುವಂತಹ ನಿರ್ಣಯಗಳನ್ನು ಮಾತ್ರ ಕೈಗೊಳ್ಳುವಂತೆ ಆಗಬೇಕು. ಆಗಮಾತ್ರ ಆ ನಿರ್ಣಯಗಳಿಗೆ ಒಂದು ಮೌಲಿಕತೆ ಬರುತ್ತದೆ. ಮಂಡ್ಯದಲ್ಲಾದರೂ ಹೀಗೆ ಆಗಲಿ ಎಂದು ನಿರೀಕ್ಷಿಸೋಣ.

ಶಿವರಾಜು ಎ.ಆರ್., ಕೊರಟಗೆರೆ

ಚಳಿ... ಜಂಗುಳಿ!

ಮಂಡ್ಯದ ನುಡಿ ಹಬ್ಬಕೆ
ತಾನೂ ಓಡೋಡಿ ಬಂದಿದೆ
ಈ ಬಾರಿ ಬರೋಬ್ಬರಿ ಚಳಿ,
ಇಂಥಾ ಚಳಿಗಿಳಿಗೆಲ್ಲಾ
ನಡುಗಿ, ಅಡಗಿ, ಮನೇಲೇ
ಕೂರೋರಲ್ಲ ನಾವು
ಕನ್ನಡದ ಮಂದಿ,
ಹೇಗಿದೆ ನೋಡಿ ಜಾತ್ರೇಲಿ
ನಮ್ಮ ಜನಜಂಗುಳಿ!

ಮ.ಗು.ಬಸವಣ್ಣ
ಮೈಸೂರು

ಭೂಸ್ವಾಧೀನ: ಪರಿಸರ ಸಂರಕ್ಷಣೆಗೆ ಇರಲಿ ಪ್ರಾಶಸ್ತ್ಯ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನಪಡಿಸಿಕೊಳ್ಳುವ ಜಮೀನಿನಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳಲ್ಲಿ ರೈತರಿಗೂ ಸಹಭಾಗಿತ್ವ ನೀಡಲು ಅಥವಾ ಅವರೇ ಕೈಗಾರಿಕೆ ಸ್ಥಾಪನೆಗೆ ಮುಂದಾದರೆ ನೆರವು ನೀಡುವ ಬಗ್ಗೆ ಪರಿಶೀಲನೆ ಮಾಡಲಾಗುವುದು ಎಂಬ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ಭರವಸೆಯ ಮಾತು (ಪ್ರ.ವಾ., ಡಿ. 17) ಶೀಘ್ರ ನಿಯಮವಾಗಲಿ. ಅಭಿವೃದ್ಧಿಯ ಹೆಸರಿನಲ್ಲಿ ಫಲವತ್ತಾದ ಕೃಷಿ ಜಮೀನು ಸ್ವಾಧೀನಪಡಿಸಿಕೊಳ್ಳುವಾಗ ಪರಿಸರಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು. ಭೂಸ್ವಾಧೀನ ನಿಯಮಗಳು ಹಾಗೆ ಇರುವಂತೆ ಮಾಡಬೇಕು. ಕೃಷಿಯೇತರ ಚಟುವಟಿಕೆಗಳಿಂದ ಜಲಮೂಲಗಳಿಗೆ ಹಾನಿಯಾದರೆ ಜೀವವೈವಿಧ್ಯಕ್ಕೆ ಪೆಟ್ಟಾಗುತ್ತದೆ. ಜೊತೆಗೆ ಜನರ ಆರೋಗ್ಯ ಸಮಸ್ಯೆಗಳು ಕೂಡ ಅಧಿಕಗೊಳ್ಳುತ್ತವೆ ಎಂಬುದನ್ನು ಮರೆಯಬಾರದು. 'ಅಭಿವೃದ್ಧಿ' ಎಂದು ಸರ್ಕಾರ ಈಗ ಏನು ಭಾವಿಸಿದೆಯೋ ಆ ಪರಿಕಲ್ಪನೆ ಬದಲಾಗಬೇಕು. 'ಸುಸ್ಥಿರ ಅಭಿವೃದ್ಧಿ' ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ರಾಸಾಯನಿಕಗಳ ಬಳಕೆಯನ್ನು ತಗ್ಗಿಸುವಂತಹ ಕ್ರಮಗಳು ಅಗತ್ಯ. ಅದು ಸಾಧ್ಯವಾದರೆ ಜನರ ಆರೋಗ್ಯ ಕೂಡ ಉತ್ತಮವಾಗುತ್ತದೆ. ಕೈಗಾರಿಕೆ ಮತ್ತು ಕೃಷಿ ಈ ಎರಡರಲ್ಲಿ ಸಮತೋಲನ ಇರುವಂತೆ ಸರ್ಕಾರವು ಕೈಗಾರಿಕೆಗಳಿಗೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಸ್ವಾಭಿಮಾನದ ಬದುಕಿನ ಯಶೋಗಾಥೆ

ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ರೇಣುಕಾ ಪೂಜಾರಿ ಎಂಬ ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಅತಿಥಿ ಉಪನ್ಯಾಸಕರಾಗಿ ನೇಮಕಗೊಂಡಿರುವುದು, ಅದರಲ್ಲೂ ಮೀಸಲಾತಿ ಇದ್ದರೂ ಅವರು ಅರ್ಹತೆಯ ಆಧಾರದ ಮೇಲೆ ನೌಕರಿ ಪಡೆದಿರುವುದು ಶ್ಲಾಘನೀಯ.

ಲಿಂಗತ್ವ ಅಲ್ಪಸಂಖ್ಯಾತರು ಮೈಗಳ್ಳರು, ಭಿಕ್ಷೆ ಬೇಡುತ್ತಾರೆ, ಶುಭ ಸಮಾರಂಭಗಳಿಗೆ ಏಕಾಏಕಿ ನುಗ್ಗಿ ಹಣಕ್ಕಾಗಿ ಬೇಡಿಕೆ ಇಡುತ್ತಾರೆ, ಹೆಚ್ಚು ಹಣ ಕೊಡದಿದ್ದರೆ ಎಲ್ಲರೆದುರು ನಿಂದಿಸುವುದು, ಅಸಭ್ಯವಾಗಿ ವರ್ತಿಸುವುದು ಇವರ ಕೆಲಸ ಎಂಬ ಭಾವನೆ ಜನರಲ್ಲಿದೆ. ಇವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಅನೇಕ ಸಂಘ ಸಂಸ್ಥೆಗಳು ಅವಿರತವಾಗಿ ಶ್ರಮಿಸಿ ವಿಫಲವಾಗಿವೆ. ಆದರೆ ಶ್ರಮಪಟ್ಟರೆ ತಾವು ಸಹ ಎಲ್ಲರಂತೆ ಬದುಕನ್ನು ಕಟ್ಟಿಕೊಳ್ಳಬಹುದು ಎಂಬುದನ್ನು ರೇಣುಕಾ ತೋರಿಸಿಕೊಟ್ಟಿದ್ದಾರೆ. ಇತರ ಲಿಂಗತ್ವ ಅಲ್ಪಸಂಖ್ಯಾತರಿಗೆ ಇವರು ಆದರ್ಶವಾಗಿ, ಅವರು ಸಹ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವಂತೆ ಆಗಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಮರೆಯಲಾಗದ ಕನ್ನಡಪರ ಕಾರ್ಯ

ಇತ್ತೀಚೆಗೆ ನಿಧನರಾದ ಎಸ್.ಎಂ.ಕೃಷ್ಣ ಅವರ ಸಿದ್ಧಿ– ಸಾಧನೆಗಳ ಬಗ್ಗೆ ಬಹಳಷ್ಟು ವಿವರಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಆದರೆ, ಅವರು ಕನ್ನಡನಾಡು-ನುಡಿಗೆ ಮಾಡಿದ ಕೆಲಸಗಳು ಪ್ರಧಾನವಾಗಿ ಪ್ರಸ್ತಾಪ ಆಗಿಲ್ಲ.

ಪ್ರಾದೇಶಿಕ ಅಸಮಾನತೆಯನ್ನು ಮುಂದು ಮಾಡಿಕೊಂಡು ರಾಜ್ಯ ಒಡೆಯುವ ಮಾತು ಕೇಳಿಬರುತ್ತಿದ್ದಾಗ, ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಅವರು 2000ದಲ್ಲಿ ಡಿ.ಎಂ.ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ 'ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ' ರಚಿಸಿದರು. ಅದು ಬಹುಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಪ್ರಯತ್ನವಾಗಿತ್ತು. ಕುವೆಂಪು ಅವರ 'ಜಯಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಗೀತೆಯನ್ನು ನಾಡಗೀತೆಯಾಗಿ ಘೋಷಿಸಿದ್ದು ಕೃಷ್ಣ ಅವರ ನೇತೃತ್ವದ ಸರ್ಕಾರವೇ. ಪ್ರಥಮವಾಗಿ ಗಡಿನಾಡು-ಹೊರನಾಡ ಕನ್ನಡಿಗರ ಬಗ್ಗೆ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ವಾಟಾಳ್ ನಾಗರಾಜ್ ಅವರಿದ್ದ ಏಕಸದಸ್ಯ ಆಯೋಗ ರಚನೆಯಾದದ್ದು, ಒಂದರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಎಲ್ಲಾ ವೃತ್ತಿಪರ ಕೋರ್ಸುಗಳು, ಸ್ನಾತಕೋತ್ತರ ಹಾಗೂ ಸ್ನಾತಕ ಕೋರ್ಸುಗಳಲ್ಲಿ ಸೀಟುಗಳ ಮೀಸಲಾತಿ, ಹೊರರಾಜ್ಯದ ಕನ್ನಡಿಗರಿಗೆ ವೃತ್ತಿಪರ ಶಿಕ್ಷಣ, ಉನ್ನತ ವ್ಯಾಸಂಗದಲ್ಲಿ ಮೀಸಲಾತಿ ನೀಡಿದ್ದು ಅವರದೇ ನೇತೃತ್ವದ ಸರ್ಕಾರ. ಹಾಗೇ ಸಚಿವಾಲಯದ ಹಂತದಲ್ಲಿ ಕನ್ನಡ ಅನುಷ್ಠಾನ ವಿಭಾಗ ರಚನೆ, ಆಡಳಿತದಲ್ಲಿ ಕನ್ನಡ ಬಳಕೆ ಮಾಡದೇ ಇರುವ ನೌಕರರ ವಿರುದ್ಧ ಶಿಸ್ತುಕ್ರಮ ಜಾರಿಗೊಳಿಸುವ, ಪಟ್ಟಣ ಹಾಗೂ ಮಹಾನಗರ ಪಾಲಿಕೆಗಳಲ್ಲಿ ಕನ್ನಡೀಕರಣಕ್ಕಾಗಿ ಕೆಲವು ಅಂಶಗಳನ್ನು ಅನುಷ್ಠಾನಗೊಳಿಸುವ ಬಗ್ಗೆ, ಸರ್ಕಾರಿ ಸಮಾರಂಭಗಳ ಬ್ಯಾನರ್‌ಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಅಧಿಕೃತ ಆದೇಶವಾದದ್ದು ಸಹ ಅವರ ಅವಧಿಯಲ್ಲೇ. ಹೀಗೆ ಅವರು ಜಾರಿಗೆ ತಂದ ಹಲವಾರು ಕಾರ್ಯಕ್ರಮಗಳು ಆಡಳಿತದ ಚುಕ್ಕಾಣಿ ಹಿಡಿಯುವ ಜನನಾಯಕರಿಗೆ ಸದಾ ಮಾದರಿಯಾಗಿವೆ.

ರಾ.ನಂ.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಿಢೀರ್ ತೀರ್ಮಾನ ಅಚ್ಚರಿಯ ನಿರ್ಗಮನ

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಏಕಾಏಕಿ ವಿದಾಯ ಘೋಷಿಸಿದವರು ಹಲವರು



ರವಿಚಂದ್ರನ್ ಅಶ್ವಿನ್



ಟೆನಿಸ್ ವೃತ್ತಿಜೀವನದ ಉತ್ತುಂಗದಲ್ಲಿದ್ದ 25 ವರ್ಷ ವಯಸ್ಸಿನ ಆಟಗಾರ್ತಿ ಆ್ಯಶ್ಲೆ ಬಾರ್ಟಿ ಅವರು 2022ರಲ್ಲಿ ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಆದ ಕೆಲವೇ ವಾರಗಳಲ್ಲಿ ನಿವೃತ್ತಿ ಘೋಷಿಸಿ ಕ್ರೀಡಾ ಜಗತ್ತನ್ನು ಅಚ್ಚರಿಗೆ ಕೆಡವಿದ್ದರು. ಈಗ ಭಾರತದ ಕ್ರಿಕೆಟಿಗ ರವಿಚಂದ್ರನ್ ಅಶ್ವಿನ್ ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮಧ್ಯದಲ್ಲೇ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿ ಎಲ್ಲರಲ್ಲೂ ಆಶ್ಚರ್ಯ ಉಂಟು ಮಾಡಿದ್ದಾರೆ. ದಿಢೀರ್ ತೀರ್ಮಾನಕ್ಕೆ ಕಾರಣಗಳೇನು ಎಂದು ಅವರು ಹೇಳಿಲ್ಲ. ವಿವಿಧ ರೀತಿಯಲ್ಲಿ ವಿಶ್ಲೇಷಿಸಲಾಗುತ್ತಿದೆ. ಕ್ರಿಕೆಟ್ ಲೋಕದಲ್ಲಿ ಹಿಂದೆಯೂ ಹಲವರು ನಿವೃತ್ತಿಯ ಬಗ್ಗೆ ದಿಢೀರ್ ನಿರ್ಧಾರ ಕೈಗೊಂಡಿದ್ದರು. ಪ್ರಮುಖ ಆಟಗಾರರನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ

ರವಿ ಶಾಸ್ತ್ರಿ

ರವಿ ಶಾಸ್ತ್ರಿ, ಹಲವು ಪ್ರಮುಖ ಟೂರ್ನಿಗಳಲ್ಲಿ ಭಾರತ ಕ್ರಿಕೆಟ್ ತಂಡದ ಗೆಲುವಿಗೆ ಕಾರಣವಾಗಿದ್ದ ಪ್ರತಿಭಾವಂತ ಆಲ್‌ರೌಂಡರ್. 1981ರಿಂದ 1992ರವರೆಗೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತ ತಂಡದ ಭಾಗವಾಗಿದ್ದ ಶಾಸ್ತ್ರಿ, ಕೋಚ್ ಆಗಿ, ವೀಕ್ಷಕ ವಿವರಣೆಗಾರರಾಗಿಯೂ ಜನಪ್ರಿಯರು. ಏಕದಿನ ಪಂದ್ಯಗಳಲ್ಲಿ 29.04 ಸರಾಸರಿಯೊಂದಿಗೆ 3,108 ರನ್‌ಗಳನ್ನು, 80 ಟೆಸ್ಟ್‌ಗಳಲ್ಲಿ 35.79 ಸರಾಸರಿಯೊಂದಿಗೆ 3,830 ರನ್‌ಗಳನ್ನು ಅವರು ಮಾಡಿದ್ದಾರೆ.

1992ರಲ್ಲಿ ಭಾರತವು ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿದ್ದಾಗ, ಮೊದಲ ಪಂದ್ಯದಲ್ಲಿಯೇ ಶಾಸ್ತ್ರಿ ಅವರು ಮೊಣಕಾಲು ನೋವಿನಿಂದ ಬಳಲುತ್ತಿದ್ದರು. ಜೊಹಾನೆಸ್‌ಬರ್ಗ್‌ನಲ್ಲಿ ನಡೆದ ಎರಡನೇ ಟೆಸ್ಟ್ ನಂತರ ಮೊಣಕಾಲು ನೋವು ಹೆಚ್ಚಾಗಿತ್ತು. ಮೂರನೇ ಪಂದ್ಯದ ನಂತರ ಇನ್ನು ಆಟ ಆಡಲಾರೆ ಎನ್ನುವ ಸ್ಥಿತಿ ಮುಟ್ಟಿದ ಶಾಸ್ತ್ರಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು.

ಅನಿಲ್ ಕುಂಬ್ಳೆ

ಅಶ್ವಿನ್ ಅವರ ನಿರ್ಧಾರದ ಬಗ್ಗೆ ತೀವ್ರ ಅಚ್ಚರಿ ವ್ಯಕ್ತಪಡಿಸಿರುವ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ, ಮಾಜಿ ಕೋಚ್ ಅನಿಲ್ ಕುಂಬ್ಳೆ ಅವರು ಕೂಡಾ ಟೆಸ್ಟ್ ಕ್ರಿಕೆಟ್‌ಗೆ ದಿಢೀರ್ ವಿದಾಯ ಹೇಳಿದವರು (ಏಕದಿನ ಕ್ರಿಕೆಟ್‌ಗೆ 2007ರಲ್ಲೇ ನಿವೃತ್ತಿ ಘೋಷಿಸಿದ್ದರು). ಟೆಸ್ಟ್‌ನಲ್ಲಿ ಅತಿ ಹೆಚ್ಚು ವಿಕೆಟ್‌ಗಳನ್ನು ಗಳಿಸಿದ (619) ಭಾರತೀಯ ಕ್ರಿಕೆಟಿಗ ಎಂಬ ಹೆಗ್ಗಳಿಕೆ ಪಡೆದಿರುವ ಸ್ಪಿನ್ನರ್ ಕುಂಬ್ಳೆ, 2008ರಲ್ಲಿ ಭಾರತದಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮಧ್ಯದಲ್ಲೇ (ದೆಹಲಿಯ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ ನಡೆದ ಮೂರನೇ ಟೆಸ್ಟ್ ಬಳಿಕ) ನಿವೃತ್ತಿ ಘೋಷಿಸಿದರು. ಆಗ ಅವರು ಭಾರತ ತಂಡದ ನಾಯಕರಾಗಿದ್ದರು. 132 ಟೆಸ್ಟ್‌ಗಳನ್ನು ಆಡಿರುವ ಕುಂಬ್ಳೆ ಅವರು ಭುಜದ ಗಾಯದ ಕಾರಣಕ್ಕೆ ಮೊಹಾಲಿಯಲ್ಲಿ ನಡೆದಿದ್ದ ಎರಡನೇ ಟೆಸ್ಟ್‌ನಲ್ಲಿ ಆಡಿರಲಿಲ್ಲ. ಆಗಲೇ ಅವರಿಗೆ 39 ವರ್ಷ ವಯಸ್ಸಾಗಿತ್ತು. ಯುವ ಆಟಗಾರರಿಗೆ ಅವಕಾಶ ಮಾಡಿಕೊಡುವುದಕ್ಕಾಗಿ ಹಿರಿಯ ಆಟಗಾರರು ಕ್ರಿಕೆಟ್‌ನಿಂದ ಹಿಂದೆ ಸರಿಯಬೇಕು ಎಂಬ ಚರ್ಚೆಯೂ ಆಗ ಜೋರಾಗಿತ್ತು. ನಂತರ, ಧೋನಿ ನಾಯಕರಾದರು.

ಎಬಿ ಡಿ ವಿಲಿಯರ್ಸ್

ಎಬಿಡಿ ಎಂದೇ ಅಭಿಮಾನಿಗಳು ಕರೆಯುವ ಎಬಿ ಡಿ ವಿಲಿಯರ್ಸ್ ದಕ್ಷಿಣ ಆಫ್ರಿಕಾದ ಆಟಗಾರ. ತಮ್ಮ ಸ್ಫೋಟಕ ಬ್ಯಾಟಿಂಗ್‌ನಿಂದ '360 ಡಿಗ್ರಿ ಬ್ಯಾಟರ್' ಎಂದೇ ಹೆಸರಾದವರು. 2004ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅವರು, 114 ಟೆಸ್ಟ್, 228 ಏಕದಿನ ಕ್ರಿಕೆಟ್ ಪಂದ್ಯ ಮತ್ತು 78 ಟಿ20 ಪಂದ್ಯಗಳನ್ನು ಆಡಿ, 20,014 ರನ್‌ಗಳನ್ನು ಗಳಿಸಿ ಕೋಟ್ಯಂತರ ಕ್ರೀಡಾ ಪ್ರೇಮಿಗಳ ನೆಚ್ಚಿನ ಬ್ಯಾಟರ್ ಆಗಿದ್ದರು.

ಎಬಿಡಿ 2018ರ ಮೇ ತಿಂಗಳಲ್ಲಿ ನಿವೃತ್ತಿ ಘೋಷಿಸಿದ್ದರು. 'ನನ್ನ ಮಗ ಆಕಸ್ಮಿಕವಾಗಿ ಆತನ ಕಾಲಿನಿಂದ ನನ್ನ ಕಣ್ಣಿಗೆ ಒದ್ದಿದ್ದ. ಅದರಿಂದ ನನ್ನ ದೃಷ್ಟಿ ಸ್ವಲ್ಪ ಮಂಜಾಗಿತ್ತು. ಆ ಕಾರಣದಿಂದ ನಾನು ನಿವೃತ್ತಿ ಪಡೆಯಬೇಕಾಯಿತು' ಎಂದು ಅವರು ನಂತರ ಹೇಳಿಕೊಂಡಿದ್ದರು.

ಎಂ.ಎಸ್.ಧೋನಿ

ತಮ್ಮ ವಿಶಿಷ್ಟ 'ಹೆಲಿಕಾಪ್ಟರ್' ಹೊಡೆತಗಳ ಮೂಲಕ ಕ್ರಿಕೆಟ್ ಲೋಕದಲ್ಲಿ ಉಜ್ವಲ ತಾರೆಯಾಗಿ ಮೆರೆದವರು ಮಹೇಂದ್ರ ಸಿಂಗ್ ಧೋನಿ; ಭಾರತ ತಂಡದ ನಾಯಕನಾಗಿ ಹಲವು ದಾಖಲೆ ಮಾಡಿದವರು. ಇವರ ನಾಯಕತ್ವದಲ್ಲಿ ಭಾರತವು 2007ರಲ್ಲಿ ಟಿ20 ವಿಶ್ವಕಪ್, 2011ರಲ್ಲಿ ಏಕದಿನ ವಿಶ್ವಕಪ್ ಮತ್ತು 2013ರಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದಿತ್ತು. ತಂಡದ ನಾಯಕನಾಗಿದ್ದಾಗಲೇ ಧೋನಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದರು. 2014ರಲ್ಲಿ ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದ ಭಾರತ ತಂಡವು, ಮೊದಲೆರಡು ಪಂದ್ಯ ಸೋತು ಮೂರನೇ ಪಂದ್ಯವನ್ನು ಮೆಲ್ಬರ್ನ್‌ನಲ್ಲಿ ಆಡುತ್ತಿತ್ತು. ಪಂದ್ಯ ಮುಗಿದ ಮೇಲೆ ಟೆಸ್ಟ್‌ನಿಂದ ನಿವೃತ್ತಿ ಘೋಷಿಸಿದ ಧೋನಿ, ಎಲ್ಲ ಮಾದರಿ ಪಂದ್ಯಗಳನ್ನು ಆಡಿ ಬಳಲಿರುವುದೇ ತಮ್ಮ ನಿರ್ಧಾರಕ್ಕೆ ಕಾರಣ ಎಂದಿದ್ದರು. ನಂತರ ವಿರಾಟ್ ಕೊಹ್ಲಿ ನಾಯಕತ್ವ ವಹಿಸಿಕೊಂಡರು.

ಮಿಚೆಲ್ ಜಾನ್ಸನ್

ಉತ್ತಮ ಪ್ರದರ್ಶನ ನೀಡುತ್ತಿರುವಾಗಲೇ ಕ್ರಿಕೆಟ್‌ಗೆ ವಿದಾಯ ಹೇಳಿ ಕ್ರಿಕೆಟ್ ಪ್ರೇಮಿಗಳನ್ನು ಅಚ್ಚರಿಗೆ ಕೆಡವಿದವರು ಆಸ್ಟ್ರೇಲಿಯಾದ ವೇಗಿ ಮಿಚೆಲ್ ಜಾನ್ಸನ್. ಆಗ ಅವರಿಗೆ ಇನ್ನೂ 34 ವರ್ಷ. 'ಇನ್ನೂ ಮೂರ್ನಾಲ್ಕು ವರ್ಷಗಳ ಕ್ರಿಕೆಟ್ ನಿನ್ನಲ್ಲಿ ಬಾಕಿ ಉಳಿದಿದೆ' ಎಂದು ಅವರ ಮಾರ್ಗದರ್ಶಕ ಡೆನ್ನಿಸ್ ಲಿಲ್ಲಿ ಹೇಳಿದ್ದರು. ಆದರೆ, 'ನನ್ನಲ್ಲಿ ಕ್ರಿಕೆಟ್ ಹಸಿವು ಇಳಿದಿದೆ. ಇನ್ನು ಮೊದಲಿನ ವೇಗದಲ್ಲಿ ಬೌಲಿಂಗ್ ಮಾಡಲು ಸಾಧ್ಯವಿಲ್ಲ' ಎಂದು ಅವರು ಹೇಳಿದ್ದರು. 2014ರಲ್ಲಿ ತಲೆಗೆ ಚೆಂಡು ಬಡಿದು ತಂಡದ ಯುವ ಕ್ರಿಕೆಟಿಗ ಫಿಲಿಪ್ ಹ್ಯೂಸ್ ಮೃತಪಟ್ಟ ಪ್ರಕರಣ ಜಾನ್ಸನ್ ಅವರನ್ನು ತುಂಬಾ ಕಾಡಿತ್ತು. ಇದೆಲ್ಲದರ ಪರಿಣಾಮವಾಗಿ 2015ರ ನವೆಂಬರ್‌ನಲ್ಲಿ ಪರ್ತ್‌ನಲ್ಲಿ ನಡೆದ ನ್ಯೂಜಿಲೆಂಡ್ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದ ಕೊನೆಯ ದಿನ ನಿವೃತ್ತಿ ಘೋಷಿಸಿದ್ದರು. ಆ ಹೊತ್ತಿಗೆ 73 ಟೆಸ್ಟ್‌ಗಳನ್ನು ಆಡಿದ್ದ ಅವರು, 313 ವಿಕೆಟ್‌ಗಳನ್ನು ಗಳಿಸಿದ್ದರು. ಆ ಬಳಿಕವೂ ಐಪಿಎಲ್ ಸೇರಿದಂತೆ ಜಗತ್ತಿನ ವಿವಿಧ ಕಡೆಗಳಲ್ಲಿ ಟಿ20 ಪಂದ್ಯಗಳನ್ನು ಆಡಿದ್ದರು. 2018ರ ಆಗಸ್ಟ್‌ನಲ್ಲಿ ಟಿ20 ಮಾದರಿ ಕ್ರಿಕೆಟ್‌ಗೂ ವಿದಾಯ ಹೇಳಿದರು.

ಗ್ರೇಮ್ ಸ್ವಾನ್

ಗ್ರೇಮ್ ಸ್ವಾನ್ ಇಂಗ್ಲೆಂಡ್‌ನ ಅತ್ಯಂತ ಯಶಸ್ವಿ ಸ್ಪಿನ್ನರ್ ಆಗಿದ್ದವರು. ತಮ್ಮ 20ನೇ ವಯಸ್ಸಿನಲ್ಲಿ ಪ್ರಥಮ ದರ್ಜೆ ಪಂದ್ಯ ಆಡಲು ಆರಂಭಿಸಿದ ಅವರು, ಆರಂಭದ ಕೆಲವು ವರ್ಷ ಪರದಾಡಿದರೂ ನಂತರ ಪಂದ್ಯ ಗೆದ್ದುಕೊಡುವ ಬೌಲರ್ ಆಗಿ ಬೆಳೆದರು. 60 ಟೆಸ್ಟ್‌ಗಳನ್ನು ಆಡಿ, 255 ವಿಕೆಟ್ ಗಳಿಸಿದ್ದರು. 2013ರಲ್ಲಿ ಮೊಣಕೈ ನೋವಿನಿಂದ ಶಸ್ತ್ರಚಿಕಿತ್ಸೆ ಮೊರೆ ಹೋಗಿದ್ದರು. ಅದೇ ವರ್ಷ ಆ್ಯಷಸ್ ಸರಣಿ ಆಡಲು ಆಸ್ಟ್ರೇಲಿಯಾಗೆ ತೆರಳಿದ ಗ್ರೇಮ್, ಸರಣಿ ಮಧ್ಯೆಯೇ ತಮ್ಮ ನಿವೃತ್ತಿ ಘೋಷಿಸಿದ್ದರು.

ಅಲನ್ ಡೊನಾಲ್ಡ್

ಕ್ರಿಕೆಟ್ ಜಗತ್ತು ಕಂಡ ಅತ್ಯಂತ ಶ್ರೇಷ್ಠ ವೇಗಿಗಳಲ್ಲಿ ಒಬ್ಬರಾದ, ದಕ್ಷಿಣ ಆಫ್ರಿಕಾ ಕ್ರಿಕೆಟ್‌ನ ಯಶಸ್ಸಿನ ಹಿಂದಿನ ಶಕ್ತಿ ಅಲನ್ ಡೊನಾಲ್ಡ್ ಅವರು 36 ವರ್ಷ ವಯಸ್ಸಿಗೆ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದವರು. 2001–02ರಲ್ಲಿ ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ತಂಡದ ಹೀನಾಯ ಸೋಲಿನ ಬಳಿಕ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಮುಂದಿನ ವರ್ಷ ನಡೆದ ವಿಶ್ವಕಪ್ ಟೂರ್ನಿ ಬಳಿಕ ಏಕದಿನ ಮಾದರಿ ಕ್ರಿಕೆಟ್‌ನಿಂದಲೂ ದೂರ ಸರಿದಿದ್ದರು. ಗಾಯಗಳು ಅವರನ್ನು ತೀವ್ರ ಗಾಸಿಗೊಳಿಸಿದ್ದವು. ಹಿಂದಿನ ರೀತಿಯಲ್ಲಿ ಬೌಲಿಂಗ್ ಮಾಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಅವರ ನಿವೃತ್ತಿಯ ಬಗ್ಗೆ ಮೊದಲೇ ಊಹಾಪೋಹಗಳಿದ್ದವು. ಹಾಗಾಗಿ, ವಿದಾಯ ಘೋಷಿಸಿದ್ದು ದಿಢೀರ್ ಎಂದೆನಿಸದಿದ್ದರೂ, ಕ್ರಿಕೆಟ್ ಪ್ರೇಮಿಗಳನ್ನು ಅಚ್ಚರಿಗೆ ಕೆಡವಿತ್ತು. 10 ವರ್ಷಗಳ ಟೆಸ್ಟ್ ಕ್ರಿಕೆಟ್ ಜೀವನದಲ್ಲಿ ಅವರು 72 ಪಂದ್ಯಗಳನ್ನು ಆಡಿದ್ದು, 330 ವಿಕೆಟ್‌ಗಳನ್ನು ಕಬಳಿಸಿದ್ದರು.

ಬೆನ್ ಸ್ಟೋಕ್ಸ್

ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಆಗಿದ್ದ ಬೆನ್ ಸ್ಟೋಕ್ಸ್, 2011ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 104 ಪಂದ್ಯಗಳಿಂದ ಮೂರು ಶತಕಗಳೊಂದಿಗೆ 2,919 ರನ್ ಗಳಿಸಿ, 74 ವಿಕೆಟ್ ಗಳಿಸಿದ್ದರು. 2019ರ ವಿಶ್ವಕಪ್ ಫೈನಲ್‌ನಲ್ಲಿ ತಮ್ಮ ಅದ್ಭುತ ಆಟದಿಂದ ಕ್ರಿಕೆಟ್ ಪ್ರಿಯರ ಮನ ಗೆದ್ದಿದ್ದರು. ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಕೂಡ ಆಗಿದ್ದರು. ಸ್ಟೋಕ್ಸ್ 2022ರ ಜುಲೈನಲ್ಲಿ ಏಕದಿನ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಮೂರು ಮಾದರಿಯ ಕ್ರಿಕೆಟ್ ಆಡಲು ತಮ್ಮ ದೇಹ ಸಹಕರಿಸುತ್ತಿಲ್ಲ. ಜತೆಗೆ, ಹೊಸಬರಿಗೆ ಅವಕಾಶ ಮಾಡಿಕೊಡುವ ದೃಷ್ಟಿಯಿಂದ ತಾನು ನಿವೃತ್ತಿ ಹೊಂದುತ್ತಿದ್ದೇನೆ ಎಂದು ಅವರು ಹೇಳಿದ್ದರು.

ಫೆ.7ಕ್ಕೆ 'ಅನ್ ಲಾಕ್ ರಾಘವ'

ರೆಚೆಲ್ ಡೇವಿಡ್

ಕೆಲ ವರ್ಷಗಳ ಹಿಂದೆ ಪ್ರಾರಂಭವಾಗಿದ್ದ 'ಅನ್ ಲಾಕ್ ರಾಘವ' ಚಿತ್ರಕ್ಕೆ ಕೊನೆಗೂ ಬಿಡುಗಡೆ ಮುಹೂರ್ತ ಕೂಡಿಬಂದಿದೆ. ದೀಪಕ್ ಮಧುವನಹಳ್ಳಿ ನಿರ್ದೇಶಿಸಿ, ಮಂಜುನಾಥ್ ದಾಸೇಗೌಡ ಹಾಗೂ ಗಿರೀಶ್ ಕುಮಾರ್ ನಿರ್ಮಿಸಿರುವ ಚಿತ್ರ ಫೆಬ್ರುವರಿ 7ರಂದು ತೆರೆಗೆ ಬರಲಿದೆ.

'ನನ್ನ ಹಿಂದಿನ ಚಿತ್ರಗಳನ್ನು ನೋಡಿದ್ದ ಗೆಳೆಯರು, ನಿನ್ನ ಚಿತ್ರಗಳಲ್ಲಿ ಗ್ಲಾಮರ್ ನಾಯಕಿಯರು ಇರುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ ಈ ಚಿತ್ರದ ಫಸ್ಟ್ ಲುಕ್‌ನಲ್ಲಿ ರೆಚೆಲ್ ಅವರನ್ನು ನೋಡಿದ ಗೆಳೆಯರು ಇದನ್ನು ಕಮರ್ಷಿಯಲ್ ಚಿತ್ರ ಎಂದು ಒಪ್ಪಿಕೊಂಡರು. ಇದೊಂದು ಮನೋರಂಜನೆಯ ರಸದೌತಣ ನೀಡುವ ಸಿನಿಮಾ. 'ರಾಮ ರಾಮ ರೆ' ಖ್ಯಾತಿಯ ಸತ್ಯಪ್ರಕಾಶ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಹೆಚ್ಚಿನ ಭಾಗದ ಚಿತ್ರೀಕರಣ ಚಿತ್ರದುರ್ಗದಲ್ಲಾಗಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಅನೂಪ್ ಸೀಳಿನ್ ಸಂಗೀತ, ಲವಿತ್ ಛಾಯಾಚಿತ್ರಗ್ರಹಣವಿದೆ. ಮಿಲಿಂದ್ ಹಾಗೂ ರೆಚೆಲ್ ಡೇವಿಡ್ ಜೋಡಿಯಾಗಿದ್ದಾರೆ. ಅವಿನಾಶ್, ಭೂಮಿ ಶೆಟ್ಟಿ, ಸಾಧುಕೋಕಿಲ, ಶೋಭರಾಜ್ ಮುಂತಾದವರು ಈ ಚಿತ್ರದಲ್ಲಿದ್ದಾರೆ.

ಮಕ್ಕಳ ಸಾಹಸದ ರಾಮ

ಕಾಡು, ಕಾಡಿನ ಪರಿಸರ, ಸಂಪತ್ತನ್ನು ಉಳಿಸುವ ಕಥೆಯನ್ನು ಹೊಂದಿರುವ 'ರಾಮ' ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವೆಸ್ಲಿ ಬ್ರೌನ್ ನಿರ್ದೇಶನದ ಚಿತ್ರದ ಪೋಸ್ಟರ್ ಅನ್ನು ಸಾಲುಮರದ ತಿಮ್ಮಕ್ಕ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಚಿತ್ರೀಕರಣ ಮುಗಿದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಗ್ರಾಫಿಕ್ಸ್ ಬಳಸಿ ಮರಗಳು ಮತ್ತು ಅದರ ಬೇರುಗಳು ಮಾತನಾಡಿಕೊಳ್ಳುವುದನ್ನು ಚಿತ್ರೀಕರಿಸಲಾಗಿದೆ. ಪರಿಸರ ಹಾಗೂ ಅದರ ಉಳಿವಿನ ಕುರಿತು ಜಾಗೃತಿ ಮೂಡಿಸುವ ಚಿತ್ರ. ಮರಗಳನ್ನು ಕಡಿಯಲು ಬಂದವರನ್ನು ಶಾಲೆಯ ಮಕ್ಕಳು ತಡೆಯುತ್ತಾರೆ' ಎಂದು ಚಿತ್ರದ ಕುರಿತು ಮಾಹಿತಿ ಹಂಚಿಕೊಂಡರು ವೆಸ್ಲಿ ಬ್ರೌನ್.

ನಿಕ್ಕಿನಾಶ್ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ನಿಶ್ಚಲ್ ಬಿ.ಎಂ. ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಛಾಯಾಚಿತ್ರಗ್ರಹಣ ಹಾಗೂ ಸಂಕಲನದ ಜವಬ್ದಾರಿಯನ್ನೂ ನಿರ್ದೇಶಕರೆ ನಿರ್ವಹಿಸಿದ್ದಾರೆ. ಅಭಿಲಾಷ್ ಲಾಕ್ರಾ-ಜುವೆಲ್ ದುಬಾ ಸಂಗೀತ, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಚಿತ್ರಕ್ಕಿದೆ. ಮಾಸ್ಟರ್ ವಿಹಾನ್, ಬೇಬಿ ಶರೋನ್, ಬೇಬಿ ಸುಧೀಕ್ಷಾ, ನೆ.ಲ. ನರೇಂದ್ರಬಾಬು ಮುಂತಾದವರು ಚಿತ್ರದಲ್ಲಿದ್ದಾರೆ.



ಚಿತ್ರದ ಪೋಸ್ಟರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಉತ್ತರ ಪ್ರದೇಶದ ಸಂಭಲ್‌ನ ಶಾಹಿ ಜಮಾ ಮಸೀದಿಯಲ್ಲಿ ಇತ್ತೀಚೆಗೆ ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ 1,500 ವರ್ಷಗಳಷ್ಟು ಹಳೆಯದಾದ ಮಹಾವಿಷ್ಣುವಿನ ವಿಗ್ರಹ, ಶಿವಲಿಂಗ, ಸುದರ್ಶನ ಚಕ್ರ ಪತ್ತೆಯಾಗಿದೆ ಎಂದು ಹೇಳಿಕೊಂಡು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ನಾಲ್ಕು ಫೋಟೊಗಳನ್ನು ಒಳಗೊಂಡ ಕೊಲಾಜ್ ಅನ್ನು ಪೋಸ್ಟ್ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು.

ನಾಲ್ಕು ಚಿತ್ರಗಳನ್ನು ರಿವರ್ಸ್ ಇಮೇಜ್ ವಿಧಾನದಲ್ಲಿ ಗೂಗಲ್ ಲೆನ್ಸ್ ಮೂಲಕ ಹುಡುಕಾಟ ನಡೆಸಿದಾಗ ಈ ವರ್ಷದ ಫೆಬ್ರುವರಿ ಮೊದಲ ವಾರದಲ್ಲಿ ಎನ್‌ಡಿಟಿವಿ ಸೇರಿದಂತೆ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳು ಸಿಕ್ಕಿದವು. ವರದಿಯಲ್ಲಿದ್ದ ಎರಡು ಫೋಟೊಗಳು ಈ ಕೊಲಾಜ್‌ನಲ್ಲಿಯೂ ಇವೆ. ಆ ಸುದ್ದಿಯು ರಾಯಚೂರು–ತೆಲಂಗಾಣ ಗಡಿಭಾಗದಲ್ಲಿ ಕೃಷ್ಣಾ ನದಿಗೆ ನಿರ್ಮಿಸಲಾಗುತ್ತಿರುವ ಸೇತುವೆ ಕಾಮಗಾರಿ ವೇಳೆ ಶಿವಲಿಂಗ ಮತ್ತು ಮಹಾವಿಷ್ಣುವಿನ ವಿಗ್ರಹಗಳು ಪತ್ತೆಯಾಗಿರುವ ಬಗ್ಗೆ ಇತ್ತು. ಸುದರ್ಶನ ಚಕ್ರದ ಚಿತ್ರವನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಇಂಡಿಯಾಮಾರ್ಟ್ ಎಂಬ ಇ–ಕಾಮರ್ಸ್ ಪೋರ್ಟಲ್‌ನಲ್ಲಿ ಇದೇ ಚಿತ್ರ ಇರುವುದು ಕಂಡು ಬಂತು. ಅದು ಮಾರಾಟಕ್ಕೆ ಇಟ್ಟಿದ್ದ ಸುದರ್ಶನ ಚಕ್ರದ ಫೋಟೊ. ಹಾಗಾಗಿ, ಮಸೀದಿಯಲ್ಲಿ ವಿಗ್ರಹಗಳು ಪತ್ತೆಯಾಗಿವೆ ಎಂಬುದು ಸುಳ್ಳು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಆಲಸ್ಯವೇ ವೈರಿ!

ನುಡಿ ಬೆಳಗು
ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
92

ಮನುಷ್ಯನಿಗೆ ವೈರಿ ಅಂತ ಬೇರೆ ಯಾರೂ ಇಲ್ಲ. ಆಲಸ್ಯತನವೇ ವೈರಿ. ಕೈಗೆ ದಾರ ಕಟ್ಟಿಕೊಂಡೋರ ಕೈಯಲ್ಲಿ ಲಕ್ಷ್ಮಿ ಇರೋದಿಲ್ಲ. ದುಡಿಯುವ ಕೈಗಳಲ್ಲಿ ಲಕ್ಷ್ಮಿ ಇರ್ತಾಳ. ಇದನ್ನು ತಿಳಕೋಬೇಕು.

ಮನುಷ್ಯ ಹೇಗೆ ದುಡಿಯಬೇಕು ಅಂದ್ರ ಭೂಮಿ ತಾಯಿಯೇ ದಣಿದಿರಬೇಕು. ಅಂಗಡಿಯಲ್ಲಿ ಹೇಗೆ ದುಡಿಯಬೇಕು ಅಂದ್ರ ಅಂಗಡಿಯೇ ನಿಮಗೆ 'ನೀನು ಬಹಳಾ ದುಡಿದ್ದೀಯ ಹೋಗು ಮನಿಗೆ' ಅಂತಿರಬೇಕು. ಹಾಗೆ ದುಡಿಯಬೇಕು. ಹುಡುಗರು ಹೇಗೆ ಓದಬೇಕು ಅಂದ್ರ ಪುಸ್ತಕವೇ, 'ಸಾಕೋ ಮುಚ್ಚಿಡು ನಾನೇ ದಣಿದಿದ್ದೇನ' ಅಂತ ಹೇಳಬೇಕು. ಅದಕ್ಕೆ ದುಡಿಯುವುದನ್ನು ಕಲಿಸಬೇಕು ಮಕ್ಕಳಿಗೆ.

ಮನುಷ್ಯನಿಗೆ ಈ ಜಗತ್ತಿನಲ್ಲಿ ಇರುವುದು ಎರಡೇ ಆಯ್ಕೆ. ಒಂದು ಕೊಟ್ಟು ಹೋಗಬೇಕು, ಇಲ್ಲಾ ಬಿಟ್ಟು ಹೋಗಬೇಕು ಅಷ್ಟೆ. ಯಾಕ್ ಕೊಟ್ಟು ಹೋಗಬೇಕು? ಯಾಕಂದ್ರ, ನಮ್ಮ ಬದುಕಿಗೆ ಬೇಕು ಅಂತ ನಾವು ಭೂಮಿ ಮ್ಯಾಲೆ ಬರುವುದಕ್ಕ ಮೊದಲೇ ನಮ್ಮ ತಾಯಿಯ ಎದೆಯಲ್ಲಿ ಹಾಲು ಇಟ್ಟಾನ ದೇವರು. 'ಆನೆ ಕುದುರೆ ಭಂಡಾರವಿರ್ದಡೇನೊ? ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ. ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ. ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೊ? ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ. ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ' ಎನ್ನುತ್ತಾನೆ ಮೋಳಿಗೆ ಮಾರಯ್ಯ.

ನಿಮ್ಮ ಬಳಿ ಹತ್ತು ಕಾರು ಇರಬಹುದು, ಆದರೆ ನೀವು ಒಮ್ಮೆಗೆ ಹತ್ತೋದು ಒಂದೇ ಕಾರು. ನಮ್ಮ ಮನೆಯಲ್ಲಿ ಹತ್ತು ಬೆಡ್ ರೂಂ ಅದಾವ್ರಿ ಅಂದ್ರೂ ನೀವು ಮಲಗಿಕೊಳ್ಳೋದು ಒಂದೇ ಬೆಡ್ ರೂಮಲ್ಲಿ. ಮನೆಯಲ್ಲಿ ನೂರು ಆಕಳು ಇದ್ದರೂ ನೀನು ಕುಡಿಯೋದು ಅರ್ಧ ಕಪ್ ಚಹಾ ಅಷ್ಟೆ. ದೇಹ ಭೂಮಿಯೊಳಗೆ ಹೋಗತ್ತೈತಿ. ಅಸ್ಥಿ ಗಂಗೆ ಪಾಲಾಗತ್ತೈತಿ. ಹೆಂಡತಿಯೂ ಮಕ್ಕಳ ಜೊತೆಗೆ ಹೋಗ್ತಾಳ. ಪ್ರಾಣ ವಾಯುವಿನ ಜೊತೆಗೆ ಹೋಗತ್ತೈತಿ. ಸಾವಿನ ಸಂಗಡ ಯಾರೂ ಬರೋದಿಲ್ಲ. ಏನೂ ಬರೋದಿಲ್ಲ. ಅದಕ್ಕೆ ನಾವು ಈ ಜಗತ್ತಿಗೆ ಏನಾರ ಕೊಟ್ಟು ಹೋಗಬೇಕು.

ಮದರ್ ತೆರೆಸಾ ಅವರಿಗೆ ನೊಬೆಲ್ ಪ್ರಶಸ್ತಿ ಬಂದಾಗ ಅವರು ಒಂದು ಘಟನೆ ಹೇಳಿದರು. ತೆರೆಸಾ ಅವರಿಗೆ ಕೊಲ್ಕತ್ತದಲ್ಲಿ ಒಂದು ದಿನ ಒಬ್ಬ ಮಹಿಳೆ ಅನ್ನ ಕೇಳಿದಳು. ಆಕೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದಳು. ತೆರೆಸಾ ಅವಳಿಗೆ ಒಂದು ಬಟ್ಟಲಿನಲ್ಲಿ ಅನ್ನ ನೀಡಿದರು. ಆಕೆ ಆ ಅನ್ನವನ್ನು ಮೊದಲು ತನ್ನ ಮಕ್ಕಳಿಗೆ ಹಂಚಲಿಲ್ಲ. ತನ್ನ ಮನೆಯ ಬದಿಗೇ ಇರುವ ಇತರ ಮನೆಗಳ ಮಕ್ಕಳಿಗೆ ಅನ್ನ ಕೊಟ್ಟಳು. ಅದಕ್ಕೆ ತೆರೆಸಾ 'ನಾನು ಆಕೆಗೆ ಕೊಟ್ಟ ಅನ್ನದ ಪಾತ್ರೆ ಸಣ್ಣದಿತ್ತು. ಆದರೆ ನಾನು ಕೊಟ್ಟ ಅನ್ನವನ್ನು ಹಂಚಿ ತಿನ್ನಬೇಕು ಎನ್ನುವ ಆಕೆಯ ಹೃದಯದ ಪಾತ್ರೆ ದೊಡ್ಡದಿತ್ತು' ಎಂದು ಹೇಳುತ್ತಾರೆ.

ನಮ್ಮ ಪಾತ್ರೆ ಬಹಳ ಸಣ್ಣದಾಗಿದೆ. ನಮಗೆ ಕೊಟ್ಟೇ ಗೊತ್ತಿಲ್ಲ. ಕೊಟ್ಟು ಸಂತೋಷ ಪಡಬೇಕು. ಜೀವನದಲ್ಲಿ ಬಹಳ ಮುಖ್ಯವಾದ್ದು ಏನಂದ್ರ, ಮನುಷ್ಯ ದುಡಿತಾ ಇರಬೇಕು ಮತ್ತು ದುಡಿದಿದ್ದರಲ್ಲಿ ಸ್ವಲ್ಪ ಪಾಲನ್ನು ಹಂಚುತ್ತಾ ಇರಬೇಕು. ಕಾಯಕ ಮತ್ತು ದಾಸೋಹ ಎರಡೂ ಇರಬೇಕು. ಅದು ಇದ್ದರೆ ಅದೇ ಕಲ್ಯಾಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಡಿಸೆಂಬರ್ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪಂಚಮಿ ಗಂ. 10-49 ನಕ್ಷತ್ರ: ಮಘ ಗಂ. 27-47 ಯೋಗ: ವಿಷ್ಕಂಭ ಗಂ. 18-11 ಕರಣ: ತೈತಿಲ ಗಂ. 10-49, ಧನು ಮಾಸದ 04 ನೇ ದಿನ, ಮಳೆನಕ್ಷತ್ರ: ಮೂಲ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-52 ಸೂರ್ಯಾಸ್ತ : 06-05
ಮುಸ್ಲಿಂ ದಿನಾಂಕ : 17 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 4, 6

ಮೇಷ: ಎಲ್ಲಾ ವಿಚಾರಗಳಲ್ಲಿಯೂ ಇತರರ ಅಭಿಪ್ರಾಯವನ್ನು ಕೇಳದೆ ನಿಮ್ಮದೇ ನಿರ್ಧಾರವನ್ನು ತೆಗೆದುಕೊಳ್ಳಿ. ಬದುಕಿಗೆ ಹಿರಿಯರಿಂದ ಆಶೀರ್ವಾದ ಲಭಿಸುವುದು. ಹೊಸ ಜನರ ಪರಿಚಯವಾಗಲಿದೆ.

ವೃಷಭ: ವೃತ್ತಿರಂಗದಲ್ಲಿ ಹಿರಿಯ ಅಧಿಕಾರಿಗಳ ಒತ್ತಡದ ಮೇರೆಗೆ ಅನಿವಾರ್ಯವಾಗಿ ಗ್ರಾಹಕರಿಗೆ ಮೋಸ ಮಾಡಬೇಕಾದ ಸಂದರ್ಭಗಳು ಎದುರಾಗುವುದು. ಮಕ್ಕಳ ಸಡಗರ ಕಂಡು ಮನಸ್ಸಿಗೆ ಸಂತೋಷವಾಗುವುದು.

ಮಿಥುನ: ಕಿರುತೆರೆ ಮತ್ತು ಸಿನಿಮಾ ಕಲಾವಿದರಿಗೆ ವಿಶೇಷ ಮಾನ್ಯತೆ ದೊರೆಯಲಿದೆ. ಆಹಾರ ವ್ಯತ್ಯಾಸದಿಂದ ಪಿತ್ತೋದ್ರೇಕ ಸಂಬಂಧಿ ಅನಾರೋಗ್ಯಗಳು ಎದುರಾಗಲಿವೆ. ಅವಸರದ ತೀರ್ಮಾನ ತೆಗೆದುಕೊಳ್ಳದಿರಿ.

ಕರ್ಕಾಟಕ: ನೀವು ನಂಬುವ ದೇವಸ್ಥಾನದ ಸೇವೆ ಮಾಡುವುದರಿಂದ ಗೊಂದಲಗಳು ನಿವಾರಣೆಯಾಗಿ ಸರಿಯಾದ ಮಾರ್ಗ ಸಿಗುವುದು. ಮನೆಯಲ್ಲಿ ವಿವಾಹ ಸಿದ್ಧತೆಗಳು ಭರದಿಂದ ಸಾಗಲಿವೆ.

ಸಿಂಹ: ಏಕಮುಖ ಪ್ರತಿಭೆಗಷ್ಟೆ ಅಲ್ಲದೇ ಇನ್ನಿತರೇ ವಿಷಯಗಳಿಗೂ ಪ್ರಾಮುಖ್ಯ ನೀಡಿ. ರಾಜಕೀಯ ವ್ಯಕ್ತಿಗಳಿಗೆ ಹಣಕಾಸಿನ ವಿಷಯದಲ್ಲಿ ತೊಂದರೆಗಳು ಸಂಭವಿಸಬಹುದು. ಔಷಧಿ ವ್ಯಾಪಾರಿಗಳಿಗೆ ಲಾಭವಾಗುವುದು.

ಕನ್ಯಾ: ವ್ಯವಹಾರದಲ್ಲಿ ಎದುರಾಗುವ ಸಮಸ್ಯೆಗೆ ಸೋಮಾರಿತನವೇ ಮೂಲ ಕಾರಣವಾಗಲಿದೆ. ನೂತನ ದಂಪತಿಗೆ ಸಂಸಾರದಲ್ಲಿ ಸಂತೋಷದ ಅನುಭವ ಸಿಗಲಿದೆ. ವಿದ್ಯಾರ್ಥಿಗಳಿಗೆ ಇಷ್ಟಾರ್ಥ ನೆರವೇರುವುದು.

ತುಲಾ: ನಂಬಿಕಸ್ಥರಿಂದ ಮೋಸ ಕೃತ್ಯಗಳು ನಡೆಯುವ ಸಂದರ್ಭಗಳು ಕಾಣುವುದು. ವ್ಯವಹಾರಗಳ ಬಗ್ಗೆ ಹೆಚ್ಚಿನ ಗಮನಹರಿಸುವುದು ಮುಖ್ಯ. ಅಗ್ನಿಯಿಂದ ಅಪಾಯವಾಗುವ ಭೀತಿ ಇರುವುದು.

ವೃಶ್ಚಿಕ: ಮನೆಯಲ್ಲಿ ನಡೆದ ಅಹಿತಕರ ಘಟನೆಯಿಂದಾಗಿ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯಕ್ಕೆ ಹಾನಿಯುಂಟಾಗಲಿದೆ. ರಾಸಾಯನಿಕ ವಸ್ತುಗಳ ಬಳಕೆಯಲ್ಲಿ ಹೆಚ್ಚಿನ ಜಾಗ್ರತೆ ಇರಲಿ. ಬಾಲ್ಯದ ಕನಸು ಈಡೇರುವ ದಿನವಾಗಿದೆ.

ಧನು: ಬುದ್ಧಿಯನ್ನು ಕೈಯಲ್ಲಿ ಇಟ್ಟುಕೊಳ್ಳುವುದು ಅಭಿವೃದ್ಧಿಗೆ ಅನುಕೂಲವಾಗುತ್ತದೆ. ದೈವಾನುಗ್ರಹ ಉತ್ತಮವಿದ್ದು, ದೇವತಾ ದರ್ಶನ ಭಾಗ್ಯ ಒದಗಿ ಬರಲಿದೆ. ರೇಷ್ಮೆ ವಸ್ತ್ರಗಳ ಮಾರಾಟದಿಂದ ಲಾಭವನ್ನು ಪಡೆಯುವಿರಿ.

ಮಕರ: ಸಹೋದರ ಸಹೋದರಿಯರ ಪ್ರೀತಿ ವಿಶ್ವಾಸದಿಂದ ಬಹಳ ಖುಷಿ ಸಿಗುವುದು. ಅಧ್ಯಾಪಕರಿಗೆ ವಿದ್ಯಾರ್ಥಿಗಳ ಮೆಲುಗೈಯಿಂದ ಸಂತೋಷ ಸಿಗುವುದು. ಜಗನ್ಮಾತೆ ರಾಜರಾಜೇಶ್ವರಿಯನ್ನು ಪ್ರಾರ್ಥಿಸಿ.

ಕುಂಭ: ಅಂಚೆ ಕಚೇರಿಯ ಪರೀಕ್ಷೆಯನ್ನು ಬರೆದವರಿಗೆ ಆಕಾಂಕ್ಷೆಗೆ ಮೀರಿದ ಫಲಿತಾಂಶ ದೊರೆತರೂ ಕುಟುಂಬದಿಂದ ದೂರವಾಗಬೇಕಾದ ಪರಿಸ್ಥಿತಿ ಎದುರಾಗುವುದು. ಬಣ್ಣ ಮತ್ತು ಸಿಮೆಂಟ್ ವ್ಯಾಪಾರಿಗಳಿಗೆ ಲಾಭ ಅಧಿಕ.

ಮೀನ: ತೈಲ ಲೇಪನದಂತಹ ಆಯ್ಕೆಯಿಂದಾಗಿ ಕಾಲು ನೋವು ಉಪಶಮನವಾಗಲಿದೆ. ನೆರೆಹೊರೆಯವರೊಂದಿಗಿನ ಸಂಬಂಧಗಳು ಉತ್ತಮಗೊಳ್ಳುವುದು. ಸ್ವ–ಉದ್ಯೋಗಿಗಳಿಗೆ ಅವಕಾಶಗಳ ಲಭ್ಯವಾಗುವುದು.

ಪದಬಂಧ 5897

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಆಜ್ಞೆ ಮಾಡುವವನು ಇಲ್ಲಿದ್ದಾನೆ (4)
3. ನೂತನ ದಂಪತಿಗಳು ಕೈಗೊಳ್ಳುವ ವಿಹಾರಯಾತ್ರೆ (4)
5. ತಿರುಗಿಸಿದರೂ ಇದು ಹೊಸತು (3)
6. ನಯವಿಲ್ಲದೆ ಒರಟಾದುದು (4)
8. ಹೆಂಡತಿಯನ್ನು ಕಳೆದುಕೊಂಡವನು (3)
10. ಮತ್ತು ಬರಿಸಿ ಹೂಡಿದ ಒಳಸಂಚು (4)
11. ಉಂಟಾಗಲು ಶಕ್ತವಿಲ್ಲದುದು ಉಲ್ಟಾ ಆಗಿದೆ (4)
12. ದ್ವಾದಶ ರಾಶಿಯಲ್ಲಿ ಕಾಣಿಸಿರುವ ಜೋಡಿ (3)
14. ಸರಸ, ವಿರಸ ಸಮನಾಗಿರುವಿಕೆ (4)
17. ಒಳ್ಳೆಯ ಸ್ವರವಿದು (3)
18. ಅಂಗೈನಿಂದ ಕೆನ್ನೆಗೆ ಕೊಡುವ ಏಟು (4)
19. ಕೊನೆಗೆ ಬರ ಬಂದಾಗ ಬೆತ್ತಲೆಯಾಗಿರುವುದು (4)

ಮೇಲಿಂದ ಕೆಳಕ್ಕೆ
1. ನಿರ್ಣಯವಾದುದು ಇದು (3)
2. ನಕಲು ಎಂದಿದ್ದಕ್ಕೆ ಹೀಗೆ ಕೋಪಗೊಳ್ಳು (3)
3. ಮನದಿಂದ ಮಾಡಿಕೊಂಡ ಅರಿಕೆ (3)
4. ಹರಿಯುವಂಥಹ ವಸ್ತು ಉಪದ್ರವದಲ್ಲಿದೆ (2)
7. ಮಾಘಶುದ್ಧ ಸಪ್ತಮಿಯಂದು ಆಚರಿಸುವ ಹಬ್ಬ (5)
9. ನೆತ್ತರು ಪ್ರವಹಿಸುವಿಕೆ (5)
13. ಬೆಳಗಿನ ಜಾವ (3)
14. ಸರ ಹಿಡಿದವ ಹಚ್ಚಿರುವ ಪಾಳಿ (3)
15. ಮರದ ಬಳಿ ನಡೆದ ಕಾಳಗ (3)
16. ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)



5896ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ನಕ್ಷತ್ರಿಕ 5.ರಮಣಿ 6.ಸುಧಾರಕ 8.ಸಮಾಗಮ 10.ಲವ 12.ಕವಿ 14.ಅಂತರ್ಧಾನ 16.ಪರಹಿತ 17.ಕದವಾ 18.ತರಗತಿ

ಮೇಲಿಂದ ಕೆಳಕ್ಕೆ: 1.ನರಪೇತಲ 2.ರಾಣಿವಾಸ 3.ನವಸುಮ 4.ಕಣಕ 7.ರಸಿಕ 9.ಗಣಿತ 11.ವಜೀರ 13.ವಿತಂಡವಾದ 14.ಅಂತಜ್ಯೋತಿ 15.ನವ್ಯಕವಿ 16.ಪರಾತ

ಸುಡೊಕು 6282

7				1			8	2
	3	6	8		9	5		7
4		8	7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6281 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಗೋವಿಂದರಾವ್ ಸಮಿತಿ ವರದಿ ಸಲ್ಲಿಸಿದ ಕೂಡಲೇ ಜಾರಿಗೆ ಕ್ರಮ • ಆಲಮಟ್ಟಿ: ಒಂದೇ ಹಂತದಲ್ಲಿ ಭೂಸ್ವಾಧೀನ

ಉತ್ತರ ಕರ್ನಾಟಕ ಅಭಿವೃದ್ಧಿಗೆ ಬದ್ಧ –ಸಿ.ಎಂ

ಪ್ರಜಾವಾಣಿ ವಾರ್ತೆ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಅವಹೇಳನ ಮಾಡಿರುವುದನ್ನು ವಿರೋಧಿಸಿ ಸುವರ್ಣ ವಿಧಾನಸೌಧದಲ್ಲಿ ಗುರುವಾರ ವಿಧಾನಸಭೆಯಲ್ಲಿ ಆಡಳಿತ ಪಕ್ಷದ ಸದಸ್ಯರು ತಮ್ಮ ಆಸನಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಇಟ್ಟುಕೊಂಡರು

ಸುವರ್ಣ ವಿಧಾನಸೌಧ (ಬೆಳಗಾವಿ): ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಕುರಿತು ಸರ್ಕಾರ ರಚಿಸಿದ್ದ ಪ್ರೊ. ಗೋವಿಂದರಾವ್ ಅವರ ಉನ್ನತಾಧಿಕಾರ ಸಮಿತಿ ವರದಿ ಕೊಟ್ಟ ತಕ್ಷಣವೇ ಅದನ್ನು ಅನುಷ್ಠಾನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಳೆದ ನಾಲ್ಕು ದಿನಗಳಿಂದ ವಿಧಾನಸಭೆಯಲ್ಲಿ ನಡೆದ ಉತ್ತರ ಕರ್ನಾಟಕದ ಸಮಸ್ಯೆ ಮತ್ತು ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಅವರು ಉತ್ತರ ನೀಡಿದರು.

'ಸರ್ಕಾರ ದಿವಾಳಿಯಾಗಿದ್ದು ಕಾಟಾಚಾರಕ್ಕೆ ಅಧಿವೇಶನ ನಡೆಸುತ್ತಿದೆ. ಶಾಸಕರ ಬೇಡಿಕೆಗಳಿಗೆ ಸ್ಪಂದಿಸಿಲ್ಲ' ಎಂದು ದೂರಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ತಮ್ಮ ಸದಸ್ಯರ ಜತೆಗೆ ಸಭಾತ್ಯಾಗ ಮಾಡಿದರು.

ಬಳಿಕ ಸುದೀರ್ಘ ಉತ್ತರ ನೀಡಿದ ಸಿದ್ದರಾಮಯ್ಯ, ಸರ್ಕಾರ ನೀಡಿದ ಕೊಡುಗೆಗಳನ್ನು ವಿವರಿಸಿದರಲ್ಲದೇ, ಕೆಲವು ಭರವಸೆಗಳನ್ನೂ ನೀಡಿದರು.

'ನಂಜುಂಡಪ್ಪ ವರದಿಯ ಪ್ರಕಾರ 2007-09 ರಿಂದ 2023-24 ರವರೆಗೆ ₹35 ಸಾವಿರ ಕೋಟಿಗೂ ಹೆಚ್ಚಿನ ಅನುದಾನಗಳನ್ನು ಖರ್ಚು ಮಾಡಲಾಗಿದೆ. ಅದರಲ್ಲಿ, ಉತ್ತರ ಕರ್ನಾಟಕದ 14 ಜಿಲ್ಲೆಗಳಿಗೆ ₹17,500 ಕೋಟಿ ವೆಚ್ಚ ಮಾಡಲಾಗಿದೆ' ಎಂದು ಅವರು ತಿಳಿಸಿದರು.

'ಇದರ ನಿರೀಕ್ಷಿತ ಪ್ರಮಾಣದ ಪ್ರಗತಿ ಆಗಿಲ್ಲವೆಂದು ಬಹುಪಾಲು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ, ಹಿಂದಿನ ವರ್ಷ ಬೆಳಗಾವಿ ಅಧಿವೇಶನದಲ್ಲಿ ಉನ್ನತಾಧಿಕಾರ ಸಮಿತಿ ರಚಿಸುವುದಾಗಿ ಘೋಷಿಸಿದ್ದೆವು. ಅದರ ಪ್ರಕಾರ ನಾವು ಸಮಿತಿ ರಚಿಸಿದ್ದೇವೆ' ಎಂದು ಸಿದ್ದರಾಮಯ್ಯ ಅವರು ಪ್ರತಿಪಾದಿಸಿದರು.

'ಉತ್ತರ ಕರ್ನಾಟಕ ಈ ಭಾಗದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳುತ್ತೇವೆ' ಎಂದು ಅವರು ವಾಗ್ದಾನ ಮಾಡಿದರು.

'ಮಹದಾಯಿ ಯೋಜನೆಯನ್ನು ನಾವು ಶೀಘ್ರವಾಗಿ ಅನುಷ್ಠಾನ ಮಾಡಲು ಉದ್ದೇಶಿಸಿದ್ದೇವೆ. ಆದರೆ, ಕೇಂದ್ರದ ರಾಷ್ಟ್ರೀಯ ವನ್ಯಜೀವಿ ಮಂಡಳಿಯು ಈ ಯೋಜನೆಗೆ ಒಪ್ಪಿಗೆ ನೀಡದೇ ಸತಾಯಿಸುತ್ತಿದೆ. ಆದ್ದರಿಂದ, ಕೇಂದ್ರ ಸರ್ಕಾರವು ಈ ಕೂಡಲೇ ಒಪ್ಪಿಗೆ ನೀಡಬೇಕೆಂದು ಈ ಸದನದ ಪರವಾಗಿ ಒತ್ತಾಯಿಸುತ್ತೇನೆ' ಎಂದು ಹೇಳಿದರು.

ಆಲಮಟ್ಟಿ: 546.256 ಮೀಟರ್‌ಗೆ ಹೆಚ್ಚಿಸಲು ಕ್ರಮ

'ಆಲಮಟ್ಟಿ ಜಲಾಶಯದ ಎತ್ತರವನ್ನು 519 ಮೀಟರ್‌ನಿಂದ 546.256 ಮೀಟರ್‌ಗಳಿಗೆ ಹೆಚ್ಚಿಸಲಾಗುವುದು. ಮುಳುಗಡೆಯಾಗುವ ಸುಮಾರು 73 ಸಾವಿರ ಎಕರೆ ಭೂಮಿಯನ್ನು ಕನ್ಸೆಂಟ್ ಅವಾರ್ಡ್ ಮೂಲಕ ಒಂದೇ ಹಂತದಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತೇವೆ' ಎಂದು ಸಿದ್ದರಾಮಯ್ಯ ಅವರು ತಿಳಿಸಿದರು.

'ಈ ಭಾಗದಲ್ಲಿ ಮಳೆ ಇನ್ನಿತರ ಕಾರಣಗಳಿಂದ ಹಾನಿ ಆಗಿರುವ ರಸ್ತೆ ಅಭಿವೃದ್ಧಿಗೆ ಆದ್ಯತೆ ಮೇರೆಗೆ ಕ್ರಮವಹಿಸುತ್ತೇವೆ' ಎಂದು ಭರವಸೆ ನೀಡಿದರು.

ಸುದ್ದಿ 2 ನಿಮಿಷ

ಹೊಸಕೋಟೆ, ಬಿಡದಿ, ನೆಲಮಂಗಲಕ್ಕೆ ಮೆಟ್ರೊ: ಪ್ರಸ್ತಾವ

ಬೆಳಗಾವಿ: 'ಮುಂದಿನ ದಿನಗಳಲ್ಲಿ ಸಂಚಾರ ದಟ್ಟಣೆ ಗಮನದಲ್ಲಿಟ್ಟುಕೊಂಡು, 'ನಮ್ಮ ಮೆಟ್ರೊ' ಮಾರ್ಗವನ್ನು ಹೊಸಕೋಟೆ, ನೆಲಮಂಗಲ ಹಾಗೂ ಬಿಡದಿಯವರೆಗೆ ವಿಸ್ತರಿಸುವ ಪ್ರಸ್ತಾವ ಸರ್ಕಾರದ ಮುಂದಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸಭೆ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಶರತ್ ಬಚ್ಚೇಗೌಡ ಅವರು ಹೊಸಕೋಟೆಗೆ ಮೆಟ್ರೊ ಮಾರ್ಗ ವಿಸ್ತರಣೆ ವಿಚಾರವಾಗಿ ಕೇಳಿದ ಪ್ರಶ್ನೆಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಶಿವಕುಮಾರ್ ಅವರು ಗುರುವಾರ ಉತ್ತರಿಸಿದರು.

'ಈ ವಿಚಾರವಾಗಿ ಶರತ್ ಅವರು ಬಹಳ ಹೋರಾಟ ಮಾಡುತ್ತಿದ್ದಾರೆ. ಬೆಂಗಳೂರು ಕೂಡ ವಿಪರೀತ ಬೆಳೆಯುತ್ತಿದೆ. ಸಾಮಾನ್ಯ ರೈಲಿನಲ್ಲಿ ಕೋಲಾರದಿಂದ ಸುಮಾರು 10 ಸಾವಿರಕ್ಕೂ ಹೆಚ್ಚು ಜನ ದಿನ ನಿತ್ಯ ಸಂಚರಿಸುತ್ತಾರೆ. ಐಟಿ ಕಾರಿಡಾರ್ ಬಹುತೇಕ ಹೊಸಕೋಟೆ ಮುಟ್ಟಿದೆ. ಹೀಗಾಗಿ ಮೆಟ್ರೊ ಅವಶ್ಯಕತೆ ಇದೆ' ಎಂದು ತಿಳಿಸಿದರು.

'ಮಾರ್ಗ ವಿಸ್ತರಣೆ ವಿಚಾರವನ್ನು ಈಗಾಗಲೇ ಯೋಜನೆಯಲ್ಲಿ ಸೇರಿಸಿ ವಿಸ್ತೃತ ಸಮೀಕ್ಷೆ ಮಾಡಿಸುತ್ತಿದ್ದೇನೆ. ಸರ್ಕಾರ ಹಾಗೂ ಮೆಟ್ರೊ ಸಂಸ್ಥೆ ಮಾರ್ಗವನ್ನು ಸಹಭಾಗಿತ್ವದಲ್ಲಿ ಪರಿಗಣಿಸಿದೆ. ಹೊಸಕೋಟೆ ಜತೆಗೆ ಬಿಡದಿ, ನೆಲಮಂಗಲದ ವರೆಗೂ ಮೆಟ್ರೊ ಮಾರ್ಗ ವಿಸ್ತರಣೆ ಯೋಜನೆ ಸಿದ್ಧಪಡಿಸಲು ವರದಿ ರೂಪಿಸಲಾಗುತ್ತಿದೆ' ಎಂದು ತಿಳಿಸಿದರು.

ಜಿಂದಾಲ್‌ಗೆ ಜಮೀನು: ನೋಟಿಸ್

ಬಳ್ಳಾರಿ: ಜಿಂದಾಲ್ ಸೌತ್‌ವೆಸ್ಟ್ (ಜೆಎಸ್‌ಡಬ್ಲ್ಯು) ಉಕ್ಕು ಕಂಪನಿಗೆ ಸಂಡೂರು ತಾಲ್ಲೂಕಿನ ತೋರಣಗಲ್ ಹೋಬಳಿಯಲ್ಲಿ 3,677 ಎಕರೆ ಜಮೀನನ್ನು ಕ್ರಯಕ್ಕೆ ನೀಡುವುದನ್ನು ಪ್ರಶ್ನಿಸಿ ಹೈಕೋರ್ಟ್‌ನ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಲ್ಲಿಕೆಯಾಗಿದೆ.

ಕುಡುತಿನಿಯ ಮಂಜುನಾಥ್ ಮತ್ತು ಇತರ 30 ಮಂದಿ ಬುಧವಾರ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾ.ಸಿ.ಎಂ ಪೂಣಚ್ಚ ಅವರಿದ್ದ ಪೀಠ ಗುರುವಾರ ವಿಚಾರಣೆ ನಡೆಸಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿರುವ ನ್ಯಾಯಾಲಯ, ಜೆಎಸ್‌ಡಬ್ಲ್ಯುಗೂ ತುರ್ತು ನೋಟಿಸ್ ನೀಡಿದೆ. ಒಟ್ಟು 10 ಮಂದಿಯನ್ನು ಇದರಲ್ಲಿ ಪ್ರತಿವಾದಿಗಳನ್ನು ಮಾಡಲಾಗಿದೆ. ಮುಂದಿನ ವಿಚಾರಣೆಯನ್ನು ಜನವರಿ 16ಕ್ಕೆ ನಿಗದಿ ಮಾಡಲಾಗಿದೆ. ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ಖಾಸಗಿ ಕಂಪನಿಗೆ ಮಾರಲಾಗುತ್ತಿದೆ. ಇದೇ ಜಮೀನನಲ್ಲಿನ ಖನಿಜ ಸಂಪನ್ಮೂಲವನ್ನು ಸರ್ಕಾರ ಬಳಸಿಕೊಳ್ಳಲು ಅವಕಾಶವಿದೆ ಎಂದೂ ವಾದಿಸಲಾಗಿದೆ. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ನ್ಯಾ. ಸಂತೋಷ ಹೆಗ್ಡೆ ವರದಿಯಲ್ಲಿ ಜೆಎಸ್‌ಡಬ್ಲ್ಯು ಹೆಸರು ಉಲ್ಲೇಖಿಸಿರುವುದನ್ನೂ ಅರ್ಜಿದಾರರು ಕೋರ್ಟ್ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದಾರೆ.

ಎನ್‌ಎಚ್‌ಎಂ ಸಿಬ್ಬಂದಿ ಸೇವೆ ಕಾಯಂ ಇಲ್ಲ: ಸಚಿವ ದಿನೇಶ್

'ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಅಡಿ ಗುತ್ತಿಗೆ ಮತ್ತು ಹೊರ ಗುತ್ತಿಗೆ ಆಧಾರದ ಸಿಬ್ಬಂದಿ ಸೇವೆಯನ್ನು ಕಾಯಂ ಮಾಡುವ ಪ್ರಸ್ತಾವ ಇಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಗೆ ತಿಳಿಸಿದರು.

ದಿನೇಶ್ ಗುಂಡೂರಾವ್

ಬಿಜೆಪಿಯ ಯಶ್‌ಪಾಲ್ ಎ.ಸುವರ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ವಾರ್ಷಿಕ ಶೇಕಡ 15ರಷ್ಟು ವೇತನ ಹೆಚ್ಚಳ, ಒಂದು ಬಾರಿ ವರ್ಗಾವಣೆಗೆ ಅವಕಾಶ, ನೇಮಕಾತಿಯಲ್ಲಿ ಶೇ 2ರಷ್ಟು ಕೃಪಾಂಕ, ₹10 ಲಕ್ಷ ಮೊತ್ತದ ನಿಶ್ಚಿತ ವಿಮೆ, ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ ಯೋಜನೆಯಡಿ ಚಿಕಿತ್ಸಾ ಸೌಲಭ್ಯವನ್ನು ಎನ್‌ಎಚ್‌ಎಂ ಸಿಬ್ಬಂದಿಗೆ ನೀಡಲಾಗುತ್ತಿದೆ' ಎಂದರು.

2022–23ರಲ್ಲಿ ಎನ್‌ಎಚ್‌ಎಂ ಸಿಬ್ಬಂದಿಯ ವೇತನದಲ್ಲಿ ಶೇ 15ರಷ್ಟು ಹೆಚ್ಚಳ ಮಾಡಲಾಗಿತ್ತು. 2024–25ನೇ ಸಾಲಿನಲ್ಲೂ ಶೇ 15ರಷ್ಟು ವೇತನ ಹೆಚ್ಚಳ ಮಾಡುವ ಪ್ರಸ್ತಾವ ಪರಿಶೀಲನೆಯಲ್ಲಿದೆ ಎಂದು ತಿಳಿಸಿದರು.

'59,772 ಶಿಕ್ಷಕರ ಹುದ್ದೆಗಳು ಖಾಲಿ'

ಪ್ರಜಾವಾಣಿ ವಾರ್ತೆ

ವಿಧಾನ ಮಂಡಲ

ಸುವರ್ಣ ವಿಧಾನಸೌಧ (ಬೆಳಗಾವಿ): 'ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಒಟ್ಟು 59,772 ಶಿಕ್ಷಕರ ಹುದ್ದೆಗಳು ಖಾಲಿ ಇವೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಗುರುವಾರ ವಿಧಾನಸಭೆಗೆ ತಿಳಿಸಿದರು.

ಮಧು ಬಂಗಾರಪ್ಪ

ಬಿಜೆಪಿಯ ಕೆ.ಗೋಪಾಲಯ್ಯ ಅವರ ಪರವಾಗಿ ಬೈರತಿ ಬಸವರಾಜ ಅವರು ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, '41,905 ಪ್ರಾಥಮಿಕ ಶಾಲೆಗಳಲ್ಲಿ 50,067 ಮತ್ತು 4,871 ಪ್ರೌಢ ಶಾಲೆಗಳಲ್ಲಿ 9,705 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳಿಗೆ ಅನುಗುಣವಾಗಿ 43,968 ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ' ಎಂದರು.

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ವೇಗ ನೀಡಲಾಗಿದೆ. 2022ರಲ್ಲಿ 15,000 ಶಿಕ್ಷಕರ ಹುದ್ದೆಗಳ ಭರ್ತಿಗೆ ಪ್ರಕ್ರಿಯೆ ಆರಂಭಿಸಲಾಗುತ್ತು, 13,352 ಮಂದಿ ಅರ್ಹತೆ ಪಡೆದಿದ್ದರು. ಈ ಪೈಕಿ 12,521 ಶಿಕ್ಷಕರಿಗೆ ನೇಮಕಾತಿ ಆದೇಶ ವಿತರಿಸಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇರುವ ಕಾರಣದಿಂದ 700 ಶಿಕ್ಷಕರಿಗೆ ನೇಮಕಾತಿ ಆದೇಶ ವಿತರಣೆ ಆಗಿಲ್ಲ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶದ ಏಳು ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲೆಗಳ 4,882 ಮತ್ತು ಪ್ರೌಢ ಶಾಲೆಗಳ 385 ಶಿಕ್ಷಕರ ಹುದ್ದೆಗಳ ಭರ್ತಿಗೆ ಅಕ್ಟೋಬರ್ 7ರಂದು ಒಪ್ಪಿಗೆ ದೊರಕಿದೆ ಎಂದರು.

ಗೌರವಧನ ಹೆಚ್ಚಳಕ್ಕೆ ಪ್ರಯತ್ನ: 'ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ₹12,000 ಗೌರವ ಧನ ನೀಡಲಾಗುತ್ತಿದೆ. ಈ ಮೊತ್ತ ಹೆಚ್ಚಿಸಲು ಸಿ.ಎಂ ಅವರಲ್ಲಿ ಮನವಿ ಮಾಡಲಾಗುವುದು' ಎಂದು ಮಧು ಬಂಗಾರಪ್ಪ ತಿಳಿಸಿದರು.

ಬಿಜೆಪಿಯ ಸಿ.ಸಿ.ಪಾಟೀಲ ಅವರ ಪರವಾಗಿ ವಿ.ಸುನಿಲ್ ಕುಮಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಅತಿಥಿ ಉಪನ್ಯಾಸಕರ ಗೌರವ ಧನ ಹೆಚ್ಚಿಸಲು ಸಲ್ಲಿಸಿದ್ದ ಪ್ರಸ್ತಾವವನ್ನು ಹಣಕಾಸು ಇಲಾಖೆ ತಿರಸ್ಕರಿಸಿದೆ. ಮತ್ತೊಮ್ಮೆ ಪ್ರಸ್ತಾಪಿಸಿ, ಒಪ್ಪಿಗೆ ಪಡೆಯಲು ಪ್ರಯತ್ನಿಸುತ್ತೇನೆ' ಎಂದರು.

'ಅತಿಥಿ ಉಪನ್ಯಾಸಕರಿಗೆ ಫೆಬ್ರುವರಿ ತಿಂಗಳ ಗೌರವಧನ ತಡೆ ಹಿಡಿಯಲಾಗಿದೆ. ಅತ್ಯಂತ ಕಡಿಮೆ ಗೌರವ ಧನ ನೀಡಲಾಗುತ್ತಿದೆ. ಎಸ್. ಬಂಗಾರಪ್ಪನವರ ಮಗ ನೀವು. ಗಟ್ಟಿಯಾಗಿ ನಿರ್ಧಾರ ಕೈಗೊಳ್ಳಿ' ಎಂದು ಸುನಿಲ್ ಕುಮಾರ್ ಹೇಳಿದರು.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) (ಜಸ್ಟೀಸ್ ಶಿವರಾಜ ವಿ.ಪಾಟೀಲ್ ರಸ್ತೆ, ರಾಯಚೂರು
Phone /Fax-08532-238488/89
Web. www.rimsraichur.karnataka.gov.in Email info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2024–25 ದಿನಾಂಕ : 18.12.2024

ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ವಿವರ	ಟೆಂಡರ್ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಿಮ್ಸ್ ಬೋಧಕ ಆಸ್ಪತ್ರೆಯ ಮಕ್ಕಳ ಶಾಸ್ತ್ರ ವಿಭಾಗ, ಮನೋವೈದ್ಯಶಾಸ್ತ್ರ ವಿಭಾಗ ಹಾಗೂ ಇಎನ್‌ಟಿ ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳ ಮತ್ತು ಸಲಕರಣೆಗಳನ್ನು ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/18/2024–25 DME/2024-25/IND1019	82.15
2	ರಿಮ್ಸ್ ಬೋಧಕ ಆಸ್ಪತ್ರೆಯ ದಂತ ಚಿಕಿತ್ಸಾ ವಿಭಾಗ ಹಾಗೂ ಎಲುಬು & ಕಿಲು ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳ ಮತ್ತು ಸಲಕರಣೆಗಳನ್ನು ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಉಪಕರಣ/19/2024–25 DME/2024-25/IND1020	90.00

1) **ಟೆಂಡರ್‌ಗಳನ್ನು ದಿನಾಂಕ :** 19.12.2024 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) **ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :** 02.01.2025 ರ ಸಾಯಂಕಾಲ 5.00 ಗಂಟೆಯ ವರೆಗೆ 3) **ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ:** 04.01.2025 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
DIPR/RCR/607/KSMC&A/608/2024-25 ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ – ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ,
ಕೆ.ಆರ್.ವೃತ್ತ, ಬೆಂಗಳೂರು–560001. ವೆಬ್‌ಸೈಟ್: www.shdpkar.in ಇ–ಮೇಲ್: cepiushdp@gmail.com

ಸಂ: ಮುಯೋಅ/ಯೋಅಘ/ರಾಹೆಅಯೋ/2024–25/4369 ದಿನಾಂಕ: 18–12–2024

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–5 ಘಟ್ಟ–1 ರಡಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 15/2024–25 ದಿನಾಂಕ: 18–12–2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಅಧೀಕ್ಷಕ ಇಂಜಿನಿಯರ್–1 & 2, ಯೋಜನಾ ಅನುಷ್ಠಾನ ಘಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು. ಇವರಿಂದ ಸರ್ಕಾರದ ಆದೇಶ ಸಂಖ್ಯೆ: ಲೋಇ 304 ಇಎಪಿ 2023 ಬೆಂಗಳೂರು, ದಿನಾಂಕ: 29.02.2024 ರಲ್ಲಿ ಮತ್ತು ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಲೋಇ 198 ಇಎಪಿ 2024 ದಿನಾಂಕ: 16.12.2024 ರಲ್ಲಿ ಅನುಮೋದಿಸಲಾಗಿರುವ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–5 ಘಟ್ಟ–1 ರಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ಟ್ಯಾಂಡರ್ಡ್ ಟೆಂಡರ್‌ಗಳ ಡಾಕ್ಯುಮೆಂಟ್ (ಕೆಡಬ್ಲ್ಯೂ–4) ಎಸ್.ಹೆಚ್.ಡಿ.ಪಿ ನಿಯಮಗಳನುಸಾರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ವಿವರ	ಟೆಂಡರ್‌ಗಿಟ್ಟ ಮೊತ್ತ 18% ಜಿ.ಎಸ್.ಟಿ ಹೊರತುಪಡಿಸಿ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆದಾರರ ದರ್ಜೆ/ಅರ್ಹ ಯೋಜನಾ ಉಸ್ತುವಾರಿ ಸಮಾಲೋಚಕರು	ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ
1	ಪ್ಯಾಕೇಜು ಸಂಖ್ಯೆ:– 643, 712 (ಎರಡನೇ ಕರೆ) ಪ್ಯಾಕೇಜು ಸಂಖ್ಯೆ:–655 (ಒಂದನೇ ಕರೆ)	ಪ್ಯಾಕೇಜುವಾರು ಟೆಂಡರ್‌ಗಿಟ್ಟ ಮೊತ್ತದ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು	ಪ್ಯಾಕೇಜುವಾರು ಇ.ಎಂ.ಡಿ ಮೊತ್ತದ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು	1ನೇ ದರ್ಜೆ ಮತ್ತು ಮೇಲ್ಪಟ್ಟು	11 ತಿಂಗಳು (ಮಳೆಗಾಲ ಸೇರಿ)

ಟೆಂಡರ್ ಪ್ರಕ್ರಿಯೆಯ ವಿವರಗಳು:– ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು **ದಿನಾಂಕ: 20.12.2024** ರಿಂದ **ದಿನಾಂಕ: 03.01.2025ರ ಸಂಜೆ 4.30 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. (2) ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಪ್ರೀ–ಟೆಂಡರ್ ಮೀಟಿಂಗ್ **ದಿನಾಂಕ: 26.12.2024 ರಂದು ಬೆಳಿಗ್ಗೆ 11.30 ಗಂಟೆಗೆ** (ಮುಖ್ಯ ಯೋಜನಾಧಿಕಾರಿ, ಎಸ್.ಹೆಚ್.ಡಿ.ಪಿ ಬೆಂಗಳೂರು ರವರ ಕಛೇರಿ). (3) ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 03.01.2025 ರಂದು ಸಂಜೆ 4.30 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 07.01.2025 ರ ಬೆಳಿಗ್ಗೆ 11.30 ಗಂಟೆ ನಂತರ.** (5) ಅರ್ಹ ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಂಭಾವನೀಯ **ದಿನಾಂಕ: 10.01.2025 ರಂದು ಬೆಳಿಗ್ಗೆ 11.30 ಗಂಟೆಗೆ.** (6) ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಲೋಕೋಪಯೋಗಿ ಇಲಾಖೆ ಮತ್ತು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿತ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಟೆಂಡರ್ ಆಹ್ವಾನಿಸಿರುವ ಕಾಮಗಾರಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರುರವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಮೂಲಕ support@eprochelpdesk.com ರಲ್ಲಿ ಪಡೆಯಬಹುದಾಗಿದೆ. ಕೆ.ಪಿ.ಪಿ ಪೋರ್ಟಲ್‌ನ ಸಹಾಯವಾಣಿ ದೂರವಾಣಿ ಸಂಖ್ಯೆಗಳು: +91-8046010000 / +91-8068948777.

ಸಹಿ/– ಅಧೀಕ್ಷಕ ಇಂಜಿನಿಯರ್–1, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು.
ಸಹಿ/– ಅಧೀಕ್ಷಕ ಇಂಜಿನಿಯರ್–2, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು.
DIPR/CP/3853/SPAN/2024-25

ಭ್ರಷ್ಟಾಚಾರ: ದಾಖಲೆ ನೀಡಿದರೆ ತಕ್ಷಣ ಕ್ರಮ: ತಿಮ್ಮಾಪುರ

ಸುವರ್ಣ ವಿಧಾನಸೌಧ (ಬೆಳಗಾವಿ): 'ಇಲಾಖೆಯಲ್ಲಿ ವರ್ಗಾವಣೆಯಲ್ಲಿ ಭ್ರಷ್ಟಾಚಾರ ಆಗಿದೆ ಎಂಬ ಬಗ್ಗೆ ದಾಖಲೆ ನೀಡಿದರೆ ಕ್ರಮತೆಗೆದುಕೊಳ್ಳುತ್ತೇನೆ' ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ಪರಿಷತ್‌ನಲ್ಲಿ ಬಿಜೆಪಿಯ ಕೆ.ಎಸ್. ನವೀನ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ವರ್ಗಾವಣೆ ಒಂದು ನೀತಿ. ಅದರ ಪ್ರಕಾರ ಮಾಡಿದ್ದೇವೆ. ಯಾರೊ ಆರೋಪಿಸಿದರು, ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದೆ ಎನ್ನುವುದಕ್ಕೆಲ್ಲ ಉತ್ತರಿಸಲು ಸಾಧ್ಯ ಇಲ್ಲ' ಎಂದರು.

ಇಲಾಖೆಯ ಅಧಿಕಾರಿಯೊಬ್ಬರು ಈ ಬಗ್ಗೆ ಸಂಭಾಷಣೆ ನಡೆಸಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿರುವುದನ್ನು ನವೀನ್ ಪ್ರಸ್ತಾಪಿಸಿದಾಗ ಪ್ರತಿಕ್ರಿಯಿಸಿದ ತಿಮ್ಮಾಪುರ, 'ಆ ಅಧಿಕಾರಿಯನ್ನು 24 ಗಂಟೆಯ ಒಳಗೆ ಅಮಾನತು ಮಾಡಿದ್ದೇನೆ' ಎಂದರು.

'2023 ಡಿಸೆಂಬರ್‌ನಿಂದ 2024ರ ನವೆಂಬರ್‌ವರೆಗೆ ಜಂಟಿ ಆಯುಕ್ತರು, ಉಪ ಆಯುಕ್ತರು, ಉಪ ಅಧೀಕ್ಷಕರು, ನಿರೀಕ್ಷಕರು, ಉಪ ನಿರೀಕ್ಷರು ಸೇರಿ ವಿವಿಧ ವೃಂದಗಳ ಒಟ್ಟು 336 ಸಿಬ್ಬಂದಿಯನ್ನು ವರ್ಗಾವಣೆ ಮಾಡಲಾಗಿದೆ. ಕಳೆದೊಂದು ವರ್ಷದಲ್ಲಿ 573 ಸಿಎಲ್‌–7 ಪರವಾನಗಿ ನೀಡಲಾಗಿದೆ' ಎಂದು ಸಚಿವರು ಮಾಹಿತಿ ನೀಡಿದರು.

ಈ ಮಧ್ಯೆ ಸಭಾಪತಿ ಬಸವರಾಜ ಹೊರಟ್ಟಿ ಮತ್ತೊಬ್ಬ ಸದಸ್ಯರಿಗೆ ಬೇರೆ ಪ್ರಶ್ನೆ ಕೇಳಲು ಅವಕಾಶ ನೀಡಿದಾಗ, ತಮ್ಮ ಪ್ರಶ್ನೆಗೆ ಸಚಿವರು ಸಮರ್ಪಕವಾದ ಉತ್ತರ ನೀಡಿಲ್ಲ ಎಂದು ಸಿಟ್ಟಿಗೆದ್ದ ನವೀನ್, ಪೀಠದ ಎದುರು ಧರಣಿ ನಡೆಸಲು ಮುಂದಾದರು.

ಮತ್ತೆ ಮಾತನಾಡಿದ ಸಚಿವರು, 'ಭ್ರಷ್ಟಾಚಾರ ನಡೆದಿದೆ ಎಂದು ಅಸ್ತಿತ್ವದಲ್ಲಿಯೇ ಇಲ್ಲದ ಸಂಸ್ಥೆ ಆರೋಪಿಸಿದೆ. ಈ ಸಂಸ್ಥೆ 20 ವರ್ಷಗಳಿಂದ ಲೆಕ್ಕಪರಿಶೋಧನೆಯನ್ನೇ ಮಾಡಿಲ್ಲ. ಅಷ್ಟೇ ಅಲ್ಲ, ಈ ರೀತಿಯ ಆರೋಪ ಈ ಹಿಂದಿನ ಎಲ್ಲ ಅಬಕಾರಿ ಸಚಿವರೂ ಮೇಲೂ ಬಂದಿದೆ' ಎಂದು ಪತ್ರಗಳನ್ನು ಪ್ರದರ್ಶಿಸಿದರು.

'ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಶೀಘ್ರ ಟೆಂಡರ್'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಬೆಂಗಳೂರಿನ ಹೊರವಲಯದಲ್ಲಿ ನಾಲ್ಕು ಕಡೆ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಶೀಘ್ರವೇ ಟೆಂಡರ್ ಕರೆಯಲಾಗುವುದು' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಕೇಶವ ಪ್ರಸಾದ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಬೆಂಗಳೂರಿನಲ್ಲಿರುವ ಘನತ್ಯಾಜ್ಯ ಮಾಫಿಯಗೆ ಮಟ್ಟ ಹಾಕಲಾಗುವುದು' ಎಂದರು.

ಬೆಂಗಳೂರು ಶಾಸಕರು ಈ ವಿಚಾರವಾಗಿ ಒತ್ತಡ ಹಾಕುತ್ತಿದ್ದಾರೆ.

ಘನತ್ಯಾಜ್ಯ ವಿಲೇವಾರಿ ಮಾಫಿಯಾವನ್ನು ಯಾವ ಸರ್ಕಾರದಿಂದಲೂ ನಿಲ್ಲಿಸಲು ಆಗಿಲ್ಲ. ನನ್ನಿಂದಲೂ ಬಗೆಹರಿಸಲು ಸಾಧ್ಯವಾಗಿಲ್ಲ. ಇದಕ್ಕಾಗಿ ಪ್ರತ್ಯೇಕ ನೀತಿ ತರಬೇಕಿದೆ

ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ

ಇದಕ್ಕಾಗಿ ಬೆಂಗಳೂರಿನ ಹೊರವಲಯದಲ್ಲಿ ನಾಲ್ಕು ದಿಕ್ಕುಗಳಲ್ಲಿ ಘನತ್ಯಾಜ್ಯ ವಿಲೇವಾರಿ ಕೇಂದ್ರ ಸ್ಥಾಪಿಸಲು ಮುಂದಾಗಿದ್ದೇವೆ.' ಎಂದರು.

ಇದಕ್ಕಾಗಿ ದೆಹಲಿ, ಹೈದರಾಬಾದ್, ಚೆನ್ನೈ ನಗರಗಳಲ್ಲಿ ಅಳವಡಿಸಿಕೊಂಡಿರುವ ಮಾದರಿಗಳನ್ನು ಪರಿಶೀಲಿಸಲಾಗಿದೆ ಎಂದು ತಿಳಿಸಿದರು ಎಂದರು.

'ಬೆಂಗಳೂರಿನಿಂದ 15 ಕಿ.ಮೀ ದೂರದಲ್ಲಿ ಹೊರವಲಯದಲ್ಲಿ ನಾಲ್ಕು ಕಡೆ 100 ಎಕರೆ ಜಮೀನು ಗುರುತಿಸಲಾಗಿದೆ. ಶೀಘ್ರವೇ ಟೆಂಡರ್ ಕರೆದು ಶಾಶ್ವತ ಪರಿಹಾರ ನೀಡಲು ಪ್ರಯತ್ನಿಸಲಾಗುತ್ತಿದೆ' ಎಂದರು.

'ಇತ್ತೀಚೆಗೆ ಕಸದ ಟೆಂಡರ್ ವಿಚಾರದಲ್ಲಿ ಪಕ್ಷದ ಅಧ್ಯಕ್ಷರೊಬ್ಬರು ನಾನು ₹15 ಸಾವಿರ ಕೋಟಿ ಲೂಟಿ ಮಾಡಿದ್ದಾಗಿ ಹೇಳಿಕೆ ನೀಡಿ ಬ್ಲ್ಯಾಕ್‌ಮೇಲ್ ಮಾಡುವ ಪ್ರಯತ್ನ ಮಾಡಿದ್ದರು. ಈ ಬೆದರಿಕೆಗೆ ಹೆದರಲ್ಲ. ನಮ್ಮ ಸರ್ಕಾರ ಕೂಡಾ ಜಗ್ಗುವುದಿಲ್ಲ' ಎಂದು ತಿಳಿಸಿದರು.

ದೊಣ್ಣೆವರಸೆ ಸ್ಪರ್ಧೆ: ಕೊಪ್ಪಳಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಕೋಲಾರ: ಕೊಪ್ಪಳ ತಂಡದವರು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಜಿಲ್ಲೆಯ ಚೊಕ್ಕಹಳ್ಳಿ ಚಿನ್ಮಯ ಪದವಿ ಪೂರ್ವ ಕಾಲೇಜು ಆಶ್ರಯದಲ್ಲಿ ನಡೆದ ರಾಜ್ಯಮಟ್ಟದ ದೊಣ್ಣೆವರಸೆ (ಸಿಲಂಬಮ್) ಸ್ಪರ್ಧೆಯಲ್ಲಿ ಬಾಲಕರ ಹಾಗೂ ಬಾಲಕಿಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದರು.

ಜಿಲ್ಲೆಯಲ್ಲಿ ಮೊದಲ ಬಾರಿ ಕಾಲೇಜು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ದೊಣ್ಣೆವರಸೆ ಸ್ಪರ್ಧೆಯಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಧಾರವಾಡ, ಮೈಸೂರು, ಬೀದರ್, ದಕ್ಷಿಣ ಕನ್ನಡ, ಬೆಳಗಾವಿ ಮತ್ತು ಕೊಪ್ಪಳ ಬಾಲಕರು, ಬಾಲಕಿಯರು ಸೇರಿದಂತೆ 8 ಜಿಲ್ಲೆಗಳಿಂದ ತಲಾ 8 ಮಕ್ಕಳಂತೆ 120 ಮಂದಿ ಸ್ಪರ್ಧಾಳುಗಳು ಭಾಗವಹಿಸಿದ್ದರು.

ತೀವ್ರ ಹಣಾಹಣಿ, ಅತ್ಯುತ್ಸಾಹ, ಚಾಕಚಕ್ಯತೆಯಲ್ಲಿ ನಡೆದ ಈ ದೊಣ್ಣೆ ವರಸೆಯಲ್ಲಿ ಅತಿಹೆಚ್ಚು ಚಿನ್ನ ಹಾಗೂ ಬೆಳ್ಳಿ ಪದಕ ಕೊಪ್ಪಳ ಜಿಲ್ಲೆ ಬಾಲಕರು ಹಾಗೂ ಬಾಲಕಿಯರ ಪಾಲಾದವು. ಎರಡೂ ವಿಭಾಗವು ಪ್ರತ್ಯೇಕವಾಗಿ ಸಮಗ್ರ ಪ್ರಶಸ್ತಿ ಮುಡಿಲಿಗೇರಿಸಿಕೊಂಡಿತು.

ತೀವ್ರ ಪೈಪೋಟಿಯ ಸ್ಪರ್ಧೆಯಲ್ಲಿ ಬಾಲಕರ ವಿಭಾಗದಲ್ಲಿ ಧಾರವಾಡ ಹಾಗೂ ಬಾಲಕಿಯರ ವಿಭಾಗದಲ್ಲಿ ಮೈಸೂರು ರನ್ನರ್ ಅಫ್ ಪ್ರಶಸ್ತಿ ಪಡೆದವು, ಈ ನಾಲ್ಕು ತಂಡಗಳಿಗೆ ಟ್ರೋಫಿ, ಪದಕ ಹಾಗೂ ಪ್ರಮಾಣಪತ್ರವನ್ನು ವಿತರಿಸಲಾಯಿತು.

ಅನಾವರಣ

ಬೆಂಗಳೂರಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಎಸ್‌ಒಜಿ ಗ್ರ್ಯಾಂಡ್ ಮಾಸ್ಟರ್ಸ್ ಕಪ್ ಅನಾವರಣಗೊಳಿಸಿದರು. ಕ್ರಿಕೆಟಿಗ ರಾಬಿನ್ ಉತ್ತಪ್ಪ, ಮೇಜರ್ ಧ್ಯಾನಚಂದ್ ಅವರ ಪುತ್ರ, ಒಲಿಂಪಿಯನ್ ಹಾಕಿಪಟು ಅಶೋಕಕುಮಾರ್ ಧ್ಯಾನಚಂದ್ ಮತ್ತಿತರರು ಹಾಜರಿದ್ದರು

ಜಾರ್ಖಂಡ್‌ಗೆ ಮಣಿದ ಕರ್ನಾಟಕ

ಬೆಂಗಳೂರು: ಕೌನೈನ್ ಖುರೇಶಿ (82;76ಎ) ಅವರ ಬ್ಯಾಟಿಂಗ್ ಮತ್ತು ಸಾಹಿಲ್ ರಾಜ್ (36ಕ್ಕೆ 4) ಅವರ ಬೌಲಿಂಗ್ ದಾಳಿಯ ನೆರವಿನಿಂದ ಜಾರ್ಖಂಡ್ ತಂಡವು ಬಿಸಿಸಿಐ ಪುರುಷರ 23 ವರ್ಷದೊಳಗಿನ 'ಎ' ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 20 ರನ್ ಗಳಿಂದ ಕರ್ನಾಟಕ ತಂಡವನ್ನು ಮಣಿಸಿತು.

ರಾಯಪುರದ ಶಾಹೀದ್ ವೀರ್ ನಾರಾಯಣ್ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಾರ್ಖಂಡ್ ತಂಡವು ಕೌನೈನ್ ಮತ್ತು ರಾಜನ್ ದೀಪ್ (54;53ಎ) ಅವರ ಬ್ಯಾಟಿಂಗ್ ಬಲದಿಂದ 50 ಓವರ್‌ಗಳಲ್ಲಿ 9 ವಿಕೆಟ್‌ಗೆ 230 ರನ್ ಕಲೆ ಹಾಕಿತು. ಕರ್ನಾಟಕದ ಮನ್ವಂತ್ ಕುಮಾರ್ ನಾಲ್ಕು ವಿಕೆಟ್ ಪಡೆದರೆ, ಯಶೋವರ್ಧನ್ ಪರಂತಾಪ್ ಎರಡು ವಿಕೆಟ್ ಗಳಿಸಿದರು.ಗುರಿಯನ್ನು ಬೆನ್ನಟ್ಟಿದ ಕರ್ನಾಟಕ ತಂಡವು 46.3 ಓವರ್‌ಗಳಲ್ಲಿ 210 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಕಾರ್ತಿಕೇಯ ಕೆ.ಪಿ (58;78ಎ) ಹೊರತು ಪಡಿಸಿ ಉಳಿದವರು ಹೆಚ್ಚುಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ.

ಸಂಕ್ಷಿಪ್ತ ಸ್ಕೋರ್: ಜಾರ್ಖಂಡ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 230 (ರಾಜನ್ ದೀಪ್ 54, ಕೌನೈನ್ ಖುರೇಶಿ 82; ಮನ್ವಂತ್ ಕುಮಾರ್ 51ಕ್ಕೆ 4, ಯಶೋವರ್ಧನ್ ಪರಂತಾಪ್ 56ಕ್ಕೆ 2). ಕರ್ನಾಟಕ: 46.3 ಓವರ್‌ಗಳಲ್ಲಿ 210 (ಹರ್ಷಿಲ್ ಧರ್ಮನಿ 30, ಕಾರ್ತಿಕೇಯ ಕೆ.ಪಿ 58, ಯಶೋವರ್ಧನ್ ಪರಂತಾಪ್ 24, ಮನ್ವಂತ್ ಮಾರ್ 24; ಹರ್ಷ್ ರಾಜ್ 28ಕ್ಕೆ 2, ಸಾಹಿಲ್ ರಾಜ್ 36ಕ್ಕೆ 4). ಫಲಿತಾಂಶ: ಜಾರ್ಖಂಡ್‌ಗೆ 20 ರನ್‌ಗಳ ಜಯ

ಕರ್ನಾಟಕ ತಂಡದ ಬೌಲರ್ ಎಲ್. ಮನ್ವಂತ್ ಕುಮಾರ್

ತ್ರಿಷಾ ಅಜೇಯ ಅರ್ಧಶತಕ: ಭಾರತಕ್ಕೆ ಗೆಲುವು

ಕ್ವಾಲಾಲಂಪುರ (ಪಿಟಿಐ): ಆರಂಭ ಆಟಗಾರ್ತಿ ಗೋಂಗಡಿ ತ್ರಿಷಾ (ಔಟಾಗದೇ 58, 46ಎ, 4x10) ಅವರ ಅರ್ಧಶತಕದ ನೆರವಿನಿಂದ ಭಾರತ ತಂಡ, ಮಹಿಳಾ 19 ವರ್ಷದೊಳಗಿನವರ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿ 'ಸೂಪರ್ ಫೋರ್' ಪಂದ್ಯದಲ್ಲಿ ಬಾಂಗ್ಲಾದೇಶ ತಂಡದ ಮೇಲೆ ಗುರುವಾರ ಎಂಟು ವಿಕೆಟ್‌ಗಳ ಸುಲಭ ಗೆಲುವನ್ನು ಸಾಧಿಸಿತು.

ಮೊದಲು ಬ್ಯಾಟಿಂಗಿಗೆ ಕಳುಹಿಸಲ್ಪಟ್ಟ ಬಾಂಗ್ಲಾ ಯುವತಿಯರ ತಂಡ 8 ವಿಕೆಟ್‌ಗೆ 80 ರನ್ ಗಳಿಸಲಷ್ಟೇ ಶಕ್ತವಾಯಿತು. ಉತ್ತರವಾಗಿ ಭಾರತ 12.1 ಓವರುಗಳಲ್ಲಿ 2 ವಿಕೆಟ್‌ಗೆ 86 ರನ್ ಹೊಡೆಯಿತು. ಜಿ.ಕಮಲಿನಿ (0) ಮತ್ತು ಸಾನಿಕಾ ಚಾಲ್ಕೆ (1) ಬೇಗ ನಿರ್ಗಮಿಸಿದರೂ, ತ್ರಿಷಾ ಮತ್ತು ನಿಕಿ ಪ್ರಸಾದ್ (ಅಜೇಯ 22) ಅವರು ಮುರಿಯದ ಮೂರನೇ ವಿಕೆಟ್‌ಗೆ 64 ರನ್ ಸೇರಿಸಿ ಸುಲಭ ಗೆಲುವಿಗೆ ನೆರವಾದರು. ಇದಕ್ಕೆ ಮೊದಲು ಎಡಗೈ ಸ್ಪಿನ್ನರ್‌ಗಳಾದ ಆಯುಷಿ ಶುಕ್ಲಾ ಮತ್ತು ಸೋನಮ್ ಯಾದವ್ ಐದು ವಿಕೆಟ್‌ಗಳನ್ನು ಹಂಚಿಕೊಂಡು ಬಾಂಗ್ಲಾ ತಂಡದ ಕುಸಿತಕ್ಕೆ ಕಾರಣರಾದರು. ಸೂಪರ್ ಫೋರ್‌ನಲ್ಲಿ ಭಾರತ ಐದು ಪಾಯಿಂಟ್ ಗಳಿಸಿ ಅಗ್ರಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರುಗಳಲ್ಲಿ 8 ವಿಕೆಟ್‌ಗೆ 80 (ಮೊಸಾಮತ್ ಇವಾ 14; ಆಯುಷಿ ಶುಕ್ಲಾ 9ಕ್ಕೆ3, ಸೋನಮ್ ಯಾದವ್ 6ಕ್ಕೆ2); ಭಾರತ: 12.1 ಓವರುಗಳಲ್ಲಿ 2 ವಿಕೆಟ್‌ಗೆ 86 (ಜಿ.ತ್ರಿಷಾ ಔಟಾಗದೇ 58, ನಿಕಿ ಪ್ರಸಾದ್ ಔಟಾಗದೇ 22).

ತ್ರಿಷಾ

ಬೆಂಗಳೂರು ರೇಸ್

ಈಸ್‌ನಾಟ್ ಶೀ ಬ್ಯೂಟಿಫುಲ್ ಗೆಲ್ಲುವ ನಿರೀಕ್ಷೆ

ಡಾ. ಎಂ.ಎ.ಎಂ.ರಾಮಸ್ವಾಮಿ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈಸ್‌ನಾಟ್ ಶೀ ಬ್ಯೂಟಿಫುಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮನಿ ಬ್ಯಾಗ್ಸ್ 2, ಸರ್ಕಲ್ ಆಫ್ ಡ್ರೀಮ್ಸ್ 1, ಆಸ್ವ ಕಾಲಿ ಭಾನಿ 4
2ನೇ ರೇಸ್: ಲಿವ್ ದಿ ಡ್ರೀಮ್ 9, ಡಿಫೆನ್ಸ್ ಕೌನ್ಸೆಲ್ 3, ಮಾರ್ಟಿನೊ 10
3ನೇ ರೇಸ್: ಎಬ್ಲೋಟ್ಸೆ 3, ಡೊಮಿನ 5, ಸ್ಟಾರ್ ಕೊಮೆಟ್ 2
4ನೇ ರೇಸ್: ಕೊರಿನ್‌ಥಿಯನ್ 11, ಸ್ಟಾರ್ಮ್ ಶ್ಯಾಡೊ 4, ಬೆಸ್ಟ್ ಐಡೆಂಟಿಫಿಕೇಶನ್ 9
5ನೇ ರೇಸ್: ಈಸ್‌ನಾಟ್ ಶೀ ಬ್ಯೂಟಿಫುಲ್ 1, ಆಲ್ಡ್‌ಗೇಟ್ 5, ವಿಜಯ ಫಾಲ್ಕನ್ 6
6ನೇ ರೇಸ್: ಮೈ ಸಾಲಿಟೇರ್ 7, ಸೀ ಜ್ಯಾಕ್ 5, ಸೂಪರ್‌ಹೀರೊ 8
7ನೇ ರೇಸ್: ಪ್ರೊಫೆಸಿ 6, ದಿ ಗ್ಯಾಲರಿ ಟೈಮ್ 1, ಕ್ಯಾಟ್ ವಿಸ್ಕರ್ಸ್ 2

ಉತ್ತಮ ಬೆಟ್: ಮನಿ ಬ್ಯಾಗ್ಸ್

ಜಾಕ್‌ಪಾಟ್‌ಗೆ 3,4,5,6,7 | **1ನೇ ಟ್ರಿಬಲ್ 2,3,4** | **2ನೇ ಟ್ರಿಬಲ್ 5,6,7**

ಉಪರಾಷ್ಟ್ರಪತಿ ಧನಕರ್ ವಿರುದ್ಧ ನೀಡಿದ್ದ ಅವಿಶ್ವಾಸ ನಿರ್ಣಯ ನೋಟಿಸ್ ತಿರಸ್ಕರಿಸಿದ ಉಪಸಭಾಪತಿ

'ಅನುಚಿತ ಕ್ರಮ, ಷಡ್ಯಂತ್ರದ ಭಾಗ'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯ ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿ ಜಗದೀಪ್ ಧನಕರ್ ವಿರುದ್ಧ ಅವಿಶ್ವಾಸ ನಿಲುವಳಿ ಮಂಡಿಸಲು ವಿರೋಧ ಪಕ್ಷಗಳು ಸಲ್ಲಿಸಿರುವ ನೋಟಿಸ್ ಅನ್ನು ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ಅವರು ಗುರುವಾರ ತಿರಸ್ಕರಿಸಿದ್ದಾರೆ.

ವಿಪಕ್ಷಗಳು ಸಲ್ಲಿಸಿರುವ ನೋಟಿಸ್, 'ಸಾಂವಿಧಾನಿಕ ಸಂಸ್ಥೆಗೆ ಕೇಡು ಬಗೆಯುವ ಮತ್ತು ಉಪರಾಷ್ಟ್ರಪತಿಗೆ ಮಾನಹಾನಿ ಮಾಡುವ ಷಡ್ಯಂತ್ರದ ಭಾಗವಾಗಿದೆ' ಎಂದು ಉಪಸಭಾಪತಿ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಜಗದೀಪ್ ಧನಕರ್

ಉಪ ಸಭಾಪತಿಯು ನಿರ್ಧಾರದಲ್ಲಿ ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಪಿ.ಸಿ. ಮೋದಿ ಅವರು ಸದನದಲ್ಲಿ ಗುರುವಾರ ಮಂಡಿಸಿದರು.

'ಸಭಾಪತಿ ಅವರನ್ನು ವೈಯಕ್ತಿಕವಾಗಿ ಗುರಿಯಾಗಿಸಿದ ನೋಟಿಸ್, ವಾಸ್ತವಾಂಶಗಳನ್ನು ಒಳಗೊಂಡಿಲ್ಲ ಹಾಗೂ ಪ್ರಚಾರ ಪಡೆಯುವ ಉದ್ದೇಶವನ್ನು ಹೊಂದಿದೆ. ಉಪರಾಷ್ಟ್ರಪತಿಯಂತಹ ಉನ್ನತ ಸಾಂವಿಧಾನಿಕ ಹುದ್ದೆಯ ಗೌರವಕ್ಕೆ ಉದ್ದೇಶಪೂರ್ವಕವಾಗಿ ಧಕ್ಕೆ ಉಂಟುಮಾಡುವ ವಿಪಕ್ಷಗಳ ಸಮಯಸಾಧಕತನವನ್ನು ಇದು ಬಹಿರಂಗಪಡಿಸಿದೆ' ಎಂದು ಹರಿವಂಶ್ ಹೇಳಿದ್ದಾರೆ.

'ಹಲವು ದೋಷಗಳಿಂದ ಕೂಡಿರುವ ಅನುಚಿತ ನೋಟಿಸ್ ಇದಾಗಿದ್ದು, ತರಾತುರಿಯಲ್ಲಿ ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ನೋಟಿಸ್ ಅನ್ನು ವಜಾಗೊಳಿಸಲಾಗಿದೆ' ಎಂದು ತಮ್ಮ ನಿರ್ಧಾರದಲ್ಲಿ ತಿಳಿಸಿದ್ದಾರೆ.

2021ರ ಅಕ್ಟೋಬರ್‌ನಲ್ಲಿ ಅಂದಿನ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ತಮ್ಮದೇ ವಿರುದ್ಧದ ಅವಿಶ್ವಾಸ ನಿರ್ಣಯದ ನೋಟಿಸ್ ತಿರಸ್ಕರಿಸಿರುವುದನ್ನು ಉಲ್ಲೇಖಿಸಿರುವ ಹರಿವಂಶ್, 'ಅವಿಶ್ವಾಸ ನಿಲುವಳಿಯನ್ನು ಈ ಅಧಿವೇಶನದಲ್ಲಿ ಮಂಡಿಸಲು ಸಾಧ್ಯವಿಲ್ಲ ಎಂಬುದು ನೋಟಿಸ್‌ನ ಸಹಿ ಮಾಡಿದವರಿಗೆ ತಿಳಿದಿದೆ. ಧನಕರ್ ವಿರುದ್ಧ ಕೇವಲ ಸಂಕಥನವೊಂದನ್ನು ಸೃಷ್ಟಿಸುವುದು ಇದರ ಹಿಂದಿನ ಉದ್ದೇಶವಾಗಿದೆ' ಎಂದಿದ್ದಾರೆ.

ಸದನವನ್ನು ಪ್ರಹಸನವಾಗಿ ನಡೆಸುತ್ತಿರುವ ಆರೋಪದ ಅಡಿಯಲ್ಲಿ ಧನಕರ್ ಅವರ ಪದಚ್ಯುತಿಗೆ ಗೊತ್ತುವಳಿ ಮಂಡಿಸಲು ವಿಪಕ್ಷಗಳು ಡಿಸೆಂಬರ್ 10ರಂದು ನೋಟಿಸ್ ನೀಡಿದ್ದವು. ಕಾಂಗ್ರೆಸ್, ಆರ್‌ಜೆಡಿ, ಟಿಎಂಸಿ, ಸಿಪಿಐ, ಸಿಪಿಎಂ, ಜೆಎಂಎಂ, ಎಎಪಿ, ಡಿಎಂಕೆ ಪಕ್ಷದ ಅಂದಾಜು 60 ಸದಸ್ಯರು ನೋಟಿಸ್‌ಗೆ ಸಹಿ ಮಾಡಿದ್ದರು.

ವಜಾಗೊಳಿಸಲು ನೀಡಿದ ಇತರ ಕಾರಣಗಳು..

- ನೋಟಿಸ್ ಕಪೋಲಕಲ್ಪಿತ ಅಂಶಗಳನ್ನು ಒಳಗೊಂಡಿದೆ
- ನಿರ್ಲಕ್ಷ್ಯದಿಂದ ಸಲ್ಲಿಸಲಾಗಿದೆ ಎಂಬುದು ಕಂಡುಬರುತ್ತದೆ
- ವಿಳಾಸದಾರರ ಹೆಸರು ಸಮರ್ಪಕವಾಗಿಲ್ಲ
- ಅವಿಶ್ವಾಸ ನಿರ್ಣಯದ ಸಂಪೂರ್ಣ ಸಾರಾಂಶ ಒಳಗೊಂಡಿಲ್ಲ
- ಧನಕರ್ ಅವರ ಹೆಸರನ್ನು (ಸ್ಪೆಲಿಂಗ್) ಸರಿಯಾಗಿ ಬರೆದಿಲ್ಲ
- ಆರೋಪಗಳಿಗೆ ಸಂಬಂಧಿಸಿದ ದಾಖಲೆ, ವಿಡಿಯೊಗಳನ್ನು ಒಳಗೊಂಡಿಲ್ಲ

ಹಿಜ್ಬುಲ್ ಕಮಾಂಡರ್ ಸೇರಿ ಐವರು ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆಯ ಪ್ರಮುಖ ಕಮಾಂಡರ್ ಫಾರೂಕ್ ಅಹ್ಮದ್ ಭಟ್ ಅಲಿಯಾಸ್ ನಲಿ ಸೇರಿ ಐವರು ಭಯೋತ್ಪಾದಕರು ಹತರಾಗಿದ್ದಾರೆ.

ಗುರುವಾರ ನಸುಕಿನಲ್ಲಿ ಎನ್‌ಕೌಂಟರ್ ನಡೆದಿದ್ದು, ನಲಿ ಜತೆಗೆ ಸ್ಥಳೀಯ ಉಗ್ರರಾದ ಇರ್ಫಾನ್ ಲೋನ್, ಆದಿಲ್ ಹುಸೇನ್, ಮುಸ್ತಾಕ್ ಇತೂ ಹಾಗೂ ಯಾಸಿರ್ ಜಾವೇದ್ ಹತರಾಗಿದ್ದಾರೆ. ಈ ವೇಳೆ ಭದ್ರತಾ ಪಡೆಯ ಇಬ್ಬರು ಯೋಧರು ಗಾಯಗೊಂಡಿದ್ದಾರೆ ಎಂದು ಸೇನೆಯ ಅಧಿಕಾರಿಗಳು ತಿಳಿಸಿದರು.

ಕುಲ್ಗಾಂನ ಕಡ್ಡೆರ್ ಗ್ರಾಮದಲ್ಲಿ ಭಯೋತ್ಪಾದಕರ ಇರುವಿಕೆಯ ಕುರಿತ ಮಾಹಿತಿ ಮೇರೆಗೆ ಶೋಧ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಈ ವೇಳೆ ಯೋಧರು ಹಾಗೂ ಭಯೋತ್ಪಾದಕರ ನಡುವೆ ಭಾರಿ ಗುಂಡಿನ ಚಕಮಕಿ ನಡೆಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಗ್ರಾಮದಲ್ಲಿ ಇನ್ನೂ ನಾಲ್ಕೈದು ಉಗ್ರಗಾಮಿಗಳು ಇರುವ ಬಗ್ಗೆ ಮಾಹಿತಿ ಲಭ್ಯವಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಭದ್ರತಾ ಕಾರಣಗಳಿಂದಾಗಿ ಎನ್‌ಕೌಂಟರ್ ನಡೆದ ಸ್ಥಳದ ಬಳಿ ತೆರಳದಂತೆ ಪೊಲೀಸರು ಸ್ಥಳೀಯ ನಿವಾಸಿಗಳಲ್ಲಿ ಮನವಿ ಮಾಡಿದ್ದಾರೆ.

ಈ ವರ್ಷ ಕುಲ್ಗಾಂ ಜಿಲ್ಲೆಯಲ್ಲಿ ನಡೆದ ಎರಡನೇ ಪ್ರಮುಖ ಕಾರ್ಯಾಚರಣೆ ಇದಾಗಿದೆ. ಜುಲೈ 8ರಂದು ನಡೆದ ಗುಂಡಿನ ಚಕಮಕಿಯಲ್ಲಿ 6 ಭಯೋತ್ಪಾದಕರು ಹತರಾಗಿ, ಇಬ್ಬರು ಯೋಧರು ಹುತಾತ್ಮರಾಗಿದ್ದರು.

ಹಲವು ಬಾರಿ ತಪ್ಪಿಸಿಕೊಂಡಿದ್ದ ನಲಿ ಖತಂ: ಕುಲ್ಗಾಂನ ಯಾರಿಪೊರಾ ನಿವಾಸಿ, ಬುರ್ಹಾನ್ ವಾನಿ ಗುಂಪಿನ ಭಾಗವಾಗಿದ್ದ ಉಗ್ರ ಅಹ್ಮದ್ ಭಟ್ ಯಾನೆ ನಲಿ ಭದ್ರತಾ ಪಡೆ ಹಾಗೂ ನಾಗರಿಕರ ಮೇಲೆ ನಡೆಸಿದ ಹಲವು ದಾಳಿಗಳಲ್ಲಿ ಭಾಗಿಯಾಗಿದ್ದ. ಜಮ್ಮು – ಕಾಶ್ಮೀರದಲ್ಲಿನ 10 ಮಂದಿ ಮೋಸ್ಟ್ ವಾಂಟೆಡ್ ಉಗ್ರರ ಪೈಕಿ ಈತನೂ ಒಬ್ಬನಾಗಿದ್ದ.

ಹಲವು ಬಾರಿ ಕಾರ್ಯಾಚರಣೆ ವೇಳೆ ಈತ ಭದ್ರತಾ ಪಡೆಗಳಿಂದ ತಪ್ಪಿಸಿಕೊಂಡಿದ್ದ. ಭಟ್ ಬಗ್ಗೆ ಸುಳಿವು ನೀಡಿದವರಿಗೆ ₹10 ಲಕ್ಷ ಇನಾಮು ಘೋಷಿಸಲಾಗಿತ್ತು. 2014 ರಿಂದ ಸಕ್ರಿಯವಾಗಿದ್ದ ಈತನ ಹತ್ಯೆ ದಕ್ಷಿಣ ಕಾಶ್ಮೀರದಲ್ಲಿ ಹಿಜ್ಬುಲ್ ಸಂಘಟನೆಗೆ ಗಮನಾರ್ಹ ಹಿನ್ನಡೆ ಆಗಿದೆ. ಈವರೆಗೆ ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿದ್ದ ಎಲ್ಲ ಉಗ್ರರನ್ನೂ ಭದ್ರತಾ ಪಡೆಗಳು ಹತ್ಯೆ ಮಾಡಿವೆ.

ಎನ್‌ಕೌಂಟರ್ ನಡೆದ ಕುಲ್ಗಾಂ ಜಿಲ್ಲೆಯ ಕಡ್ಡೆರ್ ಪ್ರದೇಶದಲ್ಲಿ ಭದ್ರತಾ ಸಿಬ್ಬಂದಿ ಗಸ್ತು ನಡೆಸಿದರು –ಪಿಟಿಐ ಚಿತ್ರ

'ಅಜಿತ್ ಪವಾರ್ ಮುಂದೊಂದು ದಿನ ಮುಖ್ಯಮಂತ್ರಿ ಆಗುತ್ತಾರೆ'

ನಾಗ್ಪುರ (ಪಿಟಿಐ): ಅಜಿತ್ ಪವಾರ್ ಅವರನ್ನು 'ಕಾಯಂ ಉಪಮುಖ್ಯಮಂತ್ರಿ' ಎಂದು ಕರೆದಿರುವ ವಿಪಕ್ಷ ಮಹಾ ವಿಕಾಸ್ ಆಘಾಡಿಗೆ(ಎಂವಿಎ) ತಿರುಗೇಟು ನೀಡಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಮುಂದೊಂದು ದಿನ ಅಜಿತ್ ಪವಾರ್ ಮಹಾರಾಷ್ಟ್ರ ಮುಖ್ಯಮಂತ್ರಿ ಆಗಲಿದ್ದಾರೆ' ಎಂದು ಹೇಳಿದ್ದಾರೆ.

ನಾಗ್ಪುರದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಜಂಟಿ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಅವರು ಮಾತನಾಡಿದರು.

'ನಿಮ್ಮನ್ನು(ಅಜಿತ್ ಪವಾರ್) ಅವರು (ಎಂವಿಎ) ಕಾಯಂ ಉಪ ಮುಖ್ಯಮಂತ್ರಿ ಎಂದು ಕರೆಯುತ್ತಿದ್ದಾರೆ. ಆದರೆ, ನನ್ನ ಹಾರೈಕೆ ನಿಮ್ಮೊಂದಿಗೆ ಇದೆ. ಮುಂದೊಂದು ದಿನ ನೀವೂ ಮಹಾರಾಷ್ಟ್ರದ ಮುಖ್ಯಮಂತ್ರಿ ಆಗಲಿದ್ದೀರಿ' ಎಂದು ಫಡಣವೀಸ್, ಅಜಿತ್ ಪವಾರ್ ಕುರಿತು ಹೇಳಿದರು.

ಫಡಣವೀಸ್

'ಅಜಿತ್ ದಾದಾ ಮುಂಜಾನೆ ಬೇಗನೆ ಎದ್ದು ಕೆಲಸ ಪ್ರಾರಂಭಿಸುತ್ತಾರೆ. ನಾನು ಮಧ್ಯಾಹ್ನ 12 ಗಂಟೆಯಿಂದ ಮಧ್ಯರಾತ್ರಿಯವರೆಗೂ ಕೆಲಸ ಮಾಡುತ್ತೇನೆ. ಏಕನಾಥ ಶಿಂದೆ ಅವರು ಇಡೀ ರಾತ್ರಿ ಕೂತು ಕೆಲಸ ಮಾಡುತ್ತಾರೆ. ಹೀಗೆ ನಾವು ಮೂವರು ದಿನದ 24 ತಾಸು ಪಾಳಿ ಪ್ರಕಾರ ಕೆಲಸ ಮಾಡುತ್ತಿದ್ದೇವೆ' ಎಂದು ಫಡಣವೀಸ್ ತಮ್ಮ ಕಾರ್ಯವೈಖರಿಯನ್ನು ಬಣ್ಣಿಸಿದರು.

ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ಆರನೇ ಬಾರಿಗೆ ರಾಜ್ಯದ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಏರಿದ್ದಾರೆ.

'ವ್ಯಕ್ತಿವಾದದಿಂದ ಜನಸಂಖ್ಯೆ ಕುಸಿತ'

ಪುಣೆ (ಪಿಟಿಐ): 'ವಿಪರೀತ ವ್ಯಕ್ತಿವಾದ ಅಥವಾ ಸ್ವಾತಂತ್ರ್ಯವಾದ ಒಳ್ಳೆಯದಲ್ಲ. ಜನಸಂಖ್ಯೆ ಕುಸಿಯಲು ಇಂತಹ ಧೋರಣೆಯೇ ಕಾರಣ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಗುರುವಾರ ಎಚ್ಚರಿಸಿದ್ದಾರೆ.



ಮೋಹನ್ ಭಾಗವತ್

ಸಂಘಟನೆ ವತಿಯಿಂದ ಆಯೋಜಿಸಿರುವ 'ಹಿಂದೂ ಸೇವಾ ಮಹೋತ್ಸವ'ದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸ್ವತಂತ್ರವಾಗಿರಬೇಕು ಅಥವಾ ಪ್ರತ್ಯೇಕವಾಗಿರಬೇಕು ಎಂಬ ವಾದಗಳಿಂದ ಪ್ರಭಾವಿತರಾದವರು ಕೌಟುಂಬಿಕ ವ್ಯವಸ್ಥೆ ಬೇಡ ಎಂಬ ನಿಲುವು ತಳೆಯುತ್ತಿದ್ದಾರೆ. ನಾವು ಏಕೆ ಮದುವೆಯಾಗಬೇಕು? ಯಾಕೆ ಮತ್ತೊಬ್ಬರ ಗುಲಾಮರಾಗಬೇಕು ಎಂಬ ಭಾವನೆ ಇಂಥವರಲ್ಲಿ ಮೂಡುತ್ತಿದೆ' ಎಂದು ಹೇಳಿದ್ದಾರೆ.

'ಯಾವುದೇ ವ್ಯಕ್ತಿಗೆ ವೃತ್ತಿ ಕೂಡ ಮುಖ್ಯ. ಸಮಾಜ, ಪರಿಸರ, ದೇವರು ಹಾಗೂ ದೇಶದಿಂದಾಗಿಯೇ ವ್ಯಕ್ತಿಗೆ ಅಸ್ತಿತ್ವ ಇದೆ. ವ್ಯಕ್ತಿಗಳಾಗಿ ನಮ್ಮ ಮೇಲೆ ಇವುಗಳ ಋಣ ತುಂಬಾ ಇದೆ. ಆದರೆ, ವ್ಯಕ್ತಿವಾದದ ಫಲವಾಗಿ ನಮ್ಮ ಜನಸಂಖ್ಯೆ ಕ್ಷೀಣಿಸುತ್ತಿದೆ' ಎಂದಿದ್ದಾರೆ.

ಶ್ರೀರಾಮ ಜನ್ಮಭೂಮಿ ತೀರ್ಥ ಟ್ರಸ್ಟ್‌ನ ಖಜಾಂಚಿ ಸ್ವಾಮಿ ಗೋವಿಂದ ಗಿರಿ ಮಹಾರಾಜ್ ಮಾತನಾಡಿ, 'ಬಟೇಂಗೆ ತೋ ಕಾಟೇಂಗೆ' (ಒಗ್ಗಟ್ಟಿನಿಂದ ಇರದಿದ್ದರೆ ವಿನಾಶವಾಗುತ್ತೇವೆ) ಸಂದೇಶವನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಂಡಿದ್ದಾರೆ. ಈಗ 'ಘಟೇಂಗೆ ತೋ ಭೀ ಕಾಟೇಂಗೆ' (ನಮ್ಮ ಜನಸಂಖ್ಯೆ ಕುಸಿದರೂ ನಾವು ನಾಶವಾಗುತ್ತೇವೆ) ಎಂಬ ಮತ್ತೊಂದು ಅಂಶವನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕು' ಎಂದರು.

'ಇದೇ ಕಾರಣಕ್ಕೆ ಹಿಂದೂಗಳ ಸಂಖ್ಯೆ ಹೆಚ್ಚಬೇಕು' ಎಂದೂ ಮಹಾರಾಜ್ ಪ್ರತಿಪಾದಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಮೂಲ ಸೌಕರ್ಯ ವಿಭಾಗ–ಆರ್‌ಐ,
ಎನ್.ಆರ್. ಚೌಕ, ಬೆಂಗಳೂರು–560002

ನಂ.: ಕಾಪಾಅ/ರಮೂ/ಇನ್‌ಫ್ರಾ ವಿಭಾಗ/ಪಿಆರ್/182/24–25 ದಿನಾಂಕ: 19.12.2024

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ನಗರದಲ್ಲಿ ದಿನದಿಂದ ದಿನಕ್ಕೆ ಸಂಚಾರ ದಟ್ಟಣೆಯು ಹೆಚ್ಚುತ್ತಿದ್ದು, ಸುಗಮ ಸಂಚಾರದ ಸಮಸ್ಯೆಗಳನ್ನು ನಿವಾರಿಸಲು ಯೋಜನೆಗಳ ನಿರ್ಮಾಣ, ನವೀಕರಣ ಮತ್ತು ಉನ್ನತೀಕರಣ ಮಾಡುವ ಅಗತ್ಯವಿರುವುದರಿಂದ **"ಸಂಚಾರ ದಟ್ಟಣೆ ನಿವಾರಿಸಲು ಬೆಂಗಳೂರು ನಗರ ರಸ್ತೆ ಮೂಲಸೌಕರ್ಯ ಯೋಜನೆ ಮತ್ತು ಸಮಗ್ರ ಸಂಚಾರ ನಿರ್ವಹಣಾ ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು"** ಸಾರ್ವಜನಿಕರ ವೀಕ್ಷಣೆಗೆ ಬಿಬಿಎಂಪಿಯ ವೆಬ್‌ಸೈಟ್ **https://www.bbmp.gov.in**ನಲ್ಲಿ ಪ್ರಕಟಿಸಲಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮೂಲ ಸೌಕರ್ಯ ವಿಭಾಗ – ಆರ್‌ಐ, ಬಿಬಿಎಂಪಿ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS

ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಮೊದಲ ಮಹಡಿ ಸಂಖ್ಯೆ 59, ಕುಮಾರ ಪಾರ್ಕ್ ಪಶ್ಚಿಮ ವಿಸ್ತರಣೆ,
ರೈಲ್ವೆ ಪ್ಯಾರಲಲ್ ರೋಡ್, ಶೇಷಾದ್ರಿಪುರಂ, ಬೆಂಗಳೂರು 560020

ಸಂಖ್ಯೆ: KSEDCL/ITS/ICT-001/2024-25 ದಿನಾಂಕ: 17.12.2024

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), 1. Selection of Consultancy Agency for Providing Transaction Advisory Services for Monetization of Land Parcels of Keonics Located at KALABURAGI CITY, ಸಂಸ್ಥೆಗಳನ್ನು ಆಯ್ಕೆ ಮಾಡಲು 7 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080–2222 5645 / 8105844665)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2024-25/ SE0107	Selection of Consultancy Agency for Providing Transaction Advisory Services for Monetization of Land Parcels of Keonics Located at KALABURAGI CITY	26.12.2024

DIPR/CP/BCPL/3863/2024-25 ಸಹಿ/– ನಿರ್ದೇಶಕರು (ಹಣಕಾಸು)

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ನಂ.16ಡಿ. 5ನೇ ಮಹಡಿ ದೇವರಾಜ ಅರಸು ಭವನ, ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ದೂರವಾಣಿ ಸಂಖ್ಯೆ: 080–22374848, 7899899039. ಇ–ಮೇಲ್: mdvishwakarma2015gmail.com, ವೆಬ್‌ಸೈಟ್ : www.kvcdcl.karnataka.gov.in

ಸಂಖ್ಯೆ: ಕವಿಸಅನಿ/ಸಿ.ಆರ್–44/2024–25 ದಿನಾಂಕ: 20/12/2024

ಇ–ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಹೊರಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿದೆ.

ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ವಿಳಾಸವನ್ನು ನೋಡಬಹುದಾಗಿದೆ.

KPP PORTAL TENDER NUMBER : KVCDCL/2024-25/SE0001

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 30.12.2024, 16.00 ಗಂಟೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 31/12/2024, 16.30 ಗಂಟೆ,
ಆರ್ಥಿಕ ಬಿಡ್ ತೆರೆಯುವ ದಿನಾಂಕ: 06.01.2025, 11 ಗಂಟೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆವಿಸಿಡಿಸಿ.
ವಾ.ಸಾ.ಸಂ.ಇ/ವಾಪ್ರ/3869/ಆಕಾರ್/2024–25

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

ಸಂಖ್ಯೆ: KREIS/EDN/OTH/147/2023-EDU-87118 ದಿನಾಂಕ: 19.12.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ **ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 6 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ Life Skills and Leadership Training Program** ತರಬೇತಿಯನ್ನು ನೀಡಲು ಅರ್ಹ ಏಜೆನ್ಸಿಯನ್ನು ನೇಮಿಸಲು ಟೆಂಡರ್ ಸಂಖ್ಯೆ: **(1) KREIS/2024-25/SE0033/CALL-3, (2) KREIS/2024-25/SE0034/CALL-3** ಇ–ಪೋರ್ಟಲ್ **https://kppp.karnataka.gov.in** ಮುಖಾಂತರ ದಿನಾಂಕ: **19.12.2024** ರಂದು ಆಹ್ವಾನಿಸಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 27.12.2024 ಆಗಿದ್ದು,** ಹೆಚ್ಚಿನ ವಿವರಗಳನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು
ಕ.ವ.ಶಿ.ಸಂ.ಸಂಘ, ಬೆಂಗಳೂರು.
DIPR/CP/YC/3865/2024-25

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ವನ್ಯಜೀವಿ ಉಪ ವಿಭಾಗ, ಅಣಶಿ–581187

email: anshiwl@gmail.com

ಕ್ರ.ಸಂ:ಸ.ಅ.ಸಂ/ಅಣಶಿ/ಹೊರಗುತ್ತಿಗೆ/ಟೆಂಡರ್/981/2024–25 ದಿನಾಂಕ: 16–12–2024

ಮರು ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2024–25 ನೇ ಸಾಲಿನ ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ದೈನಂದಿನ ಅರಣ್ಯ ಹಾಗೂ ವನ್ಯಪ್ರಾಣಿ ಸಂರಕ್ಷಣೆ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗಾಗಿ ಅವಶ್ಯಕತೆ ಇರುವ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ ಮಾಡಲು ಏಜೆನ್ಸಿಗಳನ್ನು ನಿಗಧಿಪಡಿಸುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಸೇವಾ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಅರ್ಹ ವ್ಯಕ್ತಿ/ಸಂಸ್ಥೆಗಳು ಭಾಗವಹಿಸಬಹುದಾಗಿರುತ್ತದೆ.

ಅನುಸೂಚಿ: ವಿವರಗಳು: (1) ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿಯ ವಿಭಾಗದ ವ್ಯಾಪ್ತಿಯಲ್ಲಿ ದೈನಂದಿನ ಅರಣ್ಯ ಹಾಗೂ ವನ್ಯಪ್ರಾಣಿ ಸಂರಕ್ಷಣೆ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗಾಗಿ ಅವಶ್ಯಕತೆ ಇರುವ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆ ಮಾಡುವುದು.

(1) ಕುಶಲ (Skilled) ಕೆಲಸಗಾರರು – 154 ಸಂಖ್ಯೆ
(2) ಅರೆಕುಶಲ (Un Skilled) ಕೆಲಸಗಾರರು – 113 ಸಂಖ್ಯೆ,

ಪರಿಮಾಣ ಸಂಖ್ಯೆ: 267 ಸಂಖ್ಯೆ, ಕಾಮಗಾರಿ ಮೊತ್ತ: 36280941.00 ಇ.ಎಂ.ಡಿ: 544215.00

(1) ಟೆಂಡರ ಪ್ರಶ್ನೆಗಳು /ಸ್ಪಷ್ಟೀಕರಣ ಕೊನೆಯ ದಿನಾಂಕ: 30–12–2024 ಬೆಳಗ್ಗೆ 11.30 ಗಂಟೆಗೆ (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–12–2024 ಸಂಜೆ 04.30 ಗಂಟೆ (3) ತಾಂತ್ರಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 31–12–2024 ಸಂಜೆ 04.35 ಗಂಟೆಗೆ (4) ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 01–01–2025 ಸಂಜೆ 04.30 ಗಂಟೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ದಾರರು ಈ ಕೆಳ ಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ಉಪ ವಿಭಾಗ, ಅಣಶಿ
DIPR/KWR/KSMCA/640/24-25 Dt. 18.12.2024

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ,
ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು–560 068.

ಸಂಖ್ಯೆ:ಬೃಬೆಂಮಪಾ/ಕಾಪಾಅ/ಬೊಯೋವಿ/ಟೆಂಡರ್–07/2024–25 ದಿನಾಂಕ:19.12.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಟೆಂಡರ್)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು–68 ಇವರು, ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ/ ಸಿ.ಪಿ.ಡಬ್ಲ್ಯೂ.ಡಿ/ಬೆಂಜಮಂ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಬೊಮ್ಮನಹಳ್ಳಿ ವಲಯದ ವಿವಿಧ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ಭದ್ರತಾ ಸಿಬ್ಬಂದಿಗಳನ್ನು ನಿಯೋಜನೆ ಮಾಡುವುದು. **ಅಂದಾಜು ಮೊತ್ತ ₹.350.00 ಲಕ್ಷಗಳು ಇಎಂಡಿ: ₹.5,25,000/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: **06.01.2025**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸುವುದು. (2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **23.12.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ, ಹೆಚ್.ಎಸ್.ಆರ್. ಬಡಾವಣೆ, ಬೆಂ.ಅ.ಪ್ರಾ. ಸಂಕೀರ್ಣ, ಬೆಂಗಳೂರು–560 102 ಇಲ್ಲಿ ದಿನಾಂಕ **30.12.2024**ರ ಬೆಳಿಗ್ಗೆ **11:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **06.01.2025**ರ ಸಂಜೆ **4:00** ಗಂಟೆಗೆ ಅಥವಾ ಮುಂಚಿತವಾಗಿ. (5) ಟೆಂಡರನ್ನು ದಿನಾಂಕ **07.01.2025**ರ ಸಂಜೆ **4:30** ಗಂಟೆಯಿಂದ ತೆರಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬೊಮ್ಮನಹಳ್ಳಿ ಯೋಜನೆ ವಿಭಾಗ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು.

Ph.No.0816-2955247, e-mail:ka.tumakuru.dudc@gmail.com

ನಂ.ಡಿಯುಡಿಸಿ/ನಗರೋತ್ಥಾನ(ಮುನ್ಸಿಪಾಲಿಟಿ)ಹಂತ–4/ಸಿಆರ್01/2022–23 ದಿ:18.12.24

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ರವರಿಂದ ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ಬಿಡ್‌ದಾರರಿಂದ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನ್ಸಿಪಾಲಿಟಿ) ಯೋಜನೆ (ಹಂತ–04)ಯಡಿ ಮಧುಗಿರಿ ಪುರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಕೆಳಗಿನಂತೆ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 02ನೇ ಬಾರಿ ಟೆಂಡರ್ ಆಹ್ವಾನಿಸಲಾಗಿದೆ.

ಇಂಡೆಂಟ್ ನಂ 1) ಮಧುಗಿರಿ ಪುರಸಭೆಯ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ಸಂ:DMA/2024-25/RD/ WORK_INDENT 22827/CALL-2 ಟೆಂಡರ್‌ಗಿಟ್ಟ ಮೊತ್ತ **ರೂ. 84.70 ಲಕ್ಷಗಳಲ್ಲಿ** ಇ.ಎಂ.ಡಿ **1.70** 2) ಮಧುಗಿರಿ ಪುರಸಭೆಯ ಕಟ್ಟಡ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ಸಂ:DMA/2024-25/BD/ WORK_INDENT 30867/CALL-2 ಟೆಂಡರ್‌ಗಿಟ್ಟ ಮೊತ್ತ **ರೂ.43.25 ಲಕ್ಷಗಳಲ್ಲಿ** ಇ.ಎಂ.ಡಿ **0.87 ಕ್ರಸಂ 1 & 2ಕ್ಕೆ** ಗುತ್ತಿಗೆದಾರರ ದರ್ಜೆ **3ನೇ ದರ್ಜೆ ಮೇಲ್ಪಟ್ಟು** ಬಿಡ್‌ದಾರರು ಎಲ್ಲಾ ದಾಖಲಾತಿಗಳ ಮತ್ತು ಇತರೆ ವಿವರಗಳ ಮಾಹಿತಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. (1) ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿ ಕೊಳ್ಳಬಹುದಾದ ದಿನಾಂಕ: **13.12.2024** ರಿಂದ **30.12.2024** ರವರೆಗೆ ಸಮಯ: 16:00 ಗಂಟೆ (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **30.12.2024** ರವರೆಗೆ ಸಮಯ: 17:00 ಗಂಟೆ (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:**31.12.2024** ಸಮಯ :17:29 ಗಂಟೆಗೆ ಡಿ.ಯು.ಡಿ.ಸಿ, ತುಮಕೂರು. ಮೇಲ್ಕಂಡ ದಿನಾಂಕಗಳು ಹಾಗೂ ಟೆಂಡರ್ ದಸ್ತಾವೇಜಿನ ಯಾವುದೇ ತಿದ್ದುಪಡಿ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರ ಪಡಿಸಲಾಗುವುದು. ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ.
DIPR/TUM/487/KSMCA/2023-24

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ವಿಜನಿನಿ., ಭಮೇಯೋ.,
ವಿಭಾಗ ಸಂ.3 ಅಜ್ಜಂಪುರ–577 547
Ph & Fax: 08261–200114 email: eeubp3.1@gmail.com
CIN No. U41000KA2016SGC097260

ಸಂ: ಕಾಇಂ/ವಿಜನಿನಿ/ಭಮೇಯೋ/ವಿ–3/ಯೋಶಾ–1/ಟೆಂಡರ್ ಪ್ರಕಟಣೆ/2024–25/ 825 ದಿನಾಂಕ: 19.12.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಲ್ಲಿ ಕಾಮಗಾರಿಯ ಇಂಡೆಂಟ್ ನಂಬರ್ (VJNL/2024-25/RD/ WORK_INDENT164) ಗಳ ಕಾಮಗಾರಿಗೆ ದ್ವಿಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿಪಿಯ hhttp://www.kppp.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 20.12.2024 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 27.12.2024 ರ 17.30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ/ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ ಗುತ್ತಿಗೆದಾರರ ಅರ್ಹತೆ/ ಟೆಂಡರ್ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 30.12.2024 ರಂದು ಪೂರ್ವಾಹ್ನ 11.30 ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.03 ಅಜ್ಜಂಪುರರವರ ಕಛೇರಿಯಲ್ಲಿ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
1257 ವಿಜನಿನಿ, ಭಮೇಯೋ, ವಿಭಾಗ ಸಂ.03 ಅಜ್ಜಂಪುರ.

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ–2278480, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in

ಸಂಖ್ಯೆ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/12/2024–25 ದಿನಾಂಕ: 16.12.2024

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರಪಾಲಿಕೆ ನಿಧಿ ಹಾಗೂ ಸ್ವಚ್ಛ ಭಾರತ್ ಮಿಷನ್ (ನಗರ)2.0 ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಕ್ರಮ ಸಂಖ್ಯೆ 1 ರಿಂದ 6 ರವರೆಗಿನ ಕಾಮಗಾರಿಗಳಿಗೆ ಅಲ್ಪಾವಧಿ (7 ದಿನ) ಟೆಂಡರ್ ಹಾಗೂ ಕ್ರಮ ಸಂಖ್ಯೆ 7ಕ್ಕೆ (15 ದಿನಗಳ) ಕಾಲಾವಧಿಯನ್ನು ನೀಡಿ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumakurucity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು. ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ. (1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **17.12.2024** ರಿಂದ ದಿನಾಂಕ: **31.12.2024** ರವರೆಗೆ (2) ಪ್ರಿ–ಬಿಡ್ ಮೀಟಿಂಗ್ ದಿನಾಂಕ:**23.12.2024** ಬೆಳಗ್ಗೆ 11.00 ಗಂಟೆಗೆ (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **31.12.2024** ರಂದು ಸಾಯಂಕಾಲ 4.30 ಗಂಟೆವರೆಗೆ (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **01.01.2025** ಸಾಯಂಕಾಲ 4.35 ಗಂಟೆಗೆ (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **08.01.2025** ರ ಬೆಳಗ್ಗೆ 11.00 ಗಂಟೆಗೆ (6) ಟೆಂಡರ್‌ನ ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆಯುವ ಸಮಯದಲ್ಲಿ ಅಂದಾಜು ದರಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವುದು.

DIPR/TUM/483/KSMCA/2023-24 ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್ ಧಾರವಾಡ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ, ವಿಭಾಗ, ಧಾರವಾಡ

ನಂ:ಕಾ.ನಿ.ಇಂ/ಗ್ರಾಕುನೀ&ನೈವಿ/ಧಾ/ಕಿ ಇಂ–1/ಇ–ಟೆಂಡರ/2024–25/1576
ದಿನಾಂಕ : 19.12.2024

ಸಾಮಗ್ರಿ ಟೆಂಡರನ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ : ಕಾಮಗಾರಿಯ ಟೆಂಡರನ ಪ್ರಕಟಣೆ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಗಾಣಿಸಿದ ಕಾಮಗಾರಿಗಳ ಟೆಂಡರ ಕರೆಯಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಧಾರವಾಡ ಜಿಲ್ಲೆ : ಸಾಮಾನ್ಯ : **Goods Indent No: RWSSD/2024-25/IND0190/Call-3, IND0195/Call-3, IND0196/Call-3, IND0203/Call-3, IND0204/Call-3, IND0205/Call-3, IND0206/Call-3, IND0207/Call-3, IND0208/Call-2,**

ಕನಿಷ್ಠ ಮೊತ್ತ: **24.52** ಲಕ್ಷ, ಗರಿಷ್ಠ ಮೊತ್ತ **98.57** ಲಕ್ಷ

ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿದೆ. (Calander of Events)

(1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೆಬ್‌ಸೈಟನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : **20.12.2024** ರಿಂದ **27.12.2024** ಸಾಯಂಕಾಲ 04.00 ಘಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ : **30.12.2024** ಸಾಯಂಕಾಲ 04.30 ಘಂಟೆಗೆ (3) ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಮ್.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ kppp.karnataka.gov.in ನಲ್ಲಿ ಪಡೆಯಬಹುದು. ಯಾವೂದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಕು.ನೀ. & ನೈ ವಿಭಾಗ, ಧಾರವಾಡ.
ವಾಸಾಸಂಇ/ಧಾ/ಕೆಎಸ್‌ಎಂಸಿಎ/753/2024–25

ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಕಛೇರಿ,

ಪೋಡಿಯಂ ಬ್ಲಾಕ್, 2ನೇ ಮಹಡಿ, ವಿ.ವಿ.ಗೋಪುರ,
ಅಂಬೇಡ್ಕರ್ ವೀಧಿ, ಬೆಂಗಳೂರು–01

ಸಂಖ್ಯೆ: ಕಗ್ಯಾಇ/ಇಎಸ್‌ಟಿ(2)/199/2024–25 ದಿನಾಂಕ: 18.12.2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು ರಾಜ್ಯ/ಜಿಲ್ಲಾ/ತಾಲ್ಲೂಕು ಹಾಗೂ ವಿಶೇಷ ಸಂಪುಟಗಳನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ರಚಿಸಿ ಪ್ರಕಟಿಸುವ ಯೋಜನೆಗಳನ್ನು ನಿರ್ವಹಿತ್ತಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಕೈಪಿಡಿ ಸಂಪುಟ (ಕನ್ನಡ ಆವೃತ್ತಿ) ದ ಪರಿಷ್ಕರಣಾ ಕಾರ್ಯಕ್ಕೆ ಸಂಬಂಧಿಸಿದ ಅಧ್ಯಾಯಗಳ ರಚನಾ ಕಾರ್ಯಕ್ಕೆ ಸಂಬಂಧಿಸಿದಂತೆ, 1) ಇತಿಹಾಸ, 2) ಅರ್ಥಶಾಸ್ತ್ರ, 3) ಕೃಷಿ, 4) ಸಮಾಜಶಾಸ್ತ್ರ, 5) ಕನ್ನಡ, 6) ರಾಜ್ಯ ಶಾಸ್ತ್ರ, 7) ವಾಣಿಜ್ಯ ಶಾಸ್ತ್ರ, ಗಳ ವಿಷಯಗಳಿಗೆ ಸಂಬಂಧಿಸಿದ ರಚನಾ ಕಾರ್ಯ ನಿರ್ವಹಿಸಬೇಕಿರುತ್ತದೆ. ಆದ್ದರಿಂದ ಸದರಿ ಪರಿಷ್ಕರಣಾ ಕಾರ್ಯವನ್ನು ನಿರ್ವಹಿಸಲು ಸಂಶೋಧನಾ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ಸ್ನಾತಕೋತ್ತರ ಪದವಿಯೊಂದಿಗೆ ಮತ್ತು ಪಿ.ಹೆಚ್‌ಡಿ ಮಾಡಿರುವ ರಚನಾ ಕಾರ್ಯದಲ್ಲಿ 5 ರಿಂದ 10 ವರ್ಷಗಳ ನಿರಂತರ ಅನುಭವವುಳ್ಳ ಹಾಗೂ ಸಂಪೂರ್ಣ ಕರ್ನಾಟಕದ ಬಗ್ಗೆ ತಿಳಿವಳಿಕೆಯುಳ್ಳ ಸಂಪನ್ಮೂಲ ವ್ಯಕ್ತಿಗಳಿಂದ ಕರ್ನಾಟಕ ಕೈಪಿಡಿ ಸಂಪುಟದ ಪರಿಷ್ಕರಣಾ ಕಾರ್ಯವನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ,

1) ಇತಿಹಾಸ, 2) ಅರ್ಥಶಾಸ್ತ್ರ, 3) ಕೃಷಿ, 4) ಸಮಾಜಶಾಸ್ತ್ರ, 5) ಕನ್ನಡ, 6) ರಾಜ್ಯ ಶಾಸ್ತ್ರ, 7) ವಾಣಿಜ್ಯ ಶಾಸ್ತ್ರ, ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಮತ್ತು ಪಿ.ಹೆಚ್‌ಡಿ ಮಾಡಿರುವ ಆಸಕ್ತಿಯುಳ್ಳ ವಿದ್ವಾಂಸರು/ಲೇಖಕರು ತಾವು ರಚಿಸಿರುವ ಪುಸ್ತಕಗಳು/ಲೇಖನಗಳೊಂದಿಗೆ ಸ್ವವಿವರವನ್ನು ಈ ಕಚೇರಿಯ ಇ–ಮೇಲ್ ವಿಳಾಸ karnatakagazetteer@gmail.com ಕ್ಕೆ 15 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಸಂಪನ್ಮೂಲ ವ್ಯಕ್ತಿಗಳು ರಚಿಸಿರುವ/ಬರೆದಿರುವ ಲೇಖನಗಳು/ಪುಸ್ತಕಗಳು, ವಿಶ್ವವಿದ್ಯಾಲಯಗಳು ಪ್ರಕಟಿಸುವ ಜರ್ನಲ್ಸ್/ಪ್ರಸಾರಾಂಗಗಳಲ್ಲಿ ಪ್ರಕಟಿತಗೊಂಡಿರುವವರಿಗೆ ಆದ್ಯತೆ ನೀಡಲಾಗುವುದು, ಆಯ್ಕೆಯಾದ ಲೇಖಕರಿಗೆ ಅಧ್ಯಾಯ ರಚನಾ ಕಾರ್ಯದಲ್ಲಿ ಎ4 ಅಳತೆಯ ಹಾಳೆಯ ಸುಮಾರು 60 ರಿಂದ 70 ಪುಟಗಳನ್ನೊಳಗೊಂಡ ಅಂಗೀಕೃತ ಪ್ರತಿ ಪುಟಕ್ಕೆ ರೂ. 700/– ಗಳಂತೆ ಹಾಗೂ ಡಿ.ಟಿ.ಪಿ ಕೆಲಸಕ್ಕೆ ರೂ.50/– ಒಟ್ಟಾರೆ, ರೂ.750/– ಗಳನ್ನು ಗೌರವ ಸಂಭಾವನೆ ನೀಡಲಾಗುತ್ತದೆ.

ಹೆಚ್ಚಿನ ಮಹಿತಿಗಾಗಿ ಮುಖ್ಯ ಸಂಪಾದಕರು ಕರ್ನಾಟಕ ಗ್ಯಾಸೆಟಿಯರ್ ಕಛೇರಿ ಬೆಂಗಳೂರು–01 ಇವರ ಕಚೇರಿಯ ದೂರವಾಣಿ ಸಂಖ್ಯೆ: 080–22213474 ಮೊ: 9538666957 ಗೆ ಸಂಪರ್ಕಿಸಬಹುದು.

ಸಹಿ/– ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್ ಇಲಾಖೆ
ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/3860/ಆಕಾರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಶಿವಾಜಿನಗರ ವಿಭಾಗ,
ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು.

ಸಂಖ್ಯೆ: ಕಾಪಾಅ(ಶಿನ)/ಕೆಪಿಪಿಪಿ/ಟೆಂಡರ್/14/2024–25 ದಿನಾಂಕ: 19.12.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಎನ್‌ಐಟಿ)

ದ್ವಿಲಕೋಟೆ ಪದ್ಧತಿ ಪ್ರಕಟಣೆ (ಜಿಒಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಪೂರ್ವ ವಲಯ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	ಎಂ.ವಿ. ಗಾರ್ಡನ್‌ನಲ್ಲಿ ಪ.ಜಾತಿ/ಪ.ಪಂಗಡದ ಬ್ಲಾಕ್ ನಂ. 39 & 41ರ ಹತ್ತಿರ ಬಹುಪಯೋಗಿ ಕಟ್ಟಡದ ನಿರ್ಮಾಣ.	50.00
	ಇಎಂಡಿ ಮೊತ್ತ : ರೂ. 1,00,000/–.	
2	ಎಂ.ವಿ. ಗಾರ್ಡನ್‌ನಲ್ಲಿ ಪ.ಜಾತಿ/ಪ.ಪಂಗಡದ ಬ್ಲಾಕ್ ನಂ. 53 & 54ರ ಹತ್ತಿರ ಪ್ರಾಥಮಿಕ ಆರೋಗ್ಯ ಕೇಂದ್ರ, ಲೈಬ್ರರಿ ಮತ್ತು ಇತರೆ ಅಗತ್ಯ ಚಟುವಟಿಕೆಗಳ ನಿರ್ಮಾಣ.	150.00
	ಇಎಂಡಿ ಮೊತ್ತ : ರೂ. 2,25,000/–. (ರೂ. 1,00,000/– ವನ್ನು ಎನ್‌ಇಎಫ್‌ಟಿ ಮೂಲಕ ಹಾಗೂ ಉಳಿಕೆ ರೂ. 1,25,000/– ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಪಾವತಿಸಬೇಕು.	
3	ರಾಜೀವ್‌ಗಾಂಧಿ ಕಾಲೋನಿಯಲ್ಲಿ ಪ.ಜಾತಿ/ಪ.ಪಂಗಡದ ಬ್ಲಾಕ್ ನಂ. 82/1 & 82/2 ರ ಹತ್ತಿರ ಕಮ್ಯೂನಿಟಿ ಹಾಲ್ ನಿರ್ಮಾಣ ಮತ್ತು ಶಿಥಿಲಾವಸ್ಥೆ ಕಟ್ಟಡಗಳ ತೆರವುಗೊಳಿಸುವುದು.	300.00
	ಇಎಂಡಿ ಮೊತ್ತ : ರೂ. 4,50,000/–. (ರೂ. 1,00,000/– ವನ್ನು ಎನ್‌ಇಎಫ್‌ಟಿ ಮೂಲಕ ಹಾಗೂ ಉಳಿಕೆ ರೂ. 3,50,000/– ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಪಾವತಿಸಬೇಕು.	

ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ : **ಪ್ರತಿ ಕಾಮಗಾರಿಗೆ 180 ತಿಂಗಳುಗಳು.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ **ದಿನಾಂಕ: 23.12.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **10.01.2025ರಂದು ಮಧ್ಯಾಹ್ನ 12.00 ಗಂಟೆಗೆ. (3)** ಭರ್ತಿ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **15.01.2025ರ ಸಂಜೆ 4.00 ಗಂಟೆವರೆಗೆ. (4)** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **ಸಾಧ್ಯವಾದಲ್ಲಿ 17.01.2025ರಂದು ಅಥವಾ ಮುಂದಿನ ಕೆಲಸದ ದಿನದಂದು ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಪೂರ್ವ ವಲಯ

ಸದನದಲ್ಲಿ ಆಡಳಿತ–ವಿರೋಧ ಪಕ್ಷಗಳ ಸದಸ್ಯರ ಕೈಗಳಲ್ಲಿ ರಾರಾಜಿಸಿದ ಅಂಬೇಡ್ಕರ್ ಭಾವಚಿತ್ರ

ಶಾ ಹೇಳಿಕೆ: ವಿಧಾನಸಭೆಯಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಾ.ಬಿ.ಆರ್. ಅಂಬೇಡ್ಕರ್ ಕುರಿತು ನೀಡಿದ ಹೇಳಿಕೆ ವಿಧಾನಮಂಡಲದ ಉಭಯ ಸದನಗಳಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಯಿತು. ಕಾಂಗ್ರೆಸ್‌ನ ಎಲ್ಲ ಸದಸ್ಯರು ಅಂಬೇಡ್ಕರ್ ಅವರ ಭಾವಚಿತ್ರ ಹಿಡಿದು, ಪ್ರತಿಭಟನೆ ನಡೆಸಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಸದಸ್ಯರು ಅಂಬೇಡ್ಕರ್ ಭಾವಚಿತ್ರದ ಜತೆಗೆ, ಕಾಂಗ್ರೆಸ್ ಅವರಗೆ ಅನ್ಯಾಯ ಮಾಡಿದೆ ಎಂದು ಬರೆದಿದ್ದ ಫಲಕಗಳನ್ನು ಪ್ರದರ್ಶಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಬಾಣಂತಿಯರ ಸಾವಿನ ಪ್ರಕರಣದ ಕುರಿತು ಉತ್ತರ ನೀಡಿದ ಬಳಿಕ ಕಾಂಗ್ರೆಸ್ ಸದಸ್ಯರು ಈ ವಿಷಯ ಪ್ರಸ್ತಾಪಿಸಿದರು. ಇದು ಉಭಯ ಪಕ್ಷಗಳ ಸದಸ್ಯರ ಮಧ್ಯೆ ಜಟಾಪಟಿಗೆ ಕಾರಣವಾಯಿತು. ಬೆಳಿಗ್ಗೆ ಹತ್ತು ನಿಮಿಷ ಕಲಾಪ ಮುಂದೂಡಲಾಯಿತು. ಭೋಜನ ವಿರಾಮಕ್ಕೂ ಮುನ್ನ ಮತ್ತು ಆ ಬಳಿಕವೂ ಕಲಾಪ ಮುಂದೂಡಲಾಯಿತು.

ಈ ವೇಳೆ, ಸಿದ್ದರಾಮಯ್ಯ ಸೇರಿ ಎಲ್ಲ ಸಚಿವರು ಹಾಗೂ ಸದಸ್ಯರ ಆಸನದ ಎದುರಿನ ಮೇಜಿನ ಮೇಲೆ ಅಂಬೇಡ್ಕರ್ ಅವರ ಭಾವಚಿತ್ರವನ್ನು ಸಾಲಾಗಿ ಜೋಡಿಸಿಡಲಾಗಿತ್ತು. ಬಿಜೆಪಿ ಸದಸ್ಯರು ಅಂಬೇಡ್ಕರ್ ಭಾವಚಿತ್ರ ಹಾಗೂ ಫಲಕಗಳನ್ನು ಇರಿಸಿಕೊಂಡಿದ್ದರು. ಕಲಾಪ ಮುಂದೂಡಿದ ವೇಳೆ ಆಡಳಿತ ಪಕ್ಷದ ಪ್ರತಿ ಸದಸ್ಯನ ಜಾಗದಲ್ಲಿ ಅಂಬೇಡ್ಕರ್ ಕುಳಿತಂತೆ ಭಾಸವಾಗುತ್ತಿತ್ತು.

ಮತ್ತೆ ಕಲಾಪ ಆರಂಭವಾದಾಗ, ಪರಸ್ಪರ ಆರೋಪ –ಪ್ರತ್ಯಾರೋಪ, ಧಿಕ್ಕಾರದ ಘೋಷಣೆಗಳು ತಾರಕಕ್ಕೇರಿದವು. ಬಿಜೆಪಿಯ ಸದಸ್ಯರು ಈ ಮಧ್ಯೆ ತಮ್ಮ ಕೈಗೆ ಸಿಕ್ಕಿದ ಕಾಗದಗಳನ್ನು ಚೂರು ಮಾಡಿ ಮೇಲಕ್ಕೆ ತೂರಿದರು. ಕಾಂಗ್ರೆಸ್ ಸದಸ್ಯರಲ್ಲದೇ ಹಲವು ಸಚಿವರೂ ಫಲಕಗಳನ್ನು ಹಿಡಿದಿದ್ದರು.

ಅಮಿತ್ ಶಾ ಅವರನ್ನು ವಜಾ ಮಾಡಬೇಕು ಎಂಬ ಫಲಕಗಳನ್ನು ಕಾಂಗ್ರೆಸ್ ಸದಸ್ಯರು ಹಿಡಿದಿದ್ದರು. ಇದಕ್ಕೆ ಪ್ರತಿಯಾಗಿ ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ ಮತ್ತು ಮೃತಪಟ್ಟಾಗ ಸಮಾಧಿ ಮಾಡಲು ಜಾಗ ನೀಡದ ಕಾಂಗ್ರೆಸ್‌ಗೆ ಧಿಕ್ಕಾರ ಎಂಬ ಫಲಕಗಳನ್ನು ಹಿಡಿದಿದ್ದರು.

ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಮನಃಸ್ಥಿತಿ ಬಯಲಾಗಿದೆ. ಇವರು ಅಂಬೇಡ್ಕರ್ ವಿರೋಧಿಗಳು ಮತ್ತು ಸಂವಿಧಾನ ವಿರೋಧಿಗಳು ಎಂದು ಕಾಂಗ್ರೆಸ್ ಸದಸ್ಯರು ಟೀಕಾ ಪ್ರಹಾರ ನಡೆಸಿದರು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಗುರುವಾರ ವಿಧಾನ ಪರಿಷತ್ ಅಧಿವೇಶನದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳ ಸದಸ್ಯರು ಅಂಬೇಡ್ಕರ್ ಭಾವಚಿತ್ರ ಹಿಡಿದು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ:ಎಂ.ಎಸ್.ಮಂಜುನಾಥ್

‘ಅಂಬೇಡ್ಕರ್ ವ್ಯಸನ ಅಲ್ಲ, ನಿತ್ಯ ಸ್ಮರಣೆ’

‘ಸಂವಿಧಾನ ಮತ್ತು ಅಂಬೇಡ್ಕರ್ ಅವರನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ನಿರಂತರವಾಗಿ ವಿರೋಧಿಸಿಕೊಂಡು ಬಂದಿದೆ. ಅಮಿತ್ ಶಾ ಅವರ ಹೇಳಿಕೆ ಅದಕ್ಕೆ ಪುಷ್ಟಿ ನೀಡಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಈ ಕುರಿತು ಸದನದಲ್ಲಿ ಹೇಳಿಕೆ ನೀಡಿದ ಅವರು, ಸಂವಿಧಾನ ಮತ್ತು ಅಂಬೇಡ್ಕರ್ ಅವರನ್ನು ವಿರೋಧಿಸಿದ್ದ ಗೋಳ್ವಾಲ್ಕರ್ ಮತ್ತು ಸಾವರ್ಕರ್ ಅವರ ಅಭಿಪ್ರಾಯವನ್ನು ಬಿಜೆಪಿ ತಿರಸ್ಕರಿಸಿಲ್ಲ. ಇದರ ಅರ್ಥ ಇವರ ಮನಸ್ಸಿನೊಳಗೆ ಅಂಬೇಡ್ಕರ್ ಬಗ್ಗೆ ದ್ವೇಷ, ಅಸೂಯೆ, ಅಸಹನೆ ಈಗಲೂ ಜೀವಂತವಾಗಿದೆ ಎಂದು ಅಲ್ಲವೇ ಎಂದು ಅವರು ಪ್ರಶ್ನಿಸಿದರು.

ಬಾಬಾ ಸಾಹೇಬ್ ಅವರು ಕೊಟ್ಟ ಸಂವಿಧಾನದಡಿಯೇ ಕಾರ್ಯ ನಿರ್ವಹಿಸುತ್ತಿರುವ ಸಂಸತ್‌ನಲ್ಲಿ ನಿಂತು ಅವರ ಸ್ಮರಣೆಯನ್ನು ವ್ಯಸನ ಎಂದು ತುಚ್ಛೀಕರಿಸುವ ಧೈರ್ಯಕ್ಕೆ ಮೆಚ್ಚಿಕೊಳ್ಳಲೇಬೇಕು. ಈ ಮಾತನ್ನು ಕೇಳಿದ ನಂತರ ಸಭಾಧ್ಯಕ್ಷರು ನಿಜಕ್ಕೂ ಸಂವಿಧಾನದಡಿ ಕಾರ್ಯ ನಿರ್ವಹಿಸುವವರಾಗಿದ್ದರೆ ತಕ್ಷಣವೇ ಅವರನ್ನು ಸದನದಿಂದ ಅಮಾನತುಗೊಳಿಸಬೇಕಾಗಿತ್ತು ಎಂದು ಹೇಳಿದರು.

‘ಅಂಬೇಡ್ಕರ್ ನಮಗೆ ವ್ಯಸನ ಅಲ್ಲ, ನಿತ್ಯ ಸ್ಮರಣೆ. ನಮ್ಮ ಉಸಿರು ಇರುವರೆಗೆ,ಈ ಭೂಮಿಯಲ್ಲಿ ಸೂರ್ಯಚಂದ್ರ ಇರುವವರೆಗೆ ಅಂಬೇಡ್ಕರ್ ಸ್ಮರಣೆ ಇರಲಿದೆ. ನೀವು ತುಚ್ಛೀಕರಿಸಿದಷ್ಟು ಪುಟಿದು ಪುಟಿದ ಮೇಲೆದ್ದು ಬಂದು ಅವರು ನಮ್ಮ ಮುನ್ನಡೆಯ ಬೆಳಕಾಗುತ್ತಾರೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಅಂಬೇಡ್ಕರ್ ಅವರಿಂದಾಗಿ ಸಮಾನತೆ ಮತ್ತು ಘನತೆಯ ಬದುಕನ್ನು ಪಡೆದಿರುವ ದೇಶದ ಕೋಟ್ಯಂತರ ಜನ ನಿಮಗೆ ಛೀಮಾರಿ ಹಾಕುತ್ತಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

ಶಾಸಕರಿಗೆ ₹6,000 ಕೋಟಿ ಅನುದಾನ

ಸುವರ್ಣ ವಿಧಾನಸೌಧ (ಬೆಳಗಾವಿ): ಲೋಕೋಪಯೋಗಿ ಇಲಾಖೆಯ ಅಪೆಂಡಿಕ್ಸ್(ಇ) ಅಡಿ ₹4,000 ಕೋಟಿ ಮತ್ತು ಗ್ರಾಮಾಂತರ ರಸ್ತೆಗಳ ಅಭಿವೃದ್ಧಿಗೆ ₹2,000 ಕೋಟಿ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಬುಧವಾರ ಘೋಷಿಸಿದರು.

ಗಮನ ಸೆಳೆಯುವ ಸೂಚನೆಯಡಿ ಬಿಜೆಪಿಯ ವಿ.ಸುನಿಲ್ ಕುಮಾರ್ ಮತ್ತು ಇತರ ಶಾಸಕರ ಚರ್ಚೆಗೆ ಉತ್ತರ ನೀಡಿದ ಅವರು, ‘ಎಲ್ಲ ಪಕ್ಷಗಳ ಶಾಸಕರಿಗೂ ಅನುದಾನ ನೀಡುತ್ತೇವೆ’ ಎಂದು ಭರವಸೆ ನೀಡಿದರು.

‘ಬೆಂಗಳೂರು ನಗರಕ್ಕೂ ವಿಶೇಷ ಅನುದಾನ ನೀಡುತ್ತೇವೆ’ ಎಂದು ಹೇಳಿದ ಅವರು ಎಷ್ಟು ಮೊತ್ತ ನೀಡಲಾಗುತ್ತದೆ ಎಂಬುದನ್ನು ಹೇಳಲಿಲ್ಲ.

ಅನುದಾನ ನೀಡದೇ ಅಭಿವೃದ್ಧಿ ಕುಂಠಿತವಾಗಿದೆ ಎಂಬುದು ಸತ್ಯಕ್ಕೆ ದೂರವಾಗಿದೆ. ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ರಾಜ್ಯದ ಆರ್ಥಿಕತೆಯನ್ನು ಸಂಪೂರ್ಣ ಹಾಳುಗೆಡವಿದರು. ಅರಾಜಕತೆ ಸೃಷ್ಟಿ ಮಾಡಿದರು ಎಂದು ಆರೋಪಿಸಿದರು.

‘ಬಜೆಟ್ ನಿಗದಿ ಮಾಡದೇ ₹2.9 ಲಕ್ಷ ಕೋಟಿ ಕಾಮಗಾರಿಗಳು ಮತ್ತು ಕಾರ್ಯಾದೇಶವನ್ನು ಕೊಟ್ಟು ಹೋಗಿದ್ದರು. ಅಲ್ಲದೇ, ಗುತ್ತಿಗೆದಾರರಿಗೆ ₹29,006 ಕೋಟಿ ಬಿಲ್ ಪಾವತಿ ಮಾಡದೇ ಹೋಗಿದ್ದರು. ನಮ್ಮ ಸರ್ಕಾರ ಬಂದ ನಂತರ ₹18,018 ಕೋಟಿ ಪಾವತಿ ಮಾಡಿದ್ದೇವೆ’ ಎಂದರು.

ಪ್ರಾಂಶುಪಾಲರಿಗೆ ‘ಜಿಲ್ಲಾ ಅಧಿಕಾರಿ’ ಹುದ್ದೆ: ಪರಿಷತ್‌ನಲ್ಲಿ ಪ್ರಸ್ತಾಪ

ಸುವರ್ಣ ವಿಧಾನಸೌಧ (ಬೆಳಗಾವಿ): ಅಲ್ಪಸಂಖ್ಯಾತರ ನಿರ್ದೇಶನಾಲಯವು ತನ್ನ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರನ್ನು ಆಡಳಿತಾತ್ಮಕ ಹುದ್ದೆಗಳಿಗೆ ನೇಮಿಸುತ್ತಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿರುವ ವಿಷಯವನ್ನು ವಿಧಾನ ಪರಿಷತ್‌ನಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಬಿಜೆಪಿಯ ಹೇಮಲತಾ ನಾಯಕ ಅವರು ಚರ್ಚೆಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು.

‘ಪ್ರಾಂಶುಪಾಲರಿಗೆ ‘ಜಿಲ್ಲಾ ಅಧಿಕಾರಿ’ ಹುದ್ದೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವರದಿಯನ್ನು ಪ್ರಸ್ತಾಪಿಸಿ ಮಾತನಾಡಿದ ಅವರು, ‘ಜಿಲ್ಲಾ ಅಧಿಕಾರಿ ಹುದ್ದೆಗೆ ನೇರವಾಗಿ ಆಯ್ಕೆಗೊಂಡವರನ್ನು ಸ್ಥಳ ನಿರೀಕ್ಷಣೆಯಲ್ಲಿ ಇಟ್ಟು, ಆ ಹುದ್ದೆಯನ್ನು ಪ್ರಾಂಶುಪಾಲರಿಗೆ ನೀಡಲಾಗುತ್ತಿದೆ. ಆಡಳಿತಾತ್ಮಕ ಹುದ್ದೆಗಳಿಗೆ ಶಿಕ್ಷಕರು, ಉಪನ್ಯಾಸಕರು, ಪ್ರಾಂಶುಪಾಲರನ್ನು ನೇಮಿಸುವುದು ಕಾನೂನುಬಾಹಿರ’ ಎಂದರು.

‘ಕೆಲವು ಜಿಲ್ಲೆಗಳಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರೇ ಇಲ್ಲ.ಇದು ಶಾಲೆಯ ಶೈಕ್ಷಣಿಕ ಹಿನ್ನಡೆಗೂ ಕಾರಣವಾಗಿದೆ. ಎಸ್‌ಎಸ್‌ಎಲ್‌ಸಿ ಕಳಪೆ ಫಲಿತಾಂಶಕ್ಕೆ ಪ್ರಾಂಶುಪಾಲರನ್ನೇ ಹೊಣೆ ಮಾಡಿ ನಿರ್ದೇಶನಾಲಯ ಇತ್ತೀಚೆಗೆ ನೋಟಿಸ್ ಕೂಡಾ ನೀಡಿದೆ. ಹೀಗಿರುವಾಗ ಪ್ರಾಂಶುಪಾಲರನ್ನು ಜಿಲ್ಲಾ ಅಧಿಕಾರಿ ಹುದ್ದೆಗೆ ನೇಮಿಸುವುದು ಎಷ್ಟು ಸರಿ’ ಎಂದೂ ಪ್ರಶ್ನಿಸಿದರು.

ಸಭಾ ನಾಯಕ ಎನ್.ಎಸ್. ಬೋಸರಾಜು ಅವರು, ಸಚಿವರಿಂದ ಉತ್ತರ ಕೊಡಿಸುವುದಾಗಿ ಭರವಸೆ ನೀಡಿದರು.

‘ಸೀನಾ ನದಿಗೆ ಸುರಂಗ ಕೊರೆದು ನೀರು’

ಸುವರ್ಣ ವಿಧಾನಸೌಧ (ಬೆಳಗಾವಿ): ‘ಮಹಾರಾಷ್ಟ್ರ ಸರ್ಕಾರ ಅಕ್ರಮವಾಗಿ ಸುರಂಗ ಕೊರೆದು ಸೀನಾ ನದಿಗೆ ಭೀಮಾ ನದಿಯಿಂದ ನೀರು ಹರಿಸುತ್ತಿರುವ ಬಗ್ಗೆ ರಾಜ್ಯದಿಂದ ತಂಡ ಕಳುಹಿಸಿ ವರದಿ ಪಡೆಯಲಾಗುವುದು’ ಎಂದು ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಜೆಪಿಯ ತಳವಾರ ಸಾಬಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಸೀನಾ ನದಿಯು ಭೀಮಾ ನದಿಯ ಉಪ ನದಿ. ಕೃಷ್ಣ ಜಲ ನ್ಯಾಯ ಮಂಡಳಿ–2ಕ್ಕೆ ಮಹಾರಾಷ್ಟ್ರ ಸರ್ಕಾರ ನೀಡಿರುವ ಮಾಹಿತಿಯ ಪ್ರಕಾರ ಉಜ್ಜಿನ ಜಲಾಶಯದಿಂದ ಸೀನಾ ನದಿಗೆ ನೀರು ಹರಿಸುತ್ತಿದೆ’ ಎಂದರು.

‘ಆಭರಣ ವರ್ತಕರಿಂದ ₹1,396 ಕೋಟಿ ಜಿಎಸ್‌ಟಿ ಸಂಗ್ರಹ’: ‘ರಾಜ್ಯದಲ್ಲಿ ಅಭರಣ ವರ್ತಕರಿಂದ 2021–22ನೇ ಸಾಲಿನಿಂದ ಪ್ರಸಕ್ತ ಸಾಲಿನ ನವಂಬರ್‌ವರೆಗೆ ₹1,396 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ ಎಂದು ಸಭಾ ನಾಯಕ ಎನ್.ಎಸ್. ಬೋಸರಾಜು ತಿಳಿಸಿದರು. ಜೆಡಿಎಸ್‌ನ ಟಿ.ಎ. ಶರವಣ ಅವರ ಪ್ರಶ್ನೆಗೆ ಮುಖ್ಯಮಂತ್ರಿ ಪರವಾಗಿ ಉತ್ತರಿಸಿದ ಅವರು,‘ಪ್ರಸಕ್ತ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ ₹1,04,839 ಕೋಟಿ ಸಂಗ್ರಹವಾಗಿದೆ’ ಎಂದರು.

‘ಜಿಎಸ್‌ಟಿ ಸಂಗ್ರಹಿಸುವ ಹೆಸರಿನಲ್ಲಿ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ’ ಎಂದು ಶರವಣ ಆರೋಪಿಸಿದಾಗ, ಅಧಿಕಾರಿಗಳೊಂದಿಗೆ ಸಭೆ ನಡೆಸಿ ಎಚ್ಚರಿಸುವುದಾಗಿ ಭರವಸೆ ನೀಡಿದರು.

ಶೀಘ್ರವೇ ಆದೇಶ ● ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಘೋಷಣೆ

ಬಾಣಂತಿಯರ ಸಾವು: ನ್ಯಾಯಾಂಗ ತನಿಖೆ

ಪ್ರಜಾವಾಣಿ ವಾರ್ತೆ

ದಿನೇಶ್ ಗುಂಡೂರಾವ್

ಸುವರ್ಣ ವಿಧಾನಸೌಧ (ಬೆಳಗಾವಿ): ‘ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಭವಿಸಿರುವ ಬಾಣಂತಿಯರ ಸಾವಿನ ಪ್ರಕರಣಗಳ ಕುರಿತು ನ್ಯಾಯಾಂಗ ತನಿಖೆಗೆ ಆದೇಶ ಹೊರಡಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ವಿಧಾನಸಭೆಯಲ್ಲಿ ಗುರುವಾರ ಪ್ರಕಟಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಮತ್ತು ಬಾಣಂತಿಯರ ಸಾವಿನ ಪ್ರಕರಣಗಳ ಕುರಿತು ನಿಯಮ 69ರ ಅಡಿಯಲ್ಲಿ ಸದನದಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಸಚಿವರು, ‘ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿರುವ ಬಾಣಂತಿಯರ ಸಾವಿನ ಪ್ರಕರಣಗಳ ಕುರಿತು ಈಗಾಗಲೇ ತನಿಖೆ ನಡೆಯುತ್ತಿದೆ. ಪ್ರಕರಣಗಳ ಸಮಗ್ರ ತನಿಖೆಗೆ ನ್ಯಾಯಾಂಗ ತನಿಖೆ ನಡೆಸಲು ರಾಜ್ಯ ಸರ್ಕಾರ ಸಿದ್ಧವಿದೆ. ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ, ಆದೇಶ ಹೊರಡಿಸಲಾಗುವುದು’ ಎಂದರು.

‘ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ ಕಂಪನಿ ಪೂರೈಸಿದ್ದ ರಿಂಗರ್ ಲ್ಯಾಕ್ಟೇಟ್ ಐ.ವಿ ದ್ರಾವಣ ಕಳಪೆ ಗುಣಮಟ್ಟದ್ದಾಗಿತ್ತು. ಅದರಿಂದಾಗಿಯೇ ಬಾಣಂತಿಯರ ಆರೋಗ್ಯದಲ್ಲಿ ವ್ಯತ್ಯಯವಾಗಿ ಸಾವು ಸಂಭವಿಸಿರುವ ಅನುಮಾನಗಳಿವೆ. ಈ ಸಂಬಂಧ ಒಂಬತ್ತು ಪ್ರಕರಣಗಳನ್ನು ಕಂಪನಿ ವಿರುದ್ಧ ದಾಖಲಿಸಲಾಗಿದೆ. ಇಂತಹ ಪ್ರಕರಣಗಳನ್ನು ಹೀಗೆಯೇ ಬಿಡಬಾರದು. ತಪ್ಪಿತಸ್ಥರ ವಿರುದ್ಧ ಕ್ರಮ ಆಗಲೇಬೇಕು. ನಮ್ಮ ವೈಫಲ್ಯವಿದ್ದರೆ ನನ್ನ ವಿರುದ್ಧವೂ ಕ್ರಮ ಆಗಲಿ’ ಎಂದು ಹೇಳಿದರು.

ಪಶ್ಚಿಮ್ ಬಂಗಾ ಕಂಪನಿ ಪೂರೈಸಿದ್ದ ರಿಂಗರ್ ಲ್ಯಾಕ್ಟೇಟ್ ಐ.ವಿ ದ್ರಾವಣದ ಗುಣಮಟ್ಟ ಕಳಪೆ ಎಂಬ ವರದಿಗಳು 2023ರಲ್ಲೇ ಬಂದಿದ್ದವು. 192 ಬ್ಯಾಚ್‌ಗಳಲ್ಲಿ ಪೂರೈಕೆಯಾಗಿದ್ದ ಐ.ವಿ ದ್ರಾವಣವನ್ನು ಬಳಕೆಯಿಂದ ಹಿಂಪಡೆದು, ಪಶ್ಚಿಮ ಬಂಗಾ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿತ್ತು ಎಂದು ವಿವರ ನೀಡಿದರು.

ಕೇಂದ್ರದ ಪ್ರಯೋಗಾಲಯದ ವರದಿ: ಪಶ್ಚಿಮ್ ಬಂಗಾ ಕಂಪನಿಯು ಕೇಂದ್ರದ ಪ್ರಯೋಗಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ಕೇಂದ್ರದ ಪ್ರಯೋಗಾಲಯವು ರಿಂಗರ್ ಲ್ಯಾಕ್ಟೇಟ್ ದ್ರಾವಣದ ಗುಣಮಟ್ಟ ಕಳಪೆಯಾಗಿಲ್ಲ ಎಂಬ ವರದಿ ನೀಡಿತ್ತು ಎಂದು ದಿನೇಶ್ ತಿಳಿಸಿದರು.

‘ಕೇಂದ್ರದ ಪ್ರಯೋಗಾಲಯದ ವರದಿ ಬಂದ ಬಳಿಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಈ ದ್ರಾವಣವನ್ನು ರಾಷ್ಟ್ರೀಯ ಪ್ರಯೋಗಾಲಯ ಮತ್ತು ಪರೀಕ್ಷಾ ಮಾನ್ಯತಾ ಮಂಡಳಿ (ಎನ್‌ಎಬಿಎಲ್) ಮಾನ್ಯತೆ ಹೊಂದಿರುವ ಪ್ರಯೋಗಾಲಯಗಳು ಹಾಗೂ ರಾಜ್ಯ ಔಷಧ ನಿಯಂತ್ರಣ ಇಲಾಖೆಯ ಪ್ರಯೋಗಾಲಯಗಳಲ್ಲಿ ಮತ್ತೊಮ್ಮೆ ಪರೀಕ್ಷೆ ನಡೆಸಿತ್ತು. 22 ಬ್ಯಾಚ್‌ಗಳ ದ್ರಾವಣವನ್ನು ಹಂತ ಹಂತವಾಗಿ ಬಳಕೆಗೆ ಪೂರೈಸಲಾಗಿತ್ತು. ಬಳ್ಳಾರಿ ಪ್ರಕರಣದ ಬಳಿಕವೂ ಪರೀಕ್ಷೆ ನಡೆಸಿದ್ದು, ದ್ರಾವಣ ಗುಣಮಟ್ಟದಿಂದ ಕೂಡಿದೆ ಎಂಬ ವರದಿ ಬಂದಿದೆ’ ಎಂದರು.

‘ಔಷಧಿ ಕಂಪನಿಗಳ ಲಾಬಿ ಮಣಿಸಬೇಕು’

‘ನಮ್ಮ ದೇಶದಲ್ಲಿ ಔಷಧಿ ಕಂಪನಿಗಳ ಲಾಬಿ ಪ್ರಬಲವಾಗಿದೆ. ಹಲವು ಕಂಪನಿಗಳು ರಫ್ತು ಉದ್ದೇಶ ಮತ್ತು ದೇಶೀಯ ಮಾರುಕಟ್ಟೆಗೆ ಔಷಧಿ ಉತ್ಪಾದಿಸಲು ಪ್ರತ್ಯೇಕ ಘಟಕಗಳನ್ನು ಹೊಂದಿವೆ. ಇದು ನಮ್ಮ ದೇಶದೊಳಕ್ಕೆ ಮಾರುಕಟ್ಟೆ ಪ್ರವೇಶಿಸುವ ಔಷಧಿಗಳ ಗುಣಮಟ್ಟದ ಬಗ್ಗೆ ಚಿಂತಿಸುವಂತೆ ಮಾಡಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಔಷಧ ಉತ್ಪಾದನೆ, ಮಾರಾಟದ ಮೇಲೆ ಹೊಂದಿರುವ ನಿಯಂತ್ರಣ ವ್ಯವಸ್ಥೆಯ ಮೇಲೆ ಔಷಧಿ ಉತ್ಪಾದಕರೇ ಹಿಡಿತ ಸಾಧಿಸಿದ್ದಾರೆ ಎಂದರು.

‘ವಿಪಕ್ಷದ ಆರೋಪಗಳಲ್ಲಿ ಹುರುಳಿಲ್ಲ’

‘ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ವಿರೋಧ ಪಕ್ಷ ಬಿಜೆಪಿಯವರು ಮಾಡಿರುವ ಆರೋಪಗಳಲ್ಲಿ ಹುರುಳಿಲ್ಲ. 108 ಆಂಬುಲೆನ್ಸ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿದೆ. ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ ಹೊರತಾಗಿ ಯಾವುದೇ ಆಸ್ಪತ್ರೆಗಳಲ್ಲಿ ಆರೋಗ್ಯ ಇಲಾಖೆಯು ಬಳಕೆದಾರರ ಶುಲ್ಕ ಹೆಚ್ಚಿಸಿಲ್ಲ. ರಾಷ್ಟ್ರೀಯ ಗುಣಮಟ್ಟ ಖಾತರಿ ಮಾನದಂಡಗಳ ಅಡಿಯಲ್ಲಿ ಪ್ರಮಾಣಪತ್ರವನ್ನೂ ಪಡೆಯಲಾಗುತ್ತಿದೆ’ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಬಿಜೆಪಿ ಧರಣಿ, ಸಭಾತ್ಯಾಗ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ರಾಜೀನಾಮೆ ನೀಡಬೇಕು. ಗರ್ಭಿಣಿಯರ ಸಾವು ಸರ್ಕಾರಿ ಪ್ರಾಯೋಜಿತ ಹತ್ಯೆ ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿ, ಧರಣಿ ನಡೆಸಿ, ಬಳಿಕ ಸಭಾತ್ಯಾಗ ಮಾಡಿದರು.

ಬಿಜೆಪಿಯ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ಭ್ರಷ್ಟಾಚಾರದ ಕಾರಣ ಈ ಸಾವುಗಳು ಸಂಭವಿಸಿದ್ದು, ಸಚಿವರೇ ತಪ್ಪಿತಸ್ಥರು. ಅವರನ್ನು ವಜಾ ಮಾಡಬೇಕಿತ್ತು ಎಂದು ಆಗ್ರಹಿಸಿದರು.

ಈ ಹಂತದಲ್ಲಿ ಅಶ್ವತ್ಥನಾರಾಯಣ ಮತ್ತು ದಿನೇಶ್ ಗುಂಡೂರಾವ್ ಮಧ್ಯೆ ಏರಿದ ಧ್ವನಿಯಲ್ಲಿ ವಾಗ್ವಾದ ನಡೆಯಿತು. ಈ ಹಂತದಲ್ಲಿ ಮುಖ್ಯಮಂತ್ರಿ ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

‘24 ಪಾಕ್, 159 ಬಾಂಗ್ಲಾ ಪ್ರಜೆಗಳ ಬಂಧನ’

‘ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ ಅನಧಿಕೃತವಾಗಿ ವಾಸವಾಗಿದ್ದ ಪಾಕಿಸ್ತಾನದ 24 ಮತ್ತು ಬಾಂಗ್ಲಾದೇಶದ 159 ಜನರನ್ನು ಬಂಧಿಸಲಾಗಿದೆ. ಒಟ್ಟು 115 ಬಾಂಗ್ಲಾದೇಶಿಯರು ನಕಲಿ ದಾಖಲೆಗಳ ಮೂಲಕ ವಾಸ ಇರುವುದು ಪತ್ತೆಯಾಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಬಿಜೆಪಿಯ ಡಿ.ಎಸ್. ಅರುಣ್ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಸಚಿವೆ ಲಕ್ಷ್ಮೀಗೆ ಅವಾಚ್ಯ ಪದ ಬಳಕೆ: ಸಿ.ಟಿ. ರವಿ ವಶಕ್ಕೆ

ಒಂದನೇ ಪುಟದಿಂದ...

ಗೊಂದಲ–ಗದ್ದಲಗಳ ಬಳಿಕ ಸಂಜೆ ಕಲಾಪ ಆರಂಭವಾದ ಬಳಿಕ, ಸದಸ್ಯರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದ ಸಭಾಪತಿ ಬಸವರಾಜ ಹೊರಟ್ಟಿ ಕಲಾಪವನ್ನು ಅನಿರ್ದಿಷ್ಟ ಕಾಲ ಮುಂದೂಡಿದರು. ಮಾರ್ಷಲ್‌ಗಳು ಹಾಗೂ ಪೊಲೀಸರ ಬಿಗಿ ಭದ್ರತೆಯಲ್ಲಿ ರವಿ ಅವರನ್ನು ಸುರಕ್ಷತೆಯಿಂದ ಹೊರಗೆ ಕರೆದೊಯ್ಯುವಂತೆ ಸಭಾಪತಿ ಸೂಚಿಸಿದರು. ವಿಧಾನಸೌಧದ ದ್ವಾರದ ಬಳಿಗೆ ಭದ್ರತೆಯಲ್ಲಿಯೇ ಬಂದ ರವಿ ಅವರು, ಸಹ ಸದಸ್ಯರ ಜತೆಗೆ ಮೆಟ್ಟಿಲ ಮೇಲೆಯೇ ಧರಣಿ ಕುಳಿತರು. ಮತ್ತೆ, ಬಿಗುವಿನ ವಾತಾವರಣ ಶುರುವಾಯಿತು. ಈ ವೇಳೆ, ಅಲ್ಲಿಗೆ ಬಂದ ಪೊಲೀಸರು ರವಿಯವರನ್ನು ಹೆಗಲ ಮೇಲೆ ಹೊತ್ತುಕೊಂಡು ಕರೆದೊಯ್ದು, ಜೀಪಿಗೆ ಹತ್ತಿಸಿ ಹಿರೇಬಾಗೇವಾಡಿ ಠಾಣೆಗೆ ಕರೆದೊಯ್ದರು.

ಅಲ್ಲಿ ಕೆಲ ಹೊತ್ತು ಕೂರಿಸಿದ ಪೊಲೀಸರು, ನಂದಗಢ ಠಾಣೆಗೆ ಕರೆದೊಯ್ದರು. ಮತ್ತೆ ಅಲ್ಲಿಂದ ಖಾನಾಪುರ ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿ ಬಂಧಿಸಿದರು.

ನಡೆದಿದ್ದೇನು?: ಪರಿಷತ್ತಿನ ಶೂನ್ಯವೇಳೆಯ ಬಳಿಕ, ‘ಅಂಬೇಡ್ಕರ್ ವಿರುದ್ಧ ಕೇಂದ್ರ ಸಚಿವ ಅಮಿತ್ ಶಾ ಅವಮಾನಕರ ಹೇಳಿಕೆ ನೀಡಿದ್ದಾರೆ’ ಎಂದು ದೂರಿದ ಕಾಂಗ್ರೆಸ್‌ನ ಎಲ್ಲ ಸದಸ್ಯರು ಅಂಬೇಡ್ಕರ್ ಭಾವಚಿತ್ರ ಹಿಡಿದು ಚರ್ಚೆಗೆ ಪಟ್ಟು ಹಿಡಿದರು. ಪ್ರತಿಯಾಗಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿ.ಟಿ. ರವಿ ಸೇರಿದಂತೆ ಬಿಜೆಪಿ ಸದಸ್ಯರು ಕೂಡಾ ಅಂಬೇಡ್ಕರ್ ಭಾವಚಿತ್ರ ಹಿಡಿದುಕೊಂಡು ‘ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್’ ಎಂದು ಘೋಷಣೆ ಕೂಗಿದರು. ಸದನದಲ್ಲಿ ಕೋಲಾಹಲ ಉಂಟಾದಾಗ ಕಲಾಪವನ್ನು ಸಭಾಪತಿ ಬಸವರಾಜ ಹೊರಟ್ಟಿ ಮುಂದೂಡಿದರು.

ಕಲಾಪ ಮುಂದೂಡಿದರೂ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಸದನದ ಒಳಗೆ ಪರಸ್ಪರ ಆರೋಪ– ಪ್ರತ್ಯಾರೋಪ ಮುಂದುವರಿಸಿದರು. ಈ ವೇಳೆ, ತಮ್ಮನ್ನು ಟೀಕೆ ಮಾಡಿದ್ದಾರೆ ಎಂದು ಸಿಟ್ಟಾದ ಸಿ.ಟಿ. ರವಿ, ಅವಾಚ್ಯ ಪದ ಬಳಸಿದರು ಎಂದು ಕಾಂಗ್ರೆಸ್ ಸದಸ್ಯರು ದೂರಿದರು.

‘ಮಾತಿನ ಚಕಮಕಿ ನಡೆಯವಾಗ ನನ್ನ ವಿರುದ್ಧ ರವಿ ಅಸಾಂವಿಧಾನಿಕ ಪದ ಬಳಸಿದ್ದಾರೆ’ ಎಂದು ಲಕ್ಷ್ಮೀ ಹೆಬ್ಬಾಳಕರ ಗಂಭೀರ ಆರೋಪ ಮಾಡಿದರು. ಅಲ್ಲದೆ, ಸದನದಿಂದ ಹೊರಗೆ ಹೋಗಿ ಸಭಾಪತಿಗೆ ದೂರು ನೀಡಿದರು. ಆ ಬೆನ್ನಲ್ಲೇ, ಸಿ.ಟಿ. ರವಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭಾಪತಿಗೆ ಕಾಂಗ್ರೆಸ್ ಸದಸ್ಯರು ಮನವಿ ಮಾಡಿದರು. ಲಕ್ಷ್ಮೀ ಹೆಬ್ಬಾಳಕರ ಅವರು ದೂರು ಸ್ವೀಕರಿಸಿದ ಸಭಾಪತಿ, ಆಡಿಯೊ ವಿಡಿಯೊ ಪರಿಶೀಲನೆಗೆ ಸೂಚನೆ ನೀಡಿದರು. ಏತನ್ಮಧ್ಯೆ, ರವಿಯವರ ಮೇಲೆ ಹಲ್ಲೆಗೆ ಯತ್ನ ನಡೆಸಿದ್ದು, ಅವರಿಗೆ ರಕ್ಷಣೆ ಕೊಡಬೇಕು ಎಂದು ಬಿಜೆಪಿ ನಾಯಕರು ಸಭಾಪತಿಗೆ ಮನವಿ ಮಾಡಿದರು.

ಸಭಾಪತಿ ತಮ್ಮ ಕೊಠಡಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್‌.ಕೆ. ಪಾಟೀಲ, ಪ್ರಿಯಾಂಕ್ ಖರ್ಗೆ, ಎನ್.ಎಸ್. ಬೋಜರಾಜು, ಲಕ್ಷ್ಮಿ ಹೆಬ್ಬಾಳಕರ ಜತೆ ಮಾತುಕತೆ ನಡೆಸಿದರು. ನಂತರ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ. ಸಿ.ಟಿ. ರವಿ ಮತ್ತು ಬಿಜೆಪಿ–ಜೆಡಿಎಸ್ ಸದಸ್ಯರ ನಡುವೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು.

ಬಳಿಕ ಕಲಾಪ ಆರಂಭವಾಯಿತು. ಅನಿರ್ದಿಷ್ಟ ಕಾಲ ಕಲಾಪವನ್ನು ಸಭಾಪತಿ ಮುಂದೂಡಿದರು.

‘ತಪ್ಪು ಮಾತನಾಡಿದ್ದರೆ ತೋರಿಸಲಿ’

‘ಅವರವರ ಭಾವನೆಗೆ ತಕ್ಕಂತೆ ಭಾವಿಸಿದರೆ ನಾವು ಏನೂ ಮಾಡಲು ಸಾಧ್ಯ? ನಾನು ತಪ್ಪು ಮಾತನಾಡಿದ್ದು ರೆಕಾರ್ಡ್‌ನಲ್ಲಿದ್ದರೆ ಅದನ್ನು ತೋರಿಸಲಿ. ಅವರ ಕಲ್ಪನೆಯ ಪ್ರಶ್ನೆಗೆ ನಾನು ಉತ್ತರಿಸಲು ಸಾಧ್ಯವೇ’ ಎಂದು ಸಿ.ಟಿ. ರವಿ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಯಾರು ಏನು ಹೇಳಿದರು ಎನ್ನುವುದು ಆನ್ ರೆಕಾರ್ಡ್ ಆಡಿಯೊ ಮತ್ತು ವಿಡಿಯೊದಲ್ಲಿ ಇರುತ್ತದೆ. ಯಾರು ಏನೇನು ಮಾತನಾಡಿದರು ಎನ್ನುವುದು ಅದರಲ್ಲಿ ಗೊತ್ತಾಗುತ್ತದೆ’ ಎಂದರು. ‘ಮುಖ್ಯಮಂತ್ರಿಯಷ್ಟು ನಾನು ಕಾನೂನು ಪಂಡಿತನಲ್ಲ, ಯಾವುದು ಕ್ರಿಮಿನಲ್ ಅಪರಾಧ ಎನ್ನುವುದು ಅವರಷ್ಟು ನನಗೆ ತಿಳಿದಿಲ್ಲ. ಮತ್ತೆಮತ್ತೆ ಹೇಳುತ್ತಿದ್ದೇನೆ, ಆಡಿಯೋ, ವಿಶುಯಲ್ಸ್ ಪರೀಕ್ಷೆ ಮಾಡಲಿ. ನಾನು ತಪ್ಪು ಪದ ಬಳಸಿದ್ದೇ ಆದಲ್ಲಿ, ಇಷ್ಟೊತ್ತಿಗೆ ಅದು ಸುದ್ದಿ ಆಗುತ್ತಿರಲಿಲ್ಲವೇ’ ಎಂದು ಸಿ.ಟಿ. ರವಿ ಪ್ರಶ್ನಿಸಿದರು.

ಅಮ್ಮ, ಮಗಳು ಇಲ್ಲವೇ: ಲಕ್ಷ್ಮೀ ತರಾಟೆಗೆ

ಕಲಾಪ ಮುಂದೂಡುತ್ತಿದ್ದಂತೆಯೇ ರವಿ ಅವರನ್ನು ಸಭಾಪತಿ ಕೊಠಡಿಗೆ ಕರೆದೊಯ್ಯಲು ಮುಂದಾದ ಮಾರ್ಷಲ್‌ಗಳು ಅವರ ಸುತ್ತ ಕೋಟೆ ಕಟ್ಟಿದರು.

ಈ ವೇಳೆ, ನಿನಗೆ ಅಮ್ಮ ಇಲ್ಲವೇ, ಹೆಂಡತಿ ಇಲ್ಲವೇ, ಮಗಳು ಇಲ್ಲವೇ ಎಂದು ಲಕ್ಷ್ಮೀ ಹೆಬ್ಬಾಳಕರ ಏರಿದ ಧ್ವನಿಯಲ್ಲಿ ರವಿ ಅವರನ್ನು ಪ್ರಶ್ನಿಸಿದರು. ಇದಕ್ಕೆ, ಕಾಂಗ್ರೆಸ್‌ನ ಇತರ ಸದಸ್ಯರು ಧ್ವನಿಗೂಡಿಸಿ ರವಿ ವಿರುದ್ಧ ಹರಿಹಾಯ್ದರು. ಅತ್ತ ಬಿಜೆಪಿ ಸದಸ್ಯರು, ರವಿ ಬೆಂಬಲಕ್ಕೆ ನಿಂತರು. ಆಕ್ರೋಶ–ಕೂಗಾಟಗಳ ಮಧ್ಯೆಯೇ ಕಲಾಪ ಕೊನೆಯಾಯಿತು.

ಕ್ರಿಮಿನಲ್ ಅಪರಾಧ: ಸಿದ್ದರಾಮಯ್ಯ

‘ರವಿ ಅವರು ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅಸಭ್ಯ ಪದ ಬಳಕೆ ಮಾಡಿದ್ದು, ಅದು ಕ್ರಿಮಿನಲ್ ಅಪರಾಧ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ಬಗ್ಗೆ ಲಕ್ಷ್ಮೀ ಹೆಬ್ಬಾಳಕರ ಅವರು ವಿಧಾನಪರಿಷತ್ ಸಭಾಪತಿಗೆ ದೂರು ನೀಡಿರುವ ಬಗ್ಗೆ ಮಾಹಿತಿ ಇಲ್ಲ’ ಎಂದರು. ಸಿ. ಟಿ. ರವಿ ಅವರು ಆರೋಪವನ್ನು ಅಲ್ಲಗಳೆದಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಈ ವಿಚಾರದಲ್ಲಿ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಆತ್ಮಾವಲೋಕನಕ್ಕೆ ಸಭಾಪತಿ ಹೊರಟ್ಟಿ ಸಲಹೆ

ಸಿ.ಟಿ. ರವಿ ವಿರುದ್ಧ ಲಕ್ಷ್ಮಿ ಹೆಬ್ಬಾಳಕರ ಹಾಗೂ ಕಾಂಗ್ರೆಸ್ ಸದಸ್ಯರು ನೀಡಿದ ದೂರಿನ ಕುರಿತು ಸದನದಲ್ಲಿ ರೂಲಿಂಗ್ ನೀಡಿದ ಸಭಾಪತಿ ಬಸವರಾಜ ಹೊರಟ್ಟಿ, ಆತ್ಮಾವಲೋಕನ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ರವಿ ಅವರು ವಿರುದ್ಧ ಲಕ್ಷ್ಮಿ ಹೆಬ್ಬಾಳಕರ ಮಾಡಿರುವ ಆರೋಪಕ್ಕೆ ಸದಸ್ಯರಾದ ಉಮಾಶ್ರೀ, ಬಲ್ಕೀಸ್ ಬಾನು, ನಾಗರಾಜ್ ಯಾದವ್ ಸಾಕ್ಷ್ಯ ನುಡಿದಿದ್ದಾರೆ. ಪೀಠ ಇಂತಹ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂದರು.

ಪ್ರತಿಯೊಬ್ಬರೂ ಸದನದ ಗೌರವ, ಘನತೆ ಕಾಪಾಡಬೇಕು. ಸದನದ ಒಳಗೆ ಹಾಗೂ ಹೊರಗಿನ ನಡವಳಿಕೆಗಳು ಇತರರಿಗೆ ಮಾದರಿಯಾಗಿರಬೇಕು. ಅಸಾಂವಿಧಾನಿಕ ಪದಗಳ ಬಳಕೆ ಸದನದ ಇತಿಹಾಸಕ್ಕೆ ಕಪ್ಪುಚುಕ್ಕೆಯಾಗಲು ಅವಕಾಶ ನೀಡಬಾರದು ಎಂದರು. ಸಿ.ಟಿ. ರವಿ ವಿರುದ್ಧ ಹಲ್ಲೆಗೆ ಯತ್ನ ನಡೆಸಿದ ಪ್ರಕರಣ ಕುರಿತು ಬಿಜೆಪಿ–ಜೆಡಿಎಸ್ ಸದಸ್ಯರು ನೀಡಿದ ದೂರುಗಳ ಕುರಿತು ಪ್ರಸ್ತಾಪಿಸಿದ ಅವರು, ಇಂತಹ ನಡವಳಿಕೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು ಎಂದರು. ಸಿ.ಟಿ. ರವಿ ಅವರನ್ನು ಅಮಾನತು ಮಾಡಬೇಕು ಎಂದು ಒತ್ತಾಯಿಸಿದ್ದ ಲಕ್ಷ್ಮೀ ಹೆಬ್ಬಾಳಕರ ಹಾಗೂ ಕಾಂಗ್ರೆಸ್ ಸದಸ್ಯರು ಮತ್ತೆ ಆಕ್ರೋಶ ಹೊರಹಾಕಿದರು.

ವಿಧಾನಸಭೆಯಲ್ಲಿ ಹಕ್ಕುಬಾಧ್ಯತಾ ಸಮಿತಿಗೆ

ಲಕ್ಷ್ಮಿ ಹೆಬ್ಬಾಳಕರ ಅವರನ್ನು ಸಿ.ಟಿ.ರವಿ ನಿಂದಿಸಿದ ಪ್ರಕರಣವನ್ನು ವಿಧಾನಸಭೆಯಲ್ಲಿ ಕಾಂಗ್ರೆಸ್ ಶರತ್ ಬಚ್ಚೇಗೌಡ ಪ್ರಸ್ತಾಪಿಸಿದರು. ಇದು ಬಿಜೆಪಿ–ಕಾಂಗ್ರೆಸ್ ಮಧ್ಯೆ ವಾಕ್ಸಮರಕ್ಕೆ ಕಾರಣವಾಯಿತು.

ಆಗ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು, ‘ಲಕ್ಷ್ಮೀ ಹೆಬ್ಬಾಳಕರ ಅವರು ಈ ಮನೆಯ ಸದಸ್ಯರಾಗಿದ್ದು, ಅವರಿಗೆ ರಕ್ಷಣೆ ನೀಡುವುದು ನಮ್ಮ ಕರ್ತವ್ಯ. ಆದ್ದರಿಂದ ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಬೇಕು’ ಎಂದು ಸಭಾಧ್ಯಕ್ಷರಿಗೆ ಮನವಿ ಮಾಡಿದರು. ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಈ ವಿಷಯವನ್ನು ಹಕ್ಕು ಬಾಧ್ಯತಾ ಸಮಿತಿಗೆ ಒಪ್ಪಿಸಿದರು.

ಸುವರ್ಣಸೌಧದಲ್ಲಿ ಪ್ರಕ್ಷುಬ್ಧ ವಾತಾವರಣ

ಸಿ.ಟಿ.ರವಿ ಆಡಿದ್ದಾರೆ ಎನ್ನಲಾದ ಅವಾಚ್ಯ ಮಾತಿನ ಪ್ರಕರಣವು ಮಧ್ಯಾಹ್ನ ಒಂದು ಗಂಟೆಯ ಬಳಿಕ ಸುವರ್ಣ ವಿಧಾನಸೌಧದ ಆವರಣವನ್ನೇ ಪ್ರಕ್ಷುಬ್ಧ ಪರಿಸ್ಥಿತಿಗೆ ದೂಡಿತು.

ಮಧ್ಯಾಹ್ನದ ಊಟಕ್ಕೆ ಹೊರಗೆ ಹೋಗಿದ್ದ ರವಿ ಅವರು ವಿಧಾನಸೌಧಕ್ಕೆ ವಾಪಸ್ ಬಂದು, ಪ್ರವೇಶ ದ್ವಾರದ ಬಳಿ ಕಾರಿನಿಂದ ಇಳಿಯಲು ಮುಂದಾಗುತ್ತಿದ್ದಂತೆಯೇ ಅವರ ಕಾರಿನೆಡೆಗೆ ನುಗ್ಗಿದ ಹೆಬ್ಬಾಳಕರ ಅವರ ಮಹಿಳಾ ಬೆಂಬಲಿಗರು ಕಾರಿಗೆ ಮುತ್ತಿಗೆ ಹಾಕಿ, ತಮ್ಮ ಕೈಯಿಂದ ಗುದ್ದಿದರು. ರವಿ ವಿರುದ್ಧ ಏರಿದ ಧ್ವನಿಯಲ್ಲಿ ಘೋಷಣೆ ಕೂಗಿದರು. ಕೋಲಾಹಲದ ವಾತಾವರಣ ನಿರ್ಮಾಣವಾಯಿತು. ಪ್ರತಿಭಟನಕಾರರನ್ನು ಅಲ್ಲಿಂದ ಸ್ವಲ್ಪ ದೂರಕ್ಕೆ ಕರೆದೊಯ್ಯುವಷ್ಟರಲ್ಲಿ ಮತ್ತಷ್ಟು ಜನ ಗುಂಪುಗೂಡಿದರು. ಅವರನ್ನೆಲ್ಲ ವಶಕ್ಕೆ ಪಡೆದ ಪೊಲೀಸರು ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಸುವರ್ಣಸೌಧದ ಒಳ ಪ್ರವೇಶಿಸಿದ ರವಿ ಅವರು, ಉಪಸಭಾಪತಿ ಎಂ.ಕೆ. ಪ್ರಾಣೇಶ್ ಕೊಠಡಿಗೆ ತೆರಳಿದರು.

ಅದಾದ ಬಳಿಕ, ಸಭಾಪತಿ ಹೊರಟ್ಟಿ ಅವರು ರವಿ ಅವರನ್ನು ತಮ್ಮ ಕೊಠಡಿಗೆ ಕರೆಯಿಸಿಕೊಂಡು ಮಾಹಿತಿ ಪಡೆದರು. ನಾಲ್ಕು ಗಂಟೆ ಸುಮಾರಿಗೆ ಸುವರ್ಣಸೌಧದಿಂದ ಹೊರಟ ರವಿ, ಪ್ರವೇಶ ದ್ವಾರದ ಕಡೆಗೆ ಕಾರಿಡಾರ್‌ನಲ್ಲಿ ಬರುತ್ತಿದ್ದುದನ್ನು ಕಂಡ, ಹೆಬ್ಬಾಳಕರ ಅವರ ಕೆಲವು ಬೆಂಬಲಿಗರು ಅವರ ಕಡೆಗೆ ತಮ್ಮ ಕಾಲನ್ನು ಎತ್ತಿಕೊಂಡು ನುಗ್ಗಿದರು. ಅಲ್ಲಿದ್ದ ಮಾರ್ಷಲ್‌ಗಳು ರವಿ ಅವರಿಗೆ ರಕ್ಷಣೆ ಕೊಟ್ಟು, ವಾಪಸ್ ಉಪಸಭಾಪತಿ ಕೊಠಡಿ ಕಡೆ ಕರೆದೊಯ್ದರು. ಅಲ್ಲಿಗೆ ಧಾವಿಸಿದ ಮಾರ್ಷಲ್‌ಗಳು ಪ್ರತಿಭಟನಕಾರರನ್ನು ಹೊರದಬ್ಬಿ, ಪ್ರವೇಶದ್ವಾರದ ಬಾಗಿಲು ಬಂದ್ ಮಾಡಿದರು. ಹಾಗಿದ್ದರೂ, ಬಗ್ಗದ ಪ್ರತಿಭಟನಕಾರರು ಬಾಗಿಲಿಗೆ ಒದ್ದು, ತಮ್ಮ ಸಿಟ್ಟು ಹೊರಹಾಕಿದರು. ಗುಂಪು ದೊಡ್ಡದಾಗುತ್ತಿದ್ದಂತೆಯೇ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಕರೆಯಿಸಿಕೊಳ್ಳಲಾಯಿತು. ಸುವರ್ಣಸೌಧದ ಎಲ್ಲ ಬಾಗಿಲುಗಳನ್ನು ಬಂದ್ ಮಾಡಿ, ಹೆಚ್ಚಿನ ಮಾರ್ಷಲ್–ಪೊಲೀಸರನ್ನು ನಿಯೋಜಿಸಿ ಯಾರೊಬ್ಬರೂ ಒಳ ಪ್ರವೇಶಿಸದಂತೆ ನಿರ್ಬಂಧ ವಿಧಿಸಲಾಯಿತು. ಪರಿಷತ್ತಿನ ಸಭಾಂಗಣ ಇರುವ ಕಡೆಗೆ ಸರ್ಪಗಾವಲು ಹಾಕಿ, ಕೆಲವು ಕಡೆ ಮಾಧ್ಯಮದವರನ್ನೂ ತಡೆಯಲಾಯಿತು.

ಕಲಾಪ ಮುಂದೂಡಿಕೆಯಾಗುವವರೆಗೂ ಬಿಗುವಿನ ವಾತಾವರಣ ಸುವರ್ಣಸೌಧವನ್ನು ಆವರಿಸಿತ್ತು. ಕಲಾಪ ಮುಗಿದು ಒಂದು ಗಂಟೆಯ ಬಳಿಕವಷ್ಟೇ ಪರಿಸ್ಥಿತಿ ತಿಳಿಯಾಯಿತು.

ಚಿಕ್ಕಮಗಳೂರು ನಗರ ಬಂದ್‌ಗೆ ಕರೆ

ಚಿಕ್ಕಮಗಳೂರು: ಸಿ.ಟಿ.ರವಿ ಅವರನ್ನು ಪೊಲೀಸರು ವಶಕ್ಕೆ ಪಡೆದಿರುವುದನ್ನು ಖಂಡಿಸಿ ಶುಕ್ರವಾರ ಚಿಕ್ಕಮಗಳೂರು ನಗರ ಬಂದ್‌ಗೆ ಬಿಜೆಪಿ ಕರೆ ನೀಡಿದೆ.

ಬಿಜೆಪಿ ಕಾರ್ಯಕರ್ತರು ದಿಢೀರ್ ಪ್ರತಿಭಟನೆ ನಡೆಸಿದರು. ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಎಲ್ಲರನ್ನು ಪೊಲೀಸರು ಬಂಧಿಸಿದರು.

ಬಳಿಕ ಸಭೆ ನಡೆಸಿದ ಬಿಜೆಪಿ ಮುಖಂಡರು, ಬಂದ್ ನಿರ್ಧಾರ ಪ್ರಕಟಿಸಿದರು.

ಇದಕ್ಕೂ ಮುನ್ನ ಸಚಿವೆ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ಅವಹೇಳನಕಾರಿ ಪದ ಬಳಸಿದ್ದಾರೆ ಎಂದು ಆರೋಪಿಸಿ ಸಿ.ಟಿ. ರವಿ ಅವರ ಮನೆಗೆ ಮುತ್ತಿಗೆ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದರು. ಮನೆಯಿಂದ ಕೊಂಚ ದೂರದಲ್ಲೇ ಎಲ್ಲರನ್ನು ತಡೆದ ಪೊಲೀಸರು ವಶಕ್ಕೆ ಪಡೆದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ತಿರುಚಲಾಗಿದೆ ಎಂದು ಆರೋಪಿಸಿ, ಇದೇ ಸಮಯದಲ್ಲಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಬಿಜೆಪಿ ಕಾರ್ಯಕರ್ತರು ಮುಂದಾದರು. ಅವರನ್ನೂ ತಡೆದ ಪೊಲೀಸರು ವಶಕ್ಕೆ ಪಡೆದರು.

ಸಿ.ಟಿ. ರವಿ ಮನೆ, ಕಾಂಗ್ರೆಸ್ ಕಚೇರಿ ಮತ್ತು ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಯಾರು ಏನಂದರು?

ಲಕ್ಷ್ಮೀ ಹೆಬ್ಬಾಳಕರ ಅವರು ಸಿ.ಟಿ. ರವಿಗೆ ಕೊಲೆಗಾರ ಎನ್ನುವ ಪದ ಬಳಕೆ ಮಾಡಿದ್ದಾರೆ. ಆಗ ರವಿ ಕೂಡಾ ಲಕ್ಷ್ಮೀ ಹೆಬ್ಬಾಳಕರಗೆ ಆಕ್ಷೇಪಾರ್ಹ ಪದ ಬಳಕೆ ಮಾಡಿದ್ದಾರೆ

ನಾಗರಾಜ್ ಯಾದವ್, ಕಾಂಗ್ರೆಸ್ ಸದಸ್ಯ

ಸಭಾಪತಿ ಕಲಾಪವನ್ನು 10 ನಿಮಿಷ ಮುಂದೂಡಿದರು. ಆಗ ಕೊಲೆಗಡುಕ, ಡ್ರಗ್ಗಿಸ್ಟ್ ಪದ ಬಂತು. ಯಾವುದೇ ಅಶ್ಲೀಲ ಪದ ಬಳಕೆ ನನ್ನ ಗಮನಕ್ಕೆ ಬಂದಿಲ್ಲ

ಟಿ.ಎ. ಶರವಣ, ಜೆಡಿಎಸ್ ಸದಸ್ಯ

ಸುವರ್ಣಸೌಧದ ಒಳಗೇ ಹಲ್ಲೆ ನಡೆಸಲು ಯತ್ನಿಸಿರುವುದು ಗಂಬೀರ ಲೋಪ. ಆವರಣದಲ್ಲೇ ಭದ್ರತೆ ಇಲ್ಲ ಎಂದಾದರೆ, ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಯಾವ ರೀತಿ ಇದೆ ಎನ್ನುವುದನ್ನು ಗ್ರಹಿಸಬಹುದು

ಡಿ.ಎಸ್. ಅರುಣ್, ಬಿಜೆಪಿ ಸದಸ್ಯ

ಸಿ.ಟಿ. ರವಿ ಕೀಳು ಅಭಿರುಚಿಯ ಪದ ಬಳಸಿಲ್ಲ, ಕಾಂಗ್ರೆಸ್ ವಿಷಯಾಂತರ ಮಾಡಲು ಯಾವಾಗಲೂ ಇಂತಹ ತಂತ್ರ ಅನುಸರಿಸುತ್ತದೆ

ಎನ್. ರವಿಕುಮಾರ್, ಬಿಜೆಪಿ ಸದಸ್ಯ

‘ಭಾರತ ಮಾತೆಗೆ ಅವಮಾನ’

‘ಬಿಜೆಪಿ ನಾಯಕರು ಸದನದಲ್ಲಿ ನಡೆದುಕೊಂಡ ರೀತಿಗೆ ನಾಚಿಕೆಯಾಗಬೇಕು. ಯಾವಾಗಲೂ ಧರ್ಮ, ಸಂಸ್ಕೃತಿ ಬಗ್ಗೆ ಮಾತನಾಡುವ ಅವರು ಭಾರತ ಮಾತೆಗೆ, ಮಾತೃಭೂಮಿಗೆ ಅಪಮಾನ ಮಾಡಿದ್ದಾರೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸಿನಿಮಾ ಪುರವಣಿ

ಸುದೀಪ್

ರಂಜನೆ ಜೊತೆಗೆ ಸಂದೇಶ ಸುದೀಪ್ ಫಿಲಾಸಫಿ

ಸುದೀಪ್ ನಟನೆಯ ‘ಮ್ಯಾಕ್ಸ್’ ಚಿತ್ರ ಡಿ.25ರಂದು (ಬುಧವಾರ) ತೆರೆ ಕಾಣುತ್ತಿದೆ. ಎರಡು ವರ್ಷಗಳ ಬಳಿಕ ತೆರೆಗೆ ಬರುತ್ತಿರುವ ತಮ್ಮ ಚಿತ್ರ, ಸಿನಿಮಾ ಪಯಣ ಹಾಗೂ ವೈಯಕ್ತಿಕ ಬದುಕಿನ ಕುರಿತು ಮಾತನಾಡಿದ್ದಾರೆ.

- ಈ ಚಿತ್ರದ ಕಥೆ ಬರೆದವರು ತಮಿಳಿನವರು ಎಂದಾಕ್ಷಣ ಅದರಲ್ಲಿ ತಮಿಳಿನ ನೇಟಿವಿಟಿ ಇರುತ್ತದೆ ಎಂದಲ್ಲ. ನನಗೆ ನೇಟಿವಿಟಿಯಲ್ಲಿ ನಂಬಿಕೆ ಇಲ್ಲ. ನಾನು ಬೇರೆ ದೇಶದ ಸಿನಿಮಾಗಳನ್ನು ಎಂಜಾಯ್ ಮಾಡಿಕೊಂಡು ನೋಡುತ್ತೇನೆ. ಹಾಗಂತ ನಾನು ಅಲ್ಲಿಯವನಲ್ಲ. ನಮ್ಮ ‘ಕಾಂತಾರ’ದಂತಹ ಚಿತ್ರವನ್ನು ಜಗತ್ತು ಸ್ವೀಕರಿಸುತ್ತದೆ. ಅವರು ನಮ್ಮ ನೇಟಿವಿಟಿಯವರಲ್ಲ. ಹೀಗಾಗಿ ಇಲ್ಲಿ ನೇಟಿವಿಟಿಯ ಪ್ರಶ್ನೆ ಬರುವುದಿಲ್ಲ. ನಿರ್ದೇಶಕರು ‘ಮ್ಯಾಕ್ಸ್’ ಕಥೆ ಹೇಳಿದಾಗ ಚಿತ್ರದ ಕುರಿತು ಅವರಿಗಿದ್ದ ಕ್ಲಾರಿಟಿ ನನಗೆ ಕಾಣಿಸುತ್ತಿತ್ತು. ಹೀಗಾಗಿ ಇದನ್ನು ಒಪ್ಪಿಕೊಂಡೆ. ನಿರ್ಮಾಪಕರು ತಮಿಳುನಾಡಿನವರು, ಅವರಿಗೆ ತಮ್ಮ ಜಾಗದಲ್ಲಿ ನಿರ್ಮಾಣಕ್ಕೆ ಹಿಡಿತ ಹೆಚ್ಚಿರುತ್ತದೆ ಎಂಬ ಕಾರಣಕ್ಕೆ ಮಹಾಬಲಿಪುರಂನಲ್ಲಿ ಸೆಟ್ ಹಾಕಿ ಚಿತ್ರೀಕರಣ ಮಾಡಿದೆವು. ಆದರೆ ಇದು ತಮಿಳುನಾಡಿಗೆ ಸೀಮಿತವಾದ ಕಥೆಯಲ್ಲ. ಒಂದು ರಾತ್ರಿಯಲ್ಲಿ ನಡೆಯುವ ಕಥೆ.
- ದಿನನಿತ್ಯ ಮನೆಯಲ್ಲಿ ಅಮ್ಮನ ಊಟ. ದಿನ ಹೊಸತು ಏನು ಮಾಡಿದ್ದಾರೆ ಎಂದು ಹುಡುಕುವುದಕ್ಕಿಂತ ಬಡಿಸುವವರ ಪ್ರೀತಿ ಮುಖ್ಯ. ಜನ ನನ್ನನ್ನು ಒಪ್ಪಿಕೊಂಡು ಬಹಳ ವರ್ಷವಾಯ್ತು. ಹೀಗಾಗಿ ಅವರಿಗೆ ಸಿನಿಮಾ ಕೊಡಬೇಕು ಎಂಬುದು ಆಸೆ. ಅದನ್ನು ಅವರು ಪ್ರೀತಿಯಿಂದ ನೋಡುತ್ತಾರೆ. ಹೊಸತನ ನಾನೇನು ಕೊಡಲು ಆಗುವುದಿಲ್ಲ. ನನಗೆ ಬರುವ ಕಥೆಯಲ್ಲಿ ನನಗೇನು ಹೊಸತಿದೆ? ನಾನು ಈ ರೀತಿ ಪಾತ್ರ ಮಾಡಿದ್ದೇನಾ? ಎಂದು ಯೋಚಿಸುತ್ತೇನೆ. ಆಗ ಸಿನಿಮಾ ಕೂಡ ಹೊಸತಾಗುತ್ತದೆ.
- ನಿರ್ದೇಶಕರು ಈ ಚಿತ್ರದ ಕಥೆ ಹೇಳುವಾಗ ರಾತ್ರಿ ದೀರ್ಘವಾಯಿತು ಅನಿಸಲಿಲ್ಲ. ಕಥೆಯಲ್ಲಿ ಸಾಕಷ್ಟು ವಿಚಾರಗಳು ನಡೆಯುತ್ತವೆ. ಸಾಕಷ್ಟು ದೊಡ್ಡ ನಟರಿದ್ದಾರೆ. ಅಮಾನತುಗೊಂಡ ಪೊಲೀಸ್ ಅಧಿಕಾರಿಯೊಬ್ಬ ಮತ್ತೆ ಕೆಲಸಕ್ಕೆ ವರದಿ ಮಾಡಿಕೊಳ್ಳುವ ಹಿಂದಿನ ದಿನ ನಡೆಯುವ ಕಥೆ. ಹೀಗಾಗಿ ಚಿತ್ರದಲ್ಲಿ ನಾನು ಅಧಿಕೃತವಾಗಿ ಪೊಲೀಸ್ ಅಲ್ಲ, ಸಾಮಾನ್ಯ ವ್ಯಕ್ತಿ. ಆ ರಾತ್ರಿ ನಡೆಯುವ ಒಂದು ಘಟನೆಯೆ ಚಿತ್ರಕಥೆ. ಇದು ಯಾವುದೇ ಚಿತ್ರದಿಂದ, ಬೇರೆ ಕಥೆಯಿಂದ ಸ್ಫೂರ್ತಿ ಪಡೆದ ಕಥೆಯಲ್ಲ.
- ನಾನು ನಟಿಸಲು ಪ್ರಾರಂಭಿಸಿ 28 ವರ್ಷಗಳಾಯ್ತು. ಮುಂದಿನ ಕೆಲ ವರ್ಷಗಳು ನಾಯಕನಾಗಿ ನಟಿಸಿಬೇಕೆಂಬ ಹಂಬಲವಿದೆ. ಇದು ನನಗೆ ಇನ್ನೆಷ್ಟು ಸಿನಿಮಾಗಳನ್ನು ಮಾಡಬಹುದೆಂಬ ಸ್ಪಷ್ಟನೆ ನೀಡುತ್ತದೆ. ಈಗಾಗಲೇ ನನಗೆ ಒಂದು ಸ್ಪೀಡ್ ಬಂದಿದೆ. ಇನ್ನೊಂದು ಚೂರು ಸ್ಪೀಡ್‌ನಲ್ಲಿ ಹೋಗಬಹುದು. ಮುಂದಿನ 18 ತಿಂಗಳಲ್ಲಿ ಎರಡು ಸಿನಿಮಾ ಮಾಡುವೆ. ನಾನು ಮಾಡದಿರುವಂತಹ ಪಾತ್ರಗಳನ್ನು, ನೋಡದಿರುವಂತಹ ಜಗತ್ತನ್ನು ಮುಂದಿನ ಸಿನಿಮಾಗಳಲ್ಲಿ ತೋರಿಸಬೇಕೆಂಬ ಆಸೆಯಿದೆ. ಒಳ್ಳೆ ಸ್ಕ್ರಿಪ್ಟ್‌ಗಳು ಬಂದರೆ ಮಾಡಿದ ಹಳೆಯ ಪಾತ್ರಗಳನ್ನೇ ಮತ್ತೆ ಮಾಡಲು ಆಸಕ್ತಿ ಇರುತ್ತದೆ.
- ಇವತ್ತು ಸಿನಿಮಾ ನೋಡುವ ತಲೆಮಾರು ಭಿನ್ನವಾಗಿದೆ. ಜನಕ್ಕೆ ಸಿನಿಮಾ ಎಂಬುದು ಮನರಂಜನೆ ಎಂದು ಗೊತ್ತಿದೆ. ಹೀಗಾಗಿ ಸಿನಿಮಾದಲ್ಲಿ ಸಂದೇಶ, ಉಪದೇಶ ಸಾಧ್ಯವಿಲ್ಲ. ಮನರಂಜನೆ ಜೊತೆಗೆ ಸಂದೇಶ ನೀಡಬಹುದಷ್ಟೆ. ಏನನ್ನಾದರೂ ಕಲಿಯಲು ಅಥವಾ ಕಲಿಯಬೇಕೆಂದು ಯಾರೂ ಸಿನಿಮಾಕ್ಕೆ ಹೋಗುವುದಿಲ್ಲ. ಮನೆಯಲ್ಲಿ ಬೇಸರವಾದಾಗ ಸಿನಿಮಾಕ್ಕೆ ಹೋಗುತ್ತಾರೆ. ಜೀವನಕ್ಕೆ ಸಿನಿಮಾ ಪಾಠ ಮಾಡುವುದಿಲ್ಲ. ಬೆಳವಣಿಗೆಗೆ ಸಹಕಾರಿಯಾಗಬಹುದು. ಇವತ್ತು ಮನರಂಜನೆ ಪ್ರತಿಯೊಬ್ಬನ ಇನ್‌ಸ್ಟಾಗ್ರಾಂ ಪೋಸ್ಟ್‌ನಿಂದ ಪ್ರಾರಂಭವಾಗುತ್ತಿದೆ. ಹೀಗಾಗಿ ರಕ್ತಸಿಕ್ತ ಸಿನಿಮಾಗಳು, ಮಾಸ್ ಸಿನಿಮಾಗಳು ಎಲ್ಲರಿಗೂ ಅಲ್ಲ ಎನ್ನುವಂತಿಲ್ಲ. ಹೆಣ್ಣುಮಕ್ಕಳು ಕೂಡ ಇಂಥ ಸಿನಿಮಾವನ್ನು ಎಂಜಾಯ್ ಮಾಡುತ್ತಾರೆ.
- ಮಾಸ್ ಸಿನಿಮಾಗಳ ಬಜೆಟ್ ದೊಡ್ಡದಿರುತ್ತದೆ. ಅದನ್ನು ಮರಳಿ ಪಡೆಯಬೇಕಾದರೆ ಚಿತ್ರಮಂದಿರದಿಂದ ಇಷ್ಟು ಹಣ ಬರಬೇಕೆಂಬ ಲೆಕ್ಕಾಚಾರವಿರುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡೇ ಸ್ಟಾರ್‌ಗಳ ಸಿನಿಮಾದ ಟಿಕೆಟ್ ಬೆಲೆ ನಿರ್ಧಾರವಾಗುತ್ತದೆ. ಅದನ್ನು ತಪ್ಪು ಎನ್ನಲು ಸಾಧ್ಯವಿಲ್ಲ. ಕಾಫಿಯನ್ನು ಮಾಲ್‌ನಲ್ಲಿ ಕುಡಿದರೆ ದುಬಾರಿ. ಅವರು ಜಾಗಕ್ಕೆ ನೀಡುವ ಬಾಡಿಗೆ ಸೇರಿದಂತೆ ಹಲವು ಅಂಶಗಳಿರುತ್ತವೆ. ಅದೇ ಕಾಫಿ ಹೊರಗಡೆ ಕಡಿಮೆ ಬೆಲೆಗೆ ಸಿಗುತ್ತದೆ. ಅದನ್ನು ಕುಡಿಯುವ ಆಯ್ಕೆಯೂ ಗ್ರಾಹಕನಿಗಿದೆ. ಅದೇ ರೀತಿ ಸಿನಿಮಾ ಟಿಕೆಟ್ ದರ ಕೂಡ.
- ಅಮ್ಮನ ಸಾವಿನ ನಂತರ ಮೊದಲಿನ ಉತ್ಸಾಹ ನನ್ನಲ್ಲಿ ಉಳಿದಿಲ್ಲ. ನಿಧಾನಕ್ಕೆ ಉತ್ಸಾಹ ತಂದುಕೊಳ್ಳಲು ಯತ್ನಿಸುತ್ತಿರುವೆ. ಅಮ್ಮ ಆಸ್ಪತ್ರೆಯಲ್ಲಿ ವೆಂಟಿಲೇಟರ್‌ನಲ್ಲಿ ಇದ್ದಾಗ ನಾನು ಬಿಗ್‌ಬಾಸ್ ಚಿತ್ರೀಕರಣದಲ್ಲಿದ್ದೆ. ಸಾಕಷ್ಟು ಕಾರಣದಿಂದ ಅದನ್ನು ಬಿಟ್ಟು ಬರಲು ಸಾಧ್ಯವಾಗಲಿಲ್ಲ. ಆಸ್ಪತ್ರೆಗೆ ಬಂದು ಅಮ್ಮನನ್ನು ಉಳಿಸಿಕೊಳ್ಳಲು ನನ್ನ ಕೈಯಲ್ಲಿ ಸಾಧ್ಯವಾಗದೇ ಇದ್ದಾಗ ನನಗೆ ನಾನು ಕೆಲಸಕ್ಕೆ ಬಾರದ ವ್ಯಕ್ತಿ ಎನ್ನಿಸಿಬಿಟ್ಟಿತ್ತು. ಅವಳ ಹೃದಯ ಬಡಿತ ನಿಲ್ಲುತ್ತಿದ್ದರೆ ನನಗೆ ಏನೂ ಮಾಡಲು ಸಾಧ್ಯವಾಗಲಿಲ್ಲ. ಅಷ್ಟು ಅಸಹಾಯಕನಾಗಿದ್ದೆ. ಉಳಿಸಿಕೊಡಿ ಎಂದು ಬೇಡಿಕೊಳ್ಳುತ್ತಿದ್ದೆ. ಅಮ್ಮನ ಪ್ರೀತಿ, ಅವರ ಜೊತೆಗಿನ ನೆನಪುಗಳನ್ನು ಮರೆಯಲು ಸಾಧ್ಯವಿಲ್ಲ. ನನ್ನನ್ನು ಸಿನಿಮಾದಲ್ಲಿ ಮಾಸ್ ಆಗಿ ತೋರಿಸಿದಾಗ ಅಮ್ಮನಿಗೆ ಬಹಳ ಖುಷಿಯಾಗುತ್ತಿತ್ತು.

ಹೆಚ್ಚೆಚ್ಚು ಸಿನಿಮಾ ಮಾಡುವೆ

ಮುಂದಿನ ದಿನಗಳಲ್ಲಿ ಹೆಚ್ಚು ಸಿನಿಮಾಗಳನ್ನು ಮಾಡಬೇಕೆಂಬ ಆಲೋಚನೆಯಿದೆ. ಜನವರಿಯಿಂದ ‘ಬಿಲ್ಲ ರಂಗ ಬಾಷಾ’ ಚಿತ್ರೀಕರಣ ಪ್ರಾರಂಭವಾಗುತ್ತದೆ. ಬೇರೆಯದೆ ಜಗತ್ತಿಗೆ ಕರೆದುಕೊಂಡು ಹೋಗುವ ಸಿನಿಮಾವದು. ಅದರ ಕೆಲಸಗಳು ಭರದಿಂದ ಸಾಗಿವೆ. ಜೊತೆಗೆ ಮೂರು ಕಥೆ ಕೇಳಿರುವೆ. ಅದರ ವಿಸ್ತರಣೆ ಕೆಲಸ ನಡೆಯುತ್ತಿದೆ. ಅದರಲ್ಲಿ ಅತ್ಯುತ್ತಮವಾದ ಒಂದನ್ನು ಆಯ್ಕೆ ಮಾಡಿಕೊಳ್ಳುವೆ. ಮುಂದಿನ ಒಂದೂವರೆ ವರ್ಷದಲ್ಲಿ ನನ್ನ ಎರಡು ಸಿನಿಮಾಗಳು ಬಿಡುಗಡೆಯಾಗಿರುತ್ತವೆ ಎನ್ನುವ ಭರವಸೆ ನೀಡುತ್ತೇನೆ. ನಿರ್ದೇಶನಕ್ಕೂ ಮರಳುವ ಯೋಚನೆಯಿದೆ. ಕಾಲ ಕೂಡಿ ಬರಬೇಕು.

ಕಿರುತೆರೆ ನಟನ ಅಪಾಯವಿದೆ ಎಚ್ಚರಿಕೆ

ರಾಧಾ ಭಗವತಿ

ಕಿರುತೆರೆ ನಟ ವಿಕಾಶ್ ಉತ್ತಯ್ಯ ಹಾಗೂ ರಾಧಾ ಭಗವತಿ ಜೋಡಿಯಾಗಿ ನಟಿಸಿರುವ ‘ಅಪಾಯವಿದೆ ಎಚ್ಚರಿಕೆ’ ಚಿತ್ರದ ‘ಬ್ಯಾಚುಲರ್ಸ್ ಬದುಕು’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟರಾದ ತಿಲಕ್, ರಾಕೇಶ್ ಅಡಿಗ, ನವೀನ್ ಶಂಕರ್ ಹಾಗೂ ವಿಕ್ಕಿ ವರುಣ್ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಅಭಿಜಿತ್ ತೀರ್ಥಹಳ್ಳಿ ಚಿತ್ರದ ನಿರ್ದೇಶಕ. ‘ಹತ್ತು ವರ್ಷಗಳಿಂದ ಕನ್ನಡ ಚಿತ್ರರಂಗದ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಿರುವ ನನಗೆ ಇದು ಮೊದಲ ನಿರ್ದೇಶನದ ಚಿತ್ರ. ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವಾದರೂ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳುಳ್ಳ ಚಿತ್ರ. ನಾನು ಕೂಡ ಊರಿನಿಂದ ಬೆಂಗಳೂರಿಗೆ ಬಂದು ಬ್ಯಾಚುಲರ್ ಜೀವನ ಕಳೆದವನು. ಆ ಅನುಭವಗಳೇ ಈ ಹಾಡು ಬರೆಯಲು ಸ್ಫೂರ್ತಿ’ ಎಂದರು ನಿರ್ದೇಶಕ ಹಾಗೂ ಗೀತರಚನೆಕಾರ ಅಭಿಜಿತ್ ತೀರ್ಥಹಳ್ಳಿ.

ಸುನಾದ್ ಗೌತಮ್ ಸಂಗೀತ ನಿರ್ದೇಶನ ಹಾಗೂ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

‘ಜನರಿಂದ ನಾನು ಮೇಲೆ ಬಂದೆ’ ಎಂದ ಹೊಸಬರು

ಬಹುತೇಕ ಹೊಸಬರಿಂದಲೇ ಕೂಡಿರುವ ‘ಜನರಿಂದ ನಾನು ಮೇಲೆ ಬಂದೆ’ ಚಿತ್ರ ಇತ್ತೀಚೆಗಷ್ಟೇ ಲೀಲಾವತಿ ದೇಗುಲದಲ್ಲಿ ಸೆಟ್ಟೇರಿದೆ. ವಿನೋದ್‌ರಾಜ್ ಕ್ಲಾಪ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ನವಿಲುಗರಿ ನವೀನ್ ನಿರ್ದೇಶನದ ಚಿತ್ರಕ್ಕೆ ಮಂಜುನಾಥ್ ಬಂಡವಾಳ ಹೂಡಿದ್ದಾರೆ.

‘ನಾಲ್ಕು ವರ್ಷಗಳ ಹಿಂದೆ ಚೆನ್ನೈ ಮತ್ತು ಮಂಗಳೂರಿನಲ್ಲಿ ನಡೆದ ಘಟನೆಗಳೆ ಚಿತ್ರಕಥೆಯಾಗಿದೆ. ಡಾನ್ಸ್ ಆಧಾರಿತ ಕಥೆಯಾಗಿದ್ದು, ಸ್ಲಂನಲ್ಲಿ ಜೀವನ ಸಾಗಿಸುತ್ತಾ ನೃತ್ಯಗಾರ ಆಗಬೇಕೆಂದು ಕಷ್ಟಪಡುವ ಹುಡುಗ ಚಿತ್ರದ ನಾಯಕ. ಇನ್ನೊಬ್ಬ ನಾಯಕ ಶಿಕ್ಷಣ ಅರ್ಧಕ್ಕೆ ಬಿಟ್ಟು, ಡಾನ್ಸೇ ಪ್ರಪಂಚ ಅಂದುಕೊಂಡಿರುವ ವಿದ್ಯಾವಂತ. ಒಂದು ಹಂತದಲ್ಲಿ ಭೇಟಿಯಾಗುವ ಇಬ್ಬರ ಗುರಿ ಒಂದೇ ಆಗಿರುತ್ತದೆ. ಮುಂದೆ ಜನರಿಂದ ಇವರಿಗೆ ಯಾವ ರೀತಿ ಪ್ರೋತ್ಸಾಹ ಸಿಗುತ್ತದೆ? ಗುರಿ ತಲುಪುತ್ತಾರಾ? ಎಂಬುದನ್ನು ಒಂದಷ್ಟು ಕಮರ್ಷಿಯಲ್ ಅಂಶಗಳೊಂದಿಗೆ ಹೇಳಲು ಹೊರಟಿದ್ದೇವೆ’ ಎನ್ನುತ್ತಾರೆ ನಿರ್ದೇಶಕರು.

ಗಂಧರ್ವರಾಜ್ ಶಂಕರ್ ನಾಯಕ. ನಿರ್ದೇಶಕರೇ ಮತ್ತೊಬ್ಬ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಆನೇಕಲ್‌ನ ಸೌಂದರ್ಯ ಮತ್ತು ಮೈಸೂರಿನ ಕೃತಿಕಾ ದಿವಾಕರ್ ನಾಯಕಿಯರು. ಪ್ರಣವ್ ಸತೀಶ್ ಸಂಗೀತ, ಜಿ.ವಿ.ರಮೇಶ್ ಛಾಯಾಚಿತ್ರಗ್ರಹಣ, ಗೌತಮ್ ಗೌಡ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಮೈಸೂರು, ಚೆನ್ನೈ, ಮಂಗಳೂರು ಮುಂತಾದೆಡೆ ಚಿತ್ರೀಕರಣ ನಡೆಸಲು ತಂಡವು ಯೋಜನೆ ರೂಪಿಸಿಕೊಂಡಿದೆ.

ವರ್ಷಕ್ಕೆರಡು ಸಿನಿಮಾ ಧ್ರುವ ಸರ್ಜಾ

ಧ್ರುವ ಸರ್ಜಾ ನಟನೆಯ K.D ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯಗೊಂಡಿದೆ. ತಮ್ಮದೇ ನಿರ್ಮಾಣದಲ್ಲಿ ಮತ್ತೊಂದು ಸಿನಿಮಾದ ಸಿದ್ಧತೆ ನಡೆಸಿರುವ ಅವರು ತಮ್ಮ ಮುಂದಿನ ಯೋಜನೆಗಳ ಕುರಿತು ಮಾತನಾಡಿದರು...

ಧ್ರುವ ಸರ್ಜಾ, ಪ್ರೇಮ್, ಸುಪ್ರೀತ್

‘ನಟನಾಗಿ ‘ಮಾರ್ಟಿನ್’ ಚಿತ್ರದ ಬಳಿಕ ನನ್ನ ವೃತ್ತಿಯಲ್ಲಿ ಏನೂ ವ್ಯತ್ಯಾಸವಾಗಿಲ್ಲ. ಪ್ರತಿ ಸಿನಿಮಾದಲ್ಲಿಯೂ ಒಂದಷ್ಟು ಕಲಿಯುತ್ತೇವೆ. ಜನ ಏನು ಇಷ್ಟವಾಯಿತು, ಏನು ಇಷ್ಟವಾಗಿಲ್ಲ ಎಂದು ತಿಳಿಸುತ್ತಾರೆ. ಪ್ರೇಕ್ಷಕರಿಗೆ ಇಷ್ಟವಾಗಿದ್ದನ್ನು ನೀಡುವುದು ನನ್ನ ಕರ್ತವ್ಯ. ಅದನ್ನು ನೀಡಲು ಪ್ರಯತ್ನಿಸುತ್ತೇನೆ. ನಾನು ಸ್ಕ್ರಿಪ್ಟ್ ಆಯ್ಕೆ ಮಾಡಿಕೊಳ್ಳುವಾಗ ಅಭಿಮಾನಿಗಳು ಇಷ್ಟಪಡುತ್ತಾರೆ ಎಂದು ಆಯ್ದುಕೊಳ್ಳುವುದಿಲ್ಲ. ನನ್ನನ್ನು ಇಷ್ಟಪಡದವರು ಇಷ್ಟಪಡುವಂತೆ ಮಾಡಬೇಕು ಎಂದು ಯತ್ನಿಸುತ್ತೇನೆ. ಹೀಗಾಗಿ ವಿಭಿನ್ನ ಪಾತ್ರಗಳನ್ನು ಯತ್ನಿಸುತ್ತೇನೆ’ ಎಂದು ತಮ್ಮ ಹಿಂದಿನ ಸಿನಿಮಾಗಳ ಕಲಿಕೆ ಕುರಿತು ವಿವರಿಸಿದರು.

‘ನನ್ನ ಚಿತ್ರದಲ್ಲಿ ಡೈಲಾಗ್‌ಗಳನ್ನು ನಿರೀಕ್ಷೆ ಮಾಡುತ್ತಾರೆ. ಫ್ಯಾಮಿಲಿ ಕೇಂದ್ರಿತ ವಿಷಯಗಳನ್ನು ಬಯಸುತ್ತಾರೆ. ಅಂಥ ಸ್ಕ್ರಿಪ್ಟ್‌ಗಳನ್ನು ಆಯ್ದುಕೊಳ್ಳುವೆ. ‘ಮಾರ್ಟಿನ್’ ತಂಡದ ಜೊತೆಗೆ ‘ರೈನೋ’ ಚಿತ್ರ ಮಾಡುವುದು ಖಚಿತ. ಆದರೆ ಸ್ವಲ್ಪ ತಡವಾಗಲಿದೆ. ಒಂದೆರಡು ಸಿನಿಮಾಗಳನ್ನು ಮುಗಿಸಿ ಆ ಸಿನಿಮಾ ಕೈಗೆತ್ತಿಕೊಳ್ಳುವೆ’ ಎಂದರು. ‘ಮಾರ್ಟಿನ್ ನಿರ್ದೇಶಕರೇ ಈ ಚಿತ್ರವನ್ನು ನಿರ್ದೇಶನ ಮಾಡುತ್ತಾರಾ’ ಎಂಬ ಪ್ರಶ್ನೆಗೆ ಅವರು ಸ್ಪಷ್ಟವಾಗಿ ಉತ್ತರಿಸಲಿಲ್ಲ.

‘ಸುಮಾರು 50–60 ಕಥೆ ಕೇಳಿರುವೆ. ಅದರಲ್ಲಿ ಉತ್ತಮವಾಗಿದ್ದನ್ನು ಮಾಡುವೆ. ನಿರ್ದೇಶಕರು ಹೊಸಬರಾಗಿರಲಿ, ಹಳೆಬರಾಗಿರಲಿ. ಕಥೆ ಮನರಂಜಿಸುವಂತಿರಬೇಕು. ಮುಂದಿನ ವರ್ಷ ನನ್ನ ಎರಡು ಸಿನಿಮಾಗಳು ಬಿಡುಗಡೆಯಾಗುತ್ತವೆ. ಇನ್ನು ಮುಂದೆ ವರ್ಷಕ್ಕೆ ಎರಡು ಸಿನಿಮಾ ಖಂಡಿತವಾಗಿ ಮಾಡುತ್ತೇನೆ. ನಮ್ಮದೇ ನಿರ್ಮಾಣ ಸಂಸ್ಥೆಯಿಂದ ಅರ್ಜುನ್ ಸರ್ಜಾ ಜೊತೆ ಒಂದು ಸಿನಿಮಾದ ಮಾತುಕತೆ ನಡೆಯುತ್ತಿದೆ. ಅದನ್ನು ಶೀಘ್ರದಲ್ಲಿ ಘೋಷಿಸುತ್ತೇವೆ. K.D ಬಿಡುಗಡೆಯಾಗುತ್ತಿದ್ದಂತೆ ಇನ್ನೊಂದು ಸಿನಿಮಾ ಸೆಟ್ಟೇರಿರುತ್ತದೆ ಎಂಬ ಭರವಸೆ ನೀಡುತ್ತೇನೆ. ಖಂಡಿತವಾಗಿ ನನ್ನಿಂದ ಒಳ್ಳೆ ಸಿನಿಮಾಗಳನ್ನು ನಿರೀಕ್ಷಿಸಬಹುದು’ ಎಂದು ತಮ್ಮ ಮುಂದಿನ ಯೋಜನೆಗಳ ಕುರಿತು ಮಾಹಿತಿ ಹಂಚಿಕೊಂಡರು.

ಮುಂದಿನ ವರ್ಷ ಬಿಡುಗಡೆ

ಕಾಳಿದಾಸ (K.D) ಚಿತ್ರ ಕುರಿತು ಮಾಹಿತಿ ನೀಡಿದ ನಿರ್ದೇಶಕ ಪ್ರೇಮ್, ಮುಂದಿನ ವರ್ಷದ ಪ್ರಾರಂಭದಲ್ಲಿ ಚಿತ್ರ ತೆರೆಗೆ ಬರಲಿದೆ ಎಂದರು.

ಮಾತಿನ ಭಾಗ ಮುಗಿದಿದೆ. ಎರಡು ಹಾಡುಗಳ ಚಿತ್ರೀಕರಣ ಬಾಕಿಯಿದೆ. ಡಿ.24ರಂದು ಚಿತ್ರದ ‘ಶಿವ ಶಿವ’ ಹಾಡು ಬಿಡುಗಡೆಯಾಗುತ್ತಿದೆ. ತಾಂತ್ರಿಕವಾಗಿ ಅದ್ದೂರಿಯಾಗಿರುವ ಜನಪದ ಶೈಲಿಯ ಹಾಡಿದು. ಈ ಹಾಡಿನಲ್ಲಿ 300ಕ್ಕೂ ಅಧಿಕ ಟ್ರ್ಯಾಕ್‌ಗಳಿದ್ದು ವಿವಿಧ ದೇಶಗಳ ವಾದ್ಯಗಳನ್ನು ಬಳಸಿಕೊಂಡಿದ್ದೇವೆ. ಕಾಳಿದಾಸ ನಾಯಕನ ಹೆಸರಷ್ಟೆ. ಇದು ಯಾವ ವ್ಯಕ್ತಿಗೂ ಸಂಬಂಧಿಸಿದ ಕಥೆಯಲ್ಲ. 1970ರ ದಶಕದ ರೌಡಿಸಂ ಹಿನ್ನೆಲೆಯ ಕಥೆ. ಗ್ರಾಫಿಕ್ಸ್ ಕೆಲಸದಿಂದ ಚಿತ್ರ ವಿಳಂಬವಾಗಿದೆ. ದರ್ಶನ್ ಈಗಷ್ಟೇ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಅವರು ಒಪ್ಪಿಕೊಂಡು ಸಿನಿಮಾಗಳಿವೆ. ಜೊತೆಗೆ ‘K.D’ ಕೆಲಸಗಳು ಸಾಕಷ್ಟಿವೆ. ಹೀಗಾಗಿ ಸದ್ಯಕ್ಕೆ ಅವರ ಜೊತೆಗೆ ಚಿತ್ರ ಪ್ರಾರಂಭಿಸುವುದಿಲ್ಲ’ ಎಂದು ಮಾಹಿತಿ ನೀಡಿದರು.

ಈ ವಾರ ‘ಯುಐ’ ತೆರೆಗೆ

ಉಪೇಂದ್ರ

ಉಪೇಂದ್ರ ನಟಿಸಿ, ನಿರ್ದೇಶಿಸಿರುವ ಬಹುನಿರೀಕ್ಷಿತ ಚಿತ್ರ ‘ಯುಐ’ ಇಂದು (ಡಿ.20) ತೆರೆ ಕಾಣುತ್ತಿದೆ. ಬಾಲಿವುಡ್ ನಟ ಅಮೀರ್ ಖಾನ್, ಸ್ಯಾಂಡಲ್‌ವುಡ್ ನಟರಾದ ಶಿವರಾಜ್‌ಕುಮಾರ್, ದುನಿಯ ವಿಜಯ್, ಧನಂಜಯ ಮೊದಲಾದವರು ಈಗಾಗಲೇ ಚಿತ್ರಕ್ಕೆ ಬೆಂಬಲವಾಗಿ ನಿಂತಿದ್ದಾರೆ.

‘ಚಿತ್ರದ ಮೊದಲ ದೃಶ್ಯದಲ್ಲಿಯೇ ಅಚ್ಚರಿಯಿದೆ. ಹೀಗಾಗಿ ಯುಐ ಸಿನಿಮಾ ಆರಂಭವಾಗುವ ಮೊದಲೇ ಹೋಗಿ ಥಿಯೇಟರ್‌ನಲ್ಲಿ ಕುಳಿತುಕೊಳ್ಳುವುದು ಉತ್ತಮ. ಇಲ್ಲವಾದಲ್ಲಿ ಅಚ್ಚರಿ ಮಿಸ್ ಆಗುತ್ತದೆ. ಸಿನಿಮಾದಲ್ಲಿ ಎರಡು ಕ್ಲೈಮ್ಯಾಕ್ಸ್ ಇರುತ್ತದೆ ಎಂಬುದು ಕೇವಲ ವದಂತಿ. ಈ ಸಿನಿಮಾದ ಕಂಟೆಂಟ್ ತುಂಬಾ ಗಟ್ಟಿಯಾಗಿದೆ. ಹೀಗಾಗಿ, ನಿಮಗೆ ಈ ಸಿನಿಮಾ ಎರಡೆರಡು ಬಾರಿ ನೋಡಬೇಕು ಎಂದು ಎನಿಸಬಹುದು’ ಎಂದಿದ್ದಾರೆ ನಟ ಉಪೇಂದ್ರ.

‘ಈಗ ಪ್ರೇಕ್ಷಕರು ಬಹಳ ಬುದ್ಧಿವಂತರು. ಹೀಗಾಗಿ ಅವರ ಬುದ್ಧಿವಂತಿಕೆ ಪರೀಕ್ಷಿಸುವಂತಹ ಚಮತ್ಕಾರಗಳು ಈ ಸಿನಿಮಾದಲ್ಲಿ ಇಲ್ಲ. ಸರಳವಾದ ಕಥೆ. ಭಿನ್ನವಾದ ನಿರೂಪಣೆ. 2040ರಲ್ಲಿನ ಜಗತ್ತು ಹೇಗಿರಲಿದೆ ಎಂಬ ಕಲ್ಪನಾ ಲೋಕಕ್ಕೆ ಪ್ರೇಕ್ಷಕರನ್ನು ಕರೆದುಕೊಂಡು ಹೋಗುತ್ತದೆ. ಮನರಂಜನೆಗೆ ಮೋಸವಿಲ್ಲ’ ಎಂಬುದು ಅವರ ಅಭಿಮತ.

ರೀಷ್ಮಾ ನಾಣಯ್ಯ ಚಿತ್ರದ ನಾಯಕಿ. ಎಚ್.ಸಿ ವೇಣು ಛಾಯಾಚಿತ್ರಗ್ರಹಣ, ಅಜನೀಶ್ ಲೋಕನಾಥ್ ಸಂಗೀತ, ವಿಜಯ್ ರಾಜ್ ಬಿ.ಜಿ. ಸಂಕಲನ ಚಿತ್ರಕ್ಕಿದೆ. ನಿಧಿ ಸುಬ್ಬಯ್ಯ, ನಿರ್ದೇಶಕ ಇಂದ್ರಜಿತ್ ಲಂಕೇಶ್, ಪ್ರಶಾಂತ್ ಸಂಬರಗಿ, ನಿರ್ಮಾಪಕ ಉಮೇಶ್ ಬಣಕಾರ್, ನಿರ್ದೇಶಕ ಓಂ ಸಾಯಿಪ್ರಕಾಶ್ ಮೊದಲಾದವರು ತಾರಾಗಣದಲ್ಲಿದ್ದಾರೆ. ಉಪೇಂದ್ರ ಅವರು ಹಲವು ವರ್ಷಗಳ ಬಳಿಕ ನಿರ್ದೇಶನಕ್ಕೆ ಮರಳಿರುವ ಚಿತ್ರವಿದು. ಕೆ.ಪಿ. ಶ್ರೀಕಾಂತ್ ಮತ್ತು ಜಿ. ಮನೋಹರನ್ ಇದಕ್ಕೆ ಬಂಡವಾಳ ಹೂಡಿದ್ದಾರೆ.

ಫಾರ್ಮುಲಾ-ಇ ರೇಸ್‌ನಲ್ಲಿ ಅಕ್ರಮ ಕೆ.ಟಿ. ರಾಮರಾವ್ ವಿರುದ್ಧ ಎಫ್‌ಐಆರ್

ಹೈದರಾಬಾದ್ (ಪಿಟಿಐ): ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಫಾರ್ಮುಲಾ-ಇ ರೇಸ್‌ನಲ್ಲಿ ಹಣಕಾಸು ಅಕ್ರಮಗಳನ್ನು ನಡೆಸಿರುವ ಆರೋಪದ ಮೇಲೆ ಬಿಆರ್‌ಎಸ್ ಕಾರ್ಯಾಧ್ಯಕ್ಷ ಮತ್ತು ಶಾಸಕ ಕೆ.ಟಿ. ರಾಮರಾವ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಗುರುವಾರ ಎಫ್‌ಐಆರ್ ದಾಖಲಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ರಾಮರಾವ್ ವಿರುದ್ಧ ಪ್ರಕರಣ ದಾಖಲಿಸಲು ತೆಲಂಗಾಣ ರಾಜ್ಯಪಾಲ ಜಿಷ್ಣು ದೇವ್ ವರ್ಮಾ ಅವರು ಇತ್ತೀಚೆಗೆ ಅನುಮತಿ ನೀಡಿದ್ದರು.

ರಾಮರಾವ್ ಮತ್ತು ಇಬ್ಬರು ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

ರಾಮರಾವ್ ಅವರು ತಮ್ಮ ವಿರುದ್ಧದ ಪ್ರಕರಣಗಳನ್ನು ಕಾನೂನಾತ್ಮಕವಾಗಿ ಎದುರಿಸುವುದಾಗಿ ಮಂಗಳವಾರವಷ್ಟೇ ಹೇಳಿದ್ದರು.

ಕಾಂಗ್ರೆಸ್ ಸರ್ಕಾರವು ರಾಮರಾವ್ ವಿರುದ್ಧ ಹಲವು ತಿಂಗಳಿಂದ ಆಧಾರ ರಹಿತ ಆರೋಪಗಳನ್ನು ಮಾಡುತ್ತಿದೆ ಎಂದು ಆರೋಪಿಸಿರುವ ಬಿಆರ್‌ಎಸ್ ಪಕ್ಷವು, ಹಿಂದಿನ ಸರ್ಕಾರವು ತೆಲಂಗಾಣಕ್ಕೆ ಅನುಕೂಲವಾಗುವಂತೆ ಫಾರ್ಮುಲಾ-ಇ ರೇಸ್ ಸಂಘಟಕರೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಹೇಳಿದೆ.

‘ಕೆ.ಟಿ ರಾಮರಾವ್ ಅವರು ಪೌರಾಡಳಿತ ಸಚಿವರಾಗಿದ್ದಾಗ, ಸೂಕ್ತ ನಿಯಮಗಳನ್ನು ಪಾಲಿಸದೇ ರೇಸ್ ಆಯೋಜಕರಿಗೆ ₹55 ಕೋಟಿ ವರ್ಗಾಯಿಸಲು ಅನುಮತಿ ನೀಡಿದ್ದಾರೆ’ ಎಂದು ಎಸಿಬಿ ಆರೋಪಿಸಿದೆ.

ರಾಮರಾವ್ ವಿರುದ್ಧ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿ ತೆಲಂಗಾಣ ಸರ್ಕಾರ ನವೆಂಬರ್‌ನಲ್ಲಿ ರಾಜ್ಯಪಾಲರಿಗೆ ಪತ್ರ ಬರೆದಿತ್ತು. ಎಸಿಬಿ ತನಿಖೆಗೆ ಪೌರಾಡಳಿತ ಇಲಾಖೆ ಒತ್ತಾಯಿಸಿತ್ತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ವಿ. ರಾಮಚಂದ್ರರಾವ್

15/02/1935 – 19/12/2024

ಸಂಸ್ಥಾಪಕರು, ಮಾಜಿ ಅಧ್ಯಕ್ಷರು, ಮಾಜಿ ಕಾರ್ಯದರ್ಶಿ ಹಾಗೂ ಮಾಜಿ ನಿರ್ದೇಶಕರು

ಶ್ರೀ ವಿನಾಯಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು–560 003.

ಇವರು ದಿನಾಂಕ:19/12/2024ನೇ ಗುರುವಾರದಂದು ಸಂಜೆ 06:19ಕ್ಕೆ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಶ್ರೀ ವಿನಾಯಕ ಸ್ವಾಮಿಯು ನೀಡಲೆಂದು ಪ್ರಾರ್ಥಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸುತ್ತೇವೆ.

ಇಂತಿ ದುಃಖತಪ್ತರು :

ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಸದಸ್ಯರು, ಸಂಘದ ಸದಸ್ಯರು ಹಾಗೂ ಸಿಬ್ಬಂದಿವರ್ಗದವರು

ಷೇರುಪೇಟೆ ವಹಿವಾಟು

964 (ಇಳಿಕೆ)

80,182 ಹಿಂದಿನ ಅಂತ್ಯ — ಇಂದಿನ ಅಂತ್ಯ 79,218

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,198
ಇಂದಿನ ಅಂತ್ಯ	23,951
▼	247
ದಿನದ ಕನಿಷ್ಠ	23,886

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹590

ವಿನಿಮಯ ದರ

$ ಡಾಲರ್	85.13
£ ಪೌಂಡ್	107.70
€ ಯುರೊ	88.57
¥ ಯೆನ್ (100ಕ್ಕೆ)	54

ಚಿನ್ನ, ಬೆಳ್ಳಿ ಧಾರಣೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.

ಚಿನ್ನದ ಧಾರಣೆಯು 10 ಗ್ರಾಂಗೆ (ಶೇ 99.9ರಷ್ಟು ಪರಿಶುದ್ಧತೆ) ₹800 ಇಳಿಕೆಯಾಗಿದ್ದು, ₹78,300 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ₹77,900 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2 ಸಾವಿರ ಇಳಿಕೆಯಾಗಿದ್ದು, ₹90 ಸಾವಿರ ಆಗಿದೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸಿರುವುದೇ ಹಳದಿ ಲೋಹದ ಬೆಲೆ ಇಳಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

3 ದಿನದಲ್ಲಿ ತ್ಯಾಜ್ಯ ತೆರವಿಗೆ ಎನ್‌ಜಿಟಿ ನಿರ್ದೇಶನ

ಪ್ರಜಾವಾಣಿ ವಾರ್ತೆ

ಚೆನ್ನೈ: ‘ತಮಿಳುನಾಡಿನ ಗಡಿಭಾಗದಲ್ಲಿರುವ ತಿರುನೆಲ್ವೇರಿ ಜಿಲ್ಲೆಯ ವಿವಿಧೆಡೆ ಸುರಿದಿರುವ ಜೈವಿಕ ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಇನ್ನು ಮೂರು ದಿನಗಳಲ್ಲಿ ತೆರವು ಮಾಡಬೇಕು. ತ್ಯಾಜ್ಯಗಳನ್ನು ವಾಪಸು ಕೊಂಡೊಯ್ಯಲು ಸಾಧ್ಯವಾಗದಿದ್ದಲ್ಲಿ, ಯಾವುದಾದರೂ ಅಧಿಕೃತ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಿ’ ಎಂದು ರಾಷ್ಟ್ರೀಯ ಹಸಿರು ಮಂಡಳಿಯ (ಎನ್‌ಜಿಟಿ) ದಕ್ಷಿಣ ಪೀಠವು ಕೇರಳ ಸರ್ಕಾರಕ್ಕೆ ಗುರುವಾರ ನಿರ್ದೇಶನ ನೀಡಿದೆ.

ಕೇರಳ ಸರ್ಕಾರವು ತನ್ನ ರಾಜ್ಯದಲ್ಲಿ ಉತ್ಪತ್ತಿಯಾದ ವಿವಿಧ ಸ್ವರೂಪದ ತ್ಯಾಜ್ಯಗಳನ್ನು ತಮಿಳುನಾಡಿನಲ್ಲಿ ತಂದು ಸುರಿದ ನಾಲ್ಕು ದಿನಗಳ ಬಳಿಕ ಈ ನಿರ್ದೇಶನ ನೀಡಲಾಗಿದೆ.

ಲಾಸನ್‌ಗಾಂವ್: ಹರಾಜು ಸ್ಥಗಿತಗೊಳಿಸಿದ ರೈತರು

ಕುಸಿದ ಈರುಳ್ಳಿ ದರ

ನಾಸಿಕ್ (ಪಿಟಿಐ): ಮಹಾರಾಷ್ಟ್ರದ ಲಾಸನ್‌ಗಾಂವ್ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಗುರುವಾರ ಈರುಳ್ಳಿ ಬೆಲೆ ಕುಸಿದಿದ್ದರಿಂದ ಕಂಗಾಲಾದ ಬೆಳೆಗಾರರು, ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿ ಆಕ್ರೋಶ ವ್ಯಕ್ತಪಡಿಸಿದರು.

ನಾಸಿಕ್ ಜಿಲ್ಲೆಗೆ ಸೇರಿರುವ ಲಾಸನ್‌ಗಾಂವ್ ದೇಶದ ಅತಿದೊಡ್ಡ ಈರುಳ್ಳಿ ಸಗಟು ಮಾರುಕಟ್ಟೆಯಾಗಿದೆ. ಕರ್ನಾಟಕ, ದೆಹಲಿ ಸೇರಿ ವಿವಿಧೆಡೆಗೆ ಇಲ್ಲಿಂದಲೇ ಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ಪೂರೈಕೆಯಾಗುತ್ತದೆ. ಇಲ್ಲಿನ ಬೆಲೆಯು ಇತರೆ ರಾಜ್ಯಗಳ ಮಾರುಕಟ್ಟೆ ಮೇಲೂ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕೆಲವು ದಿನಗಳಿಂದ ಈರುಳ್ಳಿ ದರವು ಇಳಿಕೆಯ ಹಾದಿ ಹಿಡಿದಿದೆ. ಮಂಗಳವಾರ 1,689 ವಾಹನಗಳಲ್ಲಿ ರೈತರು ಈರುಳ್ಳಿಯನ್ನು ಮಾರಾಟಕ್ಕೆ ತಂದಿದ್ದರು. ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹1,000 ಹಾಗೂ ಗರಿಷ್ಠ ₹3,252 ದರವಿದ್ದರೆ, ಸರಾಸರಿ ದರ ₹2,200 ಇತ್ತು.

ಬೆಳಿಗ್ಗೆ 1,500ಕ್ಕೂ ವಾಹನಗಳಲ್ಲಿ ಈರುಳ್ಳಿಯನ್ನು ಮಾರಾಟಕ್ಕೆ ತರಲಾಗಿತ್ತು. ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹800 ಹಾಗೂ ಗರಿಷ್ಠ ₹2,900 ದರವಿತ್ತು. ಸರಾಸರಿ ದರ ₹1,900 ಆಗಿತ್ತು ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.

ರಫ್ತು ದರ ಕಡಿತ ಕೋರಿ ಕೇಂದ್ರಕ್ಕೆ ಪತ್ರ

ದರ ಕುಸಿತದ ಬೆನ್ನಲ್ಲೇ ಈರುಳ್ಳಿ ಮೇಲಿನ ಕನಿಷ್ಠ ರಫ್ತು ದರವನ್ನು ಹಿಂಪಡೆಯುವಂತೆ ಕೋರಿ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರಿಗೆ ಪತ್ರ ಬರೆದಿದ್ದಾರೆ.

‘ಲಾಸನ್‌ಗಾಂವ್‌ನಿಂದ ದೇಶದ ಇತರೆ ರಾಜ್ಯಗಳು ಮತ್ತು ವಿದೇಶಕ್ಕೆ ಈರುಳ್ಳಿ ಪೂರೈಕೆಯಾಗುತ್ತದೆ. ಬೇಸಿಗೆ ಅವಧಿಯಲ್ಲಿ ಈರುಳ್ಳಿ ಇಳುವರಿ ಕುಸಿದಿತ್ತು. ಈಗ ಸಾಕಷ್ಟು ಪ್ರಮಾಣದಲ್ಲಿ ಮಾರುಕಟ್ಟೆಗೆ ಹೊಸ ಸರಕು ಆವಕವಾಗುತ್ತಿದೆ. ಇದರಿಂದ ರೈತರು ಮಾರಾಟದ ಒತ್ತಡಕ್ಕೆ ಸಿಲುಕಿದ್ದಾರೆ. ಅವರಿಗೆ ಕೇಂದ್ರವು ಕನಿಷ್ಠ ಬೆಂಬಲ ಬೆಲೆ ಸೌಲಭ್ಯ ಕೂಡ ಕಲ್ಪಿಸಿಲ್ಲ’ ಎಂದು ಹೇಳಿದ್ದಾರೆ.

ಅಕಾಲಿಕ ಮಳೆ ಹಾಗೂ ಹವಾಮಾನ ವೈಪರೀತ್ಯದಿಂದ ಈರುಳ್ಳಿ ಬೆಳೆಗಾರರು ನಷ್ಟ ಅನುಭವಿಸಿದ್ದಾರೆ. ಮಾರುಕಟ್ಟೆಯಲ್ಲಿ ಕಡಿಮೆ ಬೆಲೆ ಲಭಿಸಿದರೆ ಅವರಿಗೆ ಉತ್ಪಾದನಾ ವೆಚ್ಚವೂ ಕೈಸೇರುವುದಿಲ್ಲ ಎಂದು ಹೇಳಿದ್ದಾರೆ.

ಈರುಳ್ಳಿ ಮೇಲೆ ವಿಧಿಸಿರುವ ರಫ್ತು ದರದಿಂದ ಮಹಾರಾಷ್ಟ್ರವು ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಯನ್ನು ಕಳೆದುಕೊಳ್ಳಲಿದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ಕೂಡಲೇ, ಇದನ್ನು ವಾಪಸ್ ಪಡೆಯಬೇಕು ಎಂದು ಕೋರಿದ್ದಾರೆ.

ಹರಾಜು ಆರಂಭವಾಗುತ್ತಿದ್ದಂತೆ ಖರೀದಿದಾರರು ಕ್ವಿಂಟಲ್‌ಗೆ ₹1,200ರಿಂದ ₹1,500 ದರ ನಿಗದಿಪಡಿಸಿದ್ದರಿಂದ ರೈತರ ಆಕ್ರೋಶ ಭುಗಿಲೆದ್ದಿತು. ಹರಾಜು ಪ್ರಕ್ರಿಯೆಯನ್ನು ದಿಢೀರ್ ಸ್ಥಗಿತಗೊಳಿಸಿದರು. ಬಳಿಕ ಅಲ್ಪಮಟ್ಟಿಗೆ ಬೆಲೆ ಏರಿಕೆ ಕಂಡಿತು. ಆಗ ರೈತರು ಹೋರಾಟ ಹಿಂಪಡೆದಿದ್ದರಿಂದ ಹರಾಜು ಪ್ರಕ್ರಿಯೆಯು ಮುಂದುವರಿಯಿತು ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಈರುಳ್ಳಿ ಮೇಲೆ ಶೇ 20ರಷ್ಟು ಕನಿಷ್ಠ ರಫ್ತು ದರ ವಿಧಿಸಿದೆ. ಇದನ್ನು ಕೂಡಲೇ ಹಿಂಪಡೆಯಬೇಕು. ಪ್ರತಿ ಕ್ವಿಂಟಲ್‌ಗೆ ₹1,000ದಿಂದ ₹1,200 ಪ್ರೋತ್ಸಾಹ ಧನ ನೀಡಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8500-14000
ಮಧುಗಿರಿ	₹7500-9600
ತುರುವೇಕೆರೆ	₹13900-14500

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಕುಮಟ	
ಚಾಲಿ	30610-36599
ಚಿಪ್ಪು	13100-29299
ಕೋಕ	5550-27629
ಹಳೆಚಾಲಿ	38199-38399
ಹೊಸಚಾಲಿ	21209-28701
ಸಾಗರ	
ಬಿಳಿಗೋಟು	10101-25810
ಚಾಲಿ	26509-34360
ಕೋಕ	9090-26000
ಕೆಂಪುಗೋಟು	20199-31699
ರಾಶಿ	28009-50349
ಸಿಪ್ಪೆಗೋಟು	8299-16811
ಶಿವಮೊಗ್ಗ	
ಬೆಟ್ಟೆ	43014-57439
ಗೊರಬಲು	16800-34669
ಹೊಸತು	33499-49409
ರಾಶಿ	35009-50009
ಸರಕು	42159-87700
ಸಿದ್ದಾಪುರ	
ಬಿಳಿಗೋಟು	23989-27369
ಚಾಲಿ	33299-37099
ಕೋಕ	16119-16119
ರಾಶಿ	42989-47929
ತಟ್ಟಿಬೆಟ್ಟೆ	26309-33119
ಶಿರಸಿ	
ಬೆಟ್ಟೆ	30899-34899
ಬಿಳಿಗೋಟು	21199-29623
ಚಾಲಿ	34099-38738
ರಾಶಿ	43789-47891
ಯಲ್ಲಾಪುರ	
ಬಿಳಿಗೋಟು	14899-28099
ಚಾಲಿ	29745-38499
ಕೋಕ	4609-18900
ಕೆಂಪುಗೋಟು	15089-27010
ರಾಶಿ	38960-54699
ತಟ್ಟಿಬೆಟ್ಟೆ	28300-38199
ಅಪಿ	58895-58895
ಕಾರ್ಕಳ	
ಹೊಸತು	25000-34500
ಹಳತು	30000-48500

ಸುದ್ದಿ 2 ನಿಮಿಷ

ಕರಡಿ ಕುಣಿತ ಅಬಾಧಿತ

ಮುಂಬೈ (ಪಿಟಿಐ): ದೇಶದ ಷೇರು ಮಾರುಕಟ್ಟೆಯಲ್ಲಿ ಗುರುವಾರವೂ ಕರಡಿ ಕುಣಿತ ಜೋರಾಗಿದ್ದರಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಮುಂದಿನ ವರ್ಷವೂ ಬಡ್ಡಿದರ ಕಡಿತದ ಸುಳಿವು ನೀಡಿರುವುದು ದೇಶೀಯ ಮಾರುಕಟ್ಟೆಯ ಕುಸಿತಕ್ಕೆ ಕಾರಣವಾಯಿತು. ಸೋಲ್, ಶಾಂಘೈ, ಹಾಂಗ್‌ಕಾಂಗ್, ಟೋಕಿಯೊ ಮಾರುಕಟ್ಟೆ ಕೂಡ ಕುಸಿತ ಕಂಡಿವೆ.

ಕಳೆದ ನಾಲ್ಕು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹9.65 ಲಕ್ಷ ಕೋಟಿ ಕರಗಿದೆ.



ಕನ್ಸ್ಯೂಮರ್ ಪ್ರಾಡಕ್ಟ್, ಬ್ಯಾಂಕಿಂಗ್ ಹಾಗೂ ಐ.ಟಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ವಿದೇಶಿ ಬಂಡವಾಳದ ಹೊರಹರಿವಿನ ಹೆಚ್ಚಳವು ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 964 ಅಂಶ ಇಳಿಕೆ ಕಂಡು 79,218 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 247 ಅಂಶ ಇಳಿಕೆ ಕಂಡು, 23,951 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಇನ್ಫೊಸಿಸ್, ಬಜಾಜ್ ಫಿನ್‌ಸರ್ವ್, ಜೆಎಸ್‌ಡಬ್ಲ್ಯು ಸ್ಟೀಲ್, ಬಜಾಜ್ ಫೈನಾನ್ಸ್, ಏಷ್ಯನ್ ಪೇಂಟ್ಸ್, ಐಸಿಐಸಿಐ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರಿಸ್, ಟಿಸಿಎಸ್, ಟಾಟಾ ಮೋಟರ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ ಷೇರುಗಳ ಮೌಲ್ಯ ಕುಸಿದಿದೆ. ಸನ್ ಫಾರ್ಮಾ, ಪವರ್ ಗ್ರಿಡ್, ಎಚ್‌ಸಿಎಲ್ ಷೇರುಗಳ ಮೌಲ್ಯ ಏರಿಕೆಯಾಗಿದೆ.

ಅಮೆರಿಕ: ಬಡ್ಡಿದರ ಕಡಿತ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರವನ್ನು ಶೇ 0.25ರಷ್ಟು ಕಡಿತಗೊಳಿಸಿದೆ. ಆ ಮೂಲಕ ಈ ವರ್ಷದಲ್ಲಿ ಮೂರನೇ ಬಾರಿಗೆ ಬಡ್ಡಿದರವನ್ನು ಕಡಿಮೆ ಮಾಡಿದೆ.

ಬುಧವಾರ ನಡೆದ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು ಬಡ್ಡಿದರವನ್ನು ಶೇ 4.50ಕ್ಕೆ ಇಳಿಸಿದೆ. ರಿವರ್ಸ್ ರೆಪೊ ದರವನ್ನು ಶೇ 4.55ರಿಂದ ಶೇ 4.25ಕ್ಕೆ ಕಡಿತಗೊಳಿಸಿದೆ. ಒಟ್ಟಾರೆ ಶೇ 0.30ರಷ್ಟು ಇಳಿಕೆ ಮಾಡಿದೆ.

ಮುಂದಿನ ವರ್ಷ ಫೆಡರಲ್ ರಿಸರ್ವ್ ನಾಲ್ಕು ಬಾರಿ ಬಡ್ಡಿದರ ಕಡಿತಗೊಳಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಸದ್ಯ ಅಮೆರಿಕದಲ್ಲಿ ಚಿಲ್ಲರೆ ಹಣದುಬ್ಬರವು ಏರುಗತಿಯಲ್ಲಿದೆ. ಹಾಗಾಗಿ, ಎರಡು ಬಾರಿಯಷ್ಟೇ ಕಡಿತಗೊಳಿಸುವ ಸುಳಿವು ನೀಡಿದೆ.

ಸಕ್ಕರೆ ರಫ್ತು: ಅನುಮತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಸಕ್ಕರೆ ಕಾರ್ಖಾನೆಗಳ ಬಳಿ ಕಳೆದ ಮಾರುಕಟ್ಟೆ ವರ್ಷದಲ್ಲಿ ಉತ್ಪಾದಿಸಿರುವ 80 ಲಕ್ಷ ಟನ್ ಸಕ್ಕರೆ ದಾಸ್ತಾನಿದೆ. ಇದರಲ್ಲಿ ಕನಿಷ್ಠ 20 ಲಕ್ಷ ಟನ್ ರಫ್ತಿಗೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕಿದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘ (ಐಎಸ್‌ಎಂಎ) ಒತ್ತಾಯಿಸಿದೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಘದ ಅಧ್ಯಕ್ಷ ಎಂ. ಪ್ರಭಾಕರ ರಾವ್, ‘2024–25ನೇ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್–ಸೆಪ್ಟೆಂಬರ್) 333 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಈ ಪೈಕಿ ದೇಶೀಯ ಬಳಕೆಗೆ 290 ಲಕ್ಷ ಟನ್ ಸಾಕಾಗಲಿದೆ’ ಎಂದರು.

ಸರ್ಕಾರವು ಸಕ್ಕರೆ ರಫ್ತಿಗೆ ನಿರ್ಬಂಧ ಹೇರಿದೆ. ಇದನ್ನು ಹಿಂದಕ್ಕೆ ಪಡೆಯಬೇಕಿದೆ ಎಂದು ಒತ್ತಾಯಿಸಿದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹395-625
ದ್ವಿತಳಿ (ಬಿ.ವಿ)	₹333-766

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹176

ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 19 ಪೈಸೆ ಇಳಿಕೆಯಾಗಿದ್ದು, ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹85.13ಕ್ಕೆ ತಲುಪಿದೆ.

ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿದರ ಕಡಿತಗೊಳಿಸಿದ್ದರಿಂದ ಡಾಲರ್ ಮೌಲ್ಯದಲ್ಲಿ ಏರಿಕೆಯಾಗಿದೆ. ಇದರಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ನನ್ನಿಂದ ದುಪ್ಪಟ್ಟು ಸಾಲ ವಸೂಲಿ: ಮಲ್ಯ ಹೇಳಿಕೆ

ನವದೆಹಲಿ (ಪಿಟಿಐ): ‘ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಬ್ಯಾಂಕ್‌ಗಳು ನನ್ನ ಸಾಲಕ್ಕಿಂತಲೂ ಎರಡು ಪಟ್ಟು ವಸೂಲಿ ಮಾಡಿವೆ’ ಎಂದು ಉದ್ಯಮಿ ವಿಜಯ್ ಮಲ್ಯ ಆರೋಪಿಸಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಸಾಲ ಬಾಕಿಗೆ ಸಂಬಂಧಿಸಿದಂತೆ ಬ್ಯಾಂಕ್‌ಗಳು ಮಲ್ಯಗೆ ಸೇರಿದ ₹14,130 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿವೆ ಎಂದು ಸಂಸತ್‌ನಲ್ಲಿ ಹೇಳಿಕೆ ನೀಡಿದ್ದರು. ಇದಕ್ಕೆ ಮಲ್ಯ ಅವರು ‘ಎಕ್ಸ್’ನಲ್ಲಿ ಪ್ರತಿಕ್ರಿಯೆ ನೀಡಿದ್ದು, ‘ಕಿಂಗ್‌ಫಿಶರ್ ಏರ್‌ಲೈನ್ಸ್ (ಕೆಎಫ್‌ಎ) ಪ್ರಕರಣದಲ್ಲಿ ಸಾಲದ ಅಸಲು ₹6,203 ಕೋಟಿ ಹಾಗೂ ಇದಕ್ಕೆ ಬಡ್ಡಿ ₹1,200 ಕೋಟಿ ಆಗಲಿದೆ ಎಂದು ಸಾಲ ವಸೂಲಾತಿ ನ್ಯಾಯ ಮಂಡಳಿಯೇ ಹೇಳಿದೆ. ನನ್ನಿಂದ ದುಪ್ಪಟ್ಟು ವಸೂಲಿ ಮಾಡಿದ್ದರೂ ನಾನಿನ್ನೂ ಆರ್ಥಿಕ ಅಪರಾಧಿಯಾಗಿದ್ದೇನೆ’ ಎಂದು ಹೇಳಿದ್ದಾರೆ.

‘ಹೆಚ್ಚು ಸಾಲವನ್ನು ಹೇಗೆ ವಸೂಲಿ ಮಾಡಲಾಗಿದೆ ಎಂಬ ಬಗ್ಗೆ ಕಾನೂನಾತ್ಮಕವಾಗಿ ಸಮರ್ಥಿಸಿಕೊಳ್ಳಬೇಕಿದೆ. ಇಲ್ಲವಾದರೆ ನಾನು ಕೂಡ ಪರಿಹಾರಕ್ಕೆ ಅರ್ಹನಾಗಿದ್ದೇನೆ’ ಎಂದು ಹೇಳಿದ್ದಾರೆ.

ಫ್ರಾನ್ಸ್: ಜಿಸೆಲ್ ಪೆಲಿಕೊ ಅತ್ಯಾಚಾರ ಪ್ರಕರಣ

ಮಾಜಿ ಪತಿಗೆ 20 ವರ್ಷ ಜೈಲು

ಜಿಸೆಲ್‌ಗೆ ಬೆಂಬಲ ಸೂಚಿಸಿ ಕೋರ್ಟ್ ಹೊರಗೆ ಸೇರಿದ್ದ ಜನರು —ಎಎಫ್‌ಪಿ ಚಿತ್ರ

ಅವಿನ್ಯೊ (ಫ್ರಾನ್ಸ್) (ರಾಯಿಟರ್ಸ್/ಎಎಫ್‌ಪಿ): ಫ್ರಾನ್ಸ್ ಅನ್ನು ಬೆಚ್ಚಿಬೀಳಿಸಿದ್ದ ಮತ್ತು ವಿಶ್ವದಾದ್ಯಂತ ಗಮನ ಸೆಳೆದಿದ್ದ ಜಿಸೆಲ್ ಪೆಲಿಕೊ ಅತ್ಯಾಚಾರ ಪ್ರಕರಣದಲ್ಲಿ, ಮಾಜಿ ಪತಿ ಡೊಮಿನಿಕ್ ಪೆಲಿಕೊಗೆ ಫ್ರಾನ್ಸ್‌ನ ನ್ಯಾಯಾಲಯ 20 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಮೂರು ತಿಂಗಳ ವಿಚಾರಣೆಯ ಬಳಿಕ ಡೊಮಿನಿಕ್ ಸೇರಿ ಈ ಪ್ರಕರಣದ ಎಲ್ಲ 50 ಆರೋಪಿಗಳೂ ತಪ್ಪಿತಸ್ಥರು ಎಂದು ನ್ಯಾಯಾಲಯ ಗುರುವಾರ ಪ್ರಕಟಿಸಿತು. ಡೊಮಿನಿಕ್‌ಗೆ ಗರಿಷ್ಠ ಶಿಕ್ಷೆ ವಿಧಿಸಿದರೆ, ಇತರರನ್ನು 3 ರಿಂದ 15 ವರ್ಷಗಳವರೆಗೆ ಜೈಲು ಶಿಕ್ಷೆಗೆ ಗುರಿಪಡಿಸಲಾಗಿದೆ.

‘ನಾನು ಮಾಡಿರುವ ಕೃತ್ಯಕ್ಕೆ ಪಶ್ಚಾತ್ತಾಪ ಪಡುತ್ತೇನೆ. ನನ್ನಿಂದಾಗಿ ಸಂಕಷ್ಟ ಅನುಭವಿಸಿದ ಕುಟುಂಬದವರ ಕ್ಷಮೆ ಕೇಳುತ್ತೇನೆ’ ಎಂದು 72 ವರ್ಷದ ಡೊಮಿನಿಕ್ ಹೇಳಿದ್ದಾನೆ.

ಏನಿದು ಪ್ರಕರಣ?: ಜಿಸೆಲ್‌ಗೆ ಪದೇ ಪದೇ ಮಾದಕ ದ್ರವ್ಯ ನೀಡಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಆಕೆಯ ಮೇಲೆ ಅತ್ಯಾಚಾರ ಎಸಗಲು ಇತರರಿಗೆ ಅವಕಾಶ ಮಾಡಿಕೊಟ್ಟ ಆರೋಪ ಡೊಮಿನಿಕ್ ಮೇಲಿತ್ತು. 2011ರಿಂದ 2020ರವರೆಗಿನ ಅವಧಿಯಲ್ಲಿ ಫ್ರಾನ್ಸ್‌ನ ದಕ್ಷಿಣ ಪ್ರಾಂತ್ಯದಲ್ಲಿರುವ ಮನೆಯಲ್ಲಿ ಜಿಸೆಲ್ ಮೇಲೆ ದೌರ್ಜನ್ಯ ನಡೆದಿತ್ತು. ಆನ್‌ಲೈನ್ ಮೂಲಕ ಡೊಮಿನಿಕ್‌ಗೆ ಪರಿಚಯವಾಗಿದ್ದ 50 ಮಂದಿ, ಜಿಸೆಲ್ ಮೇಲೆ ಅತ್ಯಾಚಾರ ಎಸಗಿರುವುದು ಸಾಬೀತಾಗಿದೆ. ಅತ್ಯಾಚಾರ ದೃಶ್ಯವನ್ನು ಡೊಮಿನಿಕ್ ರೆಕಾರ್ಡ್ ಮಾಡಿಡುತ್ತಿದ್ದ.

ಇತರ ಅಪರಾಧಿಗಳಿಗೆ 4ರಿಂದ 18 ವರ್ಷಗಳವರೆಗಿನ ವಿವಿಧ ಅವಧಿಯ ಜೈಲು ಶಿಕ್ಷೆ ವಿಧಿಸಬೇಕು ಎಂದು ಪ್ರಾಸಿಕ್ಯೂಟರ್ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ನ್ಯಾಯಾಲಯ ಕಡಿಮೆ ಶಿಕ್ಷೆ ವಿಧಿಸಿರುವುದನ್ನು ಮಹಿಳಾ ಪರ ಹೋರಾಟಗಾರರು ಮತ್ತು ಜಿಸೆಲ್ ಅವರ ಮೂವರು ಮಕ್ಕಳು ಟೀಕಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಆದರೆ ತೀರ್ಪಿನ ಬಗ್ಗೆ ಪ್ರತಿಕ್ರಿಯಿಸಿರುವ 72 ವರ್ಷದ ಜಿಸೆಲ್, ‘ನ್ಯಾಯಾಲಯ ಮತ್ತು ಅದು ನೀಡಿರುವ ತೀರ್ಪನ್ನು ಗೌರವಿಸುತ್ತೇನೆ’ ಎಂದಿದ್ದಾರೆ.

ಈ ಪ್ರಕರಣದ ವಿಚಾರಣೆಯ ವೇಳೆ ಜಿಸೆಲ್ ಅವರಿಗೆ ಬೆಂಬಲ ಸೂಚಿಸಿ ಫ್ರಾನ್ಸ್‌ನಾದ್ಯಂತ ಪ್ರತಿಭಟನೆಗಳು ನಡೆದಿದ್ದವು. ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಫ್ರಾನ್ಸ್‌ನಲ್ಲಿರುವ ಕಾನೂನಿಗೆ ಬದಲಾವಣೆ ತರಬೇಕು ಎಂಬ ಚರ್ಚೆಯನ್ನೂ ಈ ಪ್ರಕರಣ ಹುಟ್ಟುಹಾಕಿತ್ತು.

ಅಮೆರಿಕದ ನಿರ್ಧಾರ ‘ದುರದೃಷ್ಟಕರ’: ಪಾಕ್

ಇಸ್ಲಾಮಾಬಾದ್ (ಪಿಟಿಐ): ಬ್ಯಾಲಿಸ್ಟಿಕ್ ಕ್ಷಿಪಣಿ ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ತನ್ನ ಕೆಲವು ಕಂಪನಿಗಳ ಮೇಲೆ ಅಮೆರಿಕವು ನಿರ್ಬಂಧ ಹೇರಿರುವುದನ್ನು ‘ದುರದೃಷ್ಟಕರ ಮತ್ತು ಪಕ್ಷಪಾತಿ ನಿರ್ಧಾರ’ ಎಂದು ಪಾಕಿಸ್ತಾನ ಗುರುವಾರ ಹೇಳಿದೆ.

‘ಅಮೆರಿಕವು ಈಚೆಗೆ ಹೇರಿರುವ ನಿರ್ಬಂಧವು ಪಕ್ಷಪಾತಿ ನಿರ್ಧಾರವಾಗಿದ್ದು, ಇಂತಹ ಇಬ್ಬಗೆ ನೀತಿಯು ಪ್ರಾದೇಶಿಕ ಭದ್ರತೆಯ ಮೇಲೆ ಪರಿಣಾಮಗಳನ್ನು ಉಂಟುಮಾಡುವ ಸಾಧ್ಯತೆಯಿದೆ’ ಎಂದು ಪಾಕಿಸ್ತಾನ ವಿದೇಶಾಂಗ ಸಚಿವಾಲಯದ ಹೇಳಿಕೆ ತಿಳಿಸಿದೆ.

‘ಖಾಸಗಿ ವಾಣಿಜ್ಯ ಸಂಸ್ಥೆಗಳ ಮೇಲೆ ನಿರ್ಬಂಧ ವಿಧಿಸಿದ್ದಕ್ಕಾಗಿ ನಾವು ವಿಷಾದಿಸುತ್ತೇವೆ. ಈ ಹಿಂದೆ ಕೂಡಾ ಯಾವುದೇ ಪ್ರಬಲ ಸಾಕ್ಷ್ಯಗಳು ಇಲ್ಲದೆ, ಕೇವಲ ಅನುಮಾನಗಳ ಆಧಾರದ ಮೇಲೆ ಕೆಲವು ಕಂಪನಿಗಳ ಮೇಲೆ ನಿರ್ಬಂಧ ಹೇರಲಾಗಿತ್ತು’ ಎಂದಿದೆ.

ಅಮೆರಿಕವು ಈಚೆಗೆ ಇಸ್ಲಾಮಾಬಾದ್ ಮೂಲದ ಸರ್ಕಾರಿ ಸ್ವಾಮ್ಯದ ಏರೊಸ್ಪೇಸ್ ಮತ್ತು ರಕ್ಷಣಾ ಸಂಸ್ಥೆ ‘ನ್ಯಾಷನಲ್ ಡೆವಲಪ್‌ಮೆಂಟ್ ಕಾಂಪ್ಲೆಕ್ಸ್ (ಎನ್‌ಡಿಸಿ) ಮೇಲೆ ನಿರ್ಬಂಧ ಹೇರಿದೆ. ಅದರ ಜತೆಯಲ್ಲಿ ಕರಾಚಿ ಮೂಲದ ಮೂರು ಕಂಪನಿಗಳಾದ ಅಖ್ತರ್ ಆ್ಯಂಡ್ ಸನ್ಸ್ ಪ್ರೈವೆಟ್, ಅಫಿಲಿಯೇಟ್ಸ್ ಇಂಟರ್‌ನ್ಯಾಷನಲ್ ಮತ್ತು ರಾಕ್‌ಸೈಡ್ ಎಂಟರ್‌ಪ್ರೈಸಸ್ ಮೇಲೂ ನಿರ್ಬಂಧ ವಿಧಿಸಿದೆ.

‘ರಾಣಾ ಅರ್ಜಿ ವಜಾಗೊಳಿಸಿ’

ವಾಷಿಂಗ್ಟನ್ (ಪಿಟಿಐ): ತನ್ನನ್ನು ಭಾರತಕ್ಕೆ ಹಸ್ತಾಂತರಿಸುವುದರ ವಿರುದ್ಧ ಪಾಕಿಸ್ತಾನ ಮೂಲದ ಕೆನಡಾ ಪ್ರಜೆ, ತಹವ್ವುರ್ ರಾಣಾ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸುವಂತೆ ಅಮೆರಿಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

2008ರಲ್ಲಿ ಮುಂಬೈ ಮೇಲೆ ನಡೆದ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಲು ರಾಣಾನನ್ನು ಹಸ್ತಾಂತರಿಸುವಂತೆ ಭಾರತ, ಅಮೆರಿಕವನ್ನು ಕೋರುತ್ತಿದೆ.

ಸ್ಯಾನ್ ಫ್ರಾನ್ಸಿಸ್ಕೊದ ಮೇಲ್ಮನವಿ ನ್ಯಾಯಾಲಯ ಒಳಗೊಂಡಂತೆ ಅಮೆರಿಕದ ಹಲವು ನ್ಯಾಯಾಲಯಗಳು ಮತ್ತು ಫೆಡರಲ್ ಕೋರ್ಟ್, ರಾಣಾನನ್ನು ಭಾರತಕ್ಕೆ ಹಸ್ತಾಂತರ ಮಾಡಬಹುದು ಎಂದು ಹೇಳಿದೆ.

ತಹವ್ವುರ್ ರಾಣಾ

ಇದನ್ನು ಪ್ರಶ್ನಿಸಿ ರಾಣಾ ನವೆಂಬರ್ 13ರಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದ.

ಭಾರತಕ್ಕೆ ಹಸ್ತಾಂತರವಾಗುವುದನ್ನು ತಪ್ಪಿಸಲು ಸುದೀರ್ಘ ಅವಧಿಯಿಂದ ಕಾನೂನು ಹೋರಾಟ ನಡೆಸುತ್ತಿರುವ ರಾಣಾ ಮುಂದಿರುವ ಕೊನೆಯ ಅವಕಾಶ ಇದಾಗಿದೆ.

‘ರಾಣಾ ಸಲ್ಲಿಸಿರುವ ರಿಟ್ ಅರ್ಜಿಯನ್ನು ವಜಾಗೊಳಿಸಬೇಕು’ ಎಂದು ಅಮೆರಿಕದ ಸಾಲಿಸಿಟರ್ ಜನರಲ್ ಎಲಿಜಬೆತ್ ಬಿ. ಪ್ರಿಲಾಗರ್ ಅವರು ಡಿಸೆಂಬರ್ 16ರಂದು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಮಯೂರಿ ಸೌಹಾರ್ದ ಸಹಕಾರಿ ನಿ, ಬೆಂಗಳೂರು

ಸಮಾಪಕರ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಸೌಹಾರ್ದ ಸಹಕಾರಿ ಸೌಧ, 17 & 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

ಪತ್ರಿಕಾ ಪ್ರಕಟಣೆ

ಈ ಮೂಲಕ ಬೆಂಗಳೂರು ನಗರ ಜಿಲ್ಲೆಯ ಮಯೂರಿ ಸೌಹಾರ್ದ ಸಹಕಾರಿಯ ಸದಸ್ಯರುಗಳಿಗೆ ಮತ್ತು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸೌಹಾರ್ದ ಸಹಕಾರಿಯು ಕಳೆದ 3 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ಸ್ಥಗಿತಗೊಂಡಿದ್ದು, ಈ ಸಹಕಾರಿಯ ಆಡಳಿತ ಮಂಡಳಿಯವರು ದಿ:25-09-2021ರ ಸರ್ವ ಸದಸ್ಯರ ಸಭೆಯಲ್ಲಿ ಸಹಕಾರಿಯ ಸದಸ್ಯರೊಂದಿಗೆ ಚರ್ಚಿಸಿ ಸಹಕಾರಿಯ ವ್ಯವಹಾರವು ಸ್ಥಗಿತಗೊಂಡಿರುವ ಕಾರಣ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಲೆಕ್ಕಪರಿಶೋಧಕರು ಸಹಕಾರಿಯ ವ್ಯವಹಾರವು ದಿನೇ ದಿನೇ ಸ್ಥಗಿತವಾಗಿದ್ದು ಸಂಪೂರ್ಣ ವ್ಯವಹಾರ ಅಖೈರುಗೊಳ್ಳುವ ದುಸ್ಥಿತಿಗೆ ತಲುಪುತ್ತದೆ ಎಂದು ಸೂಚಿಸಿರುವ ಹಿನ್ನೆಲೆ ಹಾಗೂ ಸದಸ್ಯರು ಸಹಕಾರಿಯನ್ನು ಮುಂದುವರೆಸಲೂ ನಿರಾಸಕ್ತಿ ಹೊಂದಿರುವುದನ್ನು ಪರಿಗಣಿಸಿ ಸಹಕಾರಿಯನ್ನು ಸಮಾಪನೆಗೊಳಿಸುವಂತೆ ನಿರ್ಣಯಿಸಿರುತ್ತಾರೆ. ಆದಕಾರಣ ಸೌಹಾರ್ದ ಸಹಕಾರಿ ಸಂಘಗಳ ಜಂಟಿ ನಿಬಂಧಕರ ಕಛೇರಿ, ಬೆಂಗಳೂರು ಪ್ರಾಂತ, ಬೆಂಗಳೂರು ಇವರು ಸದರಿ ಸೌಹಾರ್ದ ಸಹಕಾರಿಯನ್ನು ಸಮಾಪನೆಗೊಳಿಸಲು ಆದೇಶಿಸಿರುತ್ತಾರೆ. ಆದ್ದರಿಂದ ಸದರಿ ಸೌಹಾರ್ದ ಸಹಕಾರಿಯನ್ನು ಪ್ರಕರಣ 48ರಡಿ ಸಮಾಪನೆಗೊಳಿಸಬಾರದೇಕೆ ಎಂಬುದಕ್ಕೆ ಸಹಕಾರಿಗೆ ಸಂಬಂಧಪಟ್ಟವರು & ಸಹಕಾರಿಯ ಠೇವಣಿದಾರರು/ಷೇರುದಾರರು ಕೂಡ ತಮ್ಮ ಬಾಕಿಗಳು ಇದ್ದರೆ ಈ ನೋಟೀಸಿನ 30 ದಿನಗಳೊಳಗಾಗಿ ಸಮಾಪಕರ ಕಛೇರಿಗೆ ತಮ್ಮ ಆಕ್ಷೇಪಣೆ/ತಕರಾರುಗಳನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಸಹಕಾರಿಯ ಆಡಳಿತದ ಬಗ್ಗೆ ಯಾರಿಗೂ ಆಸಕ್ತಿ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಸಮಾಪನೆಗೆ ಕ್ರಮವಿಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಶ್ರೀಧರ್ ಎಸ್. ಸಮಾಪನಾಧಿಕಾರಿ, ಮಯೂರಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಹಾಗೂ ಸಹಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು ಪ್ರಾಂತೀಯ ಕಛೇರಿ

20-12-2024

ಪತ್ರಿಕಾ ಪ್ರಕಟಣೆ

ರಿಟರ್ನಿಂಗ್ ಅಧಿಕಾರಿ, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., (ಪಿಕಾರ್ಡ್ ಬ್ಯಾಂಕ್) ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಆನೇಕಲ್–562106

ಆಡಳಿತ ಮಂಡಳಿಯ ಚುನಾವಣೆಯ ನಡವಳಿಗಳು

ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,(ಪಿಕಾರ್ಡ್ ಬ್ಯಾಂಕ್) ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಆನೇಕಲ್- 562106 ಇದರ ಆಡಳಿತ ಮಂಡಳಿ ನಿರ್ದೇಶಕರನ್ನು ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಆಯ್ಕೆ ಮಾಡಲು ದಿನಾಂಕ: 05-01-2025 ರಂದು ಸರಸ್ವತಿ ವಿದ್ಯಾ ಮಂದಿರ, ಮಾರುತಿ ಬಡಾವಣೆ, ಆನೇಕಲ್ ಟೌನ್, ಇಲ್ಲಿ ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆವರೆಗೆ ನಡೆಸಲು ಬ್ಯಾಂಕಿನ ಎಲ್ಲಾ ಅರ್ಹ ಮತದಾರರ ಸದಸ್ಯರಿಗೆ ದಿನಾಂಕ:16-12-2024 ರಂದು ಅಂಚೆ ಮುಖಾಂತರ ಚುನಾವಣಾ ವೇಳಾ ಪಟ್ಟಿಯನ್ನು ಕಳುಹಿಸಲಾಗಿರುತ್ತದೆ. ಸದರಿ ಚುನಾವಣಾ ವೇಳಾ ಪಟ್ಟಿಯಂತೆ ನಾಮಪತ್ರ ಸಲ್ಲಿಸಲು ದಿನಾಂಕ:27-12-2024 ರಂದು ಕೊನೆಯ ದಿನಾಂಕವಾಗಿರುತ್ತದೆ. ಚುನಾವಣಾ ವೇಳಾ ಪಟ್ಟಿ ತಲುಪದ ಅರ್ಹ ಸದಸ್ಯರು ಇದನ್ನೇ ಚುನಾವಣಾ ವೇಳಾ ಪಟ್ಟಿಯೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ.

ಸಹಿ/– (ವಿಜಯ್ ಕುಮಾರ್ ಟಿ.ಸಿ) ರಿಟರ್ನಿಂಗ್ ಅಧಿಕಾರಿ, ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., (ಪಿಕಾರ್ಡ್ ಬ್ಯಾಂಕ್) ಆನೇಕಲ್ ತಾಲ್ಲೂಕು, ಬೆಂಗಳೂರು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ

ದಿನಾಂಕ: 19-12-2024

ಸಾರ್ವಜನಿಕ ಪ್ರಕಟಣೆ

ರಾಜಕುಮಾರ್ (51)

S/o ಲೇಟ್ ಎ.ಎಸ್.ಅಮೃತರಾಜ್

ನಂ. 40, ಹ್ಯಾರಿಸ್ ರೋಡ್, ಬೆನ್ಸನ್ ಟೌನ್, ಬೆಂಗಳೂರು– 560046 ವಿಳಾಸದ ರಹವಾಸಿಯಾಗಿರುವ ಮೇಲ್ಕಂಡ 51 ವರ್ಷದ ವ್ಯಕ್ತಿಯು ಸನ್ 2013 ರಿಂದ ಕಾಣೆಯಾಗಿರುತ್ತಾರೆ. ಇವರು ಕಾಣೆಯಾಗಿರುವ ಬಗ್ಗೆ ಜೆ ಸಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದ್ದು (ಕ್ರೈಮ್ ನಂ. 190/2013), ಇದುವರೆಗೂ ಸದರಿಯವರ ಕುರಿತು ಮಾಹಿತಿ ಲಭ್ಯವಾಗಿರುವುದಿಲ್ಲ. ಈ ಕುರಿತಂತೆ ಸಿಟಿ ಸಿವಿಲ್ ನ್ಯಾಯಾಲಯದ CCH -13 ರಲ್ಲಿ ಒ.ಎಸ್ ನಂ. 7449/2024 ಹೊಂದಿರುವ ಡಿಕ್ಲರೇಶನ್ ಸ್ಯೂಟ್ ಬಾಕಿ ಇರುತ್ತದೆ. ಆದ್ದರಿಂದ, ಈ ಮೇಲ್ಕಂಡ ಕಾಣೆಯಾಗಿರುವ ವ್ಯಕ್ತಿಯು ಕುರಿತಂತೆ ಯಾರಿಗಾದರೂ ಮಾಹಿತಿ ಇದ್ದಲ್ಲಿ, ಅಂತಹವರು ದಯವಿಟ್ಟು 45 ದಿನಗಳೊಳಗೆ ಮೊಬೈಲ್: 9341655777 / 9945504491 ಅಥವಾ ಕಾನೂನು ಕಚೇರಿಯನ್ನು ಸಂಪರ್ಕಿಸಿ.

Sd/- RENY SEBASTIAN (Advocate)
Tomy Sebastian Associates
F02, 1st Floor, No. 8, Wood Street, Ashok Nagar, Bengaluru-560 025.
Office Phone: 080-41634060
Email : t_s_associates@yahoo.co.in

ದಿನಾಂಕ: 19.12.2024 – ಸ್ಥಳ: ಬೆಂಗಳೂರು

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000-17,000, 8951315839, 9141634619

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9902643405

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9900859248

CONNECT

ಉಚಿತ ತರಬೇತಿ

ಜ್ಞಾನ ಸಂಪಾದನೆಗಾಗಿ ಉಚಿತ ನೋಟ್ಸ್ (ಟಿಪ್ಪಣಿಗಳು) ಮನೆಯಲ್ಲಿಯೇ ಸ್ಕಿಲ್ ಫೋಟೋಗ್ರಾಫಿ, ಬ್ಯೂಟಿಷಿಯನ್, ಬೇಸಿಕ್ ಇಂಗ್ಲೀಷ್ ಭಾಷೆ ಕಲಿಯಲು ಆಸಕ್ತಿ ಇದ್ದವರಿಗೆ Wats App ಮತ್ತು E-mail ಮೂಲಕ ನೋಟ್ಸ್‌ನ್ನು ಉಚಿತವಾಗಿ ಕಳುಹಿಸಲಾಗುವುದು.

ಸಂಪರ್ಕಿಸಿ: ವಿದ್ಯಾಮಿತ್ರ ಪ್ರಿಯ : 9845765519

vidyavv959@gmail.com

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ,ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ ಪರಿಹಾರ, #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

★ll ಇಷ್ಟಪಟ್ಟವರುll★ ನಿಮ್ಮ ಒತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel

ಭಾರತಪರಂಪರ ದರ್ಶನ: 23.1.2025 11ದಿನ 4ಜ್ಯೋತಿರ್ಲಿಂಗ ಗುಜರಾತ್,ಮಧ್ಯಪ್ರದೇಶ. 28.2.2025 7ದಿನ ಕಾಶಿಯಾತ್ರೆ. 18.3.2025 11ದಿನ,ಮುಕ್ತಿನಾಥ್ ನೇಪಾಳಸಹಿತ ಕಾಶಿ. ಪ್ರಕಾಶ್ ಹೆಬ್ಬಾರ್: 9448792891.

ಕುಂಭಮೇಳ ವಿಶೇಷ ಕಾಶಿ ಅಯೋಧ್ಯ ಪ್ರಯಾಗ್ ಗಯಾ ಬುದ್ಧ ಗಯಾ ವಿಮಾನದಲ್ಲಿ 28/01/2025 ಮತ್ತು 22/02/2025 ರೂ 28000/ ಶ್ರೀರಾಮ್ ಟೂರ್: 9108933383

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್

ಪ್ರತಿ ಶನಿವಾರ + ಭಾನುವಾರ ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

@ 2244/-* FOR 15 WORDS

www.dhclassifieds.com ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9845114560 | +91 9901641752 | +91 9886213331

+91 9731810277 | +91 9900428036 | 080-45557163/164

*Conditions apply

ಸಂಕ್ಷಿಪ್ತ ಸುದ್ದಿ

ಯೋಗಿ ಹತ್ಯೆ ಬೆದರಿಕೆ ಹಾಕಿದ್ದ ವ್ಯಕ್ತಿ ಸೆರೆ

ಬರೇಲಿ (ಪಿಟಿಐ): ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಹತ್ಯೆ ಮಾಡುವುದಾಗಿ ತುರ್ತು ಸೇವಾ ಸಹಾಯವಾಣಿಗೆ ಕರೆ ಮಾಡಿ ಬೆದರಿಕೆ ಹಾಕಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮಂಗಳವಾರ ರಾತ್ರಿ 11 ಗಂಟೆಗೆ ತುರ್ತು ಸಹಾಯವಾಣಿ ಸಂಖ್ಯೆ 112ಕ್ಕೆ ಕರೆ ಮಾಡಿದ್ದ ಬಂಧಿತ ಆರೋಪಿ ಅನಿಲ್, ಜನವರಿ 26ರಂದು ಯೋಗಿ ಅವರನ್ನು ತಾನು ಗುಂಡಿಕ್ಕಿ ಹತ್ಯೆ ಮಾಡುವುದಾಗಿ ಹೇಳಿದ್ದರು. ಅಲ್ಲದೇ ಇಜ್ಜತ್‌ನಗರ ಪೊಲೀಸ್ ಠಾಣೆಯ ಅಧಿಕಾರಿ ಹಾಗೂ ಇತರ ಪೊಲೀಸರನ್ನೂ ಹತ್ಯೆ ಮಾಡುವುದಾಗಿ ಹೇಳಿದ್ದ ಎಂದು ಅಧಿಕಾರಿಗಳು ತಿಳಿಸಿದರು.

‘ಅವಧಿಪೂರ್ವ ನಿವೃತ್ತಿ: ಯಾವುದೇ ಪ್ರಸ್ತಾವ ಇಲ್ಲ’

ನವದೆಹಲಿ (ಪಿಟಿಐ): ‘ಕೇಂದ್ರ ಸರ್ಕಾರಿ ನೌಕರರನ್ನು ಅವಧಿಗೂ ಮೊದಲೇ ನಿವೃತ್ತಿಗೊಳಿಸುವ ಯಾವುದೇ ಪ್ರಸ್ತಾವ ನಮ್ಮ ಮುಂದಿಲ್ಲ’ ಎಂದು ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ರಾಜ್ಯಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

‘ಅವಧಿಗೂ ಮೊದಲೇ ಸರ್ಕಾರಿ ನೌಕರರನ್ನು ನಿವೃತ್ತಿಗೊಳಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿದೆಯೇ’ ಎಂದು ಕೇಂದ್ರ ಸರ್ಕಾರಕ್ಕೆ ಪ್ರಶ್ನೆ ಕೇಳಲಾಗಿತ್ತು.

ನೌಕಾಪಡೆ ದೋಣಿ ಡಿಕ್ಕಿ: ಸಾವಿನ ಸಂಖ್ಯೆ 14ಕ್ಕೆ ಏರಿಕೆ

ಮುಂಬೈ (ಪಿಟಿಐ): ಮುಂಬೈ ಕರಾವಳಿಯಲ್ಲಿ ನೌಕಾಪಡೆಯ ದೋಣಿಯು ಪ್ರವಾಸಿಗರಿದ್ದ ದೋಣಿಗೆ ಡಿಕ್ಕಿ ಹೊಡೆದ ಘಟನೆಗೆ ಸಂಬಂಧಿಸಿ ಸಾವಿನ ಸಂಖ್ಯೆ 14ಕ್ಕೆ ಏರಿಕೆಯಾಗಿದೆ.

‘ಘಟನೆ ನಡೆದು ದಿನಕಳೆದಿದ್ದರೂ ವ್ಯಕ್ತಿ ಹಾಗೂ ಮಗು ಸೇರಿ ಇಬ್ಬರು ಪ್ರವಾಸಿಗರು ಪತ್ತೆಯಾಗಿರಲಿಲ್ಲ. ನೌಕಾಪಡೆ ಹಾಗೂ ಕರಾವಳಿ ಪಡೆಗಳು ಶೋಧ ಕಾರ್ಯವನ್ನು ಮುಂದುವರಿಸಿದ್ದರು. ಈಗ 43 ವರ್ಷ ಹಂಸರಾಜ್ ಭಾಟಿ ಎಂಬುವವರ ಮೃತದೇಹವು ಪತ್ತೆಯಾಗಿದೆ’ ಎಂದು ಪೊಲೀಸರು ಗುರುವಾರ ತಿಳಿಸಿದರು.

ರಕ್ಷಣೆಗೆ ಇರುವ ಕಾನೂನಿನ ದುರ್ಬಳಕೆಗೆ ನ್ಯಾಯಾಲಯ ಬೇಸರ

ವೈವಾಹಿಕ ವ್ಯಾಜ್ಯ, ಇತರ ದೂರು ಬೆರಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಅಸಹಜ ಲೈಂಗಿಕ ಕ್ರಿಯೆ, ಕ್ರಿಮಿನಲ್ ಬೆದರಿಕೆಯಂತಹ ಆರೋಪಗಳನ್ನು ಈಚಿನ ದಿನಗಳಲ್ಲಿ ವೈವಾಹಿಕ ವ್ಯಾಜ್ಯಗಳ ಜೊತೆ ಬಳಕೆ ಮಾಡಿಕೊಳ್ಳಲಾಗುತ್ತಿದೆ, ಇದನ್ನು ಕೋರ್ಟ್ ಹಲವು ಬಾರಿ ಖಂಡಿಸಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ತಮ್ಮ ಕೈಯಲ್ಲಿರುವ ಕಾನೂನಿನ ಕಠಿಣ ಅಂಶಗಳು ತಮ್ಮ ಪ್ರಯೋಜನಕ್ಕಾಗಿ ಇವೆ; ಅವುಗಳು ಇರುವುದು ಬೆದರಿಸಲು, ಪೀಡಿಸಲು ಅಥವಾ ಪತಿಯಿಂದ ಸುಲಿಗೆ ಮಾಡಲು ಅಲ್ಲ ಎಂಬ ಎಚ್ಚರವು ಮಹಿಳೆಯರಲ್ಲಿ ಇರಬೇಕು ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ವೈವಾಹಿಕ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆ ನಡೆಸಿದ ಪೀಠವು, ಮಹಿಳೆಗೆ ನೀಡುವ ಜೀವನಾಂಶವು ಹಲವು ಅಂಶಗಳನ್ನು ಆಧರಿಸಿ ಇರುತ್ತದೆ; ಪತಿಯ ವೇತನ ಎಷ್ಟು ಎಂಬಂತಹ ಅಂಶಗಳಷ್ಟನ್ನೇ ಅವಲಂಬಿಸಿರುವುದಿಲ್ಲ ಎಂದು ಹೇಳಿದೆ.

> ಪೊಲೀಸರು ಆಯ್ದ ಪ್ರಕರಣಗಳಲ್ಲಿ ಮಾತ್ರವೇ ಕಾರ್ಯತತ್ಪರರಾಗಿ, ಪತಿ ಹಾಗೂ ಆತನ ಸಂಬಂಧಿಕರನ್ನು, ಆತನ ಹಾಸಿಗೆ ಹಿಡಿದ ತಂದೆ–ತಾಯಿಯನ್ನು ಮತ್ತು ತಾತ–ಅಜ್ಜಿಯನ್ನು ಬಂಧಿಸುವುದಿದೆ. ಎಫ್‌ಐಆರ್‌ನಲ್ಲಿ ದಾಖಲಾಗಿರುವ ಆರೋಪಗಳ ಗಾಂಭೀರ್ಯವನ್ನು ಕಂಡು ವಿಚಾರಣಾ ನ್ಯಾಯಾಲಯವು ಆರೋಪಿಗಳಿಗೆ ಜಾಮೀನು ನೀಡಲು ಹಿಂದೇಟು ಹಾಕುತ್ತವೆ.
>
> **ಸುಪ್ರೀಂ ಕೋರ್ಟ್ ವಿಭಾಗೀಯ ಪೀಠ**

‘ಕೆಲವು ಪ್ರಕರಣಗಳಲ್ಲಿ ಪತ್ನಿ ಮತ್ತು ಆಕೆಯ ಕುಟುಂಬದ ಸದಸ್ಯರು ಗಂಭೀರ ಅಪರಾಧಗಳ ಆರೋಪಗಳುಳ್ಳ ಕ್ರಿಮಿನಲ್ ದೂರುಗಳನ್ನು ರಾಜಿ ಮಾತುಕತೆಗೆ ವೇದಿಕೆಯಾಗಿ ಬಳಸಿಕೊಳ್ಳಲು ಹಾಗೂ ತಮ್ಮ ಬೇಡಿಕೆಗಳಿಗೆ ಪತಿ ಮತ್ತು ಆತನ ಕುಟುಂಬದ ಸದಸ್ಯರು ಒಪ್ಪುವಂತೆ ಮಾಡಲು ಅಸ್ತ್ರವಾಗಿ ಬಳಸಿಕೊಳ್ಳುವುದಿದೆ. ಈ ಬೇಡಿಕೆಗಳು ಬಹುತೇಕವಾಗಿ ಹಣದ ರೂಪದಲ್ಲಿರುತ್ತವೆ’ ಎಂದು ತೀರ್ಪಿನಲ್ಲಿ ನ್ಯಾಯಮೂರ್ತಿ ನಾಗರತ್ನ ಬರೆದಿದ್ದಾರೆ.

ಕೆಲವು ಸಂದರ್ಭಗಳಲ್ಲಿ ಆಕ್ರೋಶದಿಂದ ಈ ರೀತಿ ಮಾಡಲಾಗುತ್ತದೆ, ಇನ್ನು ಕೆಲವು ಸಂದರ್ಭಗಳಲ್ಲಿ ಯೋಜಿತ ಕಾರ್ಯತಂತ್ರವಾಗಿ ಇದನ್ನು ಮಾಡಲಾಗುತ್ತದೆ ಎಂದು ಪೀಠ ಹೇಳಿದೆ.

‘ದುರದೃಷ್ಟದ ಸಂಗತಿ ಎಂದರೆ, ಕಾನೂನಿನ ದುರ್ಬಳಕೆಯಲ್ಲಿ ದೂರುದಾರ–ಆರೋಪಿ ಮಾತ್ರವೇ ಭಾಗಿಯಾಗಿರುವುದಿಲ್ಲ...ಇತರ ಪಾಲುದಾರರು ಕೂಡ ಪರಿಸ್ಥಿತಿಯನ್ನು ಬಿಗಡಾಯಿಸುವ ಕೆಲಸ ಮಾಡುತ್ತಾರೆ. ಅವರು ಮಹಿಳೆಯ ಪಾಲಿಗೆ ಕುಟಿಲ ತಂತ್ರ ರೂಪಿಸಿ ಕೊಡಬಹುದು’ ಎಂದು ಪೀಠ ಬೇಸರ ವ್ಯಕ್ತಪಡಿಸಿದೆ. ತನ್ನ ಎದುರಿಗೆ ಇದ್ದ ಪ್ರಕರಣದಲ್ಲಿ ಪೀಠವು, ಪತಿ–ಪತ್ನಿಗೆ ವಿಚ್ಛೇದನ ನೀಡಿದೆ. ವಿಚ್ಛೇದನ ಪಡೆದ ಇವರಿಬ್ಬರು, 2021ರಲ್ಲಿ ಮದುವೆ ಆಗಿದ್ದರು. ಇವು ಇಬ್ಬರಿಗೂ ಎರಡನೆಯ ಮದುವೆ. ಆದರೆ ಮದುವೆ ಆದ ಕೆಲವೇ ತಿಂಗಳುಗಳಲ್ಲಿ ಇಬ್ಬರ ನಡುವೆ ಮನಸ್ತಾಪ ಮೂಡಿತು. ನಂತರ ಪತ್ನಿಯು ಅತ್ಯಾಚಾರ ಹಾಗೂ ಅಸಹಜ ಲೈಂಗಿಕ ಕ್ರಿಯೆಯ ದೂರುಗಳನ್ನು ಪತಿಯ ವಿರುದ್ಧ ಮಾತ್ರವೇ ಅಲ್ಲದೆ, ಎಂಬತ್ತು ವರ್ಷ ವಯಸ್ಸಾಗಿರುವ ತನ್ನ ಮಾವನ (ಪತಿಯ ತಂದೆ) ವಿರುದ್ಧವೂ ನೀಡಿದಳು.

ಅಮೆರಿಕದ ಪ್ರಜೆಯಾಗಿರುವ ಪತಿಯು ದೂರಿನ ಕಾರಣದಿಂದಾಗಿ ಇಲ್ಲಿ ಕೆಲವು ಕಾಲ ಜೈಲು ಪಾಲಾಗಬೇಕಾಯಿತು. ಪತ್ನಿಯು ಸುಪ್ರೀಂ ಕೋರ್ಟ್‌ನಲ್ಲಿ, ವಿಚ್ಛೇದನ ಕೋರಿದ್ದ ಪತಿಯ ಅರ್ಜಿಯನ್ನು ವಿರೋಧಿಸಿದಳು. ಆದರೆ ಜೀವನಾಂಶದ ರೂಪದಲ್ಲಿ ಭಾರಿ ಮೊತ್ತವನ್ನು ಕೋರಿದ್ದಳು.

ತನ್ನ ಪತಿಯ ಆಸ್ತಿಗಳ ಮೌಲ್ಯವು ₹5,000 ಕೋಟಿಯಷ್ಟಿದೆ. ಹೀಗಾಗಿ, ಪತಿಯು ತನ್ನ ಆಸ್ತಿಗಳ ಮೌಲ್ಯಕ್ಕೆ ಸಮನಾದ ರೀತಿಯಲ್ಲಿ ಪರಿಹಾರ ನೀಡಬೇಕು ಎಂದು ಕೋರಿದ್ದಳು. ಆದರೆ ಇದನ್ನು ಸುಪ್ರೀಂ ಕೋರ್ಟ್ ಒಪ್ಪಿಲ್ಲ.

ಈ ಪ್ರಕರಣದಲ್ಲಿ ಪುಣೆಯ ಕೌಟುಂಬಿಕ ನ್ಯಾಯಾಲಯವು ಶಾಶ್ವತ ಜೀವನಾಂಶವಾಗಿ ₹10 ಕೋಟಿ ನೀಡಬೇಕು ಎಂದು ತೀರ್ಮಾನಿಸಿತ್ತು. ಈ ಮೊತ್ತಕ್ಕೆ ಹೆಚ್ಚುವರಿಯಾಗಿ ₹2 ಕೋಟಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಅಂತಃಸಾಕ್ಷಿ ಕಲಕಿದೆ’

ವಾಮಾಚಾರದಲ್ಲಿ ತೊಡಗಿದ್ದ ಆರೋಪದ ಅಡಿಯಲ್ಲಿ ಮಹಿಳೆಯೊಬ್ಬಳ ಮೇಲೆ ದೈಹಿಕ ಹಲ್ಲೆ ನಡೆಸಿ, ಸಾರ್ವಜನಿಕವಾಗಿ ಆಕೆಯ ಬಟ್ಟೆ ಬಿಚ್ಚಿಸಿದ ಸಂಗತಿಯನ್ನು ತಿಳಿದು ತನ್ನ ಅಂತಃಸಾಕ್ಷಿ ಕಲಕಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ. ಸಮಾನತೆಯ ವಿಚಾರದಲ್ಲಿ, ಅದರಲ್ಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿನ ಮಹಿಳೆಯರಿಗೆ ಸಮಾನತೆಯನ್ನು ಖಾತರಿಪಡಿಸುವಲ್ಲಿ, ಮಾಡಬೇಕಿರುವ ಕೆಲಸಗಳು ಬಹಳಷ್ಟು ಇವೆ ಎಂದು ಅದು ಹೇಳಿದೆ.

ವ್ಯಕ್ತಿಯ ಘನತೆಗೆ ಕುಂದು ಉಂಟುಮಾಡುವಂತಹ ಕೃತ್ಯವನ್ನು ಇನ್ನೊಬ್ಬ ವ್ಯಕ್ತಿ ಎಸಗಲಿ ಅಥವಾ ಸರ್ಕಾರ ಎಸಗಲಿ, ಅದು ಸಂವಿಧಾನದ ಆಶಯಗಳಿಗೆ ವಿರುದ್ಧ ಎಂದು ನ್ಯಾಯಮೂರ್ತಿಗಳಾದ ಸಿ.ಟಿ. ರವಿಕುಮಾರ್ ಮತ್ತು ಸಂಜಯ್ ಕರೋಲ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

‘ಪೂರಂ’ ಆಚರಣೆ: ಆನೆ ಬಳಕೆ ನಿರ್ಬಂಧಕ್ಕೆ ‘ಸುಪ್ರೀಂ’ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ತ್ರಿಶ್ಶೂರ್ ಪೂರಂ’ ಆಚರಣೆಯಲ್ಲಿ ಆನೆಗಳ ಬಳಕೆಗೆ ಕೇರಳ ಹೈಕೋರ್ಟ್ ವಿಧಿಸಿದ್ದ ನಿರ್ಬಂಧಗಳನ್ನು ಸುಪ್ರೀಂ ಕೋರ್ಟ್ ಗುರುವಾರ ಅಮಾನತಿನಲ್ಲಿ ಇರಿಸಿದೆ. ಜನವರಿ 5ರಂದು ಕಾರ್ಯಕ್ರಮ ನಡೆಯಲಿದ್ದು, ಅಷ್ಟರ ಒಳಗೆ ಕೋರ್ಟ್ ಸೂಚನೆಗಳನ್ನು ಅನುಷ್ಠಾನಕ್ಕೆ ತರಲು ವಾಸ್ತವದಲ್ಲಿ ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ತಿರುವಂಬಾಡಿ ಮತ್ತು ಪರಮೆಕ್ಕವು ದೇವಸ್ವಂಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ಈ ಆದೇಶ ನೀಡಿದೆ. ಪ್ರಸಿದ್ಧ ‘ತ್ರಿಶೂರ್ ಪೂರಂ’ ಕಾರ್ಯಕ್ರಮದಲ್ಲಿ ಈ ಎರಡು ದೇವಸ್ವಂಗಳು ಪ್ರಧಾನವಾಗಿ ಪಾಲ್ಗೊಳ್ಳುತ್ತವೆ.

ಆನೆಗಳ ಮೆರವಣಿಗೆಗೆ ಹೈಕೋರ್ಟ್ ವಿಧಿಸಿದ್ದ ಮಾರ್ಗಸೂಚಿಗಳನ್ನು ಇವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದವು. ‘ಕೇರಳ ಸೆರೆಹಿಡಿದ ಆನೆಗಳ (ನಿರ್ವಹಣೆ ಮತ್ತು ಪೋಷಣೆ) ನಿಯಮ – 2012’ಕ್ಕೆ ವಿರುದ್ಧವಾಗಿ ಹೈಕೋರ್ಟ್ ನೀಡಿರುವ ಯಾವುದೇ ಸೂಚನೆಗಳನ್ನು ತಡೆ ಹಿಡಿಯಬೇಕು ಎಂದು ಪೀಠವು ಆದೇಶಿಸಿದೆ. ಆದರೆ ಈ ನಿಯಮವನ್ನು ಪಾಲಿಸಬೇಕು ಎಂದು ಸ್ಪಷ್ಟಪಡಿಸಿದೆ.

‘ಅನ್ನದಾನ: ಹಣ ಸಂಗ್ರಹ ಬೇಡ’

ಕೊಚ್ಚಿ (ಪಿಟಿಐ): ಮಂಡಲ–ಮಕರವಿಳಕ್ಕು ಯಾತ್ರೆ ವೇಳೆ, ತಂಗುದಾಣಗಳಲ್ಲಿ (ಇಡತ್ತಾವಳಂ) ‘ಅನ್ನದಾನ’ ಸೌಲಭ್ಯ ಪಡೆಯುವ ಶಬರಿಮಲೆ ಯಾತ್ರಾರ್ಥಿಗಳಿಂದ ಶುಲ್ಕ ಸಂಗ್ರಹಿಸಬಾರದು ಎಂದು ತಿರುವಾಂಕೂರು ದೇವಸ್ವಂ ಮಂಡಳಿಗೆ (ಟಿಡಿಬಿ) ಕೇರಳ ಹೈಕೋರ್ಟ್ ನಿರ್ದೇಶಿಸಿದೆ.

ನ್ಯಾಯಮೂರ್ತಿಗಳಾದ ಅನಿಲ್ ಕೆ.ನರೇಂದ್ರನ್ ಹಾಗೂ ಮುರಳಿಕೃಷ್ಣ ಎಸ್. ಅವರು ಇದ್ದ ಪೀಠ ಈ ನಿರ್ದೇಶನ ನೀಡಿದೆ.

ಟಿಡಿಬಿ ಅಧೀನದ ದೇವಾಲಯಗಳಲ್ಲಿ ‘ಅನ್ನದಾನ’ಕ್ಕೆ ಹಣ ಸಂಗ್ರಹಿಸಲಾಗುತ್ತಿದೆ ಎಂದು ಆರೋಪಿಸಿ ಭಕ್ತರೊಬ್ಬರು ದೂರು ನೀಡಿದ್ದರು.

‘ಶಾ ಭಾಷಣ ಅಳಿಸಲು ‘ಎಕ್ಸ್’ಗೆ ಸರ್ಕಾರ ಸೂಚನೆ’

ನವದೆಹಲಿ (ಪಿಟಿಐ): ಗೃಹ ಸಚಿವ ಅಮಿತ್ ಶಾ ಅವರು ಬಾಬಾಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ರಾಜ್ಯಸಭೆಯಲ್ಲಿ ಮಾಡಿದ್ದ ಭಾಷಣವನ್ನು ಅಳಿಸುವಂತೆ ಬಿಜೆಪಿ ಸರ್ಕಾರವು ‘ಎಕ್ಸ್’ ಅನ್ನು ಕೇಳಿದೆ ಎಂದು ಕಾಂಗ್ರೆಸ್ ಗುರುವಾರ ಹೇಳಿದೆ.

ಕಾಂಗ್ರೆಸ್‌ನ ಹೇಳಿಕೆ ಕುರಿತು ‘ಎಕ್ಸ್’ ಅಥವಾ ಬಿಜೆಪಿಯಿಂದ ಯಾವುದೇ ದೃಢೀಕರಣ ಬಂದಿಲ್ಲ.

‘ಕ್ಷಮಿಸಲಾಗದ ಅಪರಾಧ ಎಸಗಿರುವ ಅಮಿತ್ ಶಾ ಅವರು ದೇಶದ ಜನರ ಕ್ಷಮೆಯಾಚಿಸಬೇಕು ಮತ್ತು ಕೂಡಲೇ ರಾಜೀನಾಮೆ ನೀಡಬೇಕು’ ಎಂದು ಕಾಂಗ್ರೆಸ್ ಪುನರುಚ್ಚಾರ ಮಾಡಿದೆ.

‘ಭಾಷಣವನ್ನು ಅಳಿಸುವಂತೆ ಭಾರತ ಸರ್ಕಾರದಿಂದ ಇ–ಮೇಲ್ ಸ್ವೀಕರಿಸಲಾಗಿದೆ ಎಂದು ಎಕ್ಸ್ ವೇದಿಕೆಯು ಕಾಂಗ್ರೆಸ್ ನಾಯಕರು, ಸಂಸದರಿಗೆ (ಪೋಸ್ಟ್ ಅನ್ನು ಹಂಚಿಕೊಂಡಿದ್ದ) ಮೇಲ್ ಮೂಲಕ ತಿಳಿಸಿದೆ’ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾತೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಳಿಸಲು ನಕಾರ: ಆದರೆ, ‘ಎಕ್ಸ್’ ವೇದಿಕೆಯು ವಾಕ್ ಸ್ವಾತಂತ್ರ್ಯದ ಆಧಾರದ ಮೇಲೆ ಆ ಭಾಷಣವನ್ನು ಅಳಿಸಲು ನಿರಾಕರಿಸಿದೆ ಎಂದೂ ಹೇಳಿದರು.

‘ತಾವು ಮಾಡಿದ್ದ ಭಾಷಣದಲ್ಲಿ ತಪ್ಪಿಲ್ಲ ಎಂದು ಶಾ ಅವರು ಭಾವಿಸಿದ್ದರೆ, ಅವರ ಸಚಿವಾಲಯವು ಆ ಭಾಷಣವನ್ನು ಅಳಿಸುವಂತೆ ಏಕೆ ಕೇಳಿದೆ’ ಎಂದು ಪ್ರಶ್ನಿಸಿದರು. ‘ಅದಾಗ್ಯೂ ಅಲ್ಲಿ ಹಂಚಿಕೆಯಾಗಿರುವುದು ಶಾ ಅವರ ಮೂಲ ಭಾಷಣ. ಅದು ಯಾವುದೇ ರೀತಿಯಲ್ಲೂ ಎಡಿಟ್ ಆಗಿಲ್ಲ ಅಥವಾ ತಿರುಚಿದ್ದಲ್ಲ’ ಎಂದು ಸುಪ್ರಿಯಾ ತಿಳಿಸಿದರು.

‘ಅಂಬೇಡ್ಕರ್ ಭಾವಚಿತ್ರ ತಿರುಚಿದ ಬಿಜೆಪಿ’: ಅಮಿತ್ ಶಾ ಅವರ ವಿರುದ್ಧ ಕಾಂಗ್ರೆಸ್ ನಾಯಕರು ಪ್ರತಿಭಟಿಸುವಾಗ ಅಂಬೇಡ್ಕರ್ ಭಾವಚಿತ್ರಗಳನ್ನು ಹಿಡಿದಿದ್ದರು. ಆದರೆ ಬಿಜೆಪಿಯು ತನ್ನ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿರುವ ಈ ಕುರಿತ ಚಿತ್ರದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವನ್ನು ವಿರೂಪಗೊಳಿಸಿದೆ. ಅಂಬೇಡ್ಕರ್ ಅವರ ಚಿತ್ರಗಳನ್ನು ಜಾರ್ಜ್ ಸೊರೊಸ್ ಅವರ ಚಿತ್ರಗಳೊಂದಿಗೆ ಬದಲಿಸಿ ಅಪಮಾನ ಮಾಡಿದೆ ಎಂದು ಅವರು ಖಂಡಿಸಿದರು.

‘ಅಂಬೇಡ್ಕರ್ ಅವರ ಚಿತ್ರವನ್ನು ಹೀಗೆ ಬದಲಿಸಲು ಬಿಜೆಪಿಗೆ ಎಷ್ಟು ಧೈರ್ಯ’ ಎಂದು ಅವರು ಪ್ರಶ್ನಿಸಿದರು.

ಸಲಿಂಗಿ ಜೋಡಿ ಹಕ್ಕು ಎತ್ತಿ ಹಿಡಿದ ಹೈಕೋರ್ಟ್

ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಜೋಡಿ ಹೊಂದಿದೆ: ಆಂಧ್ರ ನ್ಯಾಯಾಲಯ

ಅಮರಾವತಿ (ಪಿಟಿಐ): ಸಲಿಂಗಿ ಮಹಿಳಾ ಜೋಡಿಯೊಂದರ ಒಟ್ಟಿಗೆ ಬಾಳುವ ಹಕ್ಕನ್ನು ಎತ್ತಿ ಹಿಡಿದಿರುವ ಆಂಧ್ರಪ್ರದೇಶ ಹೈಕೋರ್ಟ್, ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಈ ಜೋಡಿ ಹೊಂದಿದೆ ಎಂದು ಹೇಳಿದೆ.

ಕವಿತಾ (ಹೆಸರು ಬದಲಾಯಿಸಲಾಗಿದೆ) ಎಂಬವರು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಆರ್.ರಘುನಂದನ ರಾವ್ ಹಾಗೂ ಕೆ.ಮಹೇಶ್ವರ ರಾವ್ ಅವರು ಇದ್ದ ಪೀಠ ಅರ್ಜಿ ವಿಚಾರಣೆ ನಡೆಸಿ, ಮಂಗಳವಾರ ಈ ಸಂಬಂಧ ಆದೇಶ ಹೊರಡಿಸಿದೆ.

‘ಕವಿತಾ ಅವರ ಸಂಗಾತಿ ಲಲಿತಾ (ಹೆಸರು ಬದಲಾಯಿಸಲಾಗಿದೆ) ತಮ್ಮ ದೂರು ವಾಪಸ್ ಪಡೆಯಲು ಬಯಸಿದ್ದಾರೆ. ಹೀಗಾಗಿ, ಅವರ ಕುಟುಂಬದ ಸದಸ್ಯರ ವಿರುದ್ಧ ಕಾನೂನು ಕ್ರಮ ಮುಂದುವರಿಸಬಾರದು’ ಎಂದು ಹೇಳಿರುವ ಪೀಠವು, ಅರ್ಜಿ ವಿಲೇವಾರಿ ಮಾಡಿದೆ.

‘ಈ ಜೋಡಿಯ ಸಂಬಂಧದ ವಿಚಾರದಲ್ಲಿ ಹಸ್ತಕ್ಷೇಪ ಮಾಡಬಾರದು’ ಎಂದು ಲಲಿತಾ ಪಾಲಕರಿಗೆ ಸೂಚಿಸಿರುವ ಪೀಠವು, ‘ನಿಮ್ಮ ಮಗಳು ವಯಸ್ಕಳಾಗಿದ್ದು, ತನಗೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳಬಲ್ಲಳು’ ಎಂದು ಹೇಳಿದೆ.

ಪ್ರಕರಣ: ಕವಿತಾ ಹಾಗೂ ಲಲಿತಾ ಜೋಡಿ ಕಳೆದ ಒಂದು ವರ್ಷದಿಂದ ವಿಜಯವಾಡದಲ್ಲಿ ‘ಸಹಜೀವನ’ ನಡೆಸುತ್ತಿದೆ..

‘ನನ್ನ ಸಂಗಾತಿ ಲಲಿತಾಳ ಇಚ್ಛೆಗೆ ವಿರುದ್ಧವಾಗಿ ಆಕೆಯನ್ನು ನರಸಿಪಟ್ಟಣಂನಲ್ಲಿರುವ ತಮ್ಮ ಮನೆಯಲ್ಲಿ ಆಕೆಯ ತಂದೆ ಕೂಡಿ ಹಾಕಿದ್ದಾರೆ’ ಎಂದು ಕವಿತಾ ದೂರು ಸಲ್ಲಿಸಿದ್ದರು.

ಈ ದೂರಿನ ಆಧಾರದಲ್ಲಿ ಶೋಧ ನಡೆಸಿದ್ದ ಪೊಲೀಸರು, ಲಲಿತಾ ಅವರನ್ನು ಆಕೆಯ ತಂದೆ ಮನೆಯಲ್ಲಿ ಪತ್ತೆ ಹಚ್ಚಿ, ರಕ್ಷಿಸಿ, 15 ದಿನ ಆಕೆಯನ್ನು ಕಲ್ಯಾಣ ಕೇಂದ್ರವೊಂದರಲ್ಲಿ ಇರಿಸಿದ್ದರು.

‘ನಾನು ವಯಸ್ಕಳಾಗಿದ್ದು, ನನ್ನ ಸಂಗಾತಿಯೊಂದಿಗೆ ಜೀವಿಸಲು ಬಯಸುತ್ತೇನೆ’ ಎಂಬ ಲಲಿತಾ ಅವರ ಮನವಿಯನ್ನು ಪೊಲೀಸರು ಪರಿಗಣಿಸಿರಲಿಲ್ಲ.

‘ಕವಿತಾ ಜೊತೆಗಿನ ನನ್ನ ಸಂಬಂಧ ಹಾಗೂ ಇತರ ವಿಚಾರವಾಗಿ ನನ್ನ ಕುಟುಂಬದವರು ನನಗೆ ಕಿರುಕುಳ ನೀಡುತ್ತಿದ್ದಾರೆ’ ಎಂದು ತನ್ನ ತಂದೆ ವಿರುದ್ಧ ಲಲಿತಾ, ಸೆಪ್ಟೆಂಬರ್‌ನಲ್ಲಿ ಪೊಲೀಸರಿಗೆ ದೂರು ನೀಡಿದ್ದರು.

ಹೈಕೋರ್ಟ್ ಸುದ್ದಿಗಳು

ಇನ್ನೊಂದೆಡೆ, ‘ನನ್ನ ಮಗಳನ್ನು ಕವಿತಾ ಹಾಗೂ ಆಕೆಯ ಕುಟುಂಬದ ಸದಸ್ಯರು ಅಪಹರಿಸಿದ್ದಾರೆ’ ಎಂದು ಲಲಿತಾ ತಂದೆ ಕೂಡ ಪೊಲೀಸರಿಗೆ ದೂರು ನೀಡಿದ್ದರು.

‘ಪೊಲೀಸರ ಮಧ್ಯಪ್ರವೇಶದ ನಂತರ ಲಲಿತಾ ವಿಜಯವಾಡಕ್ಕೆ ಮರಳಿದ್ದರು. ಆಕೆಯ ತಂದೆ ಲಲಿತಾಳನ್ನು ಮತ್ತೆ ಬಲವಂತದಿಂದ ಕರೆದುಕೊಂಡು ಹೋಗಿ, ಕಾನೂನುಬಾಹಿರವಾಗಿ ಬಂಧಿಸಿಟ್ಟಿದ್ದಾರೆ’ ಎಂದು ಕವಿತಾ, ಹೇಬಿಯಸ್ ಕಾರ್ಪಸ್ ಅರ್ಜಿಯಲ್ಲಿ ವಿವರಿಸಿದ್ದರು.

ಹೈಕೋರ್ಟ್ ನಿರ್ದೇಶನದಂತೆ, ವಿಜಯವಾಡ ಪೊಲೀಸರು ಲಲಿತಾ ಅವರನ್ನು ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಿದ್ದರು.

‘ಮಾಂಸಾಹಾರ ವಿವಾದ: ಮೂವರು ಬಾಲಕರನ್ನು ಬೇರೆ ಶಾಲೆಗೆ ಸೇರಿಸಿ’

ಪ್ರಯಾಗ್‌ರಾಜ್ (ಉತ್ತರ ಪ್ರದೇಶ) (ಪಿಟಿಐ): ಮಾಂಸಾಹಾರ ತಂದಿದ್ದ ಆರೋಪದಡಿ ಉಚ್ಚಾಟನೆಗೊಂಡಿರುವ ಮೂವರು ಬಾಲಕರಿಗೆ ಎರಡು ವಾರದ ಒಳಗಾಗಿ ಬೇರೆ ಶಾಲೆಗೆ ಪ್ರವೇಶ ಸಿಗುವಂತೆ ನೋಡಿಕೊಳ್ಳಬೇಕು ಎಂದು ಅಮ್ರೋಹಾ ಜಿಲ್ಲಾಡಳಿತಕ್ಕೆ ಅಲಹಾಬಾದ್ ಹೈಕೋರ್ಟ್ ಸೂಚನೆ ನೀಡಿದೆ.

ಈ ಕುರಿತು, ಅಮ್ರೋಹಾದ ಸಬ್ರ ಹಾಗೂ ಇತರ ಮೂವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸಿದ್ಧಾರ್ಥ ಹಾಗೂ ಎಸ್.ಸಿ.ಶರ್ಮಾ ಅವರು ಇದ್ದ ನ್ಯಾಯಪೀಠ ನಡೆಸಿತು.

‘ಸಿಬಿಎಸ್‌ಇ ಮಾನ್ಯತೆ ಹೊಂದಿರುವ ಬೇರೆ ಶಾಲೆಗೆ ಈ ಮಕ್ಕಳನ್ನು ಸೇರಿಸಿ, ಕ್ರಮ ಕೈಗೊಂಡಿರುವ ಕುರಿತು ಅಫಿಡವಿಟ್ ಸಲ್ಲಿಸಬೇಕು’ ಎಂದು ಪೀಠ ಸೂಚಿಸಿದೆ.

ಡಿ.17ರಂದು ಹೊರಡಿಸಿರುವ ಆದೇಶದಲ್ಲಿ ಈ ನಿರ್ದೇಶನ ನೀಡಿರುವ ಪೀಠವು, ವಿಚಾರಣೆಯನ್ನು ಜನವರಿ 6ಕ್ಕೆ ಮುಂದೂಡಿದೆ.

ಮಾಂಸಾಹಾರ ತಂದಿದ್ದಕ್ಕಾಗಿ ಶಾಲೆಯೊಂದರ ಪ್ರಾಂಶುಪಾಲರು ಆಕ್ಷೇಪಿಸಿದ್ದರು ಹಾಗೂ ಈ ಮೂವರು ಬಾಲಕರನ್ನು ಉಚ್ಚಾಟಿಸಿದ್ದರು ಎಂದು ಆರೋಪಿಸಲಾಗಿದೆ. ಶಾಲೆಯ ಈ ವರ್ತನೆಯಿಂದಾಗಿ ಮಕ್ಕಳ ಶಿಕ್ಷಣದ ಹಕ್ಕಿಗೆ ಧಕ್ಕೆ ಉಂಟಾಗಿದೆ ಎಂದು ಅರ್ಜಿದಾರರ ಪರ ವಕೀಲರು ವಾದಿಸಿದ್ದರು.

ಸದನದ ಮುಂದೆ ‘ಕದನ’

‘ಇಬ್ಬರು ಸಂಸದರನ್ನು ತಳ್ಳಿದ ರಾಹುಲ್’

ಒಂದನೇ ಪುಟದಿಂದ...

ರಾಜ್ಯಸಭೆಯ ಮಧ್ಯಾಹ್ನದ ಕಲಾಪವು ಗದ್ದಲದ ದೃಶ್ಯಗಳಿಗೆ ಸಾಕ್ಷಿಯಾಯಿತು. ಲೋಕಸಭೆ ವಿರೋಧಪಕ್ಷದ ನಾಯಕನ ವಿರುದ್ಧ ಬಿಜೆಪಿ ಸಂಸದರು ಪ್ರತಿಭಟನೆ ನಡೆಸಿದರು. ನಮ್ಮ ಪಕ್ಷದ ಸಂಸದರ ಮೇಲೆ ಅವರು ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪ ಮಾಡಿದರು. ರಾಹುಲ್ ವರ್ತನೆ ತುಂಬಾ ನೋವನ್ನು ಉಂಟು ಮಾಡಿದೆ ಎಂದು ಕೊನ್ಯಾಕ್ ಅವರು ಸದನಕ್ಕೆ ತಿಳಿಸಿದರು.

‘ದೂರನ್ನು ಸಲ್ಲಿಸಲು ಅವರು ನನ್ನನ್ನು ಭೇಟಿ ಮಾಡಿದ್ದರು ಹಾಗೂ ಘಟನೆ ಬಗ್ಗೆ ವಿವರಿಸುವ ಸಂದರ್ಭದಲ್ಲಿ ಕಣ್ಣೀರು ಹಾಕಿದರು’ ಎಂದು ಸಭಾಪತಿ ಜಗದೀಪ್ ಧನಕರ್ ಸದನಕ್ಕೆ ಹೇಳಿದರು. ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದ್ದರಿಂದ ಲೋಕಸಭೆಯಲ್ಲಿ ಐದು ನಿಮಿಷವಷ್ಟೇ ಕಲಾಪ ನಡೆಯಿತು.

ಈ ಸಂಬಂಧ ಕಾಂಗ್ರೆಸ್ ಸಂಸದ ಹಿಬಿ ಈಡನ್ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದು ಆರೋಪ ತಳ್ಳಿ ಹಾಕಿದ್ದರು. ‘ಪ್ರತಿಭಟನೆಯ ಸಂದರ್ಭದಲ್ಲಿ ರಾಹುಲ್ ಜತೆಗಿದ್ದೆ. ಯಾವುದೇ ಹಂತದಲ್ಲಿ ಸಂಸದೆಯ ಸಮೀಪದವರೆಗೆ ನಮ್ಮ ನಾಯಕ ಹೋಗಿರಲಿಲ್ಲ. ಚಾರಿತ್ರ್ಯಹನನ ಮಾಡಲು ಬಿಜೆಪಿಯವರು ಹೆಣೆದಿರುವ ಕಟ್ಟು ಕಥೆ ಇದು’ ಎಂದು ಪತ್ರದಲ್ಲಿ ದೂರಿದ್ದಾರೆ.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ‘ಕಾಂಗ್ರೆಸ್ ನಾಯಕರ ವರ್ತನೆ ನಾಚಿಕೆಗೇಡಿತನದ್ದು. ಕಾಂಗ್ರೆಸ್ ಸಂಸದರು ದೇಶ ಹಾಗೂ ಸಂಸತ್‌ನ ಕ್ಷಮೆಯಾಚಿಸಬೇಕು’ ಎಂದು ಆಗ್ರಹಿಸಿದರು. ರಾಹುಲ್ ವರ್ತನೆ ಖಂಡಿಸಲು ನಿರ್ಣಯ ತರುವುದಾಗಿ ಸಭಾನಾಯಕ ಜೆ.ಪಿ.ನಡ್ಡಾ ಹೇಳಿದರು.

ಇದಕ್ಕೂ ಮುನ್ನ, ಅಂಬೇಡ್ಕರ್ ಅವರಿಗೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಹಾಗೂ ಬಿಜೆಪಿ ಸಂಸದರು ಪ್ರತ್ಯೇಕವಾಗಿ ಮಕರ ದ್ವಾರದ ಬಳಿ ಪ್ರತಿಭಟನೆ ನಡೆಸಿದರು. ರಾಹುಲ್ ಸದನದೊಳಗೆ ಪ್ರವೇಶಿಸಲು ಪ್ರಯತ್ನಿಸಿದಾಗ ಬಿಜೆಪಿ ಸಂಸದರು ತಡೆದರು ಎಂದು ಕಾಂಗ್ರೆಸ್ ಆರೋಪಿಸಿತು. ಕಾಂಗ್ರೆಸ್ ನಾಯಕ ಇಬ್ಬರು ಸಂಸದರನ್ನು ತಳ್ಳಿದರು ಎಂದು ಬಿಜೆಪಿ ಪ್ರತ್ಯಾರೋಪ ಮಾಡಿತು.

ಪ್ರಧಾನಿ ನರೇಂದ್ರ ಮೋದಿ ಅವರು ಸಾರಂಗಿ ಮತ್ತು ರಜಪೂತ ಅವರ ಆರೋಗ್ಯವನ್ನು ವಿಚಾರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ‘ಸಾರಂಗಿ ಅವರಿಗೆ ಆಗಿರುವ ಗಾಯಗಳನ್ನು ಪರಿಶೀಲಿಸಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಸಂಸತ್ತು ದೈಹಿಕ ಶಕ್ತಿ ಪ್ರದರ್ಶಿಸುವ ಸ್ಥಳವಲ್ಲ. ಇದು ಕುಸ್ತಿ ಕಣ ಅಲ್ಲ' ಎಂದು ರಿಜಿಜು ಸುದ್ದಿಗಾರರಿಗೆ ತಿಳಿಸಿದರು.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅಜಯ್ ಶುಕ್ಲಾ, ‘ಸಾರಂಗಿ ಹಣೆಯ ಮೇಲೆ ತೀವ್ರ ಗಾಯವಾಗಿದ್ದು, ಅದಕ್ಕೆ ಹೊಲಿಗೆ ಹಾಕಲಾಗಿದೆ. ಅವರಿಗೆ ರಕ್ತಸ್ರಾವವಾಗಿದೆ. ಅವರ ರಕ್ತದೊತ್ತಡ ಹೆಚ್ಚಾಗಿತ್ತು. ರಜಪೂತ್ ಅವರ ತಲೆಗೂ ಗಾಯವಾಗಿದೆ’ ಎಂದು ತಿಳಿಸಿದರು.

ಕೇಂದ್ರ ಸಚಿವರಾದ ಶಿವರಾಜ ಸಿಂಗ್ ಚೌಹಾಣ್, ಪೀಯೂಷ್ ಗೋಯಲ್, ಪ್ರಲ್ಹಾದ ಜೋಶಿ, ಅರ್ಜುನ್ ರಾಮ್ ಮೇಘವಾಲ್ ಅವರು ಆಸ್ಪತ್ರೆಗೆ ತೆರಳಿ ಸಂಸದರ ಆರೋಗ್ಯ ವಿಚಾರಿಸಿದರು.

‘ಖರ್ಗೆ ತಳ್ಳಿದ ಬಿಜೆಪಿ ಸಂಸದರು’

ಒಂದನೇ ಪುಟದಿಂದ...

‘ಇದು ವೈಯಕ್ತಿಕವಾಗಿ ನನ್ನ ಮೇಲೆ ಮಾತ್ರವಲ್ಲದೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್ ಅಧ್ಯಕ್ಷರ ಮೇಲೂ ನಡೆದಿರುವ ಹಲ್ಲೆ. ಘಟನೆಯ ಕುರಿತು ತನಿಖೆಗೆ ಆದೇಶಿಸಬೇಕು’ ಎಂದು ಖರ್ಗೆ ಅವರು ಸ್ಪೀಕರ್ ಅವರನ್ನು ಒತ್ತಾಯಿಸಿದ್ದಾರೆ.

ಓಂ ಬಿರ್ಲಾ ಅವರನ್ನು ಭೇಟಿ ಮಾಡಿರುವ ಕಾಂಗ್ರೆಸ್ ಸಂಸದರು, ಬಿಜೆಪಿ ಸಂಸದರು ಅಮಾನುಷವಾಗಿ ವರ್ತಿಸಿದ್ದಾರೆ ಎಂದು ದೂರಿ ಪತ್ರ ಸಲ್ಲಿಸಿದರು. ‘ಆಡಳಿತ ಪಕ್ಷದ ಮೂವರು ಸಂಸದರು ರಾಹುಲ್ ಗಾಂಧಿ ಅವರನ್ನು ದೈಹಿಕವಾಗಿ ಹಿಂಸಿಸಿದ್ದಾರೆ. ಇದು ಪ್ರತಿಪಕ್ಷ ನಾಯಕನ ಹಕ್ಕುಗಳ ಸ್ಪಷ್ಟ ಉಲ್ಲಂಘನೆ. ಈ ಘಟನೆಯು ರಾಹುಲ್ ಅವರ ವೈಯಕ್ತಿಕ ಘನತೆಯ ಮೇಲೆ ಘೋರವಾದ ಆಕ್ರಮಣ. ಸಂಸತ್ತಿನ ಪ್ರಜಾಸತ್ತಾತ್ಮಕ ಮನೋಭಾವಕ್ಕೆ ವಿರುದ್ಧ’ ಎಂದು ಅವರು ದೂರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕಾ, ‘ನಾವು ಹಲವು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದೇವೆ ಮತ್ತು ಜನರು ಮುಕ್ತವಾಗಿ ಪ್ರವೇಶಿಸಲು ಯಾವಾಗಲೂ ಸ್ಥಳಾವಕಾಶವಿದೆ. ಪ್ರತಿದಿನ ಬೆಳಿಗ್ಗೆ 10.30 ರಿಂದ 11 ರವರೆಗೆ ಶಾಂತಿಯುತ ಪ್ರತಿಭಟನೆಗಳು ನಡೆಯುತ್ತಿವೆ. ಇಂದು ಅವರು (ಬಿಜೆಪಿ ಸಂಸದರು) ಮೊದಲ ಬಾರಿಗೆ ಪ್ರತಿಭಟನೆ ನಡೆಸಿದರು. ಎಲ್ಲರನ್ನೂ ತಡೆದು ನಿಲ್ಲಿಸಿ ತಳ್ಳಾಟ ನಡೆಸಿದರು. ಗೂಂಡಾಗಿರಿಯಲ್ಲಿ ತೊಡಗಿದರು’ ಎಂದು ಆಕ್ರೋಶ ವ್ಯಕ್ತಪಡಿಸಿದರು. ‘ಇದೊಂದು ಷಡ್ಯಂತ್ರ. ನಮ್ಮನ್ನು ತಡೆದವರಿಗೆ 'ಜೈ ಭೀಮ್" ಎಂದು ಸವಾಲು ಹಾಕಿದ್ದೇವೆ. ಅವರು 'ಜೈ ಭೀಮ್' ಘೋಷಣೆಯನ್ನು ಏಕೆ ಕೂಗಿಲ್ಲ’ ಎಂದು ಅವರು ಪ್ರಶ್ನಿಸಿದರು.

‘ಖರ್ಗೆ ಮತ್ತು ಪ್ರಿಯಾಂಕಾ ಇಬ್ಬರನ್ನೂ ತಳ್ಳಲಾಯಿತು. ಆದರೆ, ಇದಕ್ಕೆಲ್ಲ ನಾವು ತಲೆಕೆಡಿಸಿಕೊಳ್ಳುವುದಿಲ್ಲ’ ಎಂದು ರಾಹುಲ್ ಹೇಳಿದರು.

ಪ್ರತಿಭಟನೆ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಸಂಸದರಾದ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ‘ಇಂಡಿಯಾ’ ಮೈತ್ರಿಕೂಟದ ಸದಸ್ಯರು ಸಂಸತ್ ಭವನ ಆವರಣದಲ್ಲಿ ಗುರುವಾರ ಪ್ರತಿಭಟಿಸಿದರು

ಕಾಂಗ್ರೆಸ್ ಪಕ್ಷವು ಅಂಬೇಡ್ಕರ್ ಅವರಿಗೆ ಅವಮಾನ ಎಸಗಿದೆ ಎಂದು ಆರೋಪಿಸಿ ಬಿಜೆಪಿ ಸದಸ್ಯರು ಸಂಸತ್ ಆವರಣದಲ್ಲಿ ಗುರುವಾರ ಪ್ರತಿಭಟಿಸಿದರು

ಸಂಸತ್ ಆವರಣದಲ್ಲಿ ನಡೆದ ಪ್ರತಿಭಟನೆಯ ವೇಳೆ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಬಿಜೆಪಿಯ ಹೇಮಾಂಗ್ ಜೋಶಿ ಅವರು ಪರಸ್ಪರ ಎದುರಾದ ಕ್ಷಣ —ಪಿಟಿಐ ಚಿತ್ರಗಳು

ಗುಜರಾತ್‌ನಲ್ಲಿ ಮಹಾತ್ಮ ಗಾಂಧಿ ಆರಂಭಿಸಿದ್ದ ವಿದ್ಯಾಪೀಠ

‘ಗಾಂಧಿ’ ಪೀಠದಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ/ಪಿಟಿಐ

ಅಹಮದಾಬಾದ್: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವ ಕಾರ್ಯಕ್ರಮವನ್ನು ಮಹಾತ್ಮ ಗಾಂಧಿ ಸ್ಥಾಪಿಸಿದ ‘ಗುಜರಾತ್ ವಿದ್ಯಾಪೀಠ’ದ ಕ್ಯಾಂಪಸ್‌ನಲ್ಲಿ ಮೊದಲ ಬಾರಿಗೆ ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ಆರ್‌ಎಸ್‌ಎಸ್‌ನ ಶತಮಾನೋತ್ಸವ ಆಚರಣೆಯ ಭಾಗವಾಗಿದ್ದು, ಇದಕ್ಕಾಗಿ ಆಹ್ವಾನ ಪತ್ರಗಳನ್ನು ಆರ್‌ಎಸ್‌ಎಸ್ ಕಳುಹಿಸಿದೆ.

ಕ್ಯಾಂಪಸ್‌ನಲ್ಲಿ ಕಾರ್ಯಕ್ರಮ ನಡೆಯುವುದನ್ನು ಖಚಿತಪಡಿಸಿದ ಆರ್‌ಎಸ್‌ಎಸ್‌ನ ಪದಾಧಿಕಾರಿಯೊಬ್ಬರು, ವಿಶ್ವವಿದ್ಯಾಲಯದ ಕುಲಪತಿ ಹರ್ಷದ್ ಪಟೇಲ್ ಅವರಿಗೆ ಈ ಬಗ್ಗೆ ಮನವಿ ಮಾಡಲಾಗಿತ್ತು. ಅವರು ಅನುಮತಿ ನೀಡಿದ್ದಾರೆ ಎಂದು ತಿಳಿಸಿದ್ದಾರೆ.ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಿದರೂ ಹರ್ಷದ್ ಪಟೇಲ್ ಲಭಿಸಲಿಲ್ಲ. ಆಹ್ವಾನ ಪತ್ರಿಕೆಯಲ್ಲಿ ‘ಗುಜರಾತ್ ವಿದ್ಯಾಪೀಠ, ಕರ್ಣಾವತಿ’ ಎಂಬ ವಿಳಾಸವಿದೆ. ಅಹಮದಾಬಾದ್‌ಗೆ ಕರ್ಣಾವತಿ ಎಂಬ ಪರ್ಯಾಯ ಹೆಸರನ್ನು ಆರ್‌ಎಸ್‌ಎಸ್ ಬಳಕೆ ಮಾಡುತ್ತದೆ.

ಈ ಹಿಂದೆ ಗಾಂಧೀಜಿಯ ಮರಿಮೊಮ್ಮಗ ತುಷಾರ್ ಗಾಂಧಿ ಸೇರಿದಂತೆ, ಸರ್ಕಾರದ ಟೀಕಾಕಾರರಿಗೆ ಭಾಷಣ ಮಾಡಲು ವಿಶ್ವವಿದ್ಯಾಲಯವು ಅನುಮತಿ ನಿರಾಕರಿಸಿದ ಕಾರಣಕ್ಕೆ ಸುದ್ದಿಯಾಗಿತ್ತು. ಹೆಸರು ಬಹಿರಂಗಪಡಿಸಲು ಬಯಸದ, ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಯೊಬ್ಬರು ‘ನಾವು ಯಾವಾಗಲೂ ಸ್ಥಾಪಕರ (ಗಾಂಧಿ) ಸರ್ವ ಧರ್ಮ ಸಮಭಾವ ಮತ್ತು ಸರಳತೆಯ ಮೌಲ್ಯಗಳನ್ನು ಅನುಸರಿಸಿಕೊಂಡು ಬಂದಿದ್ದೆವು. ಸಂಘ ಪರಿವಾರದ ಸಾರ್ವಜನಿಕ ಕಾರ್ಯಕ್ರಮಕ್ಕೆ ಕ್ಯಾಂಪಸ್‌ನಲ್ಲಿ ಅವಕಾಶ ನೀಡಿರುವುದು ಇದೇ ಮೊದಲು’ ಎಂದು ಹೇಳಿದ್ದಾರೆ.

> **ಅನಗತ್ಯ ವಿವಾದ. ಆರ್‌ಎಸ್‌ಎಸ್‌ನ 100ನೇ ವರ್ಷಾಚರಣೆಯ ಸಂದರ್ಭದಲ್ಲಿ ಪ್ರತಿ ಜಿಲ್ಲೆಯಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸುತ್ತಿದ್ದೇವೆ**
>
> **ವಿಜಯ್ ಠಾಕೇರ್**
> ವಕ್ತಾರ, ಆರ್‌ಎಸ್‌ಎಸ್, ಗುಜರಾತ್ ವಿಭಾಗ

> **ಇಲ್ಲಿ ಆರ್‌ಎಸ್‌ಎಸ್ ತನ್ನ ಕಾರ್ಯಕ್ರಮ ಆಯೋಜಿಸುವ ಮೂಲಕ ಗಾಂಧೀಜಿಯವರ ಸಿದ್ಧಾಂತ ಪಾಲಿಸಲು ಪ್ರಾರಂಭಿಸುತ್ತದೆಯೇ? ಅದು ತೋರುತ್ತಿಲ್ಲ**
>
> **ಸುದರ್ಶನ್ ಅಯ್ಯಂಗಾರ್**
> ಗುಜರಾತ್ ವಿದ್ಯಾಪೀಠದ ವಿಶ್ರಾಂತ ಕುಲಪತಿ

ವಿದ್ಯಾಪೀಠದ ಮಾಜಿ ಕುಲಪತಿ ಆಕ್ಷೇಪ

ಗುಜರಾತ್ ವಿದ್ಯಾಪೀಠದಲ್ಲಿ ಆರ್‌ಎಸ್‌ಎಸ್‌ನ ಕಾರ್ಯಕ್ರಮ ನಡೆಸಲು ಅನುಮತಿ ನೀಡಿರುವುದಕ್ಕೆ ಗಾಂಧಿವಾದಿ ಮತ್ತು ಗುಜರಾತ್ ವಿದ್ಯಾಪೀಠದ ವಿಶ್ರಾಂತ ಕುಲಪತಿ ಸುದರ್ಶನ್ ಅಯ್ಯಂಗಾರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಬಲಪಂಥೀಯ ಸಂಘಟನೆಯು ತನ್ನ ಪ್ರಾಬಲ್ಯ ತೋರಿಸಲು ಈ ಸ್ಥಳ ಆಯ್ದುಕೊಂಡಿದೆ’ ಎಂದು ಅಯ್ಯಂಗಾರ್ ಟೀಕಿಸಿದ್ದರೆ, ಕಾರ್ಯಕ್ರಮ ದಲ್ಲಿ ಚರ್ಚಿಸಲಿರುವ ವಿಷಯಗಳು ಮಹಾತ್ಮ ಗಾಂಧಿಯವರ ಸಿದ್ಧಾಂತಕ್ಕೆ ಬೆಸೆದುಕೊಂಡಿವೆ ಎಂದು ಆರ್‌ಎಸ್‌ಎಸ್ ಹೇಳಿದೆ.

ಮತ್ತೊಂದೆಡೆ, ವಿಶ್ವವಿದ್ಯಾನಿಲಯವು ‘ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗಾಗಿ ತನ್ನ ಆವರಣದ ಒಂದು ಭಾಗವನ್ನು ಹೊರಗಿನವರಿಗೆ ಬಾಡಿಗೆಗೆ ನೀಡಲಾಗುತ್ತದೆ. ಹೊರಗಿನ ಸಂಸ್ಥೆಗಳು ಆಯೋಜಿಸುವ ಕಾರ್ಯಕ್ರಮಗಳಿಗೂ ವಿ.ವಿಗೂ ಯಾವುದೇ ಸಂಬಂಧವಿಲ್ಲ’ ಎಂದು ಹೇಳಿಕೆಯಲ್ಲಿ ತಿಳಿಸಿದೆ.

‘ಆರ್‌ಎಸ್‌ಎಸ್‌ನ ಸಿದ್ಧಾಂತವು ಗಾಂಧಿ ತತ್ವಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಈ ಕಾರ್ಯಕ್ರಮ ಆಯೋಜಿಸಲು ಹಲವು ಸ್ಥಳಗಳಿದ್ದವು. ಆದರೂ ಗುಜರಾತ್ ವಿದ್ಯಾಪೀಠವು ಈಗ ತಮ್ಮ ಅಧೀನದಲ್ಲಿದೆ ಎಂದು ಸಾಬೀತುಪಡಿಸಲು ಹೊರಟಿರುವುದು ಸ್ಪಷ್ಟ’ ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಯ್ಯಂಗಾರ್ ಅವರು 2005 ರಿಂದ 2014 ರವರೆಗೆ ವಿದ್ಯಾಪೀಠದ ಕುಲಪತಿಯಾಗಿದ್ದರು. ಅವರು 2000 ರಿಂದ 2022 ರವರೆಗೆ ಸಂಸ್ಥೆಯ ಟ್ರಸ್ಟಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಕುಲಪತಿ ಮತ್ತು ಟ್ರಸ್ಟಿ ಆಗಿದ್ದ ತನ್ನ ಅವಧಿಯಲ್ಲಿ ವಿ.ವಿಯ ಆವರಣದಲ್ಲಿ ಆರ್‌ಎಸ್‌ಎಸ್‌ನ ಯಾವುದೇ ಕಾರ್ಯಕ್ರಮ ನಡೆದಿಲ್ಲವೆಂದು ಅಯ್ಯಂಗಾರ್ ಹೇಳಿದ್ದಾರೆ. ‘ಕಾರ್ಯಕ್ರಮದಲ್ಲಿ ಚರ್ಚಿಸುವ ವಿಷಯಗಳು ಮಹಾತ್ಮ ಗಾಂಧಿಯವರ ಸಿದ್ಧಾಂತಕ್ಕೆ ಅನುಗುಣವಾಗಿವೆ. ಹೀಗಿರುವಾಗ ಈ ಕಾರ್ಯಕ್ರಮವು ಗಾಂಧೀಜಿಯವರ ಮೌಲ್ಯಗಳಿಗೆ ಹೇಗೆ ವಿರುದ್ಧವಾಗಿದೆ’ ಎಂದು ಆರ್‌ಎಸ್‌ಎಸ್ ಗುಜರಾತ್ ಘಟಕದ ವಕ್ತಾರ ವಿಜಯ್ ಠಾಕೇರ್ ಪ್ರಶ್ನಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರಿಂದ ಕಾಂಗ್ರೆಸ್ ಕಚೇರಿ ಧ್ವಂಸ

ಪ್ರಜಾವಾಣಿ ವಾರ್ತೆ

ಮುಂಬೈ: ಇಲ್ಲಿನ ಆಜಾದ್ ಮೈದಾನದಲ್ಲಿರುವ ಮುಂಬೈ ಪ್ರಾದೇಶಿಕ ಕಾಂಗ್ರೆಸ್ ಸಮಿತಿ (ಎಂಆರ್‌ಸಿಸಿ) ಕಚೇರಿಯ ಮುಂಭಾಗ ಭಾರತೀಯ ಜನತಾ ಯುವ ಮೋರ್ಚಾ (ಬಿಜೆವೈಎಂ) ಗುರುವಾರ ನಡೆಸಿದ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿತ್ತು.

ಪ್ರತಿಭಟನಕಾರರು ಕಾಂಗ್ರೆಸ್ ಕಚೇರಿ ಯನ್ನು ಧ್ವಂಸಗೊಳಿಸಿದರು. ಗುಂಪನ್ನು ಚದುರಿ ಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ಅಂಬೇಡ್ಕರ್ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸುಳ್ಳು ಪ್ರಚಾರ ನಡೆಸುತ್ತಿದೆ ಹಾಗೂ ಸಂಸತ್ತಿನ ಅಧಿವೇಶನದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅಶಿಸ್ತಿನಿಂದ ವರ್ತಿಸಿದ್ದಾರೆ ಎಂದು ಆರೋಪಿಸಿ ಯುವ ಮೋರ್ಚಾ ಪ್ರತಿಭಟನೆ ಆಯೋಜಿಸಿತ್ತು.

ಕಾಂಗ್ರೆಸ್‌ನ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರ ಭಾವಚಿತ್ರಗಳಿಗೆ ಪ್ರತಿಭಟನಕಾರರು ಮಸಿ ಎರಚಿದರು.

‘ನರೇಂದ್ರ ಮೋದಿ ಮತ್ತು ಅಮಿತ್ ಶಾ ವಿರುದ್ಧ ರಾಹುಲ್ ಗಾಂಧಿ ಅವರು ಹೋರಾಡುತ್ತಿರುವುದನ್ನು ಸಹಿಸದ ಬಿಜೆಪಿ ಗೂಂಡಾಗಳು ನಮ್ಮ ಕಚೇರಿಯನ್ನು ಧ್ವಂಸಗೊಳಿಸಿದ್ದಾರೆ’ ಎಂದು ಮುಂಬೈ ಕಾಂಗ್ರೆಸ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಅಂಬೇಡ್ಕರ್ ದೇವರಿಗಿಂತ ಕಡಿಮೆಯಲ್ಲ: ಕೇಜ್ರಿವಾಲ್



ನವದೆಹಲಿ (ಪಿಟಿಐ): ‘ಆಧುನಿಕ ಭಾರತದಲ್ಲಿ ಅಂಬೇಡ್ಕರ್ ಅವರು ದೇವರಿಗಿಂತ ಕಡಿಮೆಯಲ್ಲ’ ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ತಿಳಿಸಿದರು.

ಅಂಬೇಡ್ಕರ್ ಕುರಿತು ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ಖಂಡಿಸಿದ ಅವರು, ‘ಅವರಾಡಿದ ಮಾತುಗಳು ಬಹಳ ನೋವು ತರಿಸುವಂತಹವು. ಅವರು ಬಾಬಾ ಸಾಹೇಬರನ್ನು ಎಷ್ಟು ದ್ವೇಷಿಸುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ’ ಎಂದರು. ‘ಅಮಿತ್ ಶಾ ಅವರಿಂದ ಬಾಯಿ ತಪ್ಪಿ ಈ ಮಾತುಗಳು ಬಂದಿರಬಹುದು ಎಂದು ಮೊದಲಿಗೆ ಭಾವಿಸಿದ್ದೆವು. ಆದರೆ ಮರು ದಿನ ಪ್ರಧಾನಿ ಮೋದಿ ಅವರೂ ಶಾ ಅವರನ್ನು ಸಮರ್ಥಿಸಿಕೊಂಡರು. ಇದನ್ನು ಗಮನಿಸಿದರೆ ಅವರು ಉದ್ದೇಶಪೂರ್ವಕವಾಗಿಯೇ ಹೇಳಿದ್ದಾರೆ ಎನಿಸುತ್ತದೆ’ ಎಂದು ಪ್ರತಿಕ್ರಿಯಿಸಿದರು. ಭಗವಾನ್ ವಾಲ್ಮೀಕಿ ಮಂದಿರಕ್ಕೆ ಭೇಟಿ ನೀಡಿದ್ದ ವೇಳೆ ಅವರು ಮಾತನಾಡಿದರು.

‘ನಿವೃತ್ತಿ ನಿರ್ಧಾರ ಆ ಕ್ಷಣದ್ದು’

ಆಸ್ಟ್ರೇಲಿಯಾದಲ್ಲಿ ವಿದಾಯ ಘೋಷಿಸಿ ತವರು ಚೆನ್ನೈ ತಲುಪಿದ ಆರ್. ಅಶ್ವಿನ್

ಚೆನ್ನೈ (ಪಿಟಿಐ): ಅಲ್ಲಿ ಪುಷ್ಪವೃಷ್ಟಿಯಿತ್ತು. ಸ್ವಾಗತಿಸಲು ಬಂದ ಬಹಳಷ್ಟು ಜನರ ಮುಖದಲ್ಲಿ ಮಂದಹಾಸವಿತ್ತು. ಲೈವ್ ಬ್ಯಾಂಡ್ ಕೂಡ ಇತ್ತು. ಆಸ್ಟ್ರೇಲಿಯಾದಲ್ಲಿ ಬುಧವಾರ ಟೆಸ್ಟ್ ಕ್ರಿಕೆಟ್ ಸರಣಿಯ ಮಧ್ಯೆಯೇ ಹಠಾತ್ ನಿವೃತ್ತಿ ಘೋಷಿಸಿದ್ದ ರವಿಚಂದ್ರನ್ ಅಶ್ವಿನ್ ಗುರುವಾರ ಇಲ್ಲಿಗೆ ಬಂದಾಗ ಇವೆಲ್ಲಾ ಇದ್ದವು. ‘ಇದು ತೀರಾ ಯೋಚಿಸದೆ ಆ ಕ್ಷಣಕ್ಕೆ ಕೈಗೊಂಡ ನಿರ್ಧಾರ. ಒಂದಿಷ್ಟೂ ವಿಷಾದವಿಲ್ಲದೇ ವಿದಾಯ ಹೇಳಿದ್ದೇನೆ’ ಎಂದು ಸ್ಟಾರ್ ಆಫ್ ಸ್ಪಿನ್ನರ್ ಪ್ರತಿಕ್ರಿಯಿಸಿದರು.

ಗುರುವಾರ ಬೆಳಿಗ್ಗೆ ಚೆನ್ನೈಗೆ ಬಂದಿಳಿದಾಗ ಅವರನ್ನು ರಾಜ್ಯ ಕ್ರಿಕೆಟ್ ಸಂಸ್ಥೆ ಪದಾಧಿಕಾರಿಗಳು ಸುತ್ತುವರಿದರು. 38 ವರ್ಷ ವಯಸ್ಸಿನ ಅಶ್ವಿನ್ ಅಲ್ಲಿ ಕಾಯುತ್ತಿದ್ದ ಮಾಧ್ಯಮದವರೊಂದಿಗೂ ಮಾತನಾಡಲು ಬಯಸಲಿಲ್ಲ. ತಮಗಾಗಿ ಕಾಯುತ್ತಿದ್ದ ಕಾರಿನತ್ತ ಧಾವಿಸಿದರು. ಪತ್ನಿ ಪ್ರೀತಿ, ಇಬ್ಬರು ಪುತ್ರಿಯರು ಕಾರಿನಲ್ಲಿದ್ದರು.

ಮನೆ ತಲುಪಿದ ತಕ್ಷಣ ಅವರಿಗೆ ಹೂವಿನ ಹಾರಗಳೊಂದಿಗೆ ಬರಮಾಡಿಕೊಳ್ಳಲಾಯಿತು. ತಂದೆ–ತಾಯಿ ಅವರನ್ನು ಆಲಿಂಗಿಸಿದರು. ಕೆಲವರು ಅಭಿನಂದಿಸಿದರು. ಮತ್ತೆ ಕೆಲವರು ಹಸ್ತಾಕ್ಷರ ಪಡೆದರು. ಆದರೆ ಮನೆಯ ಬಳಿ ಕಾಯುತ್ತಿದ್ದ ಪತ್ರಿಕಾಮಾಧ್ಯಮದವರನ್ನು ನಿರಾಸೆಗೊಳಿಸಲಿಲ್ಲ. ತಮ್ಮ ನಿವೃತ್ತಿ ನಿರ್ಧಾರದ ಬಗ್ಗೆ ಮನಬಿಚ್ಚಿ ಮಾತನಾಡಿದರು.

‘ಇದು ಬಹಳಷ್ಟು ಮಂದಿಗೆ ಭಾವನಾತ್ಮಕ ಎನಿಸಬಹುದು. ಕೆಲ ಸಮಯದ ನಂತರ ಕೈಗೊಳ್ಳಬೇಕಾದ ನಿರ್ಧಾರವೂ ಆಗಿತ್ತು. ಆದರೆ ಈಗ ನನಗೆ ನಿರಾಳ ಭಾವ ಮೂಡಿದೆ. ತೃಪ್ತಿಯೂ ಇದೆ. ಅದು ಆ ಕ್ಷಣಕ್ಕೆ ಕೈಗೊಂಡ ನಿರ್ಧಾರ. ಕೆಲದಿನಗಳಿಂದ ಈ ವಿಷಯ ನನ್ನ ಮನದಲ್ಲಿ ಸುಳಿದಾಡುತಿತ್ತು. ಅದನ್ನು ಘೋಷಿಸಿಬಿಟ್ಟೆ’ ಎಂದು ಬ್ರಿಸ್ಬೇನ್‌ನಲ್ಲಿ ಡ್ರಾ ಆದ ಟೆಸ್ಟ್ ಪಂದ್ಯದಲ್ಲಿ ತಮ್ಮ ನಿರ್ಧಾರದ ಬಗ್ಗೆ ಅಶ್ವಿನ್ ಪ್ರಸ್ತಾಪಿಸಿದರು.

‘ನನ್ನ ಮಟ್ಟಿಗೆ ಇದು (ನಿವೃತ್ತಿ) ದೊಡ್ಡ ನಿರ್ಧಾರವೇನಲ್ಲ. ನಾನು ಹೊಸ ಹಾದಿಯೊಂದರತ್ತ ಸಾಗಬೇಕೆಂದಿದ್ದೇನೆ’ ಎಂದು ಅಶ್ವಿನ್ ಮುಂದುವರಿಸಿದರು.

ರಾಷ್ಟ್ರೀಯ ತಂಡದ ನಾಯಕನಾಗದ್ದಕ್ಕೆ ವಿಷಾದವಿದೆಯೇ ಎಂಬ ಪ್ರಶ್ನೆಗೆ ಅವರ ಉತ್ತರ– ‘ಆ ಬಗ್ಗೆ ಈಗೇನೂ ಮಾಡುವಂತಿಲ್ಲ. ನನಗೆ ಅಂಥ ವಿಷಾದವಿಲ್ಲ. ವಾಸ್ತವದಲ್ಲಿ ಒಂದಿಷ್ಟೂ ವಿಷಾದದ ಭಾವವಿಲ್ಲ’ ಎಂದು 537 ಟೆಸ್ಟ್ ವಿಕೆಟ್‌ಗಳನ್ನು ಗಳಿಸಿರುವ ಆಫ್ ಸ್ಪಿನ್ನರ್ ಸ್ಪಷ್ಟಮಾತುಗಳಲ್ಲಿ ಹೇಳಿದರು.

‘ಇಷ್ಟೊಂದು ಮಂದಿ ಇಲ್ಲಿಗೆ ಬರುತ್ತಾರೆಂದು ಯೋಚಿಸಿರಲಿಲ್ಲ. ಮೌನವಾಗಿ ಮನೆ ಸೇರೋಣ ಎಂದುಕೊಂಡಿದ್ದೆ. ನಾನು ಸಾಕಷ್ಟು ವರ್ಷ ಟೆಸ್ಟ್ ಆಡಿದ್ದೇನೆ. ಆದರೆ 2011ರ ವಿಶ್ವಕಪ್ ಗೆಲುವಿನ ನಂತರ ಇದೇ ಮೊದಲ ಬಾರಿ ಇಂಥ ಸ್ವಾಗತ ದೊರಕಿದೆ’ ಎಂದರು.

ಗುರಿಗಳಿಲ್ಲ: ‘ಈಗ ನನ್ನ ಮುಂದೆ ಯಾವುದೇ ಗುರಿಗಳಿಲ್ಲ. ಆರಾಮವಾಗಿ ಇರಬೇಕೆಂದುಕೊಂಡಿದ್ದೇನೆ. ಸುಮ್ಮನಿರುವುದು ನನ್ನ ಪಾಲಿಗೆ ಕಷ್ಟ. ಈಗ ಅದನ್ನು ಪ್ರಯತ್ನಿಸುತ್ತಿರುವೆ’ ಎಂದರು.

ಅವರು ಐಪಿಎಲ್ ಸೇರಿದಂತೆ ಕ್ಲಬ್ ಕ್ರಿಕೆಟ್‌ನಲ್ಲಿ ಮುಂದುವರಿಯಲಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್‌ಗೆ ಆಡಲಿದ್ದಾರೆ. ಭಾರತ ತಂಡದ ಕ್ರಿಕೆಟರ್ ಆಗಿ ಅಶ್ವಿನ್ ದಿನಗಳು ಮುಗಿದಿವೆ. ಆದರೆ ಕ್ರಿಕೆಟರ್ ಆಗಿ ಅಶ್ವಿನ್ ಮುಂದುವರಿಯಲಿದ್ದಾರೆ’ ಎಂದು ಪುನರುಚ್ಚರಿಸಿದರು

ಚೆನ್ನೈ ವಿಮಾನ ನಿಲ್ದಾಣಕ್ಕೆ ಬಂದಿಳಿದ ರವಿಚಂದ್ರನ್ ಅಶ್ವಿನ್ ಜೊತೆ ತಮಿಳುನಾಡು ಕ್ರಿಕೆಟ್ ಸಂಸ್ಥೆ ಪದಾಧಿಕಾರಿಗಳಿದ್ದರು –ಪಿಟಿಐ ಚಿತ್ರ

ಆತ್ಮಗೌರವಕ್ಕೆ ಧಕ್ಕೆ ಆಗಿರಲೂಬಹುದು: ತಂದೆ

ಚೆನ್ನೈ (ಪಿಟಿಐ): ‘ಮಗನ ಹಠಾತ್ ನಿವೃತ್ತಿ ನಿರ್ಧಾರ ತಮ್ಮನ್ನೂ ಅಚ್ಚರಿಗೆ ಕೆಡವಿತು. ಆದರೆ ಅವರ ಆ ನಿರ್ಧಾರದ ಹಿಂದೆ ಸ್ವಾಭಿಮಾನಕ್ಕೆ ಕುಂದುಂಟಾಗುವ ಪ್ರಸಂಗ ಒಳಗೊಂಡಿರುವ ಸಾಧ್ಯತೆಯೂ ಇದೆ’ ಎಂಬ ಸ್ಫೋಟಕ ಸುಳಿವನ್ನು ತಂದೆ ರವಿಚಂದ್ರನ್ ನೀಡಿದ್ದಾರೆ.

‘ಕೊನೆಯ ಗಳಿಗೆಯಲ್ಲಿ ನನಗೆ ಈ ಬಗ್ಗೆ (ನಿವೃತ್ತಿ) ಗೊತ್ತಾಯಿತು. ಅವರು ಈ ರೀತಿ ನಿರ್ಧಾರಕ್ಕೆ ಬರಲು ಹಲವು ಕಾರಣಗಳಿರಬಹುದು. ಅದು ಅಶ್ವಿನ್‌ಗೇ ಗೊತ್ತು. ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಿರಲೂಬಹುದು’ ಎಂದು ರವಿಚಂದ್ರನ್ ಅವರು ಸಿಎನ್‌ಎನ್ ನ್ಯೂಸ್ 18 ವಾಹಿನಿಗೆ ತಿಳಿಸಿದ್ದಾರೆ.

ಪರ್ತ್‌ನಲ್ಲಿ ನಡೆದ ಮೊದಲ ಟೆಸ್ಟ್‌ಗೆ 537 ವಿಕೆಟ್‌ಗಳನ್ನು ಪಡೆದಿರುವ ಆಫ್ ಸ್ಪಿನ್ನರ್ ಅಶ್ವಿನ್ ಅವರನ್ನು ಕೂರಿಸಿ ವಾಷಿಂಗ್ಟನ್ ಸುಂದರ್ ಅವರನ್ನು ಆಡಿಸಲಾಗಿತ್ತು. ನಂತರ ಆಡಿಲೇಡ್‌ನ ಪಿಂಕ್‌ಬಾಲ್ ಟೆಸ್ಟ್‌ನಲ್ಲಿ ಹಿರಿಯ ಬೌಲರ್‌ಗೆ ಅವಕಾಶ ನೀಡಲಾಗಿತ್ತು. ಆದರೆ ಬ್ರಿಸ್ಬೇನ್‌ನಲ್ಲಿ ನಡೆದ ಮೂರನೇ ಟೆಸ್ಟ್‌ನಲ್ಲಿ ಅವರಿಗೆ ಮತ್ತೆ ಬೆಂಚ್ ಗತಿಯಾಗಿತ್ತು.

ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತಿರುವ ಕಾರಣ ಅಶ್ವಿನ್ ನಿವೃತ್ತಿ ಹೇಳಬಹುದು ಎಂದು ಕುಟುಂಬವು ಕೆಲಸಮಯದಿಂದ ನಿರೀಕ್ಷಿಸಿತ್ತು ಎಂದು ರವಿಚಂದ್ರನ್ ಹೇಳಿದರೂ, ಅದರ ನಿರ್ದಿಷ್ಟ ಸ್ವರೂಪ ಬಿಡಿಸಿ ಹೇಳಲಿಲ್ಲ.

ಅಶ್ವಿನ್ ಸ್ಪಷ್ಟನೆ: ‘ನನ್ನ ತಂದೆ ಮಾಧ್ಯಮಗಳ ಮುಂದೆ ಮಾತನಾಡಲು ಅನುಭವ ಹೊಂದಿಲ್ಲ. ಅವರ ಪ್ರತಿಕ್ರಿಯೆಯನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು’ ಎಂದು ಹೇಳುವ ಮೂಲಕ ಅಶ್ವಿನ್, ತಂದೆಯ ಹೇಳಿಕೆ ವಿವಾದಕ್ಕೆ ತಿರುಗದಂತೆ ತಿಳಿಗೊಳಿಸುವ ಪ್ರಯತ್ನ ನಡೆಸಿದ್ದಾರೆ.

‘ನೀವೆಲ್ಲಾ ಅವರನ್ನು ಕ್ಷಮಿಸಿ. ಅವರನ್ನು ಅವರ ಪಾಡಿಗೆ ಇರಲು ಬಿಡಿ ಎಂದು ವಿನಂತಿಸುವೆ’ ಎಂದು ಅಶ್ವಿನ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ಆಸ್ಟ್ರೇಲಿಯಾ ಪಾಲಿಗೆ ಮುಳ್ಳಾಗಿದ್ದರು: ಸ್ಟಾರ್ಕ್

ಬ್ರಿಸ್ಬೇನ್ (ಪಿಟಿಐ): ನಿವೃತ್ತಿ ಘೋಷಿಸಿರುವ ಆರ್.ಅಶ್ವಿನ್ ಬಗ್ಗೆ ಗುಣಗಾನ ಮಾಡಿರುವ ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್, ‘ಕೆಲವು ಸ್ಮರಣೀಯ ಪಂದ್ಯಗಳಲ್ಲಿ ಅವರು ತಮ್ಮ ತಂಡದ ಪಾಲಿಗೆ ಮುಳ್ಳಾಗಿದ್ದರು’ ಎಂದೂ ಹೇಳಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧ 2011 ರಿಂದ 2024ರ ಅವಧಿಯಲ್ಲಿ 23 ಟೆಸ್ಟ್‌ಗಳನ್ನು ಆಡಿರುವ ಅಶ್ವಿನ್ 115 ವಿಕೆಟ್‌ಗಳನ್ನು ಪಡೆದಿದ್ದಾರೆ. ಒಮ್ಮೆ 10 ವಿಕೆಟ್ ಹಾಗೂ ಏಳು ಬಾರಿ ಐದು ವಿಕೆಟ್‌ಗಳ ಗೊಂಚಲು ಪಡೆದಿದ್ದಾರೆ. 2020–21ರ ಅಮೋಘ ಸರಣಿಯ ಜಯದ ಹಿಂದೆ ಅವರ ಪಾತ್ರ ಪ್ರಮುಖ ಆಗಿತ್ತು.

‘ಅಶ್ವಿನ್ ತವರು ಮತ್ತು ಹೊರಗೆ ನಮ್ಮ ತಂಡದ ಪಾಲಿಗೆ ಕೆಲಮಟ್ಟಿಗೆ ಮುಳ್ಳಾಗಿದ್ದರು’ ಎಂದು ಸ್ಟಾರ್ಕ್ ಎಸ್‌ಇಎನ್ ರೇಡಿಯೊಗೆ ತಿಳಿಸಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧ ಸರಣಿ ಗೆದ್ದ ಭಾರತ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಅಂತಿಮ ಪಂದ್ಯದಲ್ಲಿ ಮಿಂಚಿದ ಮಂದಾನ, ರಿಚಾ

ಭಾರತಕ್ಕೆ ಭರ್ಜರಿ ಜಯ, ಸರಣಿ

ನವಿ ಮುಂಬೈ (ಪಿಟಿಐ): ಅತ್ಯುತ್ತಮ ಲಯದಲ್ಲಿರುವ ಹಂಗಾಮಿ ನಾಯಕಿ ಸ್ಮೃತಿ ಮಂದಾನ (77, 47ಎ) ಅರ್ಧ ಶತಕ ಗಳಿಸಿದ ಮೇಲೆ ರಿಚಾ ಘೋಷ್ (54, 21ಎ) ವೇಗದ ಅರ್ಧ ಶತಕದ ವಿಶ್ವದಾಖಲೆ ಸರಿಗಟ್ಟಿದರು. ನಂತರ ಬೌಲರ್‌ಗಳು ಸಾಂಘಿಕ ಪ್ರದರ್ಶನ ನೀಡಿದರು. ಇದರಿಂದ ಭಾರತ ತಂಡ ಗುರುವಾರ ನಡೆದ ಮಹಿಳಾ ಟಿ20 ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 60 ರನ್‌ಗಳಿಂದ ಸೋಲಿಸಿತು.

ಆ ಮೂಲಕ ಸರಣಿಯನ್ನು 2–1 ರಿಂದ ಗೆದ್ದುಕೊಂಡಿತು. ಮೊದಲ ಪಂದ್ಯದಲ್ಲಿ ಭಾರತ ಜಯಗಳಿಸಿತ್ತು. ಎರಡನೇ ಪಂದ್ಯದಲ್ಲಿ ಪ್ರವಾಸಿ ತಂಡ ಗೆದ್ದು ಸರಣಿ ಸಮನಾಗಿತ್ತು.

ಡಾ.ಡಿ.ವೈ. ಪಾಟೀಲ ಕ್ರೀಡಾ ಅಕಾಡೆಮಿ ಮೈದಾನದಲ್ಲಿ ಮೊದಲು ಆಡಿದ ಭಾರತ 20 ಓವರುಗಳಲ್ಲಿ 4ಕ್ಕೆ 217 ರನ್‌ಗಳ ಭರ್ಜರಿ ಮೊತ್ತ ಗಳಿಸಿತು. ಇದು ಟಿ20 ಪಂದ್ಯಗಳಲ್ಲಿ ಭಾರತ ದಾಖಲಿಸಿದ ಅತ್ಯಧಿಕ ಮೊತ್ತವೆನಿಸಿತು. ಈ ವರ್ಷದ ಆರಂಭದಲ್ಲಿ ಏಷ್ಯಾಕಪ್ ಟೂರ್ನಿಯಲ್ಲಿ ಯುಎಇ ವಿರುದ್ಧ ಗಳಿಸಿದ 5 ವಿಕೆಟ್‌ಗೆ 201 ರನ್‌ಗಳು ಹಿಂದಿನ ಗರಿಷ್ಠ ಎನಿಸಿತ್ತು. ಇದಕ್ಕೆ ಉತ್ತರವಾಗಿ, ವೆಸ್ಟ್ ಇಂಡೀಸ್ ಆರಂಭದಿಂದಲೇ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡು ಅಂತಿಮವಾಗಿ 9 ವಿಕೆಟ್‌ಗೆ 157 ರನ್ ಗಳಿಸಲಷ್ಟೇ ಶಕ್ತವಾಯಿತು. ಎಡಗೈ ಸ್ಪಿನ್ನರ್ ರಾಧಾ ಯಾದವ್ ಕೊನೆಯ ನಾಲ್ಕು ವಿಕೆಟ್ ಪಡೆದರು.

ಮೊದಲು ಬ್ಯಾಟಿಂಗ್‌ಗೆ ಕಳಿಸಲ್ಪಟ್ಟ ಭಾರತ ತಂಡವನ್ನು ಆರಂಭ ಆಟಗಾರ್ತಿ ಮಂದಾನ ಎರಡು ಉತ್ತಮ ಜೊತೆಯಾಟಗಳ ಮೂಲಕ ದೊಡ್ಡ ಮೊತ್ತ ಗಳಿಸಲು ಬುನಾದಿ ಹಾಕಿಕೊಟ್ಟರು. ಅವರ ಆಟದಲ್ಲಿ ಒಂದು ಸಿಕ್ಸರ್, 13 ಬೌಂಡರಿಗಳಿದ್ದವು. ಇದು ಅವರಿಗೆ ಸತತ ಮೂರನೇ ಅರ್ಧ ಶತಕ. ಈ ವರ್ಷ ಈ ಮಾದರಿಯಲ್ಲಿ ಎಂಟನೇ ಅರ್ಧ ಶತಕ. ಎರಡನೇ ವಿಕೆಟ್‌ಗೆ ಅವರು ಜೆಮಿಮಾ ರೋಡ್ರಿಗಸ್ (39) ಜೊತೆ ಕೇವಲ 55 ಎಸೆತಗಳಲ್ಲಿ 98 ರನ್ ಸೇರಿಸಿದರು. ನಂತರ ರಾಘವಿ ಬಿಷ್ಟ್ (ಅಜೇಯ 39) ಜೊತೆ ಮೂರನೇ ವಿಕೆಟ್‌ಗೆ 44 ರನ್ ಸೇರಿಸಿದರು. ರಾಘವಿ ಮತ್ತು ರಿಚಾ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಲಗುಬಗನೇ 70 ರನ್ ಪೇರಿಸಿದರು.

ಸ್ಮೃತಿ ನಿರ್ಗಮನ ಬಳಿಕ ಕ್ರೀಸಿಗಿಳಿದ ರಿಚಾ ಘೋಷ್ ಮಿಂಚಿನ ಆಟವಾಡಿ ಬರೇ 21 ಎಸೆತಗಳಲ್ಲಿ 3 ಬೌಂಡರಿ, 5 ಸಿಕ್ಸರ್‌ಗಳಿದ್ದ 54 ರನ್ ಸಿಡಿಸಿದರು. ಆ ಹಾದಿಯಲ್ಲಿ ಮಹಿಳಾ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಮತ್ತು ಆಸ್ಟ್ರೇಲಿಯಾದ ಫೋಬಿ ಲಿಚ್‌ಫೀಲ್ಡ್ ಹೆಸರಿನಲ್ಲಿದ್ದ ಅತಿ ವೇಗದ ಅರ್ಧ ಶತಕದ ದಾಖಲೆ (18 ಎಸೆತ) ಸರಿಗಟ್ಟಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರುಗಳಲ್ಲಿ 4 ವಿಕೆಟ್‌ಗೆ 217 (ಸ್ಮೃತಿ ಮಂದಾನ 77, ಜೆಮಿಮಾ ರೋಡ್ರಿಗಸ್ 39, ರಾಘವಿ ಬಿಷ್ಟ್ ಔಟಾಗದೇ 39, ರಿಚಾ ಘೋಷ್ 51); ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 157 (ಡಿಯಾಂಡ್ರ ಡಾಟಿನ್ 25, ಚಿನೆಲಿ ಹೆನ್ರಿ 43; ರಾಧಾ ಯಾದವ್ 29ಕ್ಕೆ4). ಪಂದ್ಯದ ಆಟಗಾರ್ತಿ: ರಿಚಾ ಘೋಷ್. ಸರಣಿಯ ಆಟಗಾರ್ತಿ: ಸ್ಮೃತಿ ಮಂದಾನ

ಮುಖ್ಯಾಂಶಗಳು

- ವೇಗದ ಅರ್ಧ ಶತಕದ ವಿಶ್ವದಾಖಲೆ ಸರಿಗಟ್ಟಿದ ರಿಚಾ ಘೋಷ್
- ಟಿ20 ಪಂದ್ಯಗಳಲ್ಲಿ ಭಾರತದ (217) ಅತ್ಯಧಿಕ ಮೊತ್ತ
- ನಾಲ್ಕು ವಿಕೆಟ್ ಪಡೆದ ರಾಧಾ ಯಾದವ್

ತಟಸ್ಥ ತಾಣದಲ್ಲಿ ಆಡಲಿದೆ ಭಾರತ

ದುಬೈ (ಪಿಟಿಐ): ಮುಂದಿನ ವರ್ಷ ನಿಗದಿಯಾಗಿರುವ ಚಾಂಪಿಯನ್ಸ್ ಟ್ರೋಫಿಗೆ ಸಂಬಂಧಿಸಿದ ಗೊಂದಲಗಳು ಕೊನೆಗೂ ಬಗೆಹರಿದಿವೆ. ಭಾರತ ತಂಡವು ಈ ಐಸಿಸಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ತನ್ನ ಎಲ್ಲ ಪಂದ್ಯಗಳನ್ನು ಆತಿಥೇಯ ಪಾಕಿಸ್ತಾನದಲ್ಲಿ ಆಡುವ ಬದಲು ತಟಸ್ಥ ಸ್ಥಳದಲ್ಲಿ ಆಡಲಿದೆ.

2027ರವರೆಗೆ ಭಾರತದ ಆತಿಥ್ಯದಲ್ಲಿ ನಡೆಯುವ ಐಸಿಸಿ ಟೂರ್ನಿಗಳಲ್ಲೂ ಪಾಕಿಸ್ತಾನ ತಂಡವು ತನ್ನ ಪಂದ್ಯಗಳನ್ನು ತಟಸ್ಥ ಸ್ಥಳದಲ್ಲಿ (ಹೈಬ್ರಿಡ್ ಮಾದರಿ) ಆಡಲಿದೆ. ಈ ಏರ್ಪಾಡು ಪಾಕಿಸ್ತಾನದ ಆತಿಥ್ಯದಲ್ಲಿ ನಡೆಯುವ 2028ರ ಮಹಿಳಾ ಟಿ20 ವಿಶ್ವಕಪ್‌ವರೆಗೆ ಚಾಲ್ತಿಯಲ್ಲಿ ಇರಲಿದೆ.

ಅಧಿಕೃತವಾಗಿ ಹೇಳಿಕೆ ಇನ್ನೂ ಹೊರಬೀಳದಿದ್ದರೂ, ಭಾರತ ತಂಡವು ಮುಂದಿನ ಫೆಬ್ರುವರಿ– ಮಾರ್ಚ್ ತಿಂಗಳಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ತನ್ನ ಎಲ್ಲ ಪಂದ್ಯಗಳನ್ನು ಯುಎಇಯಲ್ಲಿ ಆಡುವ ಸಾಧ್ಯತೆಯಿದೆ.

‘2024 ರಿಂದ 2027ರವರೆಗಿನ ಅವಧಿಯಲ್ಲಿ ನಡೆಯುವ ಎಲ್ಲ ಟೂರ್ನಿಗಳಲ್ಲಿ ಭಾರತ ಮತ್ತು ಪಾಕಿಸ್ತಾನದ ಪಂದ್ಯಗಳು ತಟಸ್ಥ ಸ್ಥಳದಲ್ಲಿ ನಡೆಯಲಿವೆ. ಈ ತಟಸ್ಥ ಸ್ಥಳವನ್ನು ಆತಿಥೇಯ ದೇಶ ಶಿಫಾರಸು ಮಾಡಲಿದೆ’ ಎಂದು ಐಸಿಸಿ ಹೇಳಿಕೆ ತಿಳಿಸಿದೆ.

ಭಾರತದಲ್ಲಿ ಮುಂದಿನ ವರ್ಷ ನಡೆಯಲಿರುವ ಮಹಿಳಾ ವಿಶ್ವಕಪ್ ಟೂರ್ನಿಗೆ ಮತ್ತು ಭಾರತ ಹಾಗೂ ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ 2026ರಲ್ಲಿ ನಡೆಯುವ ಟಿ20 ವಿಶ್ವಕಪ್‌ಗೂ ಇದೇ ವ್ಯವಸ್ಥೆ ಅನ್ವಯವಾಗಲಿದೆ.

‘ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತದ ಪಂದ್ಯಗಳು ಯುಎಇಯಲ್ಲಿ ನಡೆಯುವ ಸಾಧ್ಯತೆಗಳಿವೆ. ಭಾರತದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್‌ಗೆ ಸಂಬಂಧಿಸಿ ಭಾರತ– ಪಾಕಿಸ್ತಾನದ ಪಂದ್ಯ ಶ್ರೀಲಂಕಾದಲ್ಲಿ ನಡೆಯಬಹುದು’ ಎಂದು ಮೂಲವೊಂದು ತಿಳಿಸಿದೆ.

ರಾಷ್ಟ್ರೀಯ ಟಿಟಿ: 17 ವರ್ಷದೊಳಗಿನ ಯುವ ವಿಭಾಗ

ಪ್ರಿಯಾನುಜ್, ಸಿಂಡ್ರೆಲಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ಸಾಂನ ಪ್ರಿಯಾನುಜ್ ಭಟ್ಟಾಚಾರ್ಯ ಮತ್ತು ಪಶ್ಚಿಮ ಬಂಗಾಳದ ಸಿಂಡ್ರೆಲಾ ದಾಸ್ ಅವರು ಯುಟಿಟಿ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್ ಷಿಪ್‌ನಲ್ಲಿ ಕ್ರಮವಾಗಿ 17 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು.

ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಐದನೇ ದಿನವಾದ ಗುರುವಾರ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಪ್ರಿಯಾನುಜ್ 10-12, 11-6, 10-12, 13-11, 12-10ರಿಂದ ತಮಿಳುನಾಡಿನ ಅಭಿನಂದ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಪ್ರಿಯಾನುಜ್ 11-4, 11-8, 12-10ರಿಂದ ಅಸ್ಸಾಂನ ದಿವ್ಯಜ್ ರಾಜಖೋವಾ ರಾಯ್ ಅವರನ್ನು ಮಣಿಸಿದರೆ, ಅಭಿನಂದ್ 11-7, 9-11, 11-5, 11-9 ರಿಂದ ಪಶ್ಚಿಮ ಬಂಗಾಳದ ಪುನೀತ್ ಬಿಸ್ವಾಸ್ ಅವರನ್ನು ಸೋಲಿಸಿದ್ದರು.

ಕರ್ನಾಟಕದ ಸಿದ್ಧಾಂತ್ ಧರಿವಾಲ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ, ನವರಂಗ ಅಥರ್ವ ಮತ್ತು ಧರಿವಾಲ್ ಸಿದ್ಧಾಂತ್ ಅವರು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು.

ಸಿಂಡ್ರೆಲಾ ಚಾಂಪಿಯನ್: ಬಾಲಕಿಯರ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸಿಂಡ್ರೆಲಾ 11-8, 11-3, 11-9ರಿಂದ ಮಹಾರಾಷ್ಟ್ರದ ದಿವ್ಯಾಂಶಿ ಭೌಮಿಕ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಸಿಂಡ್ರೆಲಾ 5-11, 11-5, 11-7, 11-9ರಿಂದ ತಮಿಳುನಾಡಿನ ಅನನ್ಯಾ ಮುರಳೀಧರನ್ ವಿರುದ್ಧ; ದಿವ್ಯಾಂಶಿ 11-7, 11-8, 9-11, 11-6ರಿಂದ ಉತ್ತರ ಪ್ರದೇಶದ ಅವನಿ ತ್ರಿಪಾಠಿ ವಿರುದ್ಧ ಗೆಲುವು ಸಾಧಿಸಿದ್ದರು.

ಕರ್ನಾಟಕದ ಹಿಮಾಂಶಿ ಚೌಧರಿ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 0–3ರಿಂದ ಕಾವ್ಯಾ ಭಟ್ ಅವರಿಗೆ ಮಣಿದರು.

15 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನ ಗುಂಪು ಹಂತದ ಪಂದ್ಯಗಳಲ್ಲಿ ಸಿದ್ಧಾಂತ್ ಧರಿವಾಲ್, ಅರ್ಣವ್ ನವೀನ್, ಗೌರವ್ ಗೌಡ ಮತ್ತು ಓಮ್ ಅಗರವಾಲ್ ಗೆಲುವು ಸಾಧಿಸಿದರು. ಬಾಲಕಿಯರ ವಿಭಾಗದಲ್ಲಿ ತನಿಷ್ಕಾ ಕಾಲಭೈರವ, ಶಿವಾನಿ ಮಹೇಂದ್ರನ್ ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು.

17 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದ ಅಸ್ಸಾಂನ ಪ್ರಿಯಾನುಜ್ ಭಟ್ಟಾಚಾರ್ಯ ಮತ್ತು ಪಶ್ಚಿಮ ಬಂಗಾಳದ ಸಿಂಡ್ರೆಲಾ ದಾಸ್ –ಪ್ರಜಾವಾಣಿ ಚಿತ್ರ: ಎಸ್‌ಕೆ. ದಿನೇಶ್

ಬ್ಯಾಡ್ಮಿಂಟನ್: 47 ವರ್ಷಗಳ ನಂತರ ಪುರುಷರ ತಂಡ ಚಾಂಪಿಯನ್

ಕರ್ನಾಟಕ ಚಾರಿತ್ರಿಕ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕದ ತಂಡವು ಯಾನೆಕ್ಸ್ ಸನ್‌ರೈಸ್ 77ನೇ ಅಂತರ ರಾಜ್ಯ, ಅಂತರ ವಲಯ ಮತ್ತು 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ವಿಭಾಗದ ಕಿರೀಟವನ್ನು ಮುಡಿಗೇರಿಸಿಕೊಂಡಿತು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ)ಯ ಆತಿಥ್ಯದಲ್ಲಿ ನಡೆಯುತ್ತಿರುವ ಕೂಟದ ಎರಡನೇ ದಿನವಾದ ಗುರುವಾರ ನಡೆದ ಫೈನಲ್‌ನಲ್ಲಿ ಕರ್ನಾಟಕ ತಂಡವು 3–1ರಿಂದ ಸ್ಟಾರ್ ಆಟಗಾರರನ್ನು ಒಳಗೊಂಡ ರೈಲ್ವೇಸ್ ತಂಡವನ್ನು ಸೋಲಿಸಿತು. ಈ ಮೂಲಕ 47 ವರ್ಷಗಳ ನಂತರ ಅಂತರ ರಾಜ್ಯ ಮತ್ತು ಅಂತರ ವಲಯ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದು ಚಾರಿತ್ರಿಕ ದಾಖಲೆ ನಿರ್ಮಿಸಿತು. 1977ರಲ್ಲಿ ಕರ್ನಾಟಕ ಮೊದಲ ಬಾರಿ ಚಾಂಪಿಯನ್ ಆಗಿತ್ತು.

ಫೈನಲ್‌ನ ಮೊದಲ ಸಿಂಗಲ್ಸ್‌ನಲ್ಲಿ ಸನೀತ್ ಡಿ.ಎಸ್. 21-23, 16-21ರ ನೇರ ಗೇಮ್‌ಗಳಿಂದ ಚಿರಾಗ್ ಸೇನ್‌ಗೆ ಮಣಿದರು. ಇದರೊಂದಿಗೆ ರೈಲ್ವೇಸ್ ಆರಂಭಿಕ ಮುನ್ನಡೆ ಪಡೆದಿತ್ತು. ಆದರೆ, ಎರಡನೇ ಸಿಂಗಲ್ಸ್‌ನಲ್ಲಿ ಭಾರ್ಗವ್ ಎಸ್. 13-21, 21-18, 21-16ರಿಂದ ರೈಲ್ವೇಸ್ ತಂಡವನ್ನು ಪ್ರತಿನಿಧಿಸುತ್ತಿರುವ ಕನ್ನಡಿಗ ಆಯುಷ್ ಶೆಟ್ಟಿ ಅವರನ್ನು ಮಣಿಸುವುದರೊಂದಿಗೆ ತಂಡಗಳ ಸ್ಕೋರ್ 1–1 ಸಮಬಲಗೊಂಡಿತು.

ಡಬಲ್ಸ್‌ನಲ್ಲಿ ನಿಕೋಲಸ್ ನಾಥನ್ ರಾಜ್ ಮತ್ತು ತುಷಾರ್ ಸುವೀರ್ ಜೋಡಿಯು 16-21, 21-9, 21-19ರಿಂದ ಪೃಥ್ವಿ ರಾಯ್ ಕೆ. ಮತ್ತು ಸಾಯಿ ಪ್ರತೀಕ್ ಕೆ. ಅವರನ್ನು ಮಣಿಸಿ ಕರ್ನಾಟಕಕ್ಕೆ ಮುನ್ನಡೆ ಒದಗಿಸಿತು. ಮೊದಲ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ನಿಕೋಲಸ್– ತುಷಾರ್ ಜೋಡಿಯು ನಂತರ ಪುಟಿದೆದ್ದು, ಸತತ ಎರಡೂ ಗೇಮ್‌ಗಳಲ್ಲಿ ಪಾರಮ್ಯ ಮೆರೆಯಿತು. ನಿರ್ಣಾಯಕ ಸಿಂಗಲ್ಸ್‌ನಲ್ಲಿ ರಘು ಎಂ. 21-12, 21-10ರ ನೇರ ಗೇಮ್‌ಗಳಿಂದ ಸಿದ್ಧಾರ್ಥ್ ಪ್ರತಾಪ್ ಸಿಂಗ್ ಅವರನ್ನು ಹಿಮ್ಮೆಟ್ಟಿಸಿದರು.

ಹರಿಯಾಣಕ್ಕೆ ಕಿರೀಟ: ಉದಯೋನ್ಮುಖ ಆಟಗಾರ್ತಿಯರಾದ ಉನ್ನತಿ ಹೂಡಾ, ಅನ್ಮೋಲ್ ಖಾರ್ಬ್ ಅವರನ್ನು ಒಳಗೊಂಡ ಹರಿಯಾಣ ಮಹಿಳಾ ತಂಡವು ಪ್ರಶಸ್ತಿ ಸುತ್ತಿನ ರೋಚಕ ಹಣಾಹಣಿಯಲ್ಲಿ 3–2ರಿಂದ ಗುಜರಾತ್ ತಂಡವನ್ನು ಮಣಿಸಿತು.

ಮೊದಲ ಸಿಂಗಲ್ಸ್‌ನಲ್ಲಿ ದೇವಿಕಾ ಸಿಹಾಗ್ 25-27, 10-21ರಿಂದ ತಸ್ನಿಂ ಮಿರ್ ಅವರಿಗೆ ಮಣಿದರು. ಈ ಮೂಲಕ ಗುಜರಾತ್ ತಂಡ ಉತ್ತಮ ಆರಂಭ ಪಡೆದಿತ್ತು. ಆದರೆ, ಎರಡನೇ ಸಿಂಗಲ್ಸ್‌ನಲ್ಲಿ ಅನ್ಮೋಲ್ 14-21, 21-17, 21-15ರಿಂದ ಅದಿತಾ ರಾವ್ ಅವರನ್ನು ಮಣಿಸಿದ್ದರಿಂದ ತಂಡಗಳ ಸ್ಕೋರ್ ಸಮನಾಯಿತು. ಡಬಲ್ಸ್‌ನಲ್ಲಿ ಹೂಡಾ ಮತ್ತು ಅನ್ಮೋಲ್ ಜೋಡಿಯು 21-8, 21-12ರಿಂದ ಶೆನನ್ ಕ್ರಿಶ್ಚಿಯನ್ ಮತ್ತು ಅಂಜಲಿ ರಾವತ್ ಅವರನ್ನು ಮಣಿಸಿ ಹರಿಯಾಣಕ್ಕೆ (2–1) ಮುನ್ನಡೆ ಒದಗಿಸಿತು. ಮೂರನೇ ಸಿಂಗಲ್ಸ್‌ನಲ್ಲಿ ಹೂಡಾ ಮುಗ್ಗರಿಸಿದ್ದರಿಂದ ಮತ್ತೆ ತಂಡಗಳ ಸ್ಕೋರ್ (2–2) ಸಮಬಲಗೊಂಡಿತು. ಹೂಡಾ 21-19, 19-21, 15-21ರಿಂದ ಶ್ರೇಯಾ ಲೇಲೆ ಅವರಿಗೆ ಮಣಿದರು. ನಿರ್ಣಾಯಕ ಎರಡನೇ ಡಬಲ್ಸ್‌ನಲ್ಲಿ ದೇವಿಕಾ ಸಿಹಾಗ್ ಮತ್ತು ರಿಧಿ ಕೌರ್ ತೂರ್ 9-21, 21-19, 21-13ರಿಂದ ತಸ್ನಿಂ ಮಿರ್ ಮತ್ತು ಆದಿತಾ ರಾವ್ ಅವರನ್ನು ಮಣಿಸಿ ಪ್ರಶಸ್ತಿಕ್ಕೆ ಮುತ್ತಿಕ್ಕಿದರು.

ಪುರುಷರ ವಿಭಾಗದ ಪ್ರಶಸ್ತಿ ಗೆದ್ದ ಕರ್ನಾಟಕ ತಂಡಕ್ಕೆ ₹ 6.5 ಲಕ್ಷ ಮತ್ತು ಮಹಿಳೆಯರ ವಿಭಾಗದ ಚಾಂಪಿಯನ್ ಹರಿಯಾಣ ತಂಡಕ್ಕೆ ₹ 5 ಲಕ್ಷ ಹೆಚ್ಚುವರಿ ಬಹುಮಾನವನ್ನು ಘೋಷಿಸಲಾಯಿತು.

ಅಂತರ ರಾಜ್ಯ ಮತ್ತು ಅಂತರ ವಲಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಕರ್ನಾಟಕ ತಂಡ. (ನಿಂತವರು) ಎಡದಿಂದ; ಆಶಿತ್ ಸೂರ್ಯ, ಭಾರ್ಗವ್ ಎಸ್, ಜಗದೀಶ್ ಯಾದವ್ (ಕೋಚ್), ಗುರುಪ್ರಸಾದ್ (ಕೋಚ್), ಶಿವರಾಜ್ ಮರ್ತೂರ್ (ಮ್ಯಾನೇಜರ್), ಜಿ.ಎಂ. ನಿಶ್ಚಿತಾ (ಕೋಚ್), ಸಂಜೀತ್ ಎಸ್, ರಘು ಎಂ. (ಮಂಡಿಯೂರಿದವರು) ತುಷಾರ್ ಸುವೀರ್, ಅಭಿನವ್ ಗಾರ್ಗ್, ನಿತಿನ್ ಎಚ್‌.ವಿ, ನಿಕೋಲಸ್ ನಾಥನ್ ರಾಜ್, ನರೇನ್ ಅಯ್ಯರ್, ಕಿಶಾಲ್ ಗಣಪತಿ –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಪ್ರೊ ಕಬಡ್ಡಿ: ಯೋಧಾಸ್‌ಗೆ ಜಯ

ಪುಣೆ (ಪಿಟಿಐ): ಅಧಿಕಾರಯುತ ಪ್ರದರ್ಶನ ನೀಡಿದ ಯು.ಪಿ. ಯೋಧಾಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಗುರುವಾರ ಗುಜರಾತ್ ಜೈಂಟ್ಸ್ ತಂಡದ ಮೇಲೆ 59–23 ರಲ್ಲಿ ಸುಲಭ ಗೆಲುವನ್ನು ಸಾಧಿಸಿತು. ಯೋಧಾಸ್ ತಂಡದಲ್ಲಿರುವ ಕನ್ನಡಿಗ ರೇಡರ್ ಗಗನ್ ಗೌಡ ಮತ್ತೊಮ್ಮೆ ಮಿಂಚಿ ಪಂದ್ಯದ ಗರಿಷ್ಠ 19 ಅಂಕಗಳನ್ನು ಕಲೆಹಾಕಿದರು.

ಬಾಲೇವಾಡಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನ ಬ್ಯಾಡ್ಮಿಂಟನ್ ಹಾಲ್‌ನಲ್ಲಿ ನಡೆದ ಪಂದ್ಯದಲ್ಲಿ ಯೋಧಾಸ್ ತಂಡ ವಿರಾಮದ ವೇಳೆಗೆ 29–11 ಅಂಕಗಳಿಂದ ಮುಂದಿತ್ತು. ಗಗನ್‌ಗೆ ಬೆಂಬಲ ನೀಡಿದ ಭವಾನಿ ರಜಪೂತ್ 11 ಅಂಕ ಗಳಿಸಿದರು. ಜೈಂಟ್ಸ್ ಪರ ನಾಯಕ ಗುಮನ್ ಸಿಂಗ್ 7 ಅಂಕ ಗಳಿಸಿದರು. ಉತ್ತಮ ಲಯದಲ್ಲಿರುವ ಗಗನ್ ಮೊದಲಾರ್ಧದಲ್ಲೇ ಸೂಪರ್ ಟೆನ್ ಸಂಪಾದಿಸಿದರು.

ಮುಂಬಾಕ್ಕೆ ಜಯ: ಯು ಮುಂಬಾ ತಂಡ ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು 43–37 ಅಂಕಗಳಿಂದ ಸೋಲಿಸಿತು. ಈ ಸೋಲಿನ ಹೊರತಾಗಿಯೂ ಪೈರೇಟ್ಸ್ ತಂಡ (21 ಪಂದ್ಯಗಳಿಂದ 74 ಅಂಕ) ಎರಡನೇ ಸ್ಥಾನ ಕಾಪಾಡಿಕೊಂಡಿದೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್: ಭಾರತ ಆತಿಥ್ಯ

ನವದೆಹಲಿ (ಪಿಟಿಐ): 2025ರ ಪ್ಯಾರಾ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಷಿಪ್ ನವದೆಹಲಿಯಲ್ಲಿ ನಡೆಯಲಿದೆ ಎಂದು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಸಂಸ್ಥೆ ಗುರುವಾರ ತಿಳಿಸಿದೆ.

ಇದೇ ಮೊದಲ ಬಾರಿ ಕ್ರೀಡಾಕೂಟಕ್ಕೆ ಭಾರತವು ಆತಿಥ್ಯ ವಹಿಸಲಿದೆ. ಮುಂದಿನ ವರ್ಷ ಸೆಪ್ಟೆಂಬರ್ 26 ಮತ್ತು ಅಕ್ಟೋಬರ್ 5ರ ನಡುವೆ ನವದೆಹಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಕೂಟ ನಡೆಯಲಿದೆ. 12ನೇ ಆವೃತ್ತಿ ಇದಾಗಿದ್ದು, ಏಷ್ಯಾದಲ್ಲಿ ನಾಲ್ಕನೇ ಬಾರಿಗೆ ನಡೆಯುತ್ತಿದೆ. 100ಕ್ಕೂ ಹೆಚ್ಚು ರಾಷ್ಟ್ರಗಳಿಂದ ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆಯಿದೆ.